# ಮಾಡಿದ್ದುಣ್ಣೋ ಮಹಾರಾಯ

**ಎಂ. ಎಸ್. ಪುಟ್ಟಣ್ಣ**


ಕರ್ನಾಟಕ ಸರ್ಕಾರ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಭವನ, ಜೆ.ಸಿ.ರಸ್ತೆ

ಬೆಂಗಳೂರು - ೫೬೦ ೦೦೨

MAADIDHUNNO MAHARAYA : (A Novel) by M.S, Puttanna, Published by Manu Baligar, Director, Department of Kannada and Culture, Kannada Bhavana, J.C.Road, Bengaluru - 560 002.



ಈ ಆವೃತ್ತಿಯ ಹಕ್ಕು : ಕರ್ನಾಟಕ ಸರ್ಕಾರ



ಮುದ್ರಿತ ವರ್ಷ : ೨೦೧೧

ಪ್ರತಿಗಳು : ೧೦೦೦

ಪುಟಗಳು : XVIII + ೧೮೯

ಬೆಲೆ : ರೂ. ೫೫-೦೦

ರಕ್ಷಾಪುಟ ವಿನ್ಯಾಸ : ಕೆ. ಚಂದ್ರನಾಥ ಆಚಾರ್ಯ

ಮುದ್ರಕರು :

**ಮೆ|| ಮಯೂರ ಪ್ರಿಂಟ್ ಆ್ಯಡ್ಸ್**

ನಂ. ೬೯, ಸುಬೇದಾರ್ ಛತ್ರಂ ರೋಡ್

ಬೆಂಗಳೂರು - ೫೬೦ ೦೨೦ ದೂ : ೨೩೩೪೨೭೨೪


---

ಕರ್ನಾಟಕ ಸರ್ಕಾರ

ಬಿ.ಎಸ್. ಯಡಿಯೂರಪ್ಪ
ಮುಖ್ಯಮಂತ್ರಿಗಳು

ವಿಧಾನಸೌಧ
ಬೆಂಗಳೂರು ೫೬೦ ೦೦೧

ಸಿಎಂ/ಪಿಎಸ್/೨೬/೧೧

## ಶುಭ ಸಂದೇಶ

ವಿಶ್ವ ಕನ್ನಡ ಸಮ್ಮೇಳನದ ಸಂಭ್ರಮಾಚರಣೆಯ ಸಂದರ್ಭದಲ್ಲಿ ಕನ್ನಡ ನಾಡು ಏಕೀಕರಣಗೊಂಡು ೫೫ನೇ ವರ್ಷಕ್ಕೆ ಹೆಜ್ಜೆಯನ್ನಿಟ್ಟಿದೆ. ಈ ಸಂದರ್ಭವನ್ನು ರಚನಾತ್ಮಕವಾಗಿ ದಾಖಲಿಸಿ ಸ್ಮರಣೀಯಗೊಳಿಸಬೇಕೆಂಬುದು ಸರ್ಕಾರದ ಮಹದಾಶಯ. ಅದಕ್ಕಾಗಿ ಬೆಳಗಾವಿಯಲ್ಲಿ ವಿಶ್ವ ಕನ್ನಡ ಸಮ್ಮೇಳನ" ವನ್ನು ಇದೇ ಮಾರ್ಚ್ ತಿಂಗಳಿನಲ್ಲಿ ಆಯೋಜಿಸಲಾಗಿದೆ. ಇದನ್ನು ಅತ್ಯಂತ ಅರ್ಥಪೂರ್ಣವಾಗಿ ಆಚರಿಸುವುದು ಕರ್ನಾಟಕ ಸರ್ಕಾರದ ಆಶಯವಾಗಿದೆ. ಇದರ ಅಂಗವಾಗಿ ನಾಡಿನ ವಿವಿಧ ಕ್ಷೇತ್ರಗಳಲ್ಲಾಗಿರುವ ಪ್ರಗತಿಯ ಆತ್ಮಾವಲೋಕನದ ಜೊತೆಗೆ ಕನ್ನಡ ಸಾಹಿತ್ಯದ ಸೃಜನಶೀಲ ಮತ್ತು ಸೃಜನೇತರ ಪ್ರಕಾರಗಳ ೧೦೦ ಕೃತಿಗಳನ್ನು ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಪ್ರಕಟಿಸಲಾಗುತ್ತಿದೆ. ಕನ್ನಡದ ಖ್ಯಾತ ಲೇಖಕರ ಮಹತ್ವದ ಕೃತಿಗಳನ್ನು ಪ್ರಕಟಿಸಿ, ಸುಲಭ ಬೆಲೆಯಲ್ಲಿ ಸಾಹಿತ್ಯಾಸಕ್ತರಿಗೆ ಒದಗಿಸುವ ಹಂಬಲ ನಮ್ಮದು.

ಈ ಸಾಹಿತ್ಯ ಮಾಲಿಕೆಯಲ್ಲಿನ ಕೃತಿರತ್ನಗಳನ್ನು ಕನ್ನಡಿಗರು ಸಹೃದಯತೆಯಿಂದ ಸ್ವಾಗತಿಸುವ ಮೂಲಕ ಇವುಗಳ ಪ್ರಯೋಜನವನ್ನು ಪಡೆದುಕೊಂಡರೆ ಸರ್ಕಾರದ ಈ ಯೋಜನೆ ಸಾರ್ಥಕವಾಗುತ್ತದೆ ಎಂದು ಭಾವಿಸುತ್ತೇನೆ.

ದಿನಾಂಕ: ೨೪.೦೧.೨೦೧೧

(ಬಿ.ಎಸ್. ಯಡಿಯೂರಪ್ಪ)

ಕರ್ನಾಟಕ ಸರ್ಕಾರ

ಗೋವಿಂದ ಎಂ. ಕಾರಜೋಳ
ಕನ್ನಡ ಮತ್ತು ಸಂಸ್ಕೃತಿ,
ಸಣ್ಣ ನೀರಾವರಿ ಹಾಗೂ ಜವಳಿ ಸಚಿವರು

ವಿಧಾನಸೌಧ
ಬೆಂಗಳೂರು - ೦೧

## ಚೆನ್ನುಡಿ

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ವಿಶ್ವ ಕನ್ನಡ ಸಮ್ಮೇಳನದ ಅಂಗವಾಗಿ ಸುಮಾರು ೧೦೦ ಕನ್ನಡದ ಮೇರುಕೃತಿಗಳನ್ನು ಮರುಮುದ್ರಿಸಲು ಉದ್ದೇಶಿಸಿರುತ್ತದೆ.

ಈ ಯೋಜನೆಯಡಿ ಕನ್ನಡ ಸಾಹಿತ್ಯದ ಬೇರೆ ಬೇರೆ ಕಾಲಘಟ್ಟಗಳಲ್ಲಿ ರಚನೆಗೊಂಡ ಕಥೆ, ಕಾದಂಬರಿ, ವಿಚಾರ ಸಾಹಿತ್ಯ, ಪ್ರಬಂಧ, ವಿಮರ್ಶೆ, ನಾಟಕ, ಕವನ ಸಂಕಲನ - ಹೀಗೆ ಸಾಹಿತ್ಯದ ವಿವಿಧ ಪ್ರಕಾರಗಳ ಕೆಲವು ಪ್ರಾತಿನಿಧಿಕ ಕೃತಿಗಳನ್ನು ಪ್ರಕಟಿಸಲಾಗುತ್ತಿದೆ. ಈ ಪ್ರಾತಿನಿಧಿಕ ಕೃತಿಗಳನ್ನು ಸರ್ಕಾರದಿಂದ ರಚಿತವಾದ ಆಯ್ಕೆ ಸಮಿತಿಯು ಮುದ್ರಣಕ್ಕೆ ಆಯ್ಕೆ ಮಾಡಿರುತ್ತದೆ. ಈ ಕೃತಿಗಳನ್ನು ಮುದ್ರಣಕ್ಕೆ ಆಯ್ಕೆ ಮಾಡಿದ ಆಯ್ಕೆ ಸಮಿತಿಯ ಎಲ್ಲಾ ವಿದ್ವಾಂಸರಿಗೂ ನನ್ನ ಧನ್ಯವಾದಗಳು. ಈ ಮಹತ್ವದ ಕೃತಿಗಳನ್ನು ಸಹೃದಯ ಕನ್ನಡಿಗರಿಗೆ ಸುಲಭ ಬೆಲೆಯಲ್ಲಿ ತಲುಪಿಸಬೇಕೆಂಬುದು ನಮ್ಮ ಹೆಗ್ಗುರಿಯಾಗಿರುತ್ತದೆ. ಕನ್ನಡ ಸಾಹಿತ್ಯದ ಮೈಲಿಗಲ್ಲುಗಳಾಗಿರುವ ಈ ಪುಸ್ತಕಗಳು ಭಾವಿ ಪೀಳಿಗೆಯವರಿಗೆ ದಾರಿದೀಪಗಳಾಗಿವೆ. ಈ ಕೃತಿಗಳ ಪ್ರಯೋಜನವನ್ನು ಕನ್ನಡ ಜನತೆ ಹಾಗೂ ವಿದ್ಯಾರ್ಥಿಗಳು ಪಡೆದರೆ ನಮ್ಮ ಶ್ರಮ ಸಾರ್ಥಕವೆಂದು ಭಾವಿಸುತ್ತೇನೆ.

ದಿನಾಂಕ ೧೮.೧.೨೦೧೧

(ಗೋವಿಂದ ಎಂ. ಕಾರಜೋಳ)

# ಎರಡು ನುಡಿ

ಕರ್ನಾಟಕ ಸರ್ಕಾರವು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ "ವಿಶ್ವ ಕನ್ನಡ ಸಮ್ಮೇಳನ'ದ ಅಂಗವಾಗಿ ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಕನ್ನಡ ಸಾರಸ್ವತ ಲೋಕವನ್ನು ಶ್ರೀಮಂತಗೊಳಿಸಿರುವ ಸಾಹಿತಿಗಳ ಮಹತ್ವದ ಕೃತಿಗಳನ್ನು ಓದುಗರಿಗೆ ಒದಗಿಸಬೇಕೆಂಬ ಸದಾಶಯ ಹೊಂದಿರುತ್ತದೆ. ಈ ಯೋಜನೆಯಡಿ ಸುಮಾರು ೧೦೦ ಕೃತಿಗಳನ್ನು ಪ್ರಕಟಿಸಲು ಉದ್ದೇಶಿಸಿದೆ.

ಈ ಕೃತಿಗಳನ್ನು ಆಯ್ಕೆಮಾಡಲು ಖ್ಯಾತ ವಿದ್ವಾಂಸರಾದ ಪ್ರೊ. ಎಲ್.ಎಸ್. ಶೇಷಗಿರಿರಾವ್‌ರವರ ಅಧ್ಯಕ್ಷತೆಯಲ್ಲಿ ನಾಡಿನ ಹೆಸರಾಂತ ಸಾಹಿತಿ ವಿದ್ವಾಂಸರುಗಳನ್ನೊಳಗೊಂಡ ಆಯ್ಕೆ ಸಮಿತಿಯನ್ನು ರಚಿಸಿದೆ. ಈ ಆಯ್ಕೆ ಸಮಿತಿಯು ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಗೆ ಕನ್ನಡ ಸಾಹಿತ್ಯದ ವಿವಿಧ ಕಾಲಘಟ್ಟಗಳಲ್ಲಿ ಬಂದ ಪ್ರಾತಿನಿಧಿಕ ಕೃತಿಗಳನ್ನು ಆಯ್ಕೆ ಮಾಡಿರುತ್ತದೆ. ಆಯ್ಕೆ ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರಿಗೆ ಸರ್ಕಾರದ ಪರವಾಗಿ ವಂದನೆಗಳು ಸಲ್ಲುತ್ತವೆ. ಈ ಪುಸ್ತಕಗಳನ್ನು ಹೊರತರಲು ಅನುಮತಿ ನೀಡಿ ಸಹಕರಿಸಿದ ಎಲ್ಲಾ ಲೇಖಕರು ಹಾಗೂ ಹಕ್ಕುದಾರರುಗಳಿಗೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ. ಕನ್ನಡದ ಮೇರುಕೃತಿ ಸಾಹಿತ್ಯ ಮಾಲಿಕೆಯನ್ನು ಓದುಗರು ಸ್ವಾಗತಿಸುತ್ತಾರೆಂದು ನಂಬಿದ್ದೇನೆ.

ದಿನಾಂಕ ೧೭.೦೧.೨೦೧೧

(ರಮೇಶ್ ಬಿ.ಝುಳಕಿ)

ಸರ್ಕಾರದ ಕಾರ್ಯದರ್ಶಿಗಳು

ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ

# ಅಧ್ಯಕ್ಷರ ಮಾತು

ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಕನ್ನಡದ ಮೇರುಕೃತಿಗಳನ್ನು ಪುನರ್ಮುದ್ರಣ ಮಾಡಲು ಒಂದು ಯೋಜನೆಯನ್ನು ಕೈಗೊಂಡಿತು. ಕೃತಿಗಳ ಆಯ್ಕೆಗಾಗಿ ಸರ್ಕಾರವು ಒಂದು ಸಮಿತಿಯನ್ನು ರಚಿಸಿತು. ಈ ಮಹತ್ವದ ಯೋಜನೆಯ ಸಮಿತಿಯ ಅಧ್ಯಕ್ಷನಾಗಿ ಕಾರ್ಯನಿರ್ವಹಿಸುವ ಸುಯೋಗ ನನ್ನದಾಯಿತು.

ಈ ಯೋಜನೆಯ ಮಹತ್ವವನ್ನು ನಾನು ವಿವರಿಸುವ ಅಗತ್ಯವಿಲ್ಲ. ಕನ್ನಡದ ಶ್ರೇಷ್ಠ ಕೃತಿಗಳನ್ನು ಸುಲಭ ಬೆಲೆಗೆ ಕನ್ನಡಿಗರ ಕೈಗಳಲ್ಲಿರಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಹಲವು ಯೋಜನೆಗಳನ್ನು ಕೈಗೊಂಡಿರುವುದಕ್ಕಾಗಿ ಸರ್ಕಾರವನ್ನೂ ಇಲಾಖೆಯನ್ನೂ ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಕನ್ನಡ ಸಂಸ್ಕೃತಿಗೆ ಈ ಯೋಜನೆಗಳು ಮಹತ್ವದ ಕೊಡುಗೆಯನ್ನು ನೀಡುತ್ತವೆ.

ಕನ್ನಡದ ಮೇರುಕೃತಿಗಳನ್ನು ಆರಿಸುವುದು ಸುಲಭದ ಕೆಲಸವಲ್ಲ. ಇಂತಹ ಆಯ್ಕೆಯಲ್ಲಿ ಬೇರೆ ಬೇರೆ ಅಭಿಪ್ರಾಯಗಳಿಗೆ ಸಾಧಾರವಾಗಿಯೇ ಅವಕಾಶವಿರುತ್ತದೆ. ಕನ್ನಡ ನಾಡಿನ ಶ್ರೇಷ್ಠ ಸಾಹಿತಿಗಳು ಈ ಸಮಿತಿಯ ಸದಸ್ಯರಾಗಿದ್ದದ್ದು ಸುದೈವದ ಸಂಗತಿ. ಕೃತಿಗಳನ್ನು ಚರ್ಚಿಸಿ ಮಹತ್ವದ ನಿರ್ಧಾರಕ್ಕೆ ಬಂದ ಸಮಿತಿಯು ಸಾಧ್ಯವಾದ ಕಾರ್ಯವನ್ನು ಸಾಧಿಸಿದೆ. ಇದಕ್ಕಾಗಿ ನಾನು ಸಮಿತಿಯ ಎಲ್ಲ ಸದಸ್ಯರಿಗೂ ಕೃತಜ್ಞನಾಗಿದ್ದೇನೆ.

ಈ ಕಾರ್ಯದ ನಿರ್ವಹಣೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀ ಮನು ಬಳಿಗಾರ್ ಅವರು ನೆರವಾಗಿದ್ದಾರೆ. ಅವರ ಮತ್ತು ಅವರ ಸಿಬ್ಬಂದಿಯವರ ಅಮೂಲ್ಯ ಸಹಕಾರಕ್ಕೆ ನಾನು ಕೃತಜ್ಞ

ಕನ್ನಡ ನಾಡಿನ ಮನೆಮನೆಗಳಲ್ಲಿ ಸಾಹಿತ್ಯದ ಮಂಗಳ ದೀಪದ ಬೆಳಕನ್ನು ಹರಡುವ ಈ ಯೋಜನೆಯ ಪೂರ್ಣ ಪ್ರಯೋಜನವನ್ನು ಕನ್ನಡಿಗರು ಪಡೆದುಕೊಳ್ಳಲಿ ಎಂದು ಹಾರೈಸುತ್ತೇನೆ.

ಸಿರಿಗನ್ನಡಂ ಗೆಲ್ಗೆ !

ಎಲ್.ಎಸ್. ಶೇಷಗಿರಿ ರಾವ್

ದಿನಾಂಕ ೧೬.೧೨.೨೦೦೦

ಅಧ್ಯಕ್ಷ

ಕನ್ನಡದ ಮೇರುಕೃತಿಗಳ ಆಯ್ಕೆ ಸಮಿತಿ

# ಪ್ರಕಾಶಕರ ಮಾತು

ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ "ವಿಶ್ವ ಕನ್ನಡ ಸಮ್ಮೇಳನ'ದ ಅಂಗವಾಗಿ ಸುಮಾರು ನೂರು ಪುಸ್ತಕಗಳನ್ನು ಪ್ರಕಟಿಸಲು ಉದ್ದೇಶಿಸಿರುತ್ತದೆ. ಈ ಯೋಜನೆಯಡಿ ಹಳಗನ್ನಡ, ನಡುಗನ್ನಡ ಮತ್ತು ಹೊಸಗನ್ನಡ ಈ ಮೂರೂ ಕಾಲಘಟ್ಟಗಳಲ್ಲಿ ರಚನೆಗೊಂಡ, ಕನ್ನಡದಲ್ಲಿ ಮಹತ್ವದ ಕೃತಿಗಳೆಂದು ಪರಿಗಣಿತವಾಗಿರುವ ಪುಸ್ತಕಗಳನ್ನು ಸರ್ಕಾರವು ನೇಮಿಸಿರುವ ಆಯ್ಕೆ ಸಮಿತಿಯು ಮರುಮುದ್ರಣಕ್ಕೆ ಆಯ್ಕೆ ಮಾಡಿರುತ್ತದೆ. ಈ ಸಾಹಿತ್ಯ ಮಾಲೆಯಲ್ಲಿ ಈಗಾಗಲೇ ಇಲಾಖೆಯು ಸಮಗ್ರ ಸಾಹಿತ್ಯ ಪ್ರಕಟಣೆಯಡಿ ಪ್ರಕಟಿಸಿರುವ ಲೇಖಕರ ಕೃತಿಗಳನ್ನು ಪರಿಗಣಿಸಿರುವುದಿಲ್ಲ.

ಕನ್ನಡದ ಮೇರುಕೃತಿಗಳ ಮರುಮುದ್ರಣಕ್ಕೆ ಪುಸ್ತಕಗಳನ್ನು ಆಯ್ಕೆ ಮಾಡಿದ ಆಯ್ಕೆ ಸಮಿತಿಯ ಅಧ್ಯಕ್ಷರಾದ ಪ್ರೊ. ಎಲ್.ಎಸ್. ಶೇಷಗಿರಿ ರಾವ್‌ರವರಿಗೆ ಹಾಗೂ ಸಮಿತಿಯ ಸದಸ್ಯರುಗಳಾದ ಡಾ. ಚಂದ್ರಶೇಖರ ಕಂಬಾರ, ಡಾ. ಹಂಪ ನಾಗರಾಜಯ್ಯ, ಡಾ. ಎಂ.ಎಂ.ಕಲಬುರ್ಗಿ, ಡಾ. ದೊಡ್ಡರಂಗೇಗೌಡ, ಡಾ. ಎಚ್.ಜೆ. ಲಕ್ಕಪ್ಪಗೌಡ, ಡಾ. ಅರವಿಂದ ಮಾಲಗತ್ತಿ, ಡಾ. ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ, ಡಾ. ಪಿ.ಎಸ್. ಶಂಕರ್, ಶ್ರೀಮತಿ ಸಾರಾ ಅಬೂಬಕರ್, ಡಾ. ಪ್ರಧಾನ್ ಗುರುದತ್ತ ಇವರುಗಳಿಗೆ ನನ್ನ ಕೃತಜ್ಞತೆಗಳು. ಈ ಯೋಜನೆಯಡಿ ಮರುಮುದ್ರಣಕ್ಕೆ ಆಯ್ಕೆಯಾಗಿರುವ ಪುಸ್ತಕಗಳ ಮುದ್ರಣಕ್ಕೆ ಅನುಮತಿ ನೀಡಿದ ಎಲ್ಲ ಲೇಖಕರಿಗೂ, ಹಕ್ಕುದಾರರಿಗೂ ಮತ್ತು ಕರಡಚ್ಚು ತಿದ್ದಿದವರಿಗೂ ನನ್ನ ವಂದನೆಗಳು.

ಸದರಿ ಪ್ರಕಟಣಾ ಯೋಜನೆಯ ಪುಸ್ತಕಗಳನ್ನು ಹೊರತರಲು ಸಹಕರಿಸಿದ ಶ್ರೀ ಎಚ್. ಶಂಕರಪ್ಪ, ಜಂಟಿ ನಿರ್ದೇಶಕರು, (ಸು.ಕ.), ಶ್ರೀಮತಿ ವೈ.ಎಸ್.ವಿಜಯಲಕ್ಷ್ಮಿ, ಸಹಾಯಕ ನಿರ್ದೇಶಕರು ಹಾಗೂ ಪ್ರಕಟಣಾ ಶಾಖೆಯ ಸಿಬ್ಬಂದಿಗೆ ನನ್ನ ನೆನಕೆಗಳು. ವಿಶ್ವ ಕನ್ನಡ ಸಮ್ಮೇಳನದ ಲಾಂಛನವನ್ನು ಸಿದ್ಧಪಡಿಸಿಕೊಟ್ಟ ಹಿರಿಯಕಲಾವಿದರಾದ ಶ್ರೀ ಸಿ. ಚಂದ್ರಶೇಖರ ಅವರಿಗೂ ನನ್ನ ನೆನಕೆಗಳು ಹಾಗೂ ಈ ಪುಸ್ತಕಗಳನ್ನು ಸುಂದರವಾಗಿ ಮುದ್ರಿಸಿಕೊಟ್ಟಿರುವ ಮಯೂರ ಪ್ರಿಂಟ್ ಆ್ಯಡ್ಸ್‌ನ ಮಾಲೀಕರಾದ ಶ್ರೀ ಬಿ.ಎಲ್. ಶ್ರೀನಿವಾಸ್ ಮತ್ತು ಸಿಬ್ಬಂದಿ ವರ್ಗದವರಿಗೂ ನನ್ನ ನೆನಕೆಗಳು.

ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಕನ್ನಡ ಓದುಗರಿಗೆ ಹಲವಾರು ವರ್ಷಗಳಿಂದ ದೊರಕದೇ ಇದ್ದ ಎಷ್ಟೋ ಪುಸ್ತಕಗಳು ಲಭ್ಯವಾಗುತ್ತಿರುವುದು ಹೆಮ್ಮೆಯ ಸಂಗತಿ. ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಸಾಹಿತ್ಯಾಭಿಮಾನಿಗಳಿಗೆ ಅಕ್ಷರ ದಾಸೋಹ ನಡೆಸುವ ಆಶಯ ನಮ್ಮದು. ಈ ಕೃತಿಗಳನ್ನು ಕನ್ನಡಿಗರು ಸ್ವಾಗತಿಸುತ್ತಾರೆಂದು ನಂಬಿದ್ದೇನೆ.

ದಿನಾಂಕ ೧೧.೦೧.೨೦೧೧

ಮನು ಬಳಿಗಾರ್

ನಿರ್ದೇಶಕರು

ಕನ್ನಡ ಮತ್ತು ಸಂಸ್ಕೃತಿ ಇಲಾಖೆ

## ಕನ್ನಡದ ಮೇರುಕೃತಿಗಳ ಆಯ್ಕೆ ಸಮಿತಿ

**ಅಧ್ಯಕ್ಷರು**

ಪ್ರೊ. ಎಲ್.ಎಸ್. ಶೇಷಗಿರಿರಾವ್

**ಸದಸ್ಯರು**

ಡಾ॥ ಚಂದ್ರಶೇಖರ ಕಂಬಾರ

ಡಾ॥ ಎಂ.ಎಂ. ಕಲಬುರ್ಗಿ

ಡಾ॥ ದೊಡ್ಡರಂಗೇಗೌಡ

ಡಾ॥ ಅರವಿಂದ ಮಾಲಗತ್ತಿ

ಡಾ॥ ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ

ಡಾ॥ ಪ್ರಧಾನ್ ಗುರುದತ್ತ

ಡಾ॥ ಹಂಪ ನಾಗರಾಜಯ್ಯ

ಡಾ॥ ಎಚ್.ಜೆ. ಲಕ್ಕಪ್ಪಗೌಡ

ಶ್ರೀಮತಿ ಸಾರಾ ಅಬೂಬಕರ್

ಡಾ॥ ಪಿ.ಎಸ್. ಶಂಕರ್

**ಸದಸ್ಯ ಕಾರ್ಯದರ್ಶಿ**

ಶ್ರೀ ಮನು ಬಳಿಗಾರ್, ಕ.ಆ.ಸೇ.

ನಿರ್ದೇಶಕರು

ಕನ್ನಡ ಮತ್ತು ಸಂಸ್ಕೃತಿ ಇಲಾಖೆ

–

# PREFACE

Most of the works in kannada (Kanarese), whether poetry or prose, are either expansions or contractions of our two great epics, Ramayana and Mahabharata. Almost every work has for its theme some incident from either of these two immortal works. The object in having the same field for the choice of subjects may be to sing the praises of the ideal and popular heroes in so many different forms, for the edification equally of the learned and the unlearned. While this repetition is laudable on the one hand, it has, on the other, all the shortcomings of mere imitation without originality, dryness without curiosity, and a mental cramp without intellectual liberty. The question is whether such pitfalls cannot be avoided by transferring the attention from those ideal heroes and heroines to a conception of characters of our daily life, which in their nature and in their deeds, more or less approach the ideal Rama and Seetha, Yudhistira and Droupadi. Deification is a personification of all virtues minus all vices; and the vicissitudes of human life in their case are beyond conception and border on the ludicrous. If on the other hand human beings are invested with a character which approaches the heroes and heroines of the great epics, the effect is very great and the nearer such approach, the greater will be our admiration. The defied heroes should be our rules of Grammer and ordinary human beings with an elevated conduct should be the examples.

In this view I tried my best to conceive certain persons who lived at a time much nearer to ours. From a central rain of an incident which is reported to have been actual, the story is expanded and great attention is paid to the development of characters in different stages. What appear to be digressions are not loose events which mar the unity, but are mere collateral incidents of the main plot. Official corruption and its momentous consequences, village faction and its evils, the Court of His Highness Krishnaraja Wodeyar III the late Maharaja of Mysore and his fabulous generosity, the court jester, the credulous villages, the story of a chaste woman, Suttee, insanitary condition of villages in olden times, treatment of a daughter-in-law by a mother-in-

law, of a mother-in-law by a daughter-in-law, the Village Schoolmaster and his cruelty, his treatment by the pupils, his horrid in gratitude, a philosophic view of corporal punishment, its effect on the education of the rising generation, hypocrisy and its secret misdeeds, a sincere and distorted description of genuine beauty, the meanest and the most reprehensible attempt to seduce ideal chastity, a nefarious practice of electrobiology, the indiscreet levity of a mad cap and the ludicrous portion of his conversation, the autobiography of a burglar, an awe inspiring incident on a cremation ground, a miracle worked by a wonderful sorcerer, and his unselfishness, other minor matters, and the moral tone intended to pervade from the begining to the end : have all been treated of in their proper places.

Here I stop leaving the public to form their own opinion about this performance. I have to thank my friends Messrs. K. Lakshminaranaiya, B.A., Sub Judge, Bangalore; R. Raghunatha Rao B.A., Dist. School Headmaster (Retired); B. Basavaradhya B.A., B L., Town Magistrate, Mysore ; and M. Ramaswamayya, B.A., Assistant, Office of the Inspector General of Education, Bangalore; for kindly hearing the work read out to them. I shall not be doing my duty if I forget to thank publicy M. Shama Rao Esqr. M.A., Rao Bahadur, for all his earnest endeavours of further the cause of Education and for the whlesome influence he has been exercising and the encouragement he has been giving to create a healthy literature in Kannada of the improvement of the masses.

Basavanagudi

Bangalore

31st January 1915 M.S. Puttanna

# ಪೀಠಿಕೆ

ತಿಣಕಿದನು ಫಣಿರಾಯ ರಾಮಾ ।

ಯಣದ ಕವಿಗಳ ಭಾರದಲಿ ತಿಂ ॥

ಥಿಣಿಯ ರಘುವರ ಚರಿತೆಯಲಿ ಕಾಲಿಡಲು ತೆರಪಿಲ್ಲ ॥

ಹೀಗೆಂದು ಕುಮಾರವ್ಯಾಸನು ರಾಮಾಯಣದ ವಿಷಯದಲ್ಲಿ ಹೇಳಿರುವ ಮಾತು, ರಾಮಾಯಣ, ಭಾರತ, ಈ ಎರಡು ಮಹಾ ಕಾವ್ಯಗಳಿಗೂ ವ್ಯಾಪಿಸುವುದು. ಯಾವ ಗ್ರಂಥಕರ್ತ ಯಾವ ಕವಿ ಏನ ಬರೆದಾಗ್ಯೂ ಈ ಕಾವ್ಯಗಳಿಗೆ ಸಂಬಂಧಿಸಿದ ಹಾಗೆ ರಾಮಚಂದ್ರ ಚರಿತ್ರೆ, ಶ್ರೀಕೃಷ್ಣ ಚರಿತ್ರೆ, ಇವೇ ಹೆಚ್ಚಾಗಿ ತುಂಬಿರುವುದೇ ಹೊರತು ಬೇರೇ ಇಲ್ಲ ಶ್ರೀರಾಮನೂ, ಶ್ರೀಕೃಷ್ಣನೂ ಮಹಾವಿಷ್ಣುವಿನ ಅವತಾರಗಳಾಗಿರುವುದರಿಂದ ಇವರು ದೋಷರಹಿತರಾಗಿಯೂ ಗುಣವಿಶಿಷ್ಟರಾಗಿಯೂ ಇರುವುದನ್ನು ಸರ್ವರೂ ಅಂಗೀಕರಿಸಬೇಕು. ಸಾಧಾರಣ ಮರ್ತ್ಯರಂತೆ ಇವರೂ ಲೋಕದ ಕಷ್ಟ ಸುಖಗಳಿಗೆ ಗುರಿಯಾಗಿದ್ದರೆಂದು ಹೇಳುವ ಮಾತು ತಿಳಿಯದವರಿಗೆ ದೈವಭಕ್ತಿ ಹುಟ್ಟಲೆಂದು ತೆಗೆದ ಸುಲಭವಾದ ದಾರಿಯೇ ಹೊರತು ಜ್ಞಾನಿಗೋಸ್ಕರ ಹುಟ್ಟಿದ ವಿಧಿಯೆಂದು ಭಾವಿಸಲಾಗದು. ನಿರ್ಮಲವಾದ ಗುಣದಲ್ಲಿ ದೋಷವಿದೆ ಎಂದರೆ ಆಭಾಸ ತೋರದೇ ಇರಲಾರದು. ಇಂಥಾ ನಿರ್ಮಲ ಮೂರ್ತಿಗಳ ಚರಿತ್ರೆಯು ಎಷ್ಟು ಆನಂದವನ್ನೂ ಜ್ಞಾನವನ್ನೂ ಹುಟ್ಟಿಸಿದಾಗ್ಯೂ, ಕಾಲಾನುಕಾಲದಲ್ಲಿ ಮನುಷ್ಯನ ಬುದ್ಧಿ 'ಜಡ್ಡು ಕಟ್ಟಿ ಕಥೆಯ ನಿಜವಾದ ಪ್ರಯೋಜನವು ಪೂರ್ತಿಯಾಗಿ ದೊರೆಯದಂತೆ ಆಗಬಹುದು. "ದುಃಖ ಬೆರೆಸದ ಸುಖವದಾರಿಗೆ ಸಿಕ್ಕುವುದು?' ಎಂಬ ಮಾತು ಭಗವಂತನ ಸ್ವರೂಪಗಳಿಗೆ ಹೇಳಿದ್ದಲ್ಲ. ಸಹಜವಾಗಿ ನಿರ್ಮಲವಾಗಿರುವ ವಸ್ತುವನ್ನು ದೋಷರಹಿತವಾದ್ದೆಂದು ಎಷ್ಟು ಸಾರಿ ಎಷ್ಟೆಷ್ಟು ವಿಧದಲ್ಲಿ ಬಣ್ಣಿಸಿದಾಗ್ಯೂ ಬುದ್ಧಿಯು ರಾಟೆಯ ಒಂದೇ ಗಾಡಿಯಲ್ಲಿ ಓಡಾಡುವ ಹಗ್ಗದಂತಾಗುವುದಲ್ಲದೆ ಅದಕ್ಕೆ ವಿಸ್ತಾರವಾದ ಪ್ರದೇಶದಲ್ಲಿ ಸ್ವೇಚ್ಛಾ ಪ್ರವೃತ್ತಿಯುಂಟಾದಂತಾಗಲಿಲ್ಲ, ಆ ಬುದ್ಧಿಗೆ ಕೂಪ ಕೂರ್ಮದ ಸ್ವಭಾವ ಶಾಶ್ವತವಾಗುವುದು.

ಇಂಥಾ ನಿರ್ದುಷ್ಟ ಪದಾರ್ಥಗಳ ವರ್ಣನೆಯನ್ನು ಬಿಟ್ಟು ಕೆಳಕ್ಕೆ ಇಳಿದರೆ, ಬುದ್ಧಿಯ ಜೋವು ಬಿಟ್ಟಂತಾಗುವುದು. ಅಂಥಾ ನಿರ್ಮಲಮೂರ್ತಿಗಳಾದ ಶ್ರೀರಾಮ ಸೀತಾದೇವಿ, ಯುಧಿಷ್ಠಿರ ದ್ರೌಪದಿ, ಇವರುಗಳ ಗುಣಗಳಲ್ಲಿ ಕೆಲವು ಭಾಗವನ್ನು ಹೊಂದಿ, ಲೋಕದ ಲತಾಡಿಗೆ ಸಿಕ್ಕಿ ಕಷ್ಟಕ್ಕೆ ಗುರಿಯಾದರೂ, ತಮ್ಮ ಧೀರೋದಾತ್ತ ಗುಣಗಳನ್ನು ಬಿಡದೇ ಇರತಕ್ಕ ಪಾತ್ರಗಳನ್ನು ಮನುಷ್ಯ ಮಾತ್ರದವರಲ್ಲಿ ಆರಿಸಿಕೊಂಡೋ ಊಹಿಸಿಕೊಂಡೋ ವರ್ಣಿಸುವುದು ಮನಸ್ಸನ್ನು ಚೆನ್ನಾಗಿ ಆಕರ್ಷಣ ಮಾಡುವುದರಲ್ಲಿ ಸಂಶಯವಿಲ್ಲ ಪುರಾಣಪ್ರಸಿದ್ದರು ವ್ಯಾಕರಣದ ಸೂತ್ರಗಳಾಗಿದಾರೆ. ಮನುಷ್ಯ ಸಾಮಾನ್ಯರಲ್ಲಿ ಸಿಕ್ಕುವ ಧೀರರು ಉದಾಹರಣೆಗಳಾಗಿದಾರೆ.

ಈ ಭಾವವನ್ನು ಮನಸ್ಸಿನಲ್ಲಿಟ್ಟು ಈ ಗ್ರಂಥವನ್ನು ಬರೆದಿದ್ದೇನೆ. ಇದರಲ್ಲಿ ಬರುವ ಪಾತ್ರಗಳ ಗುಣದೋಷಗಳು ಮೊದಲು ಸ್ವಲ್ಪ ತಲೆದೋರಿ ಮುಂದಕ್ಕೆ ಸಂದರ್ಭಾನುಸಾರವಾಗಿ ವೃದ್ಧಿಯಾಗುವ ರೀತಿಯನ್ನು ತೋರಿಸಿದೆ. ಅಸಂಬದ್ಧವೆಂದು ತೋರುವ ಸಂದರ್ಭಗಳೆಲ್ಲಾ ಮುಖ್ಯವಾದ ಕಥೆಯ ಅಂಗಗಳಾಗಿವೆ. ಲಂಚಕೋರರು ಅವರಿಂದುಂಟಾಗುವ ಪ್ರಮಾದಗಳು; ಗ್ರಾಮಗಳಲ್ಲಿ ಕಕ್ಷಿ ಅದರ ದೋಷಗಳು; ಮೈಸೂರ ಮುಮ್ಮಡಿ ಶ್ರೀಕೃಷ್ಣರಾಜ ಪ್ರಭುವಿನ ಆಸ್ಥಾನ, ಅವರ ಮಹತ್ತರವಾದ ಔದಾರ್ಯ; ಆಸ್ಥಾನದ ನಕಲಿ; ಹೇಳಿದ್ದನ್ನೆಲ್ಲಾ ನಂಬುವ ಗ್ರಾಮವಾಸಿಗಳು; ಪತಿವ್ರತಾ ಚರಿತ್ರೆ; ಸಹಗಮನ; ಗ್ರಾಮಗಳ ಕೊಳಚೆ; ಅತ್ತೆಸೊಸೆಯರ ಪರಸ್ಪರ ಕಿರಕುಳ; ಮಠದ ಉಪಾಧ್ಯಾಯ, ಅವನ ಕ್ರೌರ್ಯ, ಬಾಲಕರಿಗೆ ಅವ ಕೊಡುವ ಶಿಕ್ಷೆ ಅವನ ಮಹತ್ತರವಾದ ಕೃತಘ್ನತೆ, ವಿದ್ಯಾರ್ಥಿಗಳಿಗೆ ಮಾಡುವ ಕ್ರೂರವಾದ ಶಿಕ್ಷೆ ಅದರ ಧರ್ಮ ಸೂಕ್ಷ್ಮ ಕಾಪಟ್ಯ, ಅದರ ನೀಚಕೃತ್ಯಗಳು; ನಿಜವಾದ ಸೌಂದರ್ಯವನ್ನು ಸೌಂದರ್ಯವಲ್ಲವೆಂದು ಮಾಡುವ ವರ್ಣನೆ; ಪಾತಿವ್ರತ್ಯವನ್ನು ಭಂಗಮಾಡಲು ನಡಿಸಿದ ಅತಿಹೇಯವಾದ ಪ್ರಯತ್ನ: ಶಾಬರ ಪ್ರಯೋಗದ ನೀಚಕೃತ್ಯ; ಒಬ್ಬ ಐಲು ಮನುಷ್ಯನ ಹರಟೆಯಿಂದ ಹುಟ್ಟುವ ಹಾಸ್ಯ; ಒಬ್ಬ ಹುಟ್ಟು ಕಳ್ಳ ಹೇಳಿಕೊಳ್ಳುವ ಸ್ವವಿಚಾರದ ಕಥೆ; ಸ್ಮಶಾನದಲ್ಲಿ ನಡೆದ ಅತಿಭಯಂಕರವಾದ ವಿಷಯ; ಒಬ್ಬ ಮಹಾಮಂತ್ರವಾದಿ ಮಾಡಿದ ಅದ್ಭುತವಾದ ಕಾವ್ಯ ಮತ್ತು ಅವನ ಪಾರಮಾರ್ಥಿಕತೆ; ಆದ್ಯಂತವಾಗಿರುವ ನೀತಿಯ ಸಾರಾಂಶ; ಇವೇ ಮೊದಲಾದ ಸಂಗತಿಗಳನ್ನೆಲ್ಲಾ ಆಯಾ ಸ್ಥಳಗಳಲ್ಲಿ ವಿವರಿಸಿದ್ದೇನೆ.

ಈ ಗ್ರಂಥವನ್ನು ಓದಿಸಿ ಕೇಳಿದ ಸಹನಕ್ಕಾಗಿ ಮ॥ಸಬ್ಜಡ್ಜಿ ಲಕ್ಷ್ಮೀನಾರಣೈಯ್ಯನವರು, ಮೈಸೂರ ಸಿಟಿ ಮೇಜಿಸ್ಟ್ರೇಟು ಮ। ಬಸವಾರಾಧ್ಯರು, ವಿದ್ಯಾಭ್ಯಾಸದ ಇಲಾಖಾ ಆ.ಅ.ಮ ॥ ರಾಮಸ್ವಾಮೈಯ್ಯನವರು, ಡಿ॥ ಸ್ಕೂಲ್ ಹೆ.ಮಾ. ಮ॥ ರಘುನಾಥ ರಾಯರು, ಇವರುಗಳಿಗೆ ನಾನು ಕೃತಜ್ಞನಾಗಿದೇನೆ. ಮುಖ್ಯವಾಗಿ ಕನ್ನಡ ಭಾಷೆಯಲ್ಲಿ ಹುಟ್ಟುವ ಗ್ರಂಥಗಳ ಅಭಿವೃದ್ಧಿಗಾಗಿ ಹೆಚ್ಚಾದ ಪ್ರಯತ್ನವನ್ನು ಮಾಡಿ ವಿಶೇಷವಾದ ಪ್ರೋತ್ಸಾಹವನ್ನು ಕೊಡುತ್ತಿರುವ ವಿದ್ಯಾಭ್ಯಾಸದ ಇಲಾಖಾ ಇ.ಜ. ರಾವ್ ಬಹಾದೂರ್ ಮ॥ ಶ್ಯಾಮರಾವ್ ಎಂ.ಎ. ಯವರಿಗೆ ಈ ಮೂಲಕ ನನ್ನ ಕೃತಜ್ಞತೆಯನ್ನು ಪ್ರಕಾಶಮಾಡಿದೇನೆ.

ಬೆಂಗಳೂರು, ಬಸವನಗುಡಿ,

ಆನಂದ ಸಂ॥ ಮಾಘ ಶು॥ ೧೫ **ಎಂ.ಎಸ್. ಪುಟ್ಟಣ್ಣ**

ಭಾನುವಾರ.

---

# ಎಂ. ಎಸ್. ಪುಟ್ಟಣ್ಣನವರು

## (ಸಂಕ್ಷಿಪ್ತ ಜೀವನ ಚರಿತೆ)

ಶ್ರೀ ಎಂ.ಎಸ್. ಪುಟ್ಟಣ್ಣನವರು ಆನಂದನಾಮ ಸಂವತ್ಸರದಲ್ಲಿ ೧೮೫೪ನೇ ಇಸವಿಯಲ್ಲಿ ಬಲಿಪಾಡ್ಯಮಿಯ ದಿನ ಮೈಸೂರಿನಲ್ಲಿ ಜನಿಸಿದರು. ಇವರ ತಂದೆಯವರು ಚನ್ನಪಟ್ಟಣದ ಸ್ಥಳವಂದಿಗರು. ಪುಟ್ಟಣ್ಣನವರು ಜನಿಸಿದ್ದು ಅವರ ತಾಯಿಯ ತೌರುಮನೆಯಲ್ಲಿ ಇವರು ಜನಿಸಿದ ಹತ್ತುದಿನಗಳಲ್ಲಿ ಇವರಿಗೆ ಮಾತೃ ವಿಯೋಗವಾಯಿತು. ಇವರ ಸೋದರಮಾವಂದಿರೇ ಇವರನ್ನು ಸಾಕಿದರು. ಪುಟ್ಟಣ್ಣನವರು ಈಗ ಮಹಾರಾಜಾ ಕಾಲೇಜಾಗಿರುವ ರಾಜಾಸ್ಕೂಲಿನಲ್ಲಿ ವಿದ್ಯಾ ವ್ಯಾಸಂಗ ಮಾಡಿ ಎಫ್.ಎ., ಪರೀಕ್ಷೆಯಲ್ಲಿ ತೇರ್ಗಡೆಯಾದರು; ಬಿ.ಎ., ಪರೀಕ್ಷೆಗೆ ವ್ಯಾಸಂಗ ಮಾಡುತ್ತಿರುವಾಗ ಧಾತು ಈಶ್ವರ ಸಂವತ್ಸರಗಳ ಕ್ಷಾಮ ಬಂದದ್ದರಿಂದ ಮುಂದಿನ ವ್ಯಾಸಂಗವನ್ನು ನಿಲ್ಲಿಸಿ ೧೮೭೭ನೇ ಇಸವಿಯಲ್ಲಿ ಕೋಲಾರದ ಹೈಸ್ಕೂಲಿನ ಸಹಾಯೋಪಾಧ್ಯಾಯರಾಗಿ ಕೆಲಸಕ್ಕೆ ಸೇರಿದರು. ಒಂದೆರಡು ವರ್ಷಗಳ ಮೇಲೆ ಮೈಸೂರು ಮಹಾರಾಜಾ ಕಾಲೇಜಿಗೆ ವರ್ಗವಾಗಿ ಮೈಸೂರಿಗೆ ವಾಪಸು ಬಂದರು. ಶ್ರೀ ಚಾಮರಾಜೇಂದ್ರ ಒಡೆಯರವರು ಮೈಸೂರು ಸರ್ಕಾರದ ಅಧಿಕಾರ ಸೂತ್ರವನ್ನು ವಹಿಸಿಕೊಂಡ ಮೇಲೆ ಕನ್ನಡ ಭಾಷೆಯನ್ನು ಪುನರುಜೀವನ ಮಾಡಲು ತೊಡಗಿದ ಉತ್ಸಾಹಿಗಳಾದ ಸಾಹಿತಿಗಳ ಗುಂಪಿನಲ್ಲಿ ಇವರೂ ಸೇರಿದ್ದರು. ೧೮೮೧ನೇ ಇಸವಿಯಲ್ಲಿ ಆಗ ದಿವಾನರಾಗಿದ್ದ ಶ್ರೀ ಸಿ. ರಂಗಾಚಾರ್ಲುರವರೂ ಮತ್ತು ವಿದ್ಯಾಭ್ಯಾಸದ ಡೈರೆಕ್ಟರ್ ಮಿ! ರೈಸ್‌ರವರೂ ಅಪೇಕ್ಷಿಸಿದ ಮೇಲೆ 'ಹಿಂದೂ ಚರಿತ್ರ ದರ್ಪಣ'ವೆಂಬ ಎರಡು ಭಾಗವುಳ್ಳ ಚರಿತ್ರೆಯನ್ನು ಪುಟ್ಟಣ್ಣನವುರ ತಮ್ಮ ಆಪ್ತ ಸ್ನೇಹಿತರಾಗಿದ್ದ ಶ್ರೀಮಾನ್ ಎಂ.ಬಿ. ಶ್ರೀನಿವಾಸಯ್ಯಂಗಾರರೊಂದಿಗೆ ರಚಿಸಿದರು. ಮತ್ತು ಇದಲ್ಲದೆ ''ಹಿಂದೂ ಚರಿತ್ರ ಸಂಗ್ರಹ'ವೆಂಬ ಸಣ್ಣ ಚರಿತ್ರೆಯನ್ನು ಸಹ ಇಬ್ಬರೂ ಸೇರಿ ರಚಿಸಿದರು. ಸುಮಾರು ಇದೇ ಕಾಲದಲ್ಲಿಯೇ ''ನೀತಿ ಚಿಂತಾಮಣಿ'ಯನ್ನು ಷೇಕ್ಸ್ಪಿಯರ್ ಕವಿಯ 'ಸಿಂಬಿಲೈನ್' ಎಂಬ ನಾಟಕದ ಅನುವಾದವಾದ "ಜಯಸಿಂಹ ರಾಜಚರಿತ್ರೆ'ಯೆಂಬ ಗ್ರಂಥವನ್ನು ನಾಟಕ ರೂಪದಲ್ಲಿಯೂ ಕಥಾರೂಪದಲ್ಲಿಯೂ ರಚಿಸಿದರು. ೧೮೮೩ನೇ ಇಸವಿಯಲ್ಲಿ ಇವರು ಶ್ರೀ ಎಂ.ಬಿ. ಶ್ರೀನಿವಾಸಯ್ಯಂಗಾರ್ ರೊಂದಿಗೆ "ಹಿತ ಬೋಧಿನಿ' ಎಂಬ ಮಾಸ ಪತ್ರಿಕೆಯನ್ನು ಪ್ರಾರಂಭಮಾಡಿ, ಸುಮಾರು ಒಂದು ವರ್ಷದ ತರುವಾಯ ತಮ್ಮ ಬಿ.ಎ., ಪರೀಕ್ಷೆಯ ವ್ಯಾಸಂಗವನ್ನು ಪೂರೈಸಿಕೊಳ್ಳುವುದಕ್ಕಾಗಿ ಮದ್ರಾಸಿಗೆ ಹೋಗುವಾಗ ಪತ್ರಿಕೆಯನ್ನು ಕೀರ್ತಿಶೇಷರಾದ ಶ್ರೀ ಎಂ. ವೆಂಕಟಕೃಷ್ಣಯ್ಯನವರಿಗೆ ಒಪ್ಪಿಸಿದರು. ಪುಟ್ಟಣ್ಣನವರು ೧೮೮೫ರಲ್ಲಿ ಬಿ.ಎ., ಪರೀಕ್ಷೆಯಲ್ಲಿ ತೇರ್ಗಡೆಯಾದರು. ಮುಂದಿನ ವರ್ಷದಲ್ಲಿ ಇವರಿಗೂ ಆಗ ಮಹಾರಾಜಾ ಕಾಲೇಜಿನ ಹೆಡ್‌ಮಾಸ್ಟರಾಗಿದ್ದ ಮಿ|| ಹೆಚ್.ಜೆ. ಭಾಭಾರವರಿಗೂ ಭಿನ್ನಾಭಿಪ್ರಾಯಗಳುಂಟಾದ್ದರಿಂದ ವಿದ್ಯಾಭ್ಯಾಸದ ಇಲಾಖೆಯಲ್ಲಿದ್ದ ಉಪಾಧ್ಯಾಯ ಕೆಲಸಕ್ಕೆ ರಾಜಿನಾಮೆಯನ್ನು ಕೊಟ್ಟರು. ಕೆಲವು ದಿವಸಗಳ ಮೇಲೆ ಪುಟ್ಟಣ್ಣನವರು ಮೈಸೂರು ಛೀಫ್ ಕೋರ್ಟಿನಲ್ಲಿ ಭಾಷಾಂತರಕಾರ (Translator)ರಾಗಿ ನೇಮಕವಾದರು; ೧೮೯೭ನೇ ಇಸವಿಯವರೆಗೆ ಈ ಕೆಲಸದಲ್ಲಿಯೇ ಇದ್ದರು. ಆ ಕಾಲದಲ್ಲಿ 'ಸುಮತಿ ಮದನ ಕುಮಾರರ ಚರಿತ್ರೆ', ''ಕಾಂಘೊಷನ ಚರಿತ್ರೆ' ಮತ್ತು ಷೇಕ್ಸ್ಪಿಯರ್ ಕವಿಯ "ಕಿಂಗ್

ಲಿಯರ್' ಎಂಬ ನಾಟಕದ ಅನುವಾದವಾದ "ಹೇಮಚಂದ್ರರಾಜ ವಿಲಾಸ' ಮತ್ತು 'ಕನ್ನಡ ಒಂದನೆ ರೀಡರ್' ಈ ಪುಸ್ತಕಗಳನ್ನು ರಚಿಸಿದರು.

೧೮೯೭ನೇ ಇಸವಿ ನವೆಂಬರು ಮಾಹೆಯಲ್ಲಿ ಪುಟ್ಟಣ್ಣನವರು ಚಿತ್ರದುರ್ಗದ ತಾಲ್ಲೂಕು ಅಮಲ್ದಾರರಾಗಿ ನೇಮಿಸಲ್ಪಟ್ಟರು. ಚಿತ್ರದುರ್ಗದಲ್ಲಿರುವಾಗ ಪುಟ್ಟಣ್ಣನವರು ಚಿತ್ರದುರ್ಗದ ಪಾಳೆಯಗಾರರ ವಂಶಸ್ಥರ ಬಳಿ ಇದ್ದ ಓಲೆಗರಿಯ ಗ್ರಂಥಗಳಿಂದ ಚಿತ್ರದುರ್ಗದ ಪಾಳೆಯಗಾರರ ಚರಿತ್ರೆಯ ವಿಚಾರದಲ್ಲಿ ವಿಷಯಗಳನ್ನು ಸಂಗ್ರಹಿಸಿದರು.

ಚಿತ್ರದುರ್ಗ, ನೆಲಮಂಗಲ, ಚಾಮರಾಜನಗರ, ಬಾಗೆಪಲ್ಲಿ ಮುಳಬಾಗಿಲು ಮತ್ತು ಹೊಸದುರ್ಗ ಈ ತಾಲ್ಲೂಕುಗಳಲ್ಲಿ ಅಮಾಲ್ದಾರರಾಗಿದ್ದು ೧೯೦೮ನೇ ಇಸವಿ ನವೆಂಬರ್ ತಿಂಗಳಲ್ಲಿ ಸರಕಾರದ ಕೆಲಸದಿಂದ ನಿವೃತ್ತರಾದರು. ಅಮಲ್ದಾರಿ ಕೆಲಸದಲ್ಲಿರುವಾಗ ಪುಟ್ಟಣ್ಣನವರಿಗೆ ಯಾವ ಹೊಸ ಗ್ರಂಥಗಳನ್ನು ರಚಿಸುವುದಕ್ಕೂ ಅವಕಾಶ ದೊರಕಲಿಲ್ಲ. ನಿವೃತ್ತರಾದ ನಂತರ 'ಕುಣಿಗಲು ರಾಮಾಶಾಸ್ತ್ರಿಗಳ ಚರಿತ್ರೆ' ಎಂಬ ಜೀವನ ಚರಿತ್ರೆಯನ್ನೂ "ಮಹಮ್ಮದ್ ಗವಾನನ ಚರಿತ್ರೆ', 'ಸರ್ ಸಾಲಾರ್ ಜಂಗರ ಚರಿತ್ರೆ' ಎಂಬ ಜೀವನ ಚರಿತ್ರೆಗಳನ್ನೂ ಮಾಡಿದ್ದುಣ್ಣೋ ಮಹಾರಾಯ', 'ಮುಸುಗ ತೆಗೆಯೇ ಮಾಯಾಂಗನೆ', 'ಪೇಟೆ ಮಾತೇನಜ್ಜಿ' ಎಂಬ ಕಾದಂಬರಿಗಳನ್ನೂ 'ಚಿತ್ರದುರ್ಗ, ಗುಮ್ಮನಾಯಕನ ಪಾಳ್ಯ, ಇಕ್ಕೇರಿ, ಹಾಗಲ್ವಾಡಿ ಪಾಳೆಯಗಾರರ ಚರಿತೆ'ಯ ವಿಚಾರದಲ್ಲಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಐದು ಉಪನ್ಯಾಸಗಳನ್ನು (Extension Lectures) ಕೊಟ್ಟು ಆ ಉಪನ್ಯಾಸಗಳನ್ನು ಒಂದು ಪುಸ್ತಕವಾಗಿಯೂ ಪ್ರಕಟಿಸಿರುತ್ತಾರೆ. ಈ ಗ್ರಂಥಗಳಲ್ಲದೆ ಕನ್ನಡ ವ್ಯಾಕರಣ ಮತ್ತು ವಾಕ್ಯ ರಚನಾಕ್ರಮಗಳನ್ನು ಕುರಿತು ''ಲೇಖನ ಲಕ್ಷಣ'ವೆಂಬ ಗ್ರಂಥವನ್ನೂ ರಚಿಸಿರುತ್ತಾರೆ.

ಪುಟ್ಟಣ್ಣನವರು ೧೮೯೦-೯೧, ೧೯೮೧-೯೨ ಈ ಎರಡು ವರ್ಷಗಳು ಮದರಾಸು ವಿಶ್ವವಿದ್ಯಾನಿಲಯದ ಕನ್ನಡ ಪರೀಕ್ಷಕರಾಗಿಯೂ ಮೈಸೂರು ಸಂಸ್ಥಾನದ ಅಪ್ಪರ್ ಮತ್ತು ಲೋವರ್ ಸೆಕೆಂಡರಿ ಪರೀಕ್ಷೆಗಳಿಗೆ ಹತ್ತು ವರ್ಷಗಳ ಕಾಲ ಕನ್ನಡ ಮತ್ತು ಚರಿತ್ರೆಯ ಪರೀಕ್ಷಕರಾಗಿಯೂ ಇದ್ದರು. ಮೈಸೂರು ಸಂಸ್ಥಾನದ ಟೆಕ್ಸ್ ಬುಕ್ ಕಮಿಟಿಯ ಸದಸ್ಯರಾಗಿಯೂ ಹಲವು ವರ್ಷಗಳ ಕಾಲ ಇದ್ದರು.

೧೯೧೫ರಲ್ಲಿ ಕರ್ಣಾಟಕ ಸಾಹಿತ್ಯ ಪರಿಷತ್ತಿನ ಸ್ಥಾಪನ ಕಾರ್ಯದಲ್ಲಿ ಪುಟ್ಟಣ್ಣನವರು ಸೇರಿದ್ದದ್ದಲ್ಲದೆ ಕೆಲವು ವರ್ಷ ಆ ಸಂಸ್ಥೆಯ ಕಾರ್ಯದರ್ಶಿಯಾಗಿಯೂ ಸೇವೆ ಸಲ್ಲಿಸಿದರು.

ಪುಟ್ಟಣ್ಣನವರು ೧೯೩೦ನೇ ಇಸವಿ ಏಪ್ರಿಲ್ ತಿಂಗಳಲ್ಲಿ ದಿವಂಗತರಾದರು. ಕೊನೆಯವರೆಗೂ ಸಾಹಿತ್ಯದ ಕಾರ್ಯದಲ್ಲಿ ಸದಾ ಉದ್ಯುಕ್ತರಾಗಿರುತ್ತಿದ್ದರು.

ಭಾಷಾಂತರವಲ್ಲದ ಅಸಲು ಜೀವನ ಚರಿತ್ರೆಗಳನ್ನೂ ಕಾದಂಬರಿಗಳನ್ನೂ ಕನ್ನಡ ಭಾಷೆಯಲ್ಲಿ ಮೊಟ್ಟ ಮೊದಲು ರಚಿಸಿದವರು ಪುಟ್ಟಣ್ಣನವರು. ಇವರ ಶೈಲಿ ಸರಳವಾದುದು. ಗ್ರಂಥಗಳನ್ನು ಸಾಧ್ಯವಾದ ಮಟ್ಟಿಗೆ ಜನಸಾಮಾನ್ಯದಲ್ಲಿ ರೂಢಿಯಲ್ಲಿರುವ ಭಾಷೆಯಲ್ಲಿಯೇ ಬರೆಯತಕ್ಕದ್ದು ಉಚಿತವೆಂದು ಇವರ ಮತ.

ಎಂ.ಪಿ. ಸೋಮಶೇಖರರಾವ್.

---

ಶ್ರೀರಾಮ

# ಮಾಡಿದ್ದುಣೋ ಮಹಾರಾಯ

## ೧ನೆ ಅಧ್ಯಾಯ

### ಶುಭಮಸ್ತು - ನಿರ್ವಿಘ್ನಮಸ್ತು

ಕಿಟ್ಟ ಜೋಯಿಸರು - ಶುಭಮಸ್ತು, ಶುಕ್ಲಾಂಬರಧರಂ ವಿಷ್ಣುಂ ಶಶಿವರ್ಣಂ ಚತುರ್ಭುಜಂ । ಪ್ರಸನ್ನ ವದನಂ ಧ್ಯಾಯೇ । ತ್ಸರ್ವವಿಘ್ನೋಪ ಶಾಂತಯೇ ॥

ಸ್ವಸ್ತಿಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕಾದಿಯಾಗಿ ಸಂದ ವರ್ಷಂಗಳೊಳು ಪ್ರಭವಾದಿ ಷಷ್ಠಿ ಸಂವತ್ಸರದೊಳು ಪ್ರಮಾದ ನಾಮ ಸಂವತ್ಸರದ ಮಾಗೀಶ್ವರ ಶುದ್ಧ ೪ ಮಂಗಳವಾರ ೬೩-೮೨; ಧನಿಷ್ಠಾ ನಕ್ಷತ್ರ ೫-೦; ವೈಧೃತಿ ೬೦-೭೨; ಬಾಲಕರಣ ೬೩-೪; ದಿವದಲ್ಲಿ ಸಾಮಾನ್ಯ, ರಾತ್ರೆ ಹೆಚ್ಚುಗಟ್ಟಲೆ, ಮಸಣಕಮ್ಮನ ರಥೋತ್ಸವ, ಶ್ರೀರಂಗದಲ್ಲಿ ಬೃಹದೇಶ್ವರಸ್ವಾಮಿರಥ, ಏಸಾಳ್ವಾರು ತಿರುನಕ್ಷತ್ರಂ. ಇವತ್ತೆಲ್ಲಾ ಸಮಸ್ತ ಕಾರ್ಯಕ್ಕೂ ವ್ಯತೀಪಾತವಾಗಿರುವಂಥಾದ್ದು, ನಾಳೆಯೆಲ್ಲಾ ಸಮಸ್ತ ಕಾರ್ಯಕ್ಕೂ ವೈಧೃತಿಯಾಗಿರುವಂಥಾದ್ದು, ಇವತ್ತು ನಾಳೆ ಸಮಸ್ತ ಕಾರ್ಯಕ್ಕೂ ಅನುಕೂಲವಾಗಿರುವಂಥಾದ್ದು. ನಾಳೆಯಿಂದ ಧನಿಷ್ಠಾ ಪಂಚಕ ಮೊದಲಾಗುವಂಥಾದ್ದು, ಸ್ವಸ್ತಿಸ್ಸರ್ವೇ ಗ್ರಹಾಸ್ತುನಕ್ಷತ್ರಾ ಶುಭೇಕಾದಶ ಸ್ಥಾನ ಫಲ ಸಿದ್ಧಿರಸ್ತು ॥ ರಾಜದ್ವಾರೇ ದಿಗ್ವಿಜಯಮಸ್ತು ॥ ಸಮಸ್ತ ಸನ್ಮಂಗಳಾನಿ ಭವಂತು ॥ ಧನಧಾನ್ಯ ಸಮೃದ್ಧಿರಸ್ತು - ಈ ದಿವಸ ನಾಳೆ ದಿನಶುದ್ಧಿ ಹೀಗೆ ಇದೆ.

ಮಾರಮಣರಾಯರು ಈ ಪಂಚಾಂಗ ಶ್ರವಣವಾಗುವಾಗ್ಗೆ ಅದಕ್ಕೆ ಗಮನ ಕೊಡದೇ ಸುಮ್ಮನಿದ್ದು "ರಾಜದ್ವಾರೇ ದಿಗ್ವಿಜಯಮಸ್ತು" ಎಂದ ಮಾತನ್ನು ಕೇಳಿ, ಜೋಯಿಸರು ಹೇಳಿದ್ದರಿಂದ ಸಾಹೇಬರ ದಯ ತನ್ನ ಮೇಲೆ ಹೆಚ್ಚಾಗಬಹುದೆಂದು ಯೋಚಿಸುತ್ತಾ ಇದ್ದನು. ಅಷ್ಟರಲ್ಲಿ "ಧನಧಾನ್ಯ ಸಮೃದ್ಧಿರಸ್ತು" ಎಂದು ಹೇಳಿದ ಮಾತು

ಜೋಯಿಸರ ತುಟಿಯಿಂದ ಈಚೆಗೆ ಹೊರಡುತಿರುವಾಗಲೇ ದಫೇದಾರ ವೀರನಾಯಕ ಬಂದು - ಬುದ್ಧಿ ಪಟೇಲ ಸಂಗೇಗೌಡ ಬಂದಿದಾನೆ, ಎಂದನು.

ಮಾರಮಣರಾಯ - ಜೋಸ್ಯರೇ, ನಿಮ್ಮ ವಾಕ್ಕಿನಾಗೆ ಅಮೃತವಿರಾದು, ನೀವು ಧನಧಾನ್ಯ ಅಂಬೋವೇಳೆಗೆ ಅದು ನಿಜವಾಗಿ ಬಂಧಾಂಗಾಯಿತು, ಏನ್ರೈಯ್ಯ, ಬಂದಿ, ಸಂಗಣ್ಣ?

ಸಂಗೇಗೌಡ - ಬಂದಿ ಬುದ್ಧಿ ಪಾದ್ದಲ್ಲಿ.

ಮಾರಮ - ನಾನು ಹೇಳಿದ್ದು ಬಂತಾ?

ಸಂಗೇ - "ಬುದ್ಧಿ ಬಂತು' ಎಂದು ೧೦೦ ರೂಪಾಯಿಯನ್ನು ತಂದು ಎಣಿಸಿ ಸುಬೇದಾರರ ಮೇಜಿನ ಮೇಲೆ ಇರಿಸಿದನು.

ಮಾರಮ - (ಹಣ ಬಂದದ್ದಕ್ಕೆ ಸ್ವಲ್ಪ ಸಂತೋಷಿಯಾಗಿ, ಮುಖದಲ್ಲಿ ಮಾತ್ರ ಗಂಟು ಹಾಕಿದ ಹುಬ್ಬಿನಿಂದ ಕೋಪವನ್ನು ತೋರಿಸುವವನ ಹಾಗೆ ನಟಿಸುತ್ತಾ) ಬಾಕಿ ಐವತ್ತು ರೂಪಾ ಕಡಿಮಿ ಮಾಡಿದಿ, ನಿಮ್ಮ ಜನಕ್ಕೆ ಪುತ್ತಿ ಇಲ್ಲ ಅದು ಬರೋವರೆಗೆ ಫೈಸಲ ಹೇಳಲಿಕ್ಕೆ ಆಗೋದಾ? ಹೇಳಿದ್ದು ೨೦೦, ತಂದದ್ದು ೧೦೦, ಒಂದೊಂದು ಹೀಂಗೆ ಕಡಿಮಿ ಮಾಡ್ವಿ, ಹೀಂಗೆ ಕೊಂಚ ಕೊಂಚಕ್ಕೆ ಏನಾಗೋದು, ಇದಕ್ಕಾ ನಾವು ದೇಶ ಬಿಟ್ಟು ದೇಶಕ್ಕೆ ಬಂದೇವು? ಏನ ಕಣೋ?

ಸಂಗೇ - ನಾಳೆ ಬತ್ತದೆ ಬುದ್ಧಿ

ಮಾರಮ - ಜೋಸ್ಯರೆ, ನಮ್ಮಕಡಿ ಹೀಂಗಿಲ್ಲ. ಮಾತು ಒಂದು ಕೆಲಸ ಒಂದು, ಇರಾದು. ಇಲ್ಲಿ ದಾವುದೂ ನಿಜ ಇಲ್ಲ, ಈ ಸೀಮಿ ನಮ್ಮ ಸೀಮಿಹಾಂಗೆ ಧರ್ಮಸೀಮಿ ಇಲ್ಲ, ಒಂದೂ ಇಲ್ಲ.

ಜೋಯಿಸ - ಆಹ, ಅಪ್ಪಣೆಯಾದ್ದು ಸರಿ, ಅದಕ್ಕೆ ಸಮಾನ ಉಂಟೆ? ಶಾಸ್ತ್ರ ಸುಳ್ಳಲ್ಲ ಲಕ್ಷ್ಮೀಂ ಕ್ಷೀರ ಸಮುದ್ರ ರಾಜತನಯಾಂ ಎಂದು ಹೇಳಿದಾರೆ. ಪೂರ್ಣಾಧಿಕಾರ, ಕೇಳತಕ್ಕದ್ದೇನು! ಅನೇಕ ಸುಬೇದಾರರು ಬಂದರು, ಈ ಸಂಪತ್ತು ಯಾರಿಗೂ ಇಲ್ಲ,

ಮಾರಮ - ಸಂಗಣ್ಣ ಕೇಳೋ ಕಣೋ ಜೋಸ್ಯರು ಹೇಳಾದು. ಅವರಿಗೆ ಏನಾದರೂ ಕೊಡೇನು?

ಸಂಗ - ಏನೂ ತರ್ನಿಲ್ಲ ಏಳಿ.

ಹೀಗೆಂದು ಹೇಳುತ್ತಾ ಸಂಗಣ್ಣನು ತನ್ನ ಹೊಗೆಸೊಪ್ಪಿನ ಚೀಲಕ್ಕೆ ಕೈಹಾಕಿ ಹುಡುಕಿ ಮೂರುಕಾಸಿನ ಬಿಲ್ಲೆಯನ್ನು ತೆಗೆದು ಜೋಯಿಸರ ಕೈಗೆ ಕೊಟ್ಟನು. ಕಿಟ್ಟನು ಬಂದಷ್ಟೇ ಲಾಭವೆಂದು ಆಗ್ಗೆ ಸುಮ್ಮನಾದನು. ಸುಬೇದಾರರ ಅಪ್ಪಣೆ ಪಡೆದು ಈಚೆಗೆ ಬಂದು ಅದನ್ನು ನೋಡಲಾಗಿ, ಅದು ಸಮಕಲ ಕಾಸಾಗಿತ್ತು. ಲಭ್ಯವಿದ್ದಷ್ಟು

ಎಂದುಕೊಂಡು ಅವನು ಪೇಟೇ ಕಡೆ ಮುಖವನ್ನು ತಿರುಗಿಸಲು, ಸುಬೇದಾರರ ದಿವಾನಖಾನೆಯಿಂದ ಈಚೆಗೆ ಬಂದ ಸಂಗಣ್ಣನನ್ನು ಕಂಡು, ಒಳಗಿದ್ದ ಅಮ್ಮಾ ಅವರು - ಗ್ಯವಡ, ಬೇಳೆ ಇಲ್ಲ ಹತ್ತು ಪಲ್ಲ ಬೇಳೆ ತರಬಾರದಾ? ಒಂದು ತಿಂಗಳಿಗಾದರೆ ಆಗಾದು. ಹೀಗೆಂದು ಹೇಳುತಾ ಗಂಡನಾದ ಸುಬೇದಾರನ ಮುಖವನ್ನು ನೋಡಿ - ಅವನು ಬರೀ ಕೈ ಮಾಡಿಕೊಂಡು ಬರುತಾನ, ಸುಮ್ಮನೆ ಇರಾದು, ಎಂಟು ದಿನಕ್ಕ ಒಂದು ಸಾರಿಯಾಗಲಿ ಬೇಳೀ ಸಾರು ಬೇಡವ?

ಸಂಗೇ - ನಮ್ಮ ದಿಕ್ಕ ತುಗರಿ ಒಂದು ಕಾಳಾಗಲಿಲ್ಲ ಕಣವ್ವ.

ಇಷ್ಟರಲ್ಲಿ ಸುಬೇದಾರರ ಮಗಳು ಓಡಿ ಬಂದು ಸಂಗಣ್ಣನ ಸಮೀಪದಲ್ಲಿ ನಿಂತು - ಏನಕಣಾ ಗ್ಯವಡ, ಕಾಶು ಕೊಡಾದಿಲ್ಲವಾ? ಎಂದಳು. ಆಗ ಸಂಗಣ್ಣನು ವಟ್ಟದ ಚೀಲದಿಂದ ಒಂದು ಪಾವಲಿಯನ್ನು ತೆಗೆದು ಆ ತರುಣಿಯ ಕೈಗೆ ಕೊಟ್ಟನು. ಅಷ್ಟು ಹೊತ್ತಿಗೆ ಸುಬೇದಾರರ ಅಡಿಗೆ ಮನೆಯಿಂದ ಒಂದು ನಾಯಿ ಬಗುಳುತಾ ಗೌಡನನ್ನು ಹರಿಸಿಕೊಂಡು ಬಂತು. ಇದರಿಂದ ಅವನಿಗೆ ಸದ್ಯ ಉಂಟಾಗಿದ್ದ ಕಷ್ಟ ತಪ್ಪಲು ಸಮಯ ದೊರೆಯಿತು. ಸಂಗಣ್ಣನು ಆಚೆಗೆ ಹೊರಟುಹೋಗಲು ಕಾಲನ್ನು ತೆಗೆದನು. ಆಗ ಸುಬೇದಾರರು ದಿವಾನಖಾನೆಯ ಕಿಟಕಿಬಾಗಿಲ ಬಳಿಗೆ ಬಂದು ನಿಂತುಕೊಂಡರು. ಅವರ ಮುಖವನ್ನು ನೋಡುತ್ತಾ ಅವರ ಮನೇ ಅಡಿಗೆಯವನಾದ ಸುಬ್ಬಯ್ಯನು - ಸಂಗೇಗೌಡ, ಒಂದು ಮಣು ಹಸುವಿನ ಬೆಣ್ಣೆ ಕಳುಹಿಸು. ಯಜಮಾನರಿಗೆ ಕೆಟ್ಟ ತುಪ್ಪ ಯಾವುದೂ ಸೇರುವುದಿಲ್ಲ ಎಂದನು. ಆಗಲಿ ಕಣಪ್ಪ ಸುಬ್ಬಪ್ಪ ಎಂದು ಸಂಗಣ್ಣ ಹೋಗುತ್ತಿರುವಾಗ ದಫೇದಾರನು - ಗವುಡ, ಏನೋ ನೂರು ಇನ್ನೂರು ಆದರೂ ತೆರುತಿಯೆ, ಎರಡು ಕಂಡಗ ರಾಗಿ ಕೊಡಯ್ಯ ಎಂದು ಕೇಳಿದರೆ ಗತಿ ಇಲ್ಲವೆ?

ಗೌಡ - ಅಯ್; ಈಗ ಮಾರಿಹಬ್ಬದ ಗಜಾಲಲ್ಲವ? ಎಲ್ಲಾ ತೀರಲಿ ಕಳಗಸುತ್ತೇನೆ. ಓ ಮರತಿ - ಎಂದು ಹಿಂದಕ್ಕೆ ಹೋಗಿ, ಕಿಟಕಿಯಲ್ಲಿ ನೋಡುತ್ತಾ ನಿಂತ ಸುಬೇದಾರರನ್ನು ಕಂಡು - ಬುದ್ಧಿ ಹೊತಾರೆ ನಮ್ಮೂರ ಮಾರೀಹಬ್ಬ ಅದಕೆ ಲೇರ್ಸ ಬೇಕಾ?

ಮಾರಮಣ - ಲೇರ್ಸ ಇಲ್ಲಾದೆ ಹಬ್ಬ ಉಂಟಾ?

ಸಂಗೇ - ಏನ ಕೊಡಬೇಕೋ ಬುದ್ಧಿ?

ಮಾರಮ - ಟಾಂಪು ೮ ಆಣ, ನಮ್ಮ ಫೀಸು ೫೦ ರೂಪಾ.

ಆಗ ಗೌಡನು - ಆಗಲಿ ಬುದ್ಧಿ ಎಂದು ಹೊರಟುಹೋದನು.

ಇದೆಲ್ಲವನ್ನೂ ನೋಡುತ್ತಾ ನಿಂತಿದ್ದ ಕಿಟ್ಟ ಜೋಯಿಸನು ತನ್ನ ಮನಸ್ಸಿನೊಳಗೆ ಈ ಸಂಗೇಗೌಡ ಸುಬೇದಾರರಲ್ಲಿ ಹೆಚ್ಚಾಗಿ ಪ್ರಬಲನಾಗಿದಾನೆ. ಸರ್ಕಾರದಲ್ಲಿ ಇವನ ಮಾತು ಚೆನ್ನಾಗಿ ನಡೆಯುತ್ತೆ. ಇವನಲ್ಲಿ ನಾವು ಹೆಚ್ಚಾಗಿ ಸ್ನೇಹವನ್ನು ಬೆಳೆಸಬೇಕು. ಪಟೇಲನಾದ ಇವನನ್ನು ನಾವು ಒಳ್ಳೆಯವನಾಗಿ ಮಾಡಿಕೊಳ್ಳದಿದ್ದರೆ, ನಮ್ಮ ಸಂಜವಾಡಿಯಲ್ಲಿ ಬಾಳುವುದು ಕಷ್ಟ ಸಂಗಣ್ಣನೇನೋ ನಮ್ಮ ಕಡೆಯವನೇ. ನಾವು ಇವರ ಮನೆಗೆ ಕುಲಪುರೋಹಿತರಲ್ಲವೆ? ಹೀಗಾದರೂ ಇವನು ಸುಬೇದಾರನ ಮಗಳಿಗೆ ಪಾವಲಿ ಕೊಟ್ಟ ನನಗೆ ಸಮಕಲಕಾಸ

ಕೊಟ್ಟ ಈಗ್ಗೆ ಹೋಗಲಿ. ಇವರ ಅಪ್ಪನ ತಿತಿ ಹತ್ತರವಾಯಿತು. ಆಗ ತರ್ಪಣ ಬಿಡಿಸುವಾಗ್ಗೆ ಇನ್ನೂ ನಾಲ್ಕು ಹೆಸರನ್ನು ಹೆಚ್ಚಾಗಿ ಹೇಳಿ ಕಾಸನ್ನು ಎಳೆಯಬೇಕು.

ಹೀಗೆ ಅರ್ಧ ಜಾಣತನ ಅರ್ಧ ಬೆಪ್ಪುತನ ಎರಡನ್ನೂ ಸೇರಿಸಿ ಮಾತನಾಡಿಕೊಂಡು ಮೆಲ್ಲಗೆ ಹೋಗುತ್ತಾ ಇದ್ದ ಕಿಟ್ಟ ಜೋಯಿಸನು ಕಾಲನ್ನು ಚುರುಕುಮಾಡಿ ಮುಂದೆ ಮುಂದೆ ಬಿರುವಾಗಿ ಹೋಗುತ್ತಾ ಇದ್ದ ಸಂಗೇಗೌಡನನ್ನು ನೋಡಿ – ಎಲೋ ಸಂಗಣ್ಣ ಏನೋ ಓಡುತೀಯೆ? ನಿನಗೇ ಕಾಲಿದೆ ನನಗೆ ಇಲ್ಲವೇನೋ? ಮಾತ ಕೂಡ ಆಡದೆ ಓಡುತೀಯ? ಎಂದನು.

ಸಂಗ – ಜಂಬೈತೆ ಕಣಪ್ಪ ಕಿಟ್ಟಪ್ಪ

ಕಿಟ್ಟ – ನಿಂತುಕೊಳ್ಳೊ; ಬಲ್ಲೆ, ನೆಶ್ಯಾ ಕೊಡೊ, ಹಳೇ ಕಾಸ ಕೊಟ್ಟೆಯಲ್ಲೋ.

ಸಂಗಣ್ಣ – ಎಲ್ಲಿ ತರಲಿ, ಏನು ಸುಲಿದು ತಿಂತೀ ಹಾರವೈಯ್ಯ ನೀನು?

ಕಿಟ್ಟ – ಓಹೊ ಸುಬೇದಾರರ ಮನೆಯಲ್ಲಿ ನಿನ್ನನ್ನು ಸುಮ್ಮನೇ ಬಿಟ್ಟರೇನೋ? ಮನೆಮಂದಿ ಮಕ್ಕಳೆಲ್ಲಾ ಮುತ್ತಿಕೊಳ್ಳಲಿಲ್ಲವೆ? ಅವರ ಮಗಳು ಕೂಡ ನಿನ್ನ ಬಿಡದೆ ಕಾಸ ಕಿತ್ತುಕೊಳ್ಳಬಹುದು. ನನಗೆ ವಸಿ ನೆಶ್ಯಾ ಕೊಟ್ಟರೆ ನಿಮ್ಮಪ್ಪನ ಗಂಟು ಹೋಗುತ್ತೆ!

ಸಂಗಣ್ಣ – ಈ ಮಾತ ಇಲ್ಲಿಗೇ ಬುಟ್ಟುಬುಡು. ಏನ್ಐಯ್ಯ ಹರಟೆ ಹೊಡೆದೀಯ, ಸರ್ಕಾರದ ಮಾತು ನಿನಗೇಕೆ?

ಕಿಟ್ಟ – ಹಾಗಾದರೆ, ಕಳ್ಳೆ ಕೊಂಡುಕೊಳ್ಳುತ್ತೇನೆ ಮೂರು ಕಾಸ ಕೊಡೊ, ಒಂದು ಕಾಸ ಕೊಡೊ ಹೋಗಲಿ, ಉಪ್ಪುಕಳ್ಳೆಗೆ

ಸಂಗಣ್ಣ – ನಾಳೆ ಚಿನಕುರಳಿ ಕೊಡುತಿವಿನಿ, ಸುಮ್ಮನಿರು ಕಿಟ್ಟಪ್ಪ ನಿಮ್ಮ ಬಾವನಿಗೆ ಹೇಳಬೇಡ.

ಹಾಗೇ ಆಗಲೇಂದು ಕಿಟ್ಟ ಜೋಯಿಸನು ಹೊರಟುಹೋಗಲು, ಸಂಗಣ್ಣನು ತನ್ನೊಳಗೆ ಈ ಜೋಯಿಸರ ಹುಡುಗನ ಎದುರಿಗೆ ಸುಬೇದಾರನನ್ನು ಕಾಣಬಾರದಾಗಿತ್ತು. ಇವನೆದುರಿಗೆ ೧೦೦ ರೂಪಾಯಿ ಕೊಟ್ಟದ್ದು ತಪ್ಪಾಯಿತು. ಸುಬೇದಾರನ ಮಗಳು ಆ ಚಂದುಳ್ಳಿ ಚೆಲುವೇ ಕೈಗೆ ಪಾವಲಿ ಕೊಟ್ಟದ್ದೂ ಪೆಚ್ಚಾಯಿತು. ಇದನ್ನು ಈ ಪೆದ್ದನು ಎಲ್ಲಿಯಾದರೂ ಹೊರಗೆ ಬಿತ್ತಿಯಾನೋ? ಒಂದು ವೇಳೆ ಹಾಗೆ ಹೇಳಿದರೂ, ಸುಬೇದಾರರು ನಮ್ಮ ಮಾತ ಕೇಳುತ್ತಾರೆ ಎಂಬ ವಾರ್ತೆ ನಮಗೆ ಕೆಟ್ಟದೂ ಎನ್ನಕೂಡದು. ನನ್ನನ್ನು ಕಂಡರೆ ಇತರರು ಹೆದರಿಕೊಳ್ಳುವುದಕ್ಕೆ ದಾರಿಯಾಗುತ್ತೆ. ಹೀಗೆಂದುಕೊಳ್ಳುತ್ತಾ ಮನೆಗೆ ಹೋದನು.

* * *

# ೨ನೆ ಅಧ್ಯಾಯ

ಸಂಜವಾಡಿಯಲ್ಲಿ ಮೈಸೂರ ಕಡೆಯಿಂದ ವಲಸೆ ಹೋದ ಒಂದು ಬ್ರಾಹ್ಮಣ ಸಂಸಾರವಿತ್ತು. ಸದಾಶಿವದೀಕ್ಷಿತನೆಂಬ ಒಬ್ಬ ಬ್ರಾಹ್ಮಣನು ಮೈಸೂರಲ್ಲಿ ವಾಸವಾಗಿದ್ದನು. ಈತನ ಹಿರೀ ಹೆಂಡತಿಯು ಒಂದು ಗಂಡು ಮಗುವನ್ನು ಹಡೆದು ಸತ್ತುಹೋದಳು. ಆಗ ಮಗುವಿಗೆ ಎರಡು ತಿಂಗಳಾಗಿತ್ತು. ಈತನಿಗೆ ವೃದ್ಧಳಾದ ಒಬ್ಬ ತಾಯಿವಿನಾ ಮತ್ತೆ ಯಾರೂ ಮನೆಯಲ್ಲಿ ದಿಕ್ಕಾಗಿರಲಿಲ್ಲ. ಆಕೆಗೂ ವಯಸ್ಸಾಗಿತ್ತು, ಕಿವಿ ಮಧ್ಯಸ್ಥವಾಗಿತ್ತು, ಮನೆಕೆಲಸ ಯಾವುದೂ ಇವಳ ಕೈಯಲ್ಲಿ ಸಾಗುತಿರಲಿಲ್ಲ, ಇಂಥಾ ಮುದುಕಿಯು ಈ ಎಳೇ ಮಗುವನ್ನು ಸಾಕಿಕೊಂಡು ಮನೇ ಕೆಲಸವನ್ನೂ ತೂಗಿಸಿಕೊಂಡು ಹೋಗುವುದು ಅಸಾಧ್ಯವಾಗಿತ್ತು. ಈ ಮಗುವಿಗೆ ಕೂಲಿ ಹಾಲನ್ನು ಕೊಡಿಸುತ್ತಾ ಇದ್ದರು. ಹಾಲ ಕೊಡುತಿದ್ದ ಮರಿಯು ಮಗುವಿಗೂ ಮನೆಯವರಿಗೂ ವಿಶೇಷವಾಗಿ ಕಿರಕುಳ ಮಾಡುತಿದ್ದಳು. ಒಂದಾನೊಂದು ದಿವಸ ಬೆಳಗಿನಿಂದ ರಾತ್ರಿ ೧೦ ಘಂಟೆವರೆಗೂ ಮರಿಯು ಬರಲಿಲ್ಲ. ಮಗುವಿನ ರೋಧನ ಬಲವಾಯಿತು. ಯಾವ ಕೆಲಸಕ್ಕೂ ಅದು ಕೈಬಿಡದೇ ಹೋಯಿತು. ಅತ್ತು ಅತ್ತು ಮಗುವಿನ ಹೊಟ್ಟೆಯೆಲ್ಲಾ ಊದಿಹೋಯಿತು. ಯಾರು ಸುಧಾರಿಸಿದರೂ ಸುಮ್ಮನಾಗದೆ ಹೋಯಿತು. ಎಲ್ಲೆಲ್ಲಿ ಹುಡುಕಿದರೂ ಮರಿ ಸಿಕ್ಕಲಿಲ್ಲ, ಆಗ ಸದಾಶಿವದೀಕ್ಷಿತನು ತಾಯಿಯನ್ನು ಕುರಿತು - ಅಮ್ಮಾ ಮಗು ಹೀಗೆ ಅಳುವುದನ್ನು ನೋಡಿ ನಾನು ಸಹಿಸಲಾರೆ, ನಾನು ಎಲ್ಲಿಯಾದರೂ ದೇಶಾಂತರ ಹೋಗುತ್ತೇನೆ, ಮಗುವನ್ನು ಸಾಕಿಕೊಳ್ಳುವ ಪುಣ್ಯಾತ್ಮರಿಗೆ ಕೊಟ್ಟು ಬಿಡೋಣ, ಎಂದು ದುಃಖಪಟ್ಟನು. ಪಾರ್ವತಮ್ಮನೂ ಅಳುತಾ ಇದ್ದಳು. ಆ ಸಮಯಕ್ಕೆ ರಾತ್ರಿ ೧೦ ಘಂಟೆಯ ಮೇಲೆ ದಾದಿಯು ಬಂದಳು. ಅವಳನ್ನು ಕಂಡು ಮುದುಕಮ್ಮನು ಮನಸ್ಸುರೋಸಿ, - ಎಲೆ ಪಾಪಿ, ನಮ್ಮ ಗೋಳನ್ನು ಯಾಕೆ ಹುಯಿದುಕೊಳ್ಳುತೀಯ? ಈ ಮಗುವನ್ನು ಕೊಂದಾದರೂ ಬಿಡು, ಎಂದು ಮಗುವನ್ನು ಪಾರ್ವತಮ್ಮ ಎತ್ತಿ ತಂದು ನಿಂತನಿಲುವಿಗೂ ಅವಳ ಕಾಲಮೇಲೆ ಎತ್ತಿಹಾಕಿಬಿಟ್ಟಳು. ಮಗುವಿಗೆ ಮೂರ್ಛೆ ಬಂತು. ಆಗ ದಾದಿಯು ಯಾವ ಮಾತನ್ನೂ ಆಡದೆ ಮಗುವನ್ನು ಎತ್ತಿಕೊಂಡು ಕಿವಿಯಲ್ಲಿ ಊದಿ ಬಾಯಬಿಡಿಸಿ ಹಾಲನ್ನು ಕರೆದಳು. ಸ್ವಲ್ಪ ಹೊತ್ತಿನ ಮೇಲೆ ಜ್ಞಾನ ಬಂತು. ಇಂಥಾ ಹೊಡೆ ಬಾಳಿನಲ್ಲಿ ಒಂದು ದಿವಸ ಕಳೆಯುವುದು ಒಂದು ಯುಗವಾಗಿತ್ತು.

ಹೆಂಡತಿ ಸಾಯುವಾಗ್ಗೆ ಸದಾಶಿವದೀಕ್ಷಿತನಿಗೆ ೩೦ ವರ್ಷ ವಯಸ್ಸು ಈತನು ಕೆಂಪಗೆ ತೇಜಸ್ವಿಯಾಗಿದ್ದನು. ತಕ್ಕಮಟ್ಟಿಗೆ ಋಗ್ವೇದ ಅಧ್ಯಯನವಾಗಿತ್ತು. ಜಾತಕವನ್ನೂ ಪಂಚಾಂಗವನ್ನೂ ಗುಣಿಸುವ ಮಟ್ಟಿಗೆ ಜ್ಯೋತಿಷ ಬರುತಿತ್ತು. ಆದರೆ ಯಾರ ಮನೆಗೂ ಪಂಚಾಂಗ ಹೇಳುವುದಕ್ಕೆ ಹೋಗುತ್ತಿರಲಿಲ್ಲ. ಯಾವ ಕಾವ್ಯ ಪುರಾಣ ಮುಂತಾದ್ದನ್ನು ಕೊಟ್ಟರೂ ಯಾರ ಅಪೇಕ್ಷೆಯೂ ಇಲ್ಲದೆ ಇತರರಿಗೆ ಅರ್ಥ ಹೇಳುವ ಮಟ್ಟಿಗೆ ಸಂಸ್ಕೃತ ಭಾಷೆಯಲ್ಲಿ ಜ್ಞಾನವಿತ್ತು. ಆದರೆ ಕಟ್ಟೇಪುರಾಣ ಮುಂತಾದ್ದಕ್ಕೆ ಹೋಗುತ್ತಿರಲಿಲ್ಲ, ಪೂರ್ವಾಪರಪ್ರಯೋಗವು ವ್ಯಾಖ್ಯಾನ ಸಹಿತವಾಗಿ ತಿಳಿದಿತ್ತು. ಆದರೆ ಸಿಕ್ಕಿದ ಕಡೆ ಆಮಶ್ರಾದ್ಧಕ್ಕೆ ಹೋಗುತ್ತಿರಲಿಲ್ಲ, ವೇದಾಂತಶಾಸ್ತ್ರದಲ್ಲಿ ಪರಿಶ್ರಮವಿತ್ತು.

ಆದರೆ ಬರೀ ಒಣ ವೇದಾಂತಿಯಾಗಿ ಪುರಾಣ ವೈರಾಗ್ಯವನ್ನು ಹೇಳುತಿರಲಿಲ್ಲ, ಈತನಿಗೆ ಲೌಕಿಕ ಪ್ರವರ್ತನೆಯೂ ತಕ್ಕಮಟ್ಟಿಗಿತ್ತು. ಆದರೆ ಜಗಳಗಂಟರಿಗೆ ಅರ್ಜಿ ಬರೆದುಕೊಟ್ಟು ವ್ಯಾಜ್ಯವನ್ನು ಹುಟ್ಟಿ ಹಾಕುತ್ತಿರಲಿಲ್ಲ. ಗ್ರಂಥ ಕಾಲಕ್ಷೇಪದಲ್ಲಿ ಯಾವಾಗಲೂ ಆಸಕ್ತಿಯುಳ್ಳ ಸದಾಶಿವದೀಕ್ಷಿತನಿಗೆ ರಾಜಯೋಗದಲ್ಲಿ ಪರಿಶ್ರಮವಿತ್ತು. ಮೈಸೂರಲ್ಲಿದ್ದ ಈತನ ಸೋದರಮಾವನು ಅರಮನೆಯಲ್ಲಿ ಸಮ್ಮುಖದ ವಿದ್ವಾಂಸನಾಗಿದ್ದನು. ಪಶುಪತಿಸಾಂಬಶಾಸ್ತ್ರಿ ಎಂದು ಆತನ ಹೆಸರು. ಇವನಿಗೆ ಅರಮನೆಯಲ್ಲಿ ವಿದ್ವಾಂಸರ ಸಂಬಳವೆಂತ ತಿಂಗಳಿಗೆ ೫ ವರಹ ಬರುತಾ ಇತ್ತು. ಆಗಿನ ಕಾಲದಲ್ಲಿ ಇದು ಭಾರೀ ಸಂಬಳವೆನ್ನಿಸಿಕೊಂಡಿತ್ತು. ಈ ಸೋದರಮಾವನ ಮೂಲಕ ಸದಾಶಿವ ದೀಕ್ಷಿತನು ಆಗಾಗ್ಗೆ ಅರಮನೆಗೆ ಹೋಗಿ ತಮ್ಮ ಮಾವನ ಸಂಗಡ ಸಭೆಯಲ್ಲಿ ಕೂತುಕೊಳ್ಳುತಲೂ ಇದ್ದನು. ಶಾಸ್ತ್ರವಿಚಾರ ಬಂದಾಗ ಪಾಂಡಿತ್ಯದ ಕೆಚ್ಚು ಸುಮ್ಮನೇ ಇರಗೊಡಿಸುತಿರಲಿಲ್ಲ, ತಾನೂ ಬಾಯಹಾಕಿ ಚರ್ಚೆಗೆ ನುಗ್ಗುತ್ತಿದ್ದನು. ಒಂದಾನೊಂದು ದಿವಸ ಅರಮನೆಯ ನಾಮತೀರ್ಥದ ತೊಟ್ಟಿಯಲ್ಲಿ ಖಾಸಾ ಶಿವಪೂಜೆ ನಡೆಯುತ್ತಿರುವಾಗ ಯಾವುದೋ ಒಂದು ಶಾಸ್ತ್ರಾರ್ಥವಿಚಾರ ಬಂತು. ಆಗ ಸದಾಶಿವದೀಕ್ಷಿತ ಮಾಡಿದ ವಾಕ್ಯಾರ್ಥವನ್ನು ಕೇಳಿ ಕೃಷ್ಣರಾಜಪ್ರಭುವು ಸಂತೋಷಪಟ್ಟು - ಇವನು ಯಾರೈಯ್ಯ ಸಿಡಿಲ ಮರಿಯಾಗಿದಾನೆ, ಎಂದು ಹೇಳಿ ಆ ದಿನವೇ ೨ ವರಹ ಸಂಬಳವನ್ನು ಮಾಡಿಕೊಟ್ಟರು. ಪಾಂಡಿತ್ಯವಿದೆಯೆಂದರೆ ಸಾಕು. ಯಾರ ಒತ್ತಾಸೆಯೂ ಅಗತ್ಯವಿಲ್ಲದೆ ಪ್ರಭುವು ಗುಣದಲ್ಲಿ ಪಕ್ಷಪಾತವನ್ನಿಟ್ಟು ಪುರಸ್ಕಾರ ಮಾಡುತಿದ್ದರು.

ಹೀಗೆ ಸದಾಶಿವದೀಕ್ಷಿತನ ಯೋಗ್ಯತೆಗೆ ರಾಜಪೂಜ್ಯತೆಯೂ ಉಂಟಾಗಿತ್ತು. ಆದಾಗ್ಯೂ ತಾಯಿ ಮುದುಕಿ, ಮಗು ಇನ್ನೂ ಎಳೇದು, ಮನೆಯಲ್ಲಿ ಬೇರೆ ಹೆಣ್ಣು ದಿಕ್ಕಾಗಲಿ ಗಂಡುದಿಕ್ಕಾಗಲಿ ಯಾರೂ ಇರಲಿಲ್ಲ. ಈ ಕಾರಣಕ್ಕಾಗಿಯೂ, ಸೋದರ ಮಾವನ ಬಲವಂತಕ್ಕಾಗಿಯೂ, ಮಾತೃ ವಾಕ್ಯಪರಿಪಾಲನೆಗಾಗಿಯೂ ಸದಾಶಿವದೀಕ್ಷಿತನು ಮನಸೊಲ್ದನು. ಪಶುಪತಿ ಸಾಂಬಶಾಸ್ತ್ರಿಯು ಹೆಣ್ಣನ್ನು ಹುಡುಕಿಕೊಂಡು ಬರುತಾ ಇರುವಾಗ್ಗೆ ಸಂಜವಾಡಿಯ ಜೋಯಿಸರ ಮಗಳು ಒಂದು ಕನ್ಯ ಇದೆಯೆಂದು ಗೊತ್ತಾಯಿತು. ಈ ಹುಡುಗಿಗೆ ಎಂಟನೇ ವರುಷವಾಗಿತ್ತು. ಮೊದಲಿನಿಂದಲೂ ವಿಶೇಷವಾಗಿ ಶ್ರೋತ್ರಿಯನಾಗಿಯೇ ಇದ್ದ ಆ ಜೋಯಿಸನು ಮಗಳಿಗೆ ಎಂಟು ವರುಷ ಮೀರಿ ಮದುವೆ ವಯಸ್ಸು ಮಿಂಚಿಹೋಗುತ್ತೆಂದು ಯೋಚಿಸುತ್ತಾ, ಯೋಗ್ಯರಾಗಿದ್ದರೆ ಎರಡನೇ ವರವಾದಾಗ್ಯೂ ಚಿಂತೆಯಿಲ್ಲ ತೊಳೆದ ಕಾಲನ್ನು ತೊಳೆಯುವುದಿಲ್ಲವೆಂಬ ಮೂಳಪ್ರತಿಷ್ಠೆಯನ್ನು ಬಿಟ್ಟು ಮಗಳನ್ನು ಕೊಟ್ಟು ಮದುವೆ ಮಾಡುತ್ತೇನೆಂದು ನಿಶ್ಚಿಸಿಕೊಂಡಿದ್ದನು. ಸದಾಶಿವದೀಕ್ಷಿತನ ಯೋಗ್ಯತೆಯನ್ನು ಕೇಳಿ ಆ ಜೋಯಿಸನು ಸಂತೋಷಪಟ್ಟು ನಕ್ಷತ್ರಾನುಕೂಲ್ಯವನ್ನು ನೋಡಲಾಗಿ ಹನ್ನೊಂದು ಕೂಟ ಸರಿ ಬಂತು. ಆಗ ನಡೆಯುತ್ತಾ ಇದ್ದ ಮಾಘಾದಿ ಪಂಚಕದಲ್ಲಿಯೇ ಸಂಜನಾಡಿಯಲ್ಲಿ ಮದುವೆ ಗೊತ್ತಾಯಿತು. ಈ ಮದುವೇ ವಿಚಾರವನ್ನು ಪ್ರಭುಗಳಲ್ಲಿ ಸೂಚಿಸಿ ಹಣ್ಣು ಸಕ್ಕರೆಯನ್ನೂ ಲಗ್ನಪತ್ರಿಕೆಯನ್ನೂ ಒಪ್ಪಿಸಲಾಗಿ, ೨೦೦ ಸೇರು ಅಕ್ಕಿ ಅದಕ್ಕೆ ತಕ್ಕ ಸೋಬಸ್ಕರ, ಒಂದು ಪೀತಾಂಬರದ ಪಟ್ಟೆ ಸೀರೆ, ಒಂದು ಬಣ್ಣದ ಸೀರೆ, ಎರಡು ಜೊತೆ ಧೋತ್ರ, ನಗದು ೧೦೦ ರೂಪಾಯಿ, ಇವುಗಳನ್ನು ಕೊಡಿಸುವಂತೆ ದೊರೆಯ ಅಪ್ಪಣೆಯಾಯಿತು. ಆದಮಾತ್ರಕ್ಕೆ ಏನು? ದೇವರು ವರ ಕೊಟ್ಟರೆ ಬರೀ ಬಾಯಿ ಮಾತಾಯಿತು. ಪೂಜಾರಿಯ ವರವೇ ಕಾರ್ಯಕಾರಿಯಾದ್ದು, ಆಗ ತಿಮ್ಮಣ್ಣ

ಶಾಸ್ತ್ರಿಗಳೆಂಬುವರು ರಾಜರಲ್ಲಿ ಆಪ್ತರಾಗಿ ನಿಂತು ಅರಿಯದವರ ಬಾಯಿಯಲ್ಲಿ ಮಂತ್ರಿ ಎಂಬ ಹೆಸರನ್ನು ಸಂಪಾದಿಸುತ್ತಾ ಇದ್ದರು. ಅರಮನೆ ವೆಚ್ಚವನ್ನು ಕಡಮೆ ಮಾಡಿ ದೊರೆಗೆ ಊರಟೆ ಮಾಡುತ್ತೇನೆಂದು ನಟಿಸುತ್ತಾ ಇದ್ದ ಈ ಶಾಸ್ತ್ರಿಯು ಅಪ್ಪಣೆಯಾಗಿದ್ದ ಇನಾಮಿನಲ್ಲಿ ಅರ್ಧವನ್ನು ಮಾತ್ರ ಸದಾಶಿವದೀಕ್ಷಿತನಿಗೆ ಕೊಡಿಸಿದನು. ಸಂಜವಾಡಿಯಲ್ಲಿ ಮದುವೆ ಬೆಳೆಯಿತು.

ಸಂಜನಾಡಿ ಜೋಯಿಸರಿಗೆ ಹೆಚ್ಚಾದ ಭೂಸ್ಥಿತಿ ಮೊದಲಾದ್ದು ಇತ್ತು, ಕಾಲಕ್ಕೆ ೨೦೦ ಕಂಡಗ ದವಸ ಬರುತಿತ್ತು. ಸಂವತ್ಸರಕ್ಕೆ ೫೦೦ ರೂಪಾಯಿ ರೊಕ್ಕವಾಗಿ ಬರುವ ಒಂದು ಸರ್ವಮಾನ್ಯವಿತ್ತು. ಚೀಟಿ ಪಾಟಿಗಳು ಎರಡು ಮೂರು ಸಾವಿರ ರೂಪಾಯಿ ಬಾಳುವ ಮಟ್ಟಿಗೂ ಇತ್ತು. ಜಾತಕ ಭಾಗದಲ್ಲೂ ಪ್ರಶ್ನಭಾಗದಲ್ಲೂ ನಾಲ್ಕು ಗಾವುದ ಸುತ್ತಲೂ ಈತನನ್ನು ಮೀರಿಸಿದವರು ಯಾರೂ ಇರಲಿಲ್ಲ. ಕೃಷ್ಣರಾಜ ಒಡೆಯರವರವರೆಗೂ ಈತನ ಹೆಸರು ಮುಟ್ಟಿತ್ತು. ಚಾಮರಾಜ ನಗರಕ್ಕೆ ಬಂದಾಗ ಸಂಜವಾಡಿಯ ನೀಲಕಂಠ ಜೋಯಿಸರನ್ನು ಕರೆಯಿಸಿಕೊಂಡು ತಮ್ಮ ಜಾತಕವನ್ನು ತೋರಿಸುವುದು. ಪ್ರಶ್ನೆ ಮೊದಲಾದ್ದನ್ನು ಕೇಳುವುದು ಹೀಗೆ ರಾಜರು ಮಾಡುತ್ತಾ ಇದ್ದರು. ಜಾತಕ ಭಾಗವನ್ನು ಕೃಷ್ಣರಾಜ ಒಡೆಯರು ಸ್ವಯಂ ಚೆನ್ನಾಗಿ ತಿಳಿದಿದ್ದರು. ಪುಡಿ ಜೋಯಿಸರುಗಳೆಲ್ಲರೂ ಅವರೆದುರಿಗೆ ಹೋಗಲು ಹೆದರುತಿದ್ದರು. ಪದೇಪದೇ ರಾಜರು ಕರೆಯಿಸಿ ಜ್ಯೋತಿಷ ವಿಚಾರವನ್ನು ಚರ್ಚಿಸುತ್ತಾ ಇರಬೇಕಾದರೆ, ನೀಲಕಂಠ ಜೋಯಿಸನ ಯೋಗ್ಯತೆಯು ಸಾಧಾರಣ ಯೋಗ್ಯತೆ ಎನ್ನಿಸುವುದಿಲ್ಲ

ಈ ಜೋಯಿಸನಿಗೆ ತಿಮ್ಮಮ್ಮನೆಂಬ ಒಬ್ಬ ಹೆಣ್ಣುಮಗಳು ಇದ್ದಳು. ಇವಳನ್ನೇ ಸದಾಶಿವದೀಕ್ಷಿತನಿಗೆ ಕೊಟ್ಟು ಲಗ್ನ ಬೆಳೆದಿತ್ತು. ಕೃಷ್ಣನೆಂಬ ಒಬ್ಬ ಗಂಡುಮಗನಿದ್ದನು. ಇವನು ವಿಶೇಷವಾಗಿ ಬುದ್ದಿಶಾಲಿಯಲ್ಲ, ಐಲಾಟವನ್ನು ಆಡಿಕೊಳ್ಳುತ್ತಾ ಅಲೆಯುತಾ ಇದ್ದನು. ಸ್ವಲ್ಪ ದಿವಸದಲ್ಲಿ ನೀಲಕಂಠ ಜೋಯಿಸನಿಗೆ ದೇಹಕ್ಕೆ ಉಪಾಧೆಯುಂಟಾಗಿ ಅವಸಾನಕಾಲ ಸಂಭವಿಸಿತು. ಆಗ ಅಳಿಯನಾದ ಸದಾಶಿವದೀಕ್ಷಿತನನ್ನು ಖಂಡಿತವಾಗಿ ಕರೆದು ತರುವಂತೆ ಒಬ್ಬ ಆಳನ್ನು ಮೈಸೂರಿಗೆ ಕಳುಹಿಸಿದರು. ಆಳು ತಂದು ಕೊಟ್ಟ ಕಾಗದದಲ್ಲಿ -

ಚಿರಂಜೀವಿ ನಮ್ಮ ಸದಾಶಿವದೀಕ್ಷಿತನಿಗೆ ಅನೇಕಾಶೀರ್ವಾದ.

ಈ ಬಹುಳ ೧೧ ಶುಕ್ರವಾರದವರೆಗೆ ಇಲ್ಲಿ ಸರ್ವರೂ ಕ್ಷೇಮ ನಿಮ್ಮ ಕ್ಷೇಮಕ್ಕೆ ಬರಿಸಬೇಕು. ಆದಾಗಿ,

ನನ್ನ ಶರೀರದಲ್ಲಿ ಈಗ ತಿಂಗಳಿಂದ ಕೇವಲವಾಗಿ ಅಲಸಿಕೆಯಾಗಿದೆ. ಜ್ವರ ಬಂದು ಬಹಳ ಮಟ್ಟಿಗೆ ನಿತ್ರಾಣ ಮಾಡಿತು. ಶೋಭೆ ಕಾಣಿಸಿದೆ. ನನ್ನ ಸ್ಥಿತಿಯನ್ನು ನೋಡಲಾಗಿ ದೇಹ ಉಳಿಯುತ್ತೆಂಬ ಭರವಸವು ನನಗೆ ತೋರುವುದಿಲ್ಲ. ಇಲ್ಲಿ ಮನೆಯಲ್ಲಿ ಯಾರೂ ದಿಕ್ಕಿಲ್ಲವೆಂಬ ಸಂಗತಿ ತಿಳಿದೇ ಇದೆ. ನಮ್ಮ ಅಕ್ಕ ಮುದುಕಿ, ನಮಗೂ ನಿಮಗೂ ಸಂಬಂಧ ಬೆಳೆದ ವರುಷದಿಂದಲೂ ಚಿ॥ ಕೃಷ್ಣನ ಸ್ಥಿತಿ ಗೊತ್ತಾಗಿಯೇ ಇದೆ. ಈ ಕಾಗದ ಕಂಡ ಕೂಡಲೆ ಯಾವ ಕೆಲಸವಿದ್ದರೂ ಬಿಟು ಜಾಗ್ರತೆಯಾಗಿ ಬಂದು ಮಾತನಾಡಿಕೊಂಡು ಹೋಗಬೇಕು.

ಪಶುಪತಿಸಾಂಬಶಾಸ್ತ್ರಿಗಳ ಅಪ್ಪಣೆ ಪಡೆದು ಅವರಿಗೆ ನನ್ನ ನಮಸ್ಕಾರವನ್ನು ತಿಳಿಸಿ ನೀವು ಹೊರಟುಬರಬೇಕು. ಕಾಗದ ಗೊತ್ತಾಗಿ ತಲಪಲೆಂದು ಆಳಿನ ಮೂಲಕ ಕಳುಹಿಸಿದೆ. ಇತ್ಯಾಶಿಷಃ

ನೀಲಕಂಠಜೋಯಿಸ

ಹೀಗೆ ಒಕ್ಕಣಿಸಿತ್ತು. ಅದನ್ನು ನೋಡಿಕೊಂಡು ಸದಾಶಿವದೀಕ್ಷಿತನು ಎಂಟು ದಿವಸಗಳ ಮಟ್ಟಿಗೆ ಅರಮನೆಯಲ್ಲಿ ಅಪ್ಪಣೆ ಪಡೆದು ಆ ದಿವಸವೇ ಪ್ರಯಾಣಮಾಡಿ ಮಾರನೇ ದಿವಸ ಸಾಯಂಕಾಲವೇ ಸಂಜನಾಡಿಯನ್ನು ತಲಪಿದನು. ಆಗ ಜೋಯಿಸನು ಎದ್ದು ಕೂತುಕೊಂಡು ಕುಶಲ ಪ್ರಶ್ನೆಗಳನ್ನು ಮಾಡುತಾ - ನಿಮಗೆ ಊಟವಾಗಲಿ, ಆಮೇಲೆ ಸಾವಕಾಶವಾಗಿ ಮಾತನಾಡತಕ್ಕದ್ದು ವಿಶೇಷವಾಗಿದೆ ಎಂದು ಜೋಯಿಸರು ಹೇಳಿದ ಪ್ರಕಾರ ಆ ರಾತ್ರಿ ಸದಾಶಿವದೀಕ್ಷಿತನು ವಿಶ್ರಮಿಸಿಕೊಂಡನು.

ರಾತ್ರೆ ಮೂರುಗಂಟೆ ಸಮಯದಲ್ಲಿ ಜೋಯಿಸನು ಅಳಿಯನನ್ನು ಕೂಗಿ ಎಬ್ಬಿಸಿ ಮಾಡಿದ ಸಂಭಾಷಣಾಕ್ರಮ ಹೇಗೆಂದರೆ :

ಜೋಯಿಸ - ಆಯಾಸಪಟ್ಟು ಬಂದ ನಿಮಗೆ ನನ್ನಿಂದ ನಿದ್ರಾಭಂಗವೂ ಆಗಬೇಕಾಯಿತು. ನನಗೆ ಉಪದ್ರವ ಹೆಚ್ಚುತ್ತಾ ಇದೆ. ನೀವು ಬರಲೆಂದು ನಾನು ಪ್ರಾಣವನ್ನು ಎಡಗೈಯಲ್ಲಿ ಹಿಡಿದಿದ್ದೆ ನೀವು ಬಂದಿರಿ, ನನಗೆ ಧೈರ್ಯವಾಯಿತು. ಇಲ್ಲಿ ನನ್ನ ಮನೆಗೆ ದಿಕ್ಕು ಯಾರೂ ಇಲ್ಲ ಕೃಷ್ಣನ ಐಲುತನ ಗೊತ್ತಾಗಿಯೇ ಇದೆ. ಕೊನೆಗಾಲವಾದ್ದರಿಂದ ಎಲ್ಲವನ್ನೂ ನಿಮ್ಮೊಡನೆ ಹೇಳಿಬಿಡುತ್ತೇನೆ. ನನ್ನ ಆಸ್ತಿಯು ಬಲವಾಗಿಯೇ ಇದೆ. ಇದೆಲ್ಲವನ್ನೂ ಉಳಿಸಿಕೊಂಡು ಮನೆಯನ್ನು ಮುಂದಕ್ಕೆ ತರುವ ಯೋಗ್ಯತೆ ಕೃಷ್ಣನಿಗೆ ಇಲ್ಲ ಈ ಬೀಗದಕೈಯನ್ನು ಹಿಡಿಯಿರಿ, ನನ್ನ ವಿಶಿಷ್ಟ ಆಸ್ತಿಯನ್ನೂ ನಿಮ್ಮ ವಶಕ್ಕೆ ಕೊಟ್ಟಿದ್ದೇನೆ. ನನ್ನ ಆಸ್ತಿಯಲ್ಲಿ ನೀವು ಬೇಕಾದ ಆದಾಯ ವೆಚ್ಚಗಳನ್ನು ನಡಿಸಬಹುದು. ಅದಕ್ಕೆ ನೀವು ಯಾರಿಗೂ ಲೆಕ್ಕ ಹೇಳಬೇಕಾದ್ದಿಲ್ಲ, ಕೃಷ್ಣನಿಗೆ ಮದುವೆ ಮಾಡಬೇಕೆಂದು ಯೋಚಿಸಿದೆ. ಯಾರೂ ಹೆಣ್ಣು ಕೊಡಲಿಲ್ಲ. ಮುಂದಕ್ಕೂ ಅವನಿಗೆ ಮದುವೆಯಾಗುವ ಯೋಗ ತೋರಲಿಲ್ಲ. ಅವನ ಜಾತಕವೂ ಅದಕ್ಕೆ ಸರಿಯಾಗಿಯೇ ಇದೆ. ನನ್ನ ತಲೆಗೇ ನನ್ನ ಮನೆಯು ಹೋಯಿತು ಎನ್ನಿಸದೆ, ನೀವು ಇಲ್ಲಿಯೇ ನಿಂತು ನಿಮ್ಮ ಹೆಂಡತಿ ತಿಮ್ಮುವನ್ನೂ ಏನೂ ಅರಿಯದ ಕೃಷ್ಣನನ್ನೂ ಕಾಪಾಡಿಕೊಂಡು ಬರಬೇಕು. ಹೆಚ್ಚಾಗಿ ಮಾತನಾಡಲು ನನಗೆ ತ್ರಾಣವಿಲ್ಲ ಉಸಿರು ಹತ್ತಿರ ಬರುತ್ತಿದೆ. ಈ ಊರು ಸಾಧಾರಣವಾದ್ದಲ್ಲ, ಪಟೇಲನಾದರೂ ಶುದ್ದ ಹಗಲುಗಳ್ಳ, ಶಾನುಭೋಗ ನಾದರೋ ಶುದ್ಧ ಘಟಿಂಗ, ಪರಸ್ವತ್ತನ್ನು ಅಪಹರಿಸುವುದರಲ್ಲಿ ನಿಪುಣರೆನಿಸಿ ಕೊಂಡಿರುವ ತಾಲ್ಲೂಕು ಅಧಿಕಾರಿಗಳೇ ಹೇಳಬೇಕಾದ್ದೇ ಇಲ್ಲ ಒಂದು ತಂಟೆಗೂ ಹೋಗದೆ ತಕ್ಕಮಟ್ಟಿಗೆ ಬಾಳುತ್ತಾ ಮಹಾಸ್ವಾಮಿಯವರ ದಯಕ್ಕೆ ನಾನು ಪಾತ್ರನಾಗಿರುವುದರಲ್ಲಿ ಇವರೆಲ್ಲರಿಗೂ ಕಣ್ಣು ಕೆಂಪಾಗಿದೆ. ನಾನು ಸತ್ತಾನೆ ಎಂದು ಕಾದಿದಾರೆ. ಈಶ್ವರನ ಚಿತ್ತದಲ್ಲಿ ಇದ್ದ ಹಾಗಾಗಲಿ, ಆದರೆ ಪುರುಷಪ್ರಯತ್ನವನು ಮಾಡಬೇಕಾದ್ದು ಅವಶ್ಯಕವಾದ್ದರಿಂದ ಎಲ್ಲವನ್ನೂ ನಿಮ್ಮಲ್ಲಿ ತಿಳಿಸಿದ್ದೇನೆ. ಇನ್ನು ಹೆಚ್ಚಾಗಿ ಮಾತನಾಡಲಾರೆ.

ಸದಾಶಿವದೀಕ್ಷಿತ - ಮಾವೈಯ್ಯ, ತಾವು ಅಪ್ಪಣೆ ಕೊಡಿಸಿದ ಸಂಗತಿ ಎಲ್ಲವನ್ನೂ ಕೇಳಿದೆ, ಅಷ್ಟು ದೂರ ಯೋಚನೇ ಮಾಡಬೇಕಾದ ಸಂದರ್ಭವೇನೂ ಈಗ ಕಾಣಿಸಲಿಲ್ಲ ಈಗ ಸುಮಾರು ಸರಿಹೊತ್ತಾಗಿದೆ. ನಿದ್ರೆ ಮಾಡಿದರೆ ಆರೋಗ್ಯ. ಬೆಳಗಾದಮೇಲೆ ಯೋಚಿಸೋಣ.

ಜೋಯಿಸ - ನಿದ್ರೆಯೂ ಇಲ್ಲ ಗಿದ್ರೆಯೂ ಇಲ್ಲ, ಸುಸ್ತು ಹೆಚ್ಚುತಾ ಇದೆ. ಮಾತನಾಡಲಾರೆ.

ಹೀಗೆನ್ನುತಾ ಜೋಯಿಸನು ಹಾಸಿಗೆಯ ಮೇಲೆ ಮಲಗಿಕೊಂಡನು. ಪ್ರಜ್ಞೆ ತಪ್ಪಿಹೋದ ಸೂಚನೆ ಕಂಡಿತು. ದೀಪ ತಂದು ನೋಡುವಾಗ್ಗೆ ಕಣ್ಣುಗುಡ್ಡೆ ಮೇಲಕ್ಕೆ ಸಿಕ್ಕಿ ಹೋಗಿತ್ತು. ಗಾಬರಿಯಾಯಿತು. ಹುಡುಗರು ಮೊದಲಾಗಿ ಮನೇ ಜನರೆಲ್ಲಾ ಎದ್ದರು. ಕಿವಿಯಲ್ಲಿ ಎಷ್ಟು ಊದಿದರೂ ಪ್ರಜ್ಞೆ ಬರಲಿಲ್ಲ, ಗೊರ್‌ಗೊರ್ ಎಂದು ಶ್ವಾಸ ಎಳೆಯುವುದಕ್ಕೆ ಆರಂಭವಾಯಿತು. ಗಾಬರಿ ಹೆಚ್ಚಾಯಿತು, ಬೀದೀಬಾಗಿಲ ಸಮೀಪದ ಕಿರುಮನೆಗೆ ಹಾಸಿಗೆ ಸಹಿತವಾಗಿ ಎತ್ತಿಕೊಂಡು ಹೋದರು. ಪಂಚಾಂಗ ನೋಡಲಾಗಿ ತ್ರಿಪಾದಿ ನಕ್ಷತ್ರವಾಗಿತ್ತು. ಕಿಟ್ಟನು-ಅಪ್ಪ ಗೊರಕೆ ಹೊಡೆಯುತ್ತಾನೆ, ನಿದ್ರೆ ಬಂದಿದೆ. ಎಲ್ಲರೂ ಸುಮ್ಮನೇ ಮಲಗಿಕೊಳ್ಳೋಣ ಭಾವ. ತಿಮ್ಮು ಎದುರು ಮನೆ ಪಾಪಯ್ಯನವರ ಪಾತಕ್ಕ ಪುಳ್ಳಂಗಾಯಿ ಉಂಡೇ ತಂದು ಕೊಟ್ಟಿದ್ದಳಲ್ಲಾ ಅದನ್ನು ಇರಿಸಿದ್ದೀಯೋ ಬಾಯಿಗೆ ಹಾಕಿಕೊಂಡೆಯೋ? ನನಗೆ ಒಂದು ಚೂರೂ ಸಿಕ್ಕುವುದಿಲ್ಲ ಎಲ್ಲಾ ನಿನ್ನ ಹೊಟ್ಟೆಯಲ್ಲೇ ಮಡಿಯುತ್ತೆ, ಎಂದನು. ಇವನ ಬೆಪ್ಪುತನವನ್ನು ನೋಡಿ, ಪೇಚಾಡುತ್ತಾ, ಸದಾಶಿವದೀಕ್ಷಿತನು - ಕಿಟ್ಟ ಉದ್ದರಣೆಯಿಂದ ಎರಡು ಸಾರಿ ದೀಕ್ಷಿತರ ಬಾಯಿಗೆ ನೀರನ್ನು ಹಾಕು ಎಂದನು. ಕೂಡಲೆ ಜೋಯಿಸರಿಗೆ ಪ್ರಾಣಹೋಯಿತು.

ಸದಾಶಿವದೀಕ್ಷಿತನು ಮುಂದಿನ ಕಾರ್ಯಗಳೆಲ್ಲವನ್ನೂ ಸಾಂಗವಾಗಿ ನಡೆಸಿದನು. ತರುವಾಯ ಅಲ್ಲಿನ ಆದಾಯವೆಚ್ಚಗಳನ್ನು ನೋಡಿಕೊಂಡು ಕೂಡಲೆ ನೀಲಕಂಠ ಜೋಯಿಸರ ಅಕ್ಕನಾದ ವೆಂಕಮ್ಮನನ್ನು ಕುರಿತು,

ಸದಾಶಿವ - ದೊಡ್ಡಮ್ಮ ಊರಲ್ಲಿ ಎಲ್ಲವನ್ನೂ ಬಿಟ್ಟು ಏಕಾಏಕಿ ನಾನು ಬಂದುಬಿಟ್ಟೆ ಮೈಸೂರಿಗೆ ನಾನು ಹೋಗಿ ನಮ್ಮ ಮಾವಂದಿರಲ್ಲಿಯೂ ಯೋಚನೆ ಮಾಡಿ ಎಂಟು ದಿವಸದೊಳಗಾಗಿ ಬರುತ್ತೇನೆ.

ವೆಂಕಮ್ಮ - ಇಲ್ಲಿ ದಿಕ್ಕಿಲ್ಲ ಈ ಹಾಳ ಊರಲ್ಲಿ ತುಂಟರು ಹೆಚ್ಚು ಯಾವ ಗಳಿಗೆಗೆ ಏನೋ?

ಸದಾಶಿವ - ನೀವು ಯೋಚಿಸಬೇಡಿ, ನಾನು ತಕ್ಕ ಏರ್ಪಾಡು ಮಾಡುತ್ತೇನೆ, ಕೂಡಲೆ ಬಂದೂಬರುತೇನೆ.

ಹೀಗೆಂದು ಸದಾಶಿವ ದೀಕ್ಷಿತನು ಮೈಸೂರಿಗೆ ಬಂದು ಸೋದರಮಾವನಾದ ಪಶುಪತಿಸಾಂಬಶಾಸ್ತ್ರಿಗೆ ಸಂಜವಾಡಿಯ ಸಂದರ್ಭವನ್ನೆಲ್ಲಾ ತಿಳಿಸಿದನು. ಆ ದಿವಸ ಸಾಯಂಕಾಲ ಸದಾಶಿವದೀಕ್ಷಿತನೂ ಪಶುಪತಿಶಾಸ್ತ್ರಿಯೂ ಕೂಡಿ ಅರಮನೆಗೆ ಹೋಗಿ ಅಂಬಾವಿಲಾಸದಲ್ಲಿದ್ದ ಮಹಾಸ್ವಾಮಿಗಳ ಭೇಟಿಯನ್ನು ಮಾಡಿಕೊಂಡರು.

ದೊರೆ - ಏನು, ಸಿಡಿಲಮರಿ, ಯಾವಾಗ ಬಂದೆ? |

ಸದಾಶಿವ - ಈದಿನ ಪ್ರಾತಃಕಾಲಕ್ಕೆ ಬಂದೆ. ನಮ್ಮ ಮಾವಂದಿರಾದ ಜೋಯಿಸರು ದೈವಾಧೀನರಾದರು. ನಾನು ಹೋದಾಗ ಬಹಳ ಗಟ್ಟಿಯಾಗಿಯೇ ಇದ್ದರು. ಅವರ ರೋಗದ ಸ್ಥಿತಿ ಇಂಥಾದ್ದೆಂದು ನನಗೆ ಗೊತ್ತಾಗಲೇ ಇಲ್ಲ ಸ್ವಲ್ಪ ಮಟ್ಟಿಗೆ ನಿತ್ರಾಣವಿತ್ತು. ನಾನು ಹೋದ ದಿವಸ ರಾತ್ರೆ ಸರಿಹೊತ್ತಿನಲ್ಲಿ ನನ್ನನ್ನು ಕೂಗಿ ತಮ್ಮ ಆದಾಯ ವೆಚ್ಚವೆಲ್ಲವನ್ನೂ ಹೇಳಿ "ನನ್ನ ಮನೆಯನ್ನು ನೀನು ಉಳಿಸಬೇಕು, ಸಂಜವಾಡಿಯಲ್ಲಿಯೇ ನೀನು ಇದ್ದು ಗೃಹಕೃತ್ಯವನ್ನು ನೋಡಿಕೋ, ಇನ್ನು ಯಾರೂ ನನಗೆ ದಿಕ್ಕಿಲ್ಲ' ಎಂದು ಹೇಳಿ ನನ್ನ ಕೈಯನ್ನು ಅವರು ಹಿಡಿದುಕೊಂಡು ಇದ್ದ ಹಾಗೆಯೇ ಶ್ವಾಸ ತುಯ್ಯುವುದಕ್ಕೆ ಆರಂಭವಾಯಿತು. ಒಂದು ಗಳಿಗೆಯಲ್ಲಿ ಪ್ರಾಣ ಹೋಯಿತು.

ದೊರೆ - ಅಯ್ಯೋ, ನೀಲಕಂಠಜೋಯಿಸರು ದೈವಾಧೀನರಾದರೆ? ಅನೇಕ ಸಂಗತಿಗಳನ್ನೂ ಜ್ಯೋತಿಷದಲ್ಲಿ ಕೆಲವು ರಹಸ್ಯಗಳನ್ನೂ ನಾನು ಅವರಿಂದ ತಿಳಿದುಕೊಂಡೆ. ಒಳ್ಳೇಯೋಗ್ಯರು. ಅರಮನೇ ವಿದ್ವಾಂಸರ ಪಟ್ಟಿಗೆ ಅವರ ಹೆಸರನ್ನು ಸೇರಿಸಬೇಕೆಂದು ಮನಸ್ಸಿನಲ್ಲಿತ್ತು. ಚಾಮರಾಜ ನಗರಕ್ಕೆ ಹೋದಾಗ ಜ್ಞಾಪಕ ಬರುವುದು, ಮೈಸೂರಿಗೆ ನಾನು ಬಂದಾಗ ಮರೆತುಹೋಗುವುದು, ಹೀಗೆಯೇ ಆಗುತಾಬಂತು. ನನ್ನಿಂದ ಅವರಿಗೆ ಯಾವ ಉಪಕಾರವೂ ಇಲ್ಲವಾಯಿತು. ನನಗೂ ಅವರಿಗೂ ಇದ್ದ ಮೈತ್ರಿಯನ್ನು ನೋಡಲಾಗಿ ನಮ್ಮಿಬ್ಬರಿಗೂ ಋಣಋಣೀಭಾವವಿಲ್ಲವೆಂದು ತಿಳಿಯಬೇಕಾಗಿದೆ. ಇನ್ನೇನೂ ತೋರುವುದಿಲ್ಲ, ಅವರ ಗೃಹಕೃತ್ಯದ ಪ್ರತಿಕೂಲಗಳನ್ನು ಬಲ್ಲೆ ಮಗ ಬೆಪ್ಪ ಹೇಪ, ಇನ್ನು ಯಾರೂ ದಕ್ಷರಾದವರು ಇಲ್ಲ ಇನ್ನು ಅವರ ಮನೆಯೇ ಹಾಳಾದಹಾಗಾಯಿತು. ಶಿಡಿಲಮರಿ, ನೀನು ಅಲ್ಲಿ ಹೋಗಿ ನಿಂತು, ಮನೆ ನಡೆಯುವಂತೆ ಮಾಡೈಯ್ಯ, ಅಗತ್ಯವಾದಾಗ ಬಾ, ಬೇಕಾದಾಗ ನಿನ್ನ ಸಂಬಳವನ್ನು ತೆಗೆದುಕೊ. ನನಗೂ ಜೋಯಿಸರಿಗೂ ಇದ್ದ ಸ್ನೇಹದಮೇಲೆ ದೃಷ್ಟಿಯಿಟ್ಟು ಈ ಮಾತನ್ನು ನಡಿಸು. ವಿದ್ವಾಂಸರು ಹಳ್ಳಿಗಾಡನ್ನು ಸೇರುವುದಕ್ಕೆ ಅವರಿಗೆ ಮನಸ್ಸಿರುವುದಿಲ್ಲ, ಆದರೂ ನಿನ್ನನ್ನು ನಾನು ಬಲ್ಲೆ ನಿನ್ನ ಪಾಂಡಿತ್ಯಕ್ಕೇನೂ ಲೋಪವುಂಟಾಗುವುದಿಲ್ಲ,

ಸದಾಶಿವ - ನಾನು ಅರಿಕೆ ಮಾಡಿಕೊಳ್ಳಬೇಕಾದ ಸಂಗತಿಯಲ್ಲಾ ಸನ್ನಿಧಾನದಲ್ಲಿಯೇ ಅಪ್ಪಣೆಯಾದ ಮೇಲೆ ಅದರಂತೆ ಶಿರಸಾವಹಿಸಿ ನಡೆಯುತ್ತೇನೆ.

ಈ ಪ್ರಕಾರ ಅಪ್ಪಣೆಯನ್ನು ಹೊಂದಿ ಸದಾಶಿವದೀಕ್ಷಿತನೂ ಪಶುಪತಿಸಾಂಬ ಶಾಸ್ತ್ರಿಯೂ ಮನೆಗೆ ಬಂದರು. ಆಗ ದೀಕ್ಷಿತನು ತಾಯಿಯನ್ನು ಕುರಿತು - ಅಮ್ಮಾ ಮಾವನವರು ತೀರಿಹೋಗಿ ಅಲ್ಲಿ ಯಾರೂ ದಿಕ್ಕಿಲ್ಲದೆ ಭಾರಿ ಸ್ವತ್ತು ಕಾಡುಪಾಲಾಗುವ ಸಂದರ್ಭವಂತೂ ಗೊತ್ತೇ ಇದೆ. ಮುದುಕಿಯಾದ ನಿನ್ನನ್ನು ಇಲ್ಲಿ ಬಿಟ್ಟು ನಾನು ಅಲ್ಲಿರುವುದಕ್ಕೆ ಆಗುವುದಿಲ್ಲ ಮಗು ಸಣ್ಣದು, ಅದರ ಪೋಷಣೆಯೂ ಆಗಬೇಕು. ಇನ್ನು ಮೇಲೆ ನಿನ್ನ ಕೈಯಿಂದ ಏನೂ ಸಾಗುವುದಿಲ್ಲ, ಸನ್ನಿಧಾನದಲ್ಲಿಯೂ ನಾವು ಸಂಜವಾಡಿಯಲ್ಲಿಯೇ ಇರಬಹುದು, ಸಂಬಳಕ್ಕೇನೂ ಲೋಪವಿಲ್ಲವೆಂದು ಎಲ್ಲಾ ಅಂಶವನ್ನೂ ಪರ್ಯಾಲೋಚಿಸಿ ಅಪ್ಪಣೆ ಕೊಟ್ಟರು. ನೀನು ಹೇಗೆ ಹೇಳಿದರೆ ಹಾಗೆ. ಮಾವನ ಮನೆಗೆ ಹೋಗಿ ಸೇರಿಕೊಂಡನೆಂಬ ಒಂದು ಮಾತು ಮಾತ್ರ ಉಂಟು, ಎಂದನು. ಆಗ

ಪಶುಪತಿ - ಅಕ್ಕ, ಯಾವ ಸಂದರ್ಭವನ್ನು ನೋಡಿದಾಗ್ಗೂ ಸಂಜವಾಡಿಗೆ ಹೋಗುವುದೇ ಮೇಲೆಂದು ನನಗೆ ತೋರುತ್ತಮ್ಮ ನಿನ್ನ ಮನಸ್ಸಿಗೆ ಇನ್ನೇನೂ ತಿಳಿದುಕೊಳ್ಳಬೇಡ, ನಿನ್ನ ಕೈಯಲ್ಲಿ ಇನ್ನು ಮೇಲೆ ಕೆಲಸ ಸಾಗುವುದಿಲ್ಲ, ತಾಯಿ ಸತ್ತ ಮಗುವನ್ನು ಪೋಷಣೆ ಮಾಡಿಕೊಂಡು ಮನೇ ಕೆಲಸವನ್ನೂ ನಿರ್ವಹಿಸುವುದು ಬರೀ ಬಾಯಿಮಾತಲ್ಲ.

ಪಾರ್ವತಮ್ಮ - ನೀವೆಲ್ಲಾ ಹೇಗೆ ಹೇಳಿದರೆ ಹಾಗಾಗಲಿ, ನನಗೇನು ತಿಳಿಯುತ್ತೆ? ಸಾಯುವ ಮುದುಕಿ.

ಈ ಪ್ರಕಾರ ಆಲೋಚನೆ ಮಾಡಿಕೊಂಡು, ಸದಾಶಿವದೀಕ್ಷಿತನು ತನ್ನ ಮನೆಯನ್ನೂ ಭೂಮಿಕಾಣಿಯನ್ನೂ ನೋಡಿಕೊಳ್ಳಲು ಸೋದರಮಾವನ ವಶಕ್ಕೆ ಬಿಟ್ಟು ಎಲ್ಲರನ್ನೂ ಕರೆದುಕೊಂಡು ಸಂಜವಾಡಿಗೆ ಪ್ರಯಾಣ ಮಾಡಿದನು.

*****

## ೩ನೆ ಅಧ್ಯಾಯ

ಆ ಕಾಲದಲ್ಲಿ ಚಾಮರಾಜನಗರದ ಚಾಮರಾಜೇಶ್ವರ ದೇವಸ್ಥಾನವು ಕಟ್ಟುತ್ತಾ ಇತ್ತು. ಹೀಗೆಯೇ ನಂಜನಗೂಡಿನಲ್ಲಿಯೂ ನಂಜುಂಡೇಶ್ವರನ ಗುಡಿಯ ಹೊರಪ್ರಕಾರ, ಒಳಕೈಸಾಲೆ, ಹೊರಕೈಸಾಲೆ, ಶಿವಕೂಟದ ಭೋಜನಶಾಲೆ, ಹೊರಗಡೆ ಮಹಾದ್ವಾರದಮೇಲೆ ಏಳುಕಣ್ಣಿನ ಗೋಪುರ, ಈ ಕಟ್ಟಡಗಳ ಕೆಲಸವೂ ಚೆನ್ನಾಗಿ ಆರಂಭವಾಗಿತ್ತು. ಇದೇಪ್ರಕಾರ ಚಾಮುಂಡಿ ಬೆಟ್ಟದಮೇಲೆ ಚಾಮುಂಡೇಶ್ವರೀ ಅಮ್ಮನವರ ಗುಡಿಯ ಹೊರಪ್ರಾಕಾರ, ಮಹಾದ್ವಾರದ ದೊಡ್ಡಗೋಪುರ, ಈ ಕಟ್ಟಡವೂ ಜರುಗುತಾ ಇತ್ತು. ಮೇಲುಕೋಟೆಯ ಚೆಲುವರಾಯ ಸ್ವಾಮಿಯ ದೇವಸ್ಥಾನದಲ್ಲಿಯೂ ಭಾರಿಯಾದ ಕೆಲವು ಕೆಲಸಗಳು ನಡೆಯುತ್ತಾ ಇದ್ದಂತೆ ತಿಳಿಯ ಬರುತ್ತೆ. ಇನ್ನೂ ಅನೇಕ ಕಡೆಗಳಲ್ಲಿ ಭಾರಿಯಾದ ಕಟ್ಟಡಗಳು ಕಟ್ಟಲ್ಪಡುತಾ ಇದ್ದವು. ಈ ಕೆಲಸಗಳನ್ನೆಲ್ಲಾ ಕೃಷ್ಣರಾಜಪ್ರಭುವು ಸ್ವಂತವಾಗಿ ಮಾಡಿಸುತಾ ಆ ಕೆಲಸ ಜರುಗುತಾ ಬಂದಹಾಗೆಲ್ಲಾ ಆಗಾಗ್ಗೆ ಸ್ವತಃ ಹೋಗಿ ನೋಡಿಕೊಳ್ಳುತ್ತಾ ಇದ್ದರು. ಈಶ್ವರ ಪೀತಿಯಾಗಿ ಧರ್ಮದ ಕೆಲಸಗಳನ್ನು ಮಾಡಿಸುವ ವಿಷಯದಲ್ಲಿ ದೊರೆಗೆ ಹೆಚ್ಚಿನ ಉತ್ಸಾಹವಿತ್ತು. ದೇಹಶ್ರಮವನ್ನು ನೋಡುತ್ತಾ ಇರಲಿಲ್ಲ, ಹಣವನ್ನು ಮುಖನೋಡದೆ ವೆಚ್ಚಮಾಡುತ್ತಾ ಇದ್ದರು. ಆಗ ಅವರು ನಡೆಯಿಸಿದ್ದು ಅನೇಕ ಲಕ್ಷರೂಪಾಯಿನ ಕಾಮಗಾರಿಯಾಗಿತ್ತು. ಚಾಮರಾಜೇಶ್ವರ, ನಂಜುಂಡೇಶ್ವರ, ಮೈಸೂರ ಪ್ರಸನ್ನ ಕೃಷ್ಣ ಸ್ವಾಮಿ, ಮೇಲುಕೋಟೆ ಚೆಲುವರಾಯಸ್ವಾಮಿ ಈ ದೇವಾಲಯಗಳಿಗೆ ಸ್ವಾಮಿಗಳಿಗೂ ಅಮ್ಮನವರುಗಳಿಗೂ ಅನೇಕ ಲಕ್ಷರೂಪಾಯಿ ಬಾಳುವ ರತ್ನಪಡಿ ಒಡವೆಗಳು ಚಿನ್ನ ಬೆಳ್ಳಿ

ಸಾಮಾನುಗಳು ಪಾತ್ರೆಗಳು ಇವುಗಳನ್ನು ಹೆಚ್ಚಾಗಿ ಕೊಟ್ಟಿದಾರೆ. ಇದೇ ಮೊದಲಾದ ಧರ್ಮಕೆಲಸಗಳನೇಕವಾಗಿ ಮಾಡಿಸಿದಾರೆ. ಇಂಥಾ ಕೆಲಸಗಳನ್ನು ಮಾಡಿಸುವ ಭಾಗದಲ್ಲಿ ಆ ಪುಣ್ಯಾತ್ಮರ ಕೈಗೆ ತಡೆಯೇ ಇರಲಿಲ್ಲ

ಈ ಪ್ರಕಾರದಲ್ಲಿಯೇ ಅನೇಕ ಅನ್ನಸತ್ರಗಳನ್ನು ಸ್ಥಾಪಿಸಿದರು. ಅನೇಕ ಅಗ್ರಹಾರಗಳನ್ನು ಕಟ್ಟಿಸಿ ಲೆಕ್ಕವಿಲ್ಲದಷ್ಟು ಕುಟುಂಬಗಳಿಗೆ ವೃತ್ತಿ ಸ್ವಾಸ್ಥ್ಯಗಳನ್ನು ಧಾರೆ ಎರೆದು ಜನರನ್ನು ಬದುಕಿಸಿದರು. ಲೆಕ್ಕಸಿಕ್ಕದಂತೆ ಈ ಪುಣ್ಯಾತ್ಮನು ಮಾಡಿದ ಧರ್ಮ ಕಾರ್ಯಗಳಿಗೆ ಕೋಟ್ಯಂತರ ರೂಪಾಯಿ ವೆಚ್ಚವಾಗಿದೆ. ಈ ಸತ್ರ ದೇವಸ್ಥಾನಗಳ ಮತ್ತು ಅನೇಕ ಕಟ್ಟಡಗಳು ಇವುಗಳ ಕೆಲಸವನ್ನೆಲ್ಲಾ ಗುತ್ತಿಗೆಗೆ ಕೊಡುತ್ತಿರಲಿಲ್ಲ. ಗುತ್ತಿಗೆಗೆ ತೆಗೆದುಕೊಳ್ಳುವ ಮೇಸಿಗಳು ಆ ಕಾಲದಲ್ಲಿ ಯಾರೂ ಇರಲಿಲ್ಲ ಎಂಥಾ ಭಾರಿ ಕಟ್ಟಡವನ್ನು ಕಟ್ಟಿದ್ದಾಗ್ಯೂ ಕಟ್ಟಿದ ಕೆಲವು ದಿವಸದಲ್ಲಿಯೇ ಬಿದ್ದು ಹೋಗುತ್ತಾ ಇರಲಿಲ್ಲ ಬಿದ್ದು ಹೋದರೆ - ಎರಡು ಎಸೆ ಸರಿಯಾಗಿ ಬರಲಿಲ್ಲ ಬಿರುಕುಬಿಟ್ಟುಹೋಯಿತು, ಇಟ್ಟಿಗೆಯಲ್ಲಿ ಕಲ್ಲು ಇತ್ತು, ಅದು ಬೇಯಲಿಲ್ಲ, ಸುಣ್ಣದಲ್ಲಿ ಬೂದಿ ಇತ್ತು ಅದು ಅಂಟಲಿಲ್ಲ ಮರದಲ್ಲಿ ಟೊಳ್ಳು ಇತ್ತು, ಅದು ಗೊತ್ತಾಗಲಿಲ್ಲ ಎಂದು ತಿಪ್ಪೆಸಾರಿಸಿ, ಭಾರೀಹಣಕ್ಕೆ ಪುನಃ ಅಂದಾಜುಗಳನ್ನು ಮಾಡಿ ಕಂಡ ಹಾಗೆಯೇ ಜಾಸ್ತಿ ದರಗಳನ್ನು ಹಾಕಿ ತಾವೂ ಕಂಟ್ರಾಕ್ಟರೂ ಸಹಾ ಚೆನ್ನಾಗಿ ಬದುಕುವ ಮಾರ್ಗವನ್ನು ಹುಡುಕುತ್ತಾ ಇದ್ದ ಶಿಲ್ಪಿಶ್ರೇಷ್ಠರು ಆಗ ತಯಾರಾಗಿರಲಿಲ್ಲ. ಆ ಕಾಲದಲ್ಲಿ ಮಾಡಿದ ಕೆಲಸವೆಲ್ಲಾ ಒಂದೇಸಾರಿ ಕಟ್ಟುವುದು, ಕಟ್ಟಿದ್ದೆಲ್ಲಾ ಭದ್ರವಾಗಿ ನಿಲ್ಲುವುದು, ಹೀಗೆ ಇತ್ತು. ಪೂರ್ವದಲ್ಲಿ ಆದ ಕೆಲಸವನ್ನು ಈಗ ಒಡೆಯಲು ತಗಲುವ ವೆಚ್ಚದಲ್ಲಿ ಈಗಿನ ಕಾಲದ ಇನ್ನೊಂದು ಕಟ್ಟಡವನ್ನು ಕಟ್ಟಬಹುದು. ಹೀಗೆ ಗಟ್ಟಿಯಾಗಿ ಕೆಲಸಗಳನ್ನು ದಿನಗೂಲಿ ಚೆಂಗೂಲಿ ಜನರು ಮಾಡುತ್ತಾ ಇದ್ದರು. ಮೇಲುವಿಚಾರಣೆಗೆ ಸದ್ದೀವಾಲರು ಎಂದು ನೇಮಕವಾಗಿದ್ದರು. ಈ ಕೆಲಸಗಳು ಆಗಾಗ್ಗೆ ಜರುಗುತಾ ಬಂದಹಾಗೆಲ್ಲಾ ಕೃಷ್ಣರಾಜ ಒಡೆಯರೇ ಸ್ವತಃ ಹೋಗಿ ನೋಡಿಕೊಳ್ಳುತ್ತಾ ಇದ್ದರು. ಆದ್ದರಿಂದ ನಂಜನಗೂಡಲ್ಲಿ ಚಾಮರಾಜನಗರದಲ್ಲಿ ಕಟ್ಟುತ್ತಾ ಇದ್ದ ದೇವಾಲಯಗಳ ಮೇಲುವಿಚಾರಣೆಗೆ ಆಗಾಗ್ಗೆ ಖಾಸಸವಾರಿ ಹೋಗುತ್ತಾ ಇತ್ತು. ಆಗಿನ ಕಾಲದಲ್ಲಿ ಜೋಡು ಕುದುರೇ ಸಾರೋಟೇ ಅತಿವೇಗವಾದ ಚಲನಯಂತ್ರವಾಗಿತ್ತು. ದೊರೆತನ ಮಾಡತಕ್ಕವರೇ ಹೀಗೆ ಎಲ್ಲವನ್ನೂ ಸ್ವತಃ ನೋಡಿಕೊಳ್ಳಬೇಕೆಂಬ ಆಸಕ್ತಿಯಿಂದ ಉಂಟಾದ ಶ್ರಮವು ಅಲ್ಪವಾಗಿರಲಿಲ್ಲ. ಸಾಧಾರಣವಾದ ಮಾರ್ಗಾಯಾಸ, ಅದಕ್ಕೆ ಹೆಚ್ಚಾದ ದೇಹಾಲಸ್ಯ, ಇನ್ನೂ ಹೆಚ್ಚಾದ ಅಪಾಯಗಳು, ಸಾಧಾರಣ ಜನರಿಗೆ ಬೇಸರಿಕೆಯನ್ನುಂಟುಮಾಡುವಲ್ಲಿ ಸುಕುಮಾರರಾಗಿ ಪದವಿಯಲ್ಲಿರುವವರಿಗೆ ಹೇಳತಕ್ಕದ್ದೇನು? ಆದರೂ ನಮ್ಮ ದೊರೆಯು ಇದು ಯಾವುದನ್ನೂ ಲಕ್ಷ್ಯವಿಡದೆ ತಾನೇ ನೋಡಿಕೊಳ್ಳುತ್ತಿದ್ದರು.

ಹೀಗೆ ತಿರುಗಾಡುವಾಗ್ಗೆ ಒಂದಾನೊಂದು ಸಾರಿ ಒಂದು ಹೆಚ್ಚಿನ ಸಂಗತಿ ನಡೆಯಿತು. ಕುದುರೇ ಟಪಾಲನ್ನು ಇಡಿಸಿ, ಸಾರೋಟಿನಲ್ಲಿ ಸವಾರಿಯು ಚಾಮರಾಜ ನಗರದಿಂದ ವೇಗವಾಗಿ ಬರುವಾಗ್ಗೆ ಮೈಸೂರಿಗೆ ಆರು ಮೈಲಿ ದೂರದಲ್ಲಿರುವ ಕಡಕೊಳದ ಸಮೀಪದಲ್ಲಿ ಛಟ್ಟನೆ ಸದ್ದಾಯಿತು. ಖಾಸಸವಾರಿಯ ಸಾರೋಟನ್ನು ಸದ್ದು? ಎಂದು ದೊರೆ ಕೇಳಿದರು. ಖಾವಿಂದ್ ವಿಶೇಷವೇನೂ ಇಲ್ಲ ಎಂದು ಬ್ಯೌ ಹೇಳಿದನು. ಸಾರೋಟು

ಮೈಸೂರ ಅರಮನೇ ಬಾಗಿಲ ಹತ್ತಿರ ಬಂತು. ಅದು ನಿಲ್ಲುವ ಸಮಯದಲ್ಲಿ ಬ್ರೌನನು ಗಾಡಿಯಿಂದ ಧುಮ್ಮಿಕ್ಕಿ ಸಾರೋಟಿನ ಮುಂಭಾಗದ ಒಂದು ಚಕ್ರವನ್ನು ಹಿಡಿದು ನಿಂತುಕೊಂಡನು. ದೊರೆಯು ಗಾಡಿಯಿಂದ ಇಳಿದರು. ಕೂಡಲೆ ಬ್ರೌನನನ್ನು ನೋಡಿ.

ದೊರೆ - ಯಾಕೆ ಚಕ್ರವನ್ನು ಹಿಡಿದು ನಿಂತುಕೊಂಡೆ?

ಬ್ರೌ - ಜಿಹ ಪರವರ್, ಪಟ್ಟೆ ಬಿಟ್ಟು ಹೋಗಿ ಚಕ್ರ ಮುರಿಯುವ ಹಾಗೆ ಇದೆ. ಬಿದ್ದು ಹೋದೀತೆಂದು ಖಾವಂದರ ಪಾದ ಗಾಡಿಯಿಂದ ಈಚೆಗೆ ಬರುವವರೆಗೂ ಚಕ್ರವನ್ನು ಹಿಡಿದುಕೊಂಡೆ.

ದೊರೆ - ಯಾವಾಗ ಚಕ್ರದ ಪಟ್ಟೆ ಬಿಟ್ಟು ಹೋಯಿತು?

ಬ್ರೌ - ಕಡಕೊಳದ ಸಮೀಪದಲ್ಲಿ ಬಿಟ್ಟುಹೋಯಿತು. ದಾರಿಯಲ್ಲಿ ಸದ್ದಾದ್ದು ಇದೇ.

ದೊರೆ - ಚಕ್ರ ಇಷ್ಟು ಮುರಿದುಹೋಗಿರುವಲ್ಲಿ ಗಾಡಿ ಬೀಳದೇ ಹೋದ್ದು ಆಶ್ಚರ್ಯ. ಗಾಡಿ ಬಿದ್ದಿದ್ದರೆ ಕೈಕಾಲು ಮುರಿಯುವುದೋ ಪ್ರಾಣ ಹೋಗುವುದೋ, ಏನೋ ಅಪಾಯವಾಗುತಾ ಇತ್ತಲ್ಲ!

ಬ್ರೌ - ಖಾವಿಂದ್, ಚಕ್ರಹೋದರೂ ಅಪಾಯವಾಗದೇ ಇರತಕ್ಕದ್ದು ಗಾಡಿಯನ್ನು ಹೊಡೆಯತಕ್ಕ ಚಮತ್ಕೃತಿಯ ಫಲವಾಗಿದೆ.

ದೊರೆ - ಬಹಳ ಸಂತೋಷವಾಯಿತ್ಯೆಯ್ಯ. ಗಾಡಿ ಬಿದ್ದುಹೋಗಿ ಅಪಾಯವಾಗಿದ್ದರೆ ನೀನು ಏನು ಮಾಡುತ್ತಿದ್ದೆ? ಗಾಡಿಯನ್ನು ನಿಲ್ಲಿಸಬೇಕಾಗಿತ್ತು.

ಬ್ರೌ - ಮಹಾಸ್ವಾಮಿ, ನಾನು ಗಾಡಿಯನ್ನು ನಿಲ್ಲಿಸಿದ್ದರೆ ಅಪಾಯವಾಗುತ್ತಾ ಇತ್ತು. ಮತ್ತು ಸವಾರಿಗೆ ಬೇರೆಗಾಡಿ ಬರುವತನಕ ಕಾಡಿನಲ್ಲಿ ಖಾವಂದರು ನಿಂತಿರಬೇಕಾಗುತಿತ್ತು. ಸಾಯಂಕಾಲದ ಸಮಯವಾಗಿತ್ತು. ಕತ್ತಲೇಕಾಲ, ಮೋಡವೂ ಕಟ್ಟಿತ್ತು. ಇದೆಲ್ಲವನ್ನೂ ಯೋಚಿಸಿ ಪಾದಕ್ಕೆ ಯಾವ ಅಪಾಯವೂ ತೊಂದರೆಯೂ ಉಂಟಾಗದಂತೆ ಗಾಡಿಯನ್ನು ಹೊಡೆದು ತಂದಿದೇನೆ, ಮಾಫ್ ಮಾಡಬೇಕು.

ದೊರೆ - ಬ್ರೌಸಾಬಿ, ನೀನು ಮಾಡಿದ ಸಹಾಯಕ್ಕೆ ಏನು ಕೊಟ್ಟರೂ ತೀರದು. ಇಂದು ನಮ್ಮ ಪ್ರಾಣವನ್ನು ಉಳಿಸಿದೆಯಲ್ಲಾ! ಇನ್ನೇನುಬೇಕು?

ದೊರೆಯು ಹೀಗೆ ಸಂತೋಷಪಟ್ಟು ಬ್ರೌಸಾಬಿಗೆ ಭಾರಿಯಾದ ಇನಾಮನ್ನು ಕೊಟ್ಟು - ಈ ಬ್ರೌಸಾಬಿಯು ಇನ್ನು ಮುಂದಕ್ಕೆ ಯಾವ ಚಾಕರಿಯನ್ನೂ ಮಾಡಬೇಕಾದ್ದಿಲ್ಲ ನಮ್ಮ ಖಾಸ ತಬೇಲಿಯಲ್ಲಿ ಮೇಲು ವಿಚಾರಣೆ ಮಾಡಿಕೊಂಡು ಅವನ ಸಂಬಳವನ್ನು ತೆಗೆದುಕೊಳ್ಳುತಾ ಇರಲಿ, ಎಂದು ಅಪ್ಪಣೆಮಾಡಿದರು.

ಹೀಗೆ ನಡೆಯುತ್ತಾ ಇದ್ದ ಗುಡಿಯ ಕಾಮಗಾರಿ ಜಾಗ್ರತೆಯಾಗಿ ಜರುಗಲು ಸ್ಥಳದ ಮುಖ್ಯಾಧಿಕಾರಿಯಾದ ಆಮೀಲನ ಶ್ರದ್ಧೆ ಅವಶ್ಯಕವಷ್ಟೆ ಇದರಂತೆ ಚಾಮರಾಜನಗರದಲ್ಲಿ ಚಾಮರಾಜೇಶ್ವರ ದೇವಾಲಯದ ಕಾಮಗಾರಿಯನ್ನು ಅಕ್ಕರೆಯಿಂದ ನೋಡಿಕೊಂಡು ಆಗಾಗ್ಗೆ ಬಿನ್ನವತ್ತಲೇ ಮಾಡಿಕೊಳ್ಳಬೇಕೆಂದು ಅಲ್ಲಿನ ಆಮೀಲ ಮಾರಮಣರಾಯನಿಗೆ ದೊರೆಯು ಅಪ್ಪಣೆಮಾಡಿದ್ದರು. ಆಮೀಲನು ಯಾವ ಕೆಲಸವಿದ್ದರೂ ಬಿಟ್ಟು ಗುಡೀ ಕಟ್ಟಡದ ಕೆಲಸವನ್ನು ವಿಶೇಷವಾಗಿ ಶ್ರದ್ಧೆಯಿಂದ ನೋಡಿಕೊಳ್ಳುತ್ತಾ ಇದ್ದನು. ಈ ಕಾರಣಕ್ಕಾಗಿ ಈ ಆಮೀಲನಲ್ಲಿ ದೊರೆಗಳಿಗೆ ಹೆಚ್ಚಿನ ಅಭಿಮಾನವಿತ್ತು. ಚಾಮರಾಜನಗರಕ್ಕೆ ಸವಾರಿ ಹೋದಾಗಲೆಲ್ಲಾ ಯಾವುದೊಂದು ಕೆಲಸಕ್ಕೂ ರಮಣೈಯ್ಯನನ್ನು ಕರೆ ಎಂದು ಸನ್ನಿಧಾನದಲ್ಲಿ ಅಪ್ಪಣೆಯಾಗುತ್ತಿತ್ತು. ದೊರೆ ಕರೆಯಿಸಿದಾಗಲೆಲ್ಲಾ ಒಂದೊಂದು ವೇಳೆ ರುಮಾಲನ್ನು ಹಿಂದುಮುಂದಾಗಿ ಇಟ್ಟುಕೊಂಡು ಹೋಗುವುದು ಅಂಗಿಯನ್ನು ತಳಮೇಲಾಗಿ ತೊಟ್ಟುಕೊಳ್ಳುವುದು, ಸೊಂಟವನ್ನು ಹರಹರಕಲಾಗಿ ಸುತ್ತಿಕೊಳ್ಳುವುದು, ಮುಖವನ್ನು ಏನೂ ಅರಿಯದವನ ಹಾಗೆ ಸೊಟ್ಟ ಸೊಟ್ಟನಾಗಿ ಮಾಡಿಕೊಳ್ಳುವುದು, ಅವಸರ ಅವಸರವಾಗಿ ನಡೆಯುವುದು, ಹೆಚ್ಚಿನ ಹೋಕೆಯನ್ನು ಅರಿಯದವನ ಹಾಗೆ ನಟಿಸುವುದು, ಅಪ್ಪಣೆಯಾದ ಕೂಡಲೇ ಬಹಳ ಅವಸರವಾಗಿ ಬಂದವನ ಹಾಗೆ ತೋರ್ಪಡಿಸಿ ದಾಸದಂಡವನ್ನು ಹಾಕುವುದು, ಯಾವ ಮಾತು ರಾಜರ ಮುಖದಿಂದ ಹೊರಟರೂ - "ಮಹಾಸ್ವಾಮಿ, ಅಪ್ಪಣೆ ಆದಂತೆ ತಯಾರುಮಾಡಿದ್ದೇನು, ಏನು ಇದ್ದರೂ ಒಂದು ನಿಮಿಷದಾಗ ಮಾಡಿಸುಥೇನು, ಆಹಾ? ಆಕ್ಷೇಪಣೆ ಏನದ? ಆಹ ಆಗಬಹುಂದು, ಭೆಲೋ ಅಪ್ಪಣೆ," ಎಂದು ಸಮಯಬಂದ ಹಾಗೆಲ್ಲಾ ಹೊಗಳುವುದು, ಈ ಪ್ರಕಾರ ನಟಿಸುತಾ ಇದ್ದ ಕಾರಣ, ಈ ರಮಣೈಯ್ಯನು ಏನೂ ಅರಿತವನಲ್ಲ ಒಳ್ಳೆಯವನು, ಸರ್ಕಾರದ ಕೆಲಸಗಳನ್ನು ಶ್ರದ್ಧೆಯಿಂದ ಬಹು ಚೆನ್ನಾಗಿ ಮಾಡತಕ್ಕವನು, ಎಂದು ದೊರೆಯು ಇವನಲ್ಲಿ ಬಹಳವಾಗಿ ಅಭಿಮಾನವನ್ನು ಇಟ್ಟುಕೊಂಡು, ಇವನನ್ನು ಬಹಳ ದಿವಸ ಆ ತಾಲೋಕಿನಲ್ಲಿಯೇ ಇರುವಂತೆ ಅಪ್ಪಣೆಮಾಡಿಸಿದ್ದರು.

ಹೀಗೆ ತನಗೆ ಉಂಟಾಗಿರುವ ರಾಜಪೂಜ್ಯತೆಯ ಮರೆಯಲ್ಲಿ ತಾನು ಏನ ಮಾಡಿದಾಗ್ಗೂ ನಡೆಯುತ್ತೆಂದು ಈ ಆಮೀಲನು ತಿಳಿದಿದ್ದನು. ಇವನ ಚರಿತ್ರೆ ಇಷ್ಟೇ ಅಲ್ಲ ಇವನಲ್ಲಿ ಮೂರು ನಾಲ್ಕು ಜನ ಮಧ್ಯಸ್ಥಗಾರರು ಒಳಗೂ ಹೊರಗೂ ಓಡಿಯಾಡುತ್ತಲೇ ಇರುತ್ತಿದ್ದರು. ಇವರ ಮೂಲಕ ಒಂದೊಂದು ಮೊಕದ್ದಮೆಯಲ್ಲಿಯೂ ಒಳಲಂಚ ಹೆಚ್ಚಾಗಿ ನಡೆಯುತ್ತಲೇ ಇರುತ್ತಿತ್ತು. ಹಣಗಾರರಾದ ಜನರು ಕಕ್ಷಿಗಾರರಾಗಿ ಬಂದಾಗ ಸುಬೇದಾರರ ಜಾಳಿಗೆಯು ನೂರಾರು ಕಟ್ಟಳೆಯಲ್ಲಿ ತುಂಬುತಾ ಇತ್ತು. ಈ ಆದಾಯವು ಇನ್ನೂ ಹೆಚ್ಚುತ್ತಲೂ ಇತ್ತು. ಕೊಟಾರದ ದಿವಸದಲ್ಲಿ ಜವಾನರು ಗ್ರಾಮಗಳಿಗೆ ಹೋಗಿ ಪಟೇಲರ ಮುಖಾಂತರ ಒಕ್ಕಲುತನದವರಿಂದ ಬೇಕಾದಷ್ಟು ದವಸವನ್ನೂ ಹುಲ್ಲನ್ನೂ ಬಿಟ್ಟಿಯಾಗಿ ಹೊರಿಸಿಕೊಂಡು ಬರುತ್ತಲೇ ಇದ್ದರು. ಇದೆಲ್ಲವೂ ಸುಬೇದಾರರ ಮನೆಯಲ್ಲಿ ಮಾರಾಟವಾಗಿ ಬಂದ ಹಣ ಸುಬೇದಾರರ ಬೊಕ್ಕಸಕ್ಕೆ ಬೀಳುತ್ತಲೇ ಇತ್ತು. ಆ ಆಮೀಲರು ಯಾರನ್ನು ಕಂಡಾಗ್ಯೂ-ಏನಕಣೋ ಗ್ಯವಡ, ನಾಳೆ ನಮ್ಮಲ್ಲಿ ತಿತಿ ಬರಾದು, ತರಕಾರಿ ಬಾಳಿಯಲಿ ಎಷ್ಟುಸಿಕ್ಕಿದರೂ ತಂದುಕೊಡೇನು? ಎಂದು ಹೇಳುತಿದ್ದರು. ಹೀಗೆ ಬಂದ ಕಾಯಿಪಲ್ಯ ಮನೆಯಲ್ಲಿ ತುಂಬಿಯೇ ಇರುತ್ತಿತ್ತು. ಇದೆಲ್ಲವನ್ನೂ ಸರ್ಕಾರದ ಜವಾನರು ಮಾರಿ ದುಡ್ಡನ್ನು ತಂದು ಅಮ್ಮನವರ ಕೈಯಲ್ಲಿ ಕೊಡುತಿದ್ದರು. ಆಮೀಲರು ಗ್ರಾಮಗಳಿಗೆ ಹೋದಾಗ ಒಂದಕ್ಕೆ

ಹತ್ತರಷ್ಟು ಸೋಬಸ್ಕರವನ್ನು ರೈತರ ಮನೆಯಿಂದ ತರಿಸಿಕೊಂಡು ಗಾಡಿಯಲ್ಲಿ ತುಂಬಿ ಊರಿಗೆ ಕಳುಹಿಸುತ್ತಿದ್ದರು. ಇದೂ ಅಲ್ಲದೆ ಆಮೀಲನು ಜವಳಿ ಅಂಗಡಿಯಿಂದ ಬೇಕಾದ ಬಟ್ಟೆಗಳನ್ನು ತರಿಸಿಕೊಂಡು ಉಪಯೋಗಿಸುತ್ತಿದ್ದನು. ಅದರ ಕ್ರಯವನ್ನು ಕೇಳುವುದಕ್ಕೆ ವರ್ತಕರು ಭಯಪಟ್ಟು ಸುಮ್ಮನೇ ಬಿಟ್ಟು ಬಿಡುತಿದ್ದರು. ಆಮೀಲರು ಗ್ರಾಮಾಂತರಗಳಿಗೆ ಒಂಟಿಯಾಗಿ ಹೋದಾಗ ಸ್ತ್ರೀ ವಿಷಯವಾಗಿ ಇವರು ನಡೆಸುತ್ತಿದ್ದ ಚರ್ಯವನ್ನು ವಿವರಿಸಲು ಅಸಹ್ಯವಾಗುತ್ತೆ. ತಾಲ್ಲೂಕು ಕಚೇರಿಯ ಉದ್ಯೋಗಸ್ಥರು ಜನರಿಂದ ಕೂತರೆ ನಿಂತರೆ ಒಳಲಂಚವನ್ನು ವಸೂಲುಮಾಡುತಾ ಧನಿಕರಾಗಿದ್ದರು. ಆದಾಗ್ಯೂ ಆಮೀಲನಿಗೆ ಬರುತ್ತಿದ್ದ ಈ ಚರಾದಾಯದಷ್ಟು ಇತರ ಉದ್ಯೋಗಸ್ಥರಿಗೆ ಬರುತ್ತಿರಲಿಲ್ಲವಾದ್ದರಿಂದ ಅವನ ಮೇಲೆ ಇವರೆಲ್ಲರಿಗೂ ದ್ವೇಷವು ಹೊಟ್ಟೆಯೊಳಗೇ ತುಂಬಿತ್ತು. ಹೀಗೆಲ್ಲಾ ಇದ್ದಾಗ್ಯೂ ದೊರೆಗಳ ದಯಕ್ಕೆ ಆಮೀಲನು ಪಾತ್ರನಾಗಿದ್ದ ಕಾರಣ ಇವನ ಮೇಲೆ ಯಾರೂ ಎದುರಿಗೆ ನಿಲ್ಲುತ್ತಿರಲಿಲ್ಲ, ಸಹಿಸುವುದಕ್ಕೆ ಅಸಾಧ್ಯವಾದ ಒಳದುಃಖವು ಎಲ್ಲರಿಗೂ ಬೂದಿಮುಚ್ಚಿದ ಕೆಂಡದ ಹಾಗಿತ್ತು.

ಈ ಕೆಂಡವು ಹತ್ತಿಕೊಂಡು ದೊಡ್ಡ ಉರಿಯಾಗಿ ಏಳುವುದಕ್ಕೆ ಒಂದು ಸಮಯಬಂತು. ಆ ಸೀಮೆಯಲ್ಲಿ ಉಪ್ಪಲಿಗರು ಅಥವಾ ಮೇಲು ಸಕ್ಕರೆಯವರು, ಪರಿವಾರದವರು ಅಥವಾ ತೊರೆಯರು, ಎಂದು ಎರಡು ಜಾತಿಯ ಒಕ್ಕಲಿಗರು ಇದಾರೆ. ಈ ಜಾತಿಯವರ ಮದುವೆ ಮುಂತಾದ ಕಾಲಗಳಲ್ಲಿ ಮಾಡುವ ಬೀದೀ ಮೆರವಣಿಗೆ ಪದ್ಧತಿಗಳ ಕುರಿತು ಇವರಿವರಿಗೆ ಬಹುದಿವಸದಿಂದಲೂ ವಿವಾದ ನಡೆಯುತ್ತಲೇ ಇದೆ. ಹೀಗಿರಲು ಹಣಗಾರನಾದ ಒಬ್ಬ ತೊರೆಯನ ಮನೆಯಲ್ಲಿ ಅವನ ಮಗನಿಗೆ ಮದುವೆಯಾಯಿತು. ಪುಣ್ಯವಂತನಾದ ಇವನ ಮನೆಯ ಪ್ರಸ್ತುತಕ್ಕೆ ಆ ಸುತ್ತಲೂ ಇರುವ ಗ್ರಾಮಗಳ ತೊರೆಯರೆಲ್ಲರೂ ಬಂದಿದ್ದರು. ಮದುವೆಯು ಅಟ್ಟಹಾಸವಾಗಿಯೇ ಜರುಗಿತು. ಇವನು ಸತ್ಕಾರದ ಉದ್ಯೋಗಸ್ಥರೆಲ್ಲರನ್ನೂ ಕರೆದಿದ್ದನು. ಆಮೀಲರೂ ಕಿಲ್ಲೇದಾರರೂ ಷಿರಸ್ತೇದಾರರೂ ಮೊದಲಾಗಿ ಎಲ್ಲರಿಗೂ ಔತಣ ಉಡುಗರೆ ಬೇಕಾದ ಹಾಗೆ ಆಯಿತು. ಆ ಮದುವೆಯಾದ ಮದು ಮಕ್ಕಳಿಗೆ ಮೆರವಣಿಗೆ ಮಾಡಲು ಅಪ್ಪಣೆ ಕೊಡಿಸಬೇಕೆಂದು ಪ್ರಸ್ತಮಾಡಿದ ಯಜಮಾನನು ಆಮೀಲರಲ್ಲಿ ಒಂದು ಅರ್ಜಿ ಹಾಕಿದನು. ಆ ದಿವಸ ರಾತ್ರಿಯೇ ಮಧ್ಯಸ್ಥಗಾರರು ಬಂದು ಮಾತನಾಡಿ ಆಮೀಲರ ಕುಟುಂಬವಾದ ಅಮ್ಮನವರ ಕೈಗೆ ನೂರು ಇಕ್ಕೇರಿ ವರಹಗಳನ್ನು ತಂದು ಎಣಿಸಿಕೊಟ್ಟರು. ಈ ಮಧ್ಯೆ ಉಪ್ಪಲಿಗರ ಕಡೆಯವರಿಗೆ ಒಳಗುಟ್ಟು ಗೊತ್ತಾಯಿತು. ಅವರು ಎದುರು ಅರ್ಜಿಯನ್ನು ತಂದು ಆಮೀಲರಲ್ಲಿ ಕೊಟ್ಟರು. ತೊರೆಯರು ಒಂಭತ್ತುಪಣಕ್ಕೆ ಸೇರಿದವರು, ಪಲ್ಲಕ್ಕೀ ಮೆರವಣಿಗೆ ಮಾಡಿಕೊಂಡು ಉಪ್ಪಲಿಗರೇ ಮೊದಲಾದ ಹದಿನೆಂಟು ಪಣದವರು ಇರುವ ಪೇಟೆಯಲ್ಲಿ ಹೋಗುವ ಪದ್ಧತಿ ಇಲ್ಲ ತೊರೆಯರಿಗೆ ಲೈಸೆನ್ಸನ್ನು ಕೊಡಕೂಡದು, ಎಂದು ಆ ಅರ್ಜಿಯಲ್ಲಿ ಬರೆದಿತ್ತು. ಈ ತಕರಾರನ್ನು ನೋಡಿ ಆಮೀಲರಿಗೆ ಬಹಳ ಸಂತೋಷವಾಯಿತು. ಆ ದಿನ ರಾತ್ರಿ ಮಧ್ಯಸ್ಥಗಾರರು ಆಮೀಲರ ಮನೆಗೆ ಹೋಗಿ ಭೇಟಿ ತೆಗೆದುಕೊಂಡರು. ಮಚ್ಚಿನಮೇಲೆ ಮಾತು ನಡೆಯುತಾ ಇತ್ತು. ಅಮ್ಮನವರು ಇದನ್ನು ಕೇಳಿ ಮೇಲಕ್ಕೆ ಹೋದರು. ಒಂದುನೂರು ವರಹ ಕೊಡುವುದಾಗಿ ಉಪ್ಪಲಿಗರ ಕಡೆಯವರು ಹೇಳಿದರು.

ಆಮೀಲ - ಅದು ಹ್ಯಾಂಗ ಆಗಾದು? ತೊರೆಯರ ಮೆರವಣಿಗೆ ಮಾಮೂಲು ಇಲ್ಲ ಎಂಬ ವೇಳೆಗೆ ಉಪ್ಪಲಿಗೆಯ ತಕರಾರು ಮಾಡಲಿಕ್ಕೆ ಮಾಮೂಲು ಉಂಟೆ?

ಉಪ್ಪಲಿಗರು - ಬುದ್ದಿ ಹಾಗಲ್ಲ, ತೊರೆಯರ ಮೆರವಣಿಗೆ ಹಿಂದೆ ನಡೆದಿದ್ದರೆ, ನಾವೂ ತಕರಾರು ಮಾಡುತ್ತಲೇ ಇದ್ದೆವು. ಆಗ ತಕರಾರೂ ಮಾಮೂಲಾಗುತ್ತಿತ್ತು.

ಆಮೀಲ - ನೀವು ತಕರಾರು ಮಾಡುತೀರೆಂಬ ಸಂಗತಿ ತೊರೆಯರಿಗೆ ತಿಳಿದಿದ್ದರೆ ಅವರು ಲೈರ್ಸೆಸಿಗೆ ಅರ್ಜಿಕೊಡಬಹೂಂದು, ನಿಮ್ಮ ತಕರಾರು ಹೀಂಗೆ ಎಂದು ಅವರು ಅರಿಯರು. ಹವುದೋ? ಅದಕ್ಕೆ ಅವರು ಅರ್ಜಿ ಕೊಡಲಿಲ್ಲ ಅರ್ಜಿಕೊಟ್ಟ ಮಾಮೂಲೂ ಆಗಲಿಲ್ಲ

ಉಪ್ಪ - ತೊರೆಯರ ಅರ್ಜಿಯ ಮಾಮೂಲಿನ ವಿಚಾರವಲ್ಲ ಮಹಾಸ್ವಾಮಿ, ಮೆರವಣಿಗೆ ಮಾಮೂಲಿನ ವಿಚಾರ.

ಆಮೀ - ಇದು ಸತ್ಕಾರದ ಮಾತು. ಕಾನೂನೆಲ್ಲಾ ನಿಮಗೆ ಗೊತ್ತುಂಟ?

ಉಪ್ಪ - ಅದೆಲ್ಲಾ ನಮಗೇನು ಗೊತ್ತು ಬುದ್ದಿ? ಅದು ಹೇಗಾದರೂ ಇರಲಿ, ಸ್ವಾಮಿ ನಮ್ಮ ಮಾನವನ್ನು ಕಾಪಾಡಬೇಕು. ಒಂದುನೂರು ವರಹವನ್ನು ಪಾದಕ್ಕೆ ಒಪ್ಪಿಸುತೇವೆ.

ಅಮ್ಮನವರು - ೧೨೦ ವರಹ ತೊರೆಯರು ಕೊಡುತ್ತೇವೆಂದು ಹೇಳುತಾರ. ನೀವು ೧೫೦ ವರಹ ಕೊಟ್ಟರ ಲೇರ್ಸ ದೊರೆಯೋದು.

ಉಪ್ಪ - ನಮಗೆ ಲೇರ್ಸಬೇಡಿ ತಾಯಿ, ತೊರೆಯರಿಗೆ ಲೇರ್ಸ ಕೊಡ ಕೂಡದು. ಇಷ್ಟೇ ತಾಯಿ ನಾವು ಕೇಳಿಕೊಳ್ಳುವುದು. ಅದೇ ೧೨೦ ವರಹ ನಾವು ಒಪ್ಪಿಸುತ್ತೇವೆ.

ಆಮೀ - ಆ ಲೈರ್ಸಸಿನ ತೂಕ ನಿಮಗೆ ಹ್ಯಾಂಗ ಗೊತ್ತಾಗದು? ಏನೋ ನೀವು ಹೇಳಿದಹಾಂಗೇ ಆಗಲಿ.

ಈ ಪ್ರಕಾರ ಮಾತನಾಡಿಕೊಂಡು ಉಪ್ಪಲಿಗರ ಕಡೆಯವರು ಹೊರಟುಹೋದ ಮೇಲೆ, ಅಮ್ಮನವರು ಗಂಡನನ್ನು ಕುರಿತು - ನಾನು ಹೇಳಿದಹಾಂಗೇ ೧೫೦ ವರಹ ಕೊಡಾರು? ನೀವು ೧೨೦ಕ್ಕೆ ಒಪ್ಪಿಕೊಂಡು ಕೆಡಿಸಿಟ್ಟಿರಿ. ಒಂದೊಂದೂ ಹೀಂಗ ಮಾಡಿದರೆ ನಾನು ಏನ ಹೊಡಕ್ಕೊಳ್ಳಿ? ಎಂದು ಗಂಡನನ್ನು ಆಕ್ಷೇಪಿಸಿ ಕೋಪ ಮಾಡಿಕೊಂಡು ಗಡಾವಣೆಯಿಂದ ಹೊರಟಳು. ಆಗ ಆಮೀಲನು, - ಇರಲಿ, ಇನ್ನೊಂದು ವೇಳೆ ಸೆಳೆದು ಹಾಕಥೇನು, ಎಂದು ಹೆಂಡತಿಗೆ ಸಮಾಧಾನ ಹೇಳಿದನು.

ಮಾಮೂಲಿಗೆ ವಿರೋಧವಾಗದಹಾಗೆ ನೀವು ಮೆರವಣಿಗೆ ಮಾಡಿಕೊಳ್ಳಬಹುದೆಂದು ಬರೆದು ಪರಿವಾರದವರಿಗೆ ಲೈರ್ಸನನ್ನು ಕೊಟ್ಟರು. ಬಂದಷ್ಟು ಹಣವನ್ನು ದೋಚಿಕೊಳ್ಳುವುದರಲ್ಲಿ ಮಾರಮಣರಾಯನಿಗೆ

ಇದ್ದಷ್ಟು ಪ್ರಜ್ಞೆಯೂ ಜಾಣತನವೂ ಬರವಣಿಗೆಯಲ್ಲಿ ಇರಲಿಲ್ಲವಾದ್ದರಿಂದ, ಮೇಲಿನ ಲೈಸೆನ್ಸನ್ನು ಒಕ್ಕಣಿಸುವುದರಲ್ಲಿ ಮುನಷಿಗಳು ಗುಮಾಸ್ತರು ಇವರ ಕೈವಾಡವೇ ಮುಖ್ಯವಾಗಿತ್ತು. ಇದಕ್ಕಾಗಿ ಪರಿವಾರದವರು ತಮ್ಮ ಕೃತಜ್ಞತೆಯನ್ನು ಕರಗಿಸಿ ಅದನ್ನು ಚಿನ್ನವಾಗಿ ಮಾಡಿ, ಕೂತರೆ ನಿಂತರೆ ಪಂಚಪ್ರಾಣವನ್ನೂ ಸೆಳೆಯುವುದರಲ್ಲಿ ಕೇವಲ ಪ್ರೌಢರಾಗಿದ್ದ ಮುನಷಿ ಮೊದಲಾದ ಎಲ್ಲಾ ಪರಿವಾರಗಳಿಗೂ ಅವರವರ ಯೋಗ್ಯತೆ ಮೀರಿ ಚಿನ್ನದ ಹಣಗಳನ್ನೂ ಬೆಳ್ಳಿ ಹಣಗಳನ್ನೂ ತೆತ್ತರು.

ಉಪ್ಪಲಿಗರ ಕಡೆಯವರು ಒಳಸಂಚು ಇಟ್ಟು ಈ ಒಳಗಿನ ಗುಟ್ಟನ್ನೆಲ್ಲಾ ತಿಳಿದುಕೊಂಡರು. ತೊರೆಯರ ಮೆರವಣಿಗೆ ಹೊರಟರೆ ತಾವು ಮುಂಚಿತವಾಗಿ ಮಾಡಿಕೊಂಡಿರಬೇಕಾದ ಮುಸ್ತೈದುಗಳು ಯಾವುದನ್ನೂ ಬಿಡದೆ ಸಿದ್ಧಮಾಡಿ ಕೊಂಡರು. ರಾತ್ರಿ ಹೊತ್ತು ಬಂದು ಕಾಡಿನಲ್ಲಿ ಯಾರೂ ಅರಿಯದಹಾಗೆ ಗುಂಪುಪೇರಿ ಮುಂದೆ ಮಾಡಬೇಕಾದ ಕೆಲಸಗಳನ್ನು ಗೊತ್ತು ಮಾಡಿಕೊಂಡರು.

ಪರಿವಾರದವರಾದರೋ, ಸುಬೇದಾರರ ಬಲದಿಂದ ತಮ್ಮ ಇಷ್ಟ ನೆರವೇರೀತೆಂದು ಬಹು ಸಂತೋಷವಾಗಿ ಮೆರವಣಿಗೆಗೆ ಬೇಕಾದ ಸಾಮಗ್ರಿಗಳನ್ನು ಸಜ್ಜು ಮಾಡಿಕೊಂಡರು. ಚಾಮರಾಜನಗರದಲ್ಲಿರುವ ಎಲ್ಲಾ ಗುಡಿಗಳಿಗೂ ಹೋಗಿ ಹಣ್ಣು ಕಾಯಿಗಳನ್ನು ಒಪ್ಪಿಸಿ, ಮುಖ್ಯವಾದ ರಾಜಬೀದಿಗಳಲ್ಲಿ ಮೆರವಣಿಗೆ ಮಾಡಿಕೊಂಡು, ರಾತ್ರಿ ೧೨ ಗಂಟೆಹೊತ್ತಿಗೆ ಮನೆಸೇರಿ, ಮದುಮಕ್ಕಳಿಗೆ ದೃಷ್ಟಿ ತೆಗೆದುಹಾಕಿ ಆರತಿಅಕ್ಷತೆ ಮಾಡಬೇಕೆಂದು ನಿಷ್ಕರ್ಷೆಯಾಯಿತು. ಇವರಿಗೆ ಯಾವುದು ತಾನೇ ಅಸಾಧ್ಯ? ಸುಬೇದಾರರು ಅನುಕೂಲವಾಗಿದಾರೆ, ಇತರ ಉದ್ಯೋಗಸ್ಥರೆಲ್ಲಾ ಕೈವಶರಾಗಿದ್ದಾರೆ, ಕಿಲ್ಲೇದಾರರಂತು ತೊರೆಯರೆಂಬ ಮಹಾರಣ್ಯದಲ್ಲಿ ಮದಗಜವಾಗಿ ಅಮಾರ್ಗದಲ್ಲಿದ್ದ ಕೆಲವು ತೊರೆಯರ ಹೆಮ್ಮಕ್ಕಳ ಮಹಾಸಮಾಜದಲ್ಲಿ ಯಾವಾಗಲೂ ಲೋಲರಾಗಿರುವಾಗ್ಗೆ ತೊರೆಯರಿಗೆ ಯಾವುದು ಅಸಾಧ್ಯ?

ಸುಬೇದಾರರು ಮನೆಯಲ್ಲಿಯೇ ಇದ್ದರು. ಕಿಲ್ಲೇದಾರರು ತಮ್ಮ ಕಂದಾಚಾರವನ್ನು ಕರೆದುಕೊಂಡು ಯಾವ ಗಜಾಲೂ ಇಲ್ಲದೆ ಮೆರವಣಿಗೆಯನ್ನು ಸರಿಯಾಗಿ ನಡೆಸಲು ತಮ್ಮ ಕುದುರೆಯನ್ನು ಹತ್ತಿಕೊಂಡು ಹೊರಟರು. ಸುತ್ತಮುತ್ತಿನ ತೊರೆಯರ ಮಂಡಲಿಯಲ್ಲಾ ಆ ದಿವಸ ಚಾಮರಾಜನಗರದಲ್ಲಿ ನೆರೆದು ನಿಂತಿತು. ಮುಂದೆ ಕೊಂಬು, ತಮಟೆ, ಅದರ ಹಿಂದೆ ರಣಭೇರಿ, ಅದರ ಹಿಂದೆ ಉತ್ತಮವಾದ ಓಲಗವನ್ನು ಮಾಡುವ ಎರಡು ಗುಂಪಿನ ಓಲಗದವರು, ಅವರ ಹಿಂದೆ ವಿಧ ವಿಧವಾದ ಬೆಲೆಯುಳ್ಳ ಬಟ್ಟೆಗಳನ್ನು ಹಾಕಿಕೊಂಡಿರುವ ಗಂಡಸರ ಗುಂಪು, ಅದರ ಹಿಂದೆ ಕಂದಾಚಾರದ ಜವಾನರಿಂದ ಆವೃತರಾಗಿ ಕುದುರೇಮೇಲೆ ಕೂತು ಬರುತ್ತಿರುವ ಕಿಲ್ಲೇದಾರ್ ಸಾಲಾರ್‌ಖಾಸಾಹೇಬರು, ಇವರ ಹಿಂದೆ ಮದುಮಕ್ಕಳು ಕೂತಿರುವ ಹೂವಿನ ಪಲ್ಲಕ್ಕಿ, ಇದರ ಹಿಂದೆ ಬೇಕಾದ ಒಡವೆಗಳನ್ನಿಟ್ಟು ಬಗೆ ಬಗೆ ಸೀರೆಗಳನ್ನುಟ್ಟು ಬೇಕಬೇಕಾದ ಸಿಸ್ತುಗಳನ್ನು ಮಾಡಿಕೊಂಡು, ಕನ್ನಡಿ ಕಳಶ ಸುತ್ತು ವೀಳಯ, ತೆಂಗಿನ ಕಾಯಿ ಬಾಳೇ ಹಣ್ಣು ಈ ಬಗೆ ತಟ್ಟೆಗಳನ್ನು ಹಿಡಿದು, ಹಾಡುಗಳನ್ನು ಹಾಡುತ್ತಾ ಬರುವ ತೊರತಿಯರ ಸಂಘ, ಇವರ ಹಿಂದೆ ಸಾಧಾರಣ ಬಟ್ಟೆಗಳನ್ನೂ ಕಂಬಳಿಗಳನ್ನೂ ಹೊದ್ದು ಬರುತ್ತಾ ಇರುವ

ಗಂಡಸರ ಹೆಚ್ಚಾದ ಗುಂಪು. ಇವುಗಳೆಲ್ಲಾ ಒರಟು ಒರಟಾದ ಸೌಂದಯ್ಯವನ್ನು ತೋರಿಸುತಿದ್ದಾಗ್ಲೂ ಮುಡಿದಿರುವ ಚೆಂಡುಮಲ್ಲಿಗೇ ಹೂವಿನ ವಾಸನೆ, ಕೈಯೆಣ್ಣೆಯ ಮಣಕು ವಾಸನೆ, ನೀರುಳ್ಳಿ ಬೆಳ್ಳುಳ್ಳಿಯ ವ್ಯಗಟು ವಾಸನೆ, ಇದೆಲ್ಲವನ್ನೂ ಮುಚ್ಚುತ್ತಾ ಇರುವ ಬೆವರ ವಾಸನೆ, ಇವುಗಳು ತುಂಬಿದ ಕಾರಣ ಇಂಥಾ ಗವಲನ್ನು ಎಂದಿಗೂ ಅರಿಯದವರ ಮೂಗು ಆಗಾಗ್ಗೆ ಸೊಟ್ಟ ಸೊಟ್ಟನಾಗುತಿತ್ತು.

ಮೆರವಣಿಗೆಯು ಸುಬೇದಾರರ ಮನೆ ತಟಹಾದು ಪೇಟೆಯವರೆಗೂ ಹೋಯಿತು. ಆಗ ಗುಂಪಿನೊಳಕ್ಕೆ ೧೦-೧೨ ಕಲ್ಲುಗಳು ಬಿದ್ದವು. ಜನ ಗಾಬರಿಯಾಯಿತು. ಕಲ್ಲು ಎಲ್ಲಿಂದ ಬಂತೋ ನೋಡೋಣವ್ದೆಂಟದು ಕಂದಾಚಾರದ ಜವಾನರು ಓಡಿಹೋದರು. ಆ ಸಮಯಕ್ಕೆ ಸರಿಯಾಗಿ ಕಲ್ಲಿನ ಮಳೆಯೇ ಸುರಿಯುವುದಕ್ಕೆ ಮೊದಲಾಯಿತು. ಮಧ್ಯೆಮಧ್ಯೆ ಪಾದರಕ್ಷೆಗಳು ಹೆಚ್ಚಾಗಿ ಬಿದ್ದವು. ಅಕಸ್ಮಾತ್ತಾಗಿ ನಾಲ್ಕು ದಿಕ್ಕಿನಿಂದಲೂ ಹಣೆಮಟ್ಟದ ದೊಣ್ಣೆಗಳನ್ನು ಹಿಡಿದಿರತಕ್ಕ ದುಂಡಾಳುಗಳ ಗುಂಪುಗಳು ನುಗ್ಗಿದವು. ಕಿಲ್ಲೇದಾರರ ಕುದುರೆಗೆ ಬಲವಾದ ಏಟು ಬಿದ್ದು ಅದರ ಕಾಲು ಮುರಿದು ಹೋಯಿತು. ಸಾಲಾರಖ್ಗಾ ಸಾಹೇಬರು ಕೆಳಕ್ಕೆ ಬಿದ್ದರು. ಕೂಡಲೆ ಅವರಿಗೆ ದೊಣ್ಣೆ ಪೆಟ್ಟುಗಳು ಬಲವಾಗಿ ಬಿದ್ದು ಕಾಲು ಮುರಿದು ಹೋಯಿತು. ಮುಖ ಜಜ್ಜಿಹೋಗಿ ರಾಮರಕ್ತ ಸುರಿಯಿತು. ಗುಂಪಿನಲ್ಲಿ ಇವನ ಕಾಲನ್ನು ಹಿಡಿದು ಯಾರೋ ಬಚ್ಚಲಿಗೆ ಎಳೆದು ಹಾಕಿದರು. ಸಾಹೇಬರಿಗೆ ಜ್ಞಾನ ತಪ್ಪಿ ಹೋಯಿತು. ಜವಾನರಲ್ಲಿ ಕೆಲವರು ಉಪ್ಪಲಿಗರು ಕೆಲವರು ತೊರೆಯರು. ಇವರೆಲ್ಲಾ ತಂತಮ್ಮ ಗುಂಪಿಗೆ ಸೇರಿಕೊಂಡರು. ಕಾಯುವವರೇ ಕೊಲ್ಲುವವರಾದರು. ತೊರೆಯರ ಗುಂಪಿನವರಿಗೆ ಬಲವಾದ ಏಟು ಬಿತ್ತು. ಕೆಲವರು ಸತ್ತುಹೋದರು. ಕೆಲವರು ಜ್ಞಾನತಪ್ಪಿ ಬಿದ್ದರು. ಮದುಮಕ್ಕಳು ಎಲ್ಲಿಯೋ ಗೊತ್ತೇ ಆಗಲಿಲ್ಲ ಒಂದು ಗಳಿಗೆಯಲ್ಲಿ ಅಂಗಡಿ ಬಾಗಿಲುಗಳನ್ನೆಲ್ಲಾ ಹಾಕಿಬಿಟ್ಟರು. ಜನರೆಲ್ಲಾ ಮನೆಯೊಳಕ್ಕೆ ಸೇರಿಕೊಂಡು ಬಾಗಿಲನ್ನು ಹಾಕಿಕೊಂಡರು. ಈ ಗಲಾಟೆಯನ್ನು ಕೇಳಿ, ಮನೆಯಲ್ಲಿಯೇ ಇದ್ದ ಸುಬೇದಾರರ ಸವಾರಿಯು ಬೀದಿಬಾಗಿಲ ಜಗಲೀ ಮೇಲಕ್ಕೆ ಬಂತು. ಉಪ್ಪಲಿಗರ ಬಲವಾದ ಒಂದು ಗುಂಪು ಇವರ ಮನೆಮುಂದೆ ಬಂದು - ಏನು ಸ್ವಾಮಿ, ಪರಿವಾರದವರಿಗೆ ನೀವು ಲೇಸನ್ನನ್ನು ಹೇಗೆ ಕೊಟ್ಟಿರಿ? ಎಂದು ಜೋರಾಗಿ ಕೂಗಿತು. ಆಗ ಹೆಚ್ಚಿನ ಆಗ್ರಹದಿಂದ - ಸರ್ಕಾರದ ರಸ್ತೆ ಬೇಕಾದವರು ಹೋಗಬಹುದು, ನಿಮ್ಮ ಅಡ್ಡಿ ಏನು? ಎಂದು ಅವರನ್ನು ಹಿಡಿದು ಕತ್ತಲೇಮನೆಗೆ ಕೂಡಿ ಪಹರೆಯಲ್ಲಿಡುವಂತೆ ಆಮೀಲರು ಅಪ್ಪಣೆ ಮಾಡಿದರು. ಆಗ ಉಪ್ಪಲಿಗರು-ನಾವೇ ಹೋಗುತ್ತೇವೆ, ನೀವೇನು ಕೂಡುವುದು? ಆದ್ದೆಲ್ಲಾ ಆಗಲಿ! ಎಂದು ರೋಷಾವೇಶದಿಂದ ಎಲ್ಲರೂ ಕತ್ತಲೇ ಕೊಠಡಿಗೆ ನುಗ್ಗಿದರು. ಕತ್ತಲೇ ಕೊಠಡಿ, ಸೊಳ್ಳೆಮನೆ, ನೆಲಮಾಳಿಗೆ, ಇವೆಲ್ಲಕ್ಕೂ ಉಪ್ಪಲಿಗರು ತಾವಾಗಿಯೇ ನುಗ್ಗಿದರು. ತಾಲ್ಲೂಕು ಕಚೇರಿಯೆಲ್ಲಾ ತುಂಬಿ ಹೋಯಿತು. ಇನ್ನೂ ಜನ ನುಗ್ಗುತ್ತಾ ಬಂದರು. ಕಚೇರೀ ತಲೆಬಾಗಿಲಿಗೆ ಬೀಗಹಾಕಿದರು. ಉಳಿದ ಗುಂಪೆಲ್ಲಾ ಸುಬೇದಾರನ ಮನೆಮೇಲೆ ನುಗ್ಗಿತು. ಸುಬೇದಾರರು ಹೆದರಿಕೊಂಡು ತಮ್ಮ ಮನೆಯೊಳಕ್ಕೆ ಹೋಗಿ, ಎಲ್ಲಾ ಬಾಗಿಲುಗಳನ್ನೂ ಹಾಕಿಸಿಕೊಂಡು ಮಚ್ಚಿನ ಮೇಲೆ ಹೋಗಿ ಕೂತುಕೊಂಡರು. ಗುಂಪಿನ ಜನರು ಹೊರಗಡೆಯಿಂದ ಕಲ್ಲು ಇಟ್ಟಿಗೆ, ಹಳೇ ಪಾಪಾಸು ಎಕ್ಕಡ ಇವುಗಳನ್ನು ಆಮೀಲನ ಮನೆಮೇಲೆ ಬೇಕಾದಷ್ಟು ಎಸೆದರು. ಗೂಡನ್ನು ಬಿಟ್ಟು ಚದರಿಹೋದ ಬಡಹಕ್ಕಿಗಳು ಹಾರಾಡುವ ಹಾಗೆ ಜೋಡು ಹಾರಾಡಿತು. ಮಚ್ಚಿನ

ಮೇಲಿನ ಕಿಟಕಿಯೊಳಗಿನಿಂದ ಕಲ್ಲು ಸಗಣಿ, ಮೊದಲಾದ ಕೆಟ್ಟ ಪದಾರ್ಥಗಳು ಒಳಕ್ಕೆ ಆಮೀಲರ ಸಮೀಪಕ್ಕೆ ಬಂದುಬಿದ್ದವು. ಉಪ್ಪಲಿಗರ ಹೆಂಗಸರು ಗುಂಪುಸೇರಿಕೊಂಡು, ಆಮೀಲನ ಮನೆಮುಂದೆ ಬಂದುನಿಂತು ಮನಸ್ಸು ಬಂದಹಾಗೆ ಬಯ್ಯುತ್ತಾ ಉಟ್ಟ ಸೀರೆಯ ನೆರಿಯನ್ನು ಕೈಯಲ್ಲಿ ಹಿಡಿದು, ಕೈಯನ್ನು ಮೇಲಕ್ಕೂ ಕೆಳಕ್ಕೂ ಅಲ್ಲಾಡಿಸುತ್ತಾ ಅತ್ಯಂತ ಆಭಾಸವಾಗಿ ನಡೆದುಕೊಂಡರು. ಊರೆಲ್ಲಾ ಗಡಗಡನೆ ನಡುಗಿಹೋಯಿತು. ಮೂರು ದಿವಸದವರೆಗೆ ಯಾರೂ ಮನೆಬಾಗಿಲನ್ನು ತೆಗೆಯಲಿಲ್ಲ. ಕೊನೆಗೆ ಮೈಸೂರಿನಿಂದ ಬಾರು ಸಿಪಾಯಿಗಳೂ ಸಿಲೇದಾರರ ಕುದುರೆಯವರೂ ಬಂದು ಈ ದೊಂಬಿಯನ್ನು ಸಮಾಧಾನ ಮಾಡಿದರು. ಸರ್ಕಾರದ ಉದ್ಯೋಗಸ್ಥರ ಅವಿವೇಕದಿಂದಲೂ ಅವರ ದುರಾಶೆಯಿಂದಲೂ ಇಂಥಾ ಅನಾಹುತ ನಡೆಯಿತೆಂದು ಎದುರೆದುರಿಗೇ ಜನರೆಲ್ಲಾ ಆಡಿಕೊಳ್ಳುವ ಮಟ್ಟಿಗೆ ಅಧಿಕಾರಿಗಳ ಬಾಳು ಅಬ್ಬೆಯಾಯಿತು. ಈ ಅವಾಂತರದಲ್ಲಿ ಆಮೀಲನ ತಲೆ ಹೋಗುತ್ತೆಂದು ಜನರೆಲ್ಲಾ ತಿಳಿದಿದ್ದರು.

ಈ ದೊಂಬೀ ವಿಚಾರವು ಕೃಷ್ಣರಾಜ ಒಡೆಯರವರೆಗೂ ತಿಳಿಯಿತು. ಮೊದಲಿನಿಂದಲೂ ಈ ಆಮೀಲನು ರಾಜಾನುಗ್ರಹಕ್ಕೆ ಪಾತ್ರನಾಗಿದ್ದ ಕಾರಣ ಸಮೀಪದಲ್ಲಿದ್ದ ಅಧಿಕಾರಿಗಳು ಹೆದರಿ ಆಮೀಲನಿಂದ ತಪ್ಪಿಲ್ಲವೆಂದು ಅರಿಕೇ ಮಾಡಿದರು. "ರಮಣ್ಣೈಯ್ಯ ಏನನ್ನೂ ಅರಿತ ಪ್ರಾಣಿಯಲ್ಲ, ಈ ದೊಂಬಿಯನ್ನು ಅವನು ಎಬ್ಬಿಸಿರಲಾರ, ಇದೆಲ್ಲಾ ಕೆಲವು ಪುಂಡುಜನರ ಕೆಲಸವೇ ಸರಿ,'' ಎಂದು ಅಪ್ಪಣೆಯಾಯಿತಂತೆ. ಅರಮನೆಯಲ್ಲಿ ಓಡಾಡಿಕೊಂಡು ಕೃತ್ರಿಮ ಸಂಧಾನವನ್ನು ಮಾಡುತ್ತಾ ಇದ್ದ ಕೆಲವರ ಮುಖೇನ ಈ ಸಂಗತಿಯು ತಿಳಿಯಿತು. ಆಗಿನಿಂದ ಮಾರಮಣರಾಯನ ಡೊಂಕು ನಡತೆ ಹೆಚ್ಚುತ್ತಾ ಇನ್ನೂ ಇತರ ವಿಧದಲ್ಲಿಯೂ ಕಾಣಿಸುತ್ತಾ ಬಂತು. ಇದರ ಫಲ ಮುಂದೆ ಗೊತ್ತಾಗುವುದು.

---

## ೪ನೆ ಅಧ್ಯಾಯ

ಅತ್ತ ಸಂಜವಾಡಿಯಲ್ಲಿ ಸದಾಶಿವದೀಕ್ಷಿತನು ತನ್ನ ತಾಯಿ ಪಾರ್ವತಮ್ಮ ತನ್ನ ಮಗನಾದ ಮಹಾದೇವ ಇವರೊಡನೆ ವಲಸೆ ಬಂದು ನಿಂತು ಮಾವಂದಿರಾದ ನೀಲಕಂಠಜೋಯಿಸರ ಆಸ್ತಿಯನ್ನೆಲ್ಲಾ ರೂಢಿಸಿ ಗೌರವದಿಂದ ಜೀವನ ಮಾಡುತ್ತಾ ಇದ್ದನು. ತಿಮ್ಮಮ್ಮನು ದೊಡ್ಡವಳಾದಳು. ಈಕೆಗೆ ಮಹಾದೇವನ ಮೇಲೆ ಲೋಕದಲ್ಲಿ ಬಲತಾಯಿಗಳಿಗೆ ಇರತಕ್ಕೆ ಅಸೂಯೆ ಏನೂ ಇರಲಿಲ್ಲ ಈ ಹುಡುಗನು ಕೆಂಪಗೆ ಬಹಳ ಲಕ್ಷಣವಾಗಿದ್ದನು. ಅಂಗಾಂಗಗಳೆಲ್ಲಾ ಪ್ರಮಾಣಕ್ಕೆ ಸರಿಯಾಗಿದ್ದವು. ಮುಖ ಸುಂದರವಾಗಿತ್ತು. ಜುಟ್ಟು ಉದ್ದವಾಗಿತ್ತು. ಯಾವಾಗಲೂ ಸೌಮ್ಯವಾಗಿಯೇ ಕಾಣುತಿದ್ದನು. ಯಾರು ನೋಡಿದರೂ ಬಹಳ ಬುದ್ಧಿಶಾಲಿ, ಒಳ್ಳೇ ಪುಣ್ಯವಂತನಾಗಿ ಬದುಕುವ ಲಕ್ಷಣವೆಲ್ಲಾ ಇದೆ, ಎಂದು ಹೇಳುತ್ತಿದ್ದರು. ಎಂಥವರಿಗೂ ಇನ್ನೊಂದು ಸಾರಿ ಈ

ಮಗುವನ್ನು ತಿರುಗಿ ನೋಡೋಣವೆನ್ನುವಹಾಗೆ ಮುಖದಲ್ಲಿ ಹೆಚ್ಚಾದ ತೇಜಸ್ಸು ಇತ್ತು. ಗುಣವೂ ರೂಪಿಗೆ ತಕ್ಕಹಾಗೆಯೇ ಇತ್ತು. ದೊಡ್ಡವರು ಹೇಳಿದಹಾಗೆ ಕೇಳುವುದು, ಎಷ್ಟು ತಿಂಡೀಕೊಟ್ಟರೆ ಅಷ್ಟರಲ್ಲಿಯೇ ತೃಪ್ತಿ, ಹೋರಾಟವಿಲ್ಲ ಮಕ್ಕಳ ಚೇಷ್ಟೆಯನ್ನು ಮಾಡುವುದು ಬೇಡವೆಂದರೆ ಬಿಡುವುದು, ಇವುಗಳೆಲ್ಲಾ ಬಾಲ್ಯದಲ್ಲಿಯೇ ಈ ಮಹಾದೇವನ ಗುಣಗಳಾಗಿದ್ದವು. ಈ ಹುಡುಗನಲ್ಲಿ ತಿಮ್ಮಮ್ಮನಿಗೆ ಬಹಳ ವಿಶ್ವಾಸವಿತ್ತು. ಅವನನ್ನು ಎತ್ತುವುದು, ಆಡಿಸುವುದು, ಬೇಕಾದ ತಿಂಡೀ ಕೊಡುವುದು, ಯಾವಾಗಲೂ ಆದರಿಸುವುದು, ಇದೆಲ್ಲಾ ತಿಮ್ಮುವು ತಾನು ದಿನಚರಿಯಲ್ಲಿಯೂ ಮಾಡಬೇಕಾದ ಕೆಲಸವೆಂದು ಆಚರಿಸುತಿದ್ದಳು ಅವನು ಯಾವ ಕಾರಣದಿಂದಲಾದರೂ ಅತ್ತರೆ, ಇವನಿಗೆ ಸಮಾಧಾನ ಮಾಡುವವರೆಗೂ ಇವಳ ಮನಸ್ಸು ಬಹಳವಾಗಿ ಕಳವಳಗೊಳ್ಳುತ್ತಾ ಇತ್ತು. ಹುಡುಗರು ಹುಡುಗರನ್ನು ಕಂಡರೆ ಸಹಜವಾಗಿ ಇರಿಸಿಕೊಂಡಿರುವ ಅನುರಾಗವನ್ನುವುದಕ್ಕೂ, ಲಕ್ಷಣವಾಗಿ ಇದ್ದದರಿಂದಲೂ ಒಳ್ಳೆ ಸ್ವಭಾವದ ಸೂಚನೆಗಳನ್ನು ತೋರ್ಪಡಿಸುತ್ತಿದ್ದರಿಂದಲೂ ಸಹಜವಾಗಿ ಹುಟ್ಟತಕ್ಕೆ ಅಭಿಮಾನವೆನ್ನುವುದಕ್ಕೂ, ಸಂಬಂಧದಿಂದ ಹುಟ್ಟಿದ ಮಮತೆ ಎನ್ನುವುದಕ್ಕೂ ಕಾರಣವಿತ್ತು. ಈ ಮಗುವಿಗೆ ಕೊಡದೇ ತಾನು ಯಾವ ತಿಂಡಿಯನ್ನೂ ತಿನ್ನುತಾ ಇರಲಿಲ್ಲ ಮಗು ಊಟ ಮಾಡುವವರೆಗೂ ತಾನು ಊಟಮಾಡುತಾ ಇರಲಿಲ್ಲ ಲಾಲಿಸಿದರೆ ಮಕ್ಕಳು, ಪೂಜಿಸಿದರೆ ದೇವರು, ಹೂಡಿದರೆ ಒಲೆ, ಕೂಡಿದರೆ ಗಂಡ, ಮಾಡಿದರೆ ಸಂಸಾರ, ಎಂಬ ಗಾದೆಗೆ ಸರಿಯಾಗಿ ತಿಮ್ಮು ಮಾಡುತ್ತಾ ಇದ್ದ ಲಾಲನೆಯಿಂದ ಆ ಹುಡುಗನಿಗೂ ಅವಳಲ್ಲಿ ವಿಶೇಷವಾದ ಪ್ರೀತಿ ಇತ್ತು. ಮಗುವು ಚಿಕ್ಕಮ್ಮನೆಂದು ಕರೆಯುತ್ತಾ ಅವಳನ್ನು ಯಾವಾಗಲೂ ಎಡೆಬಿಡದೆ ಅವಳ ಹಿಂದೆಯೇ ಓಡಿಯಾಡುತಾ ಇತ್ತು.

ಮಹಾದೇವನಿಗೆ ಅಕ್ಷರಾಭ್ಯಾಸವಾಯಿತು. ಆ ವೂರಲ್ಲಿಯೇ ನಾರಪ್ಪಯ್ಯನೆಂಬ ಒಬ್ಬ ಬ್ರಾಹ್ಮಣನು ಒಂದು ಮಠವನ್ನು ಇಟ್ಟಿದ್ದನು. ಆ ಮಠಕ್ಕೆ ಮಹಾದೇವನನ್ನು ಕಳುಹಿಸಿದರು. ಮಹಾರಾಷ್ಟ್ರವೂ ಈ ನಾರಪ್ಪಯ್ಯನಿಗೆ ಬರುತ್ತಿತ್ತು. ಈಗ ಇಂಗ್ಲಿಷ್ ಭಾಷೆ ಹೇಗೋ, ಆಗ ಮಹಾರಾಷ್ಟ್ರ ಅಥವಾ ಹಿಂದವಿಯು ಹಾಗೆ, ರಾಜಭಾಷೆ ಎನ್ನಿಸಿಕೊಂಡಿತ್ತು. ರಾಜ್ಯಭಾರದಲ್ಲಿ ನಡೆಯುತ್ತಿದ್ದ ಕಾಗದಪತ್ರಗಳೆಲ್ಲಾ ಹಿಂದವಿಯಲ್ಲಿಯೇ ನಡೆಯುತ್ತಿತ್ತು. ಸರ್ಕಾರದ ಉದ್ಯೋಗಗಳು ಹಿಂದವಿ ಬಲ್ಲವರಿಗೇ ಹೆಚ್ಚಾಗಿ ದೊರೆಯುತಿದ್ದವು. ಪುನಹೆ ಸಂಸ್ಥಾನದಲ್ಲಿ ಶ್ರೀಮಂತ ಬಾಜೀರಾಯರು ನೆಲೆಯಾಗಿ ನಿಂತು ಅನೇಕ ರಾಜ್ಯಗಳನ್ನು ಜೈಸಿ ಅಲ್ಲಿ ತಮ್ಮ ಠಾಣ್ಯವನ್ನು ಇರಿಸಿ ತಮ್ಮ ರಾಜ್ಯಭಾರಕ್ರಮವನ್ನೇ ಅಲ್ಲೆಲ್ಲಾ ಪ್ರಚಾರಕ್ಕೆ ತಂದರು; ದೊಡ್ಡ ನವಾಬನೆಂದು ಹೆಸರುಗೊಂಡಿದ್ದ ಹೈದರಲಿಯು ಕೆಲವು ಮರಾಟೀ ಸೀಮೆಗಳನ್ನು ಜೈಸಿ ಮೈಸೂರು ರಾಜ್ಯವನ್ನೆಲ್ಲಾ ತನ್ನ ಸ್ವಾಧೀನಮಾಡಿಕೊಂಡು ತನ್ನ ಕಡೇ ಕರಣೀಕರನ್ನೇ ಇಟ್ಟುಕೊಳ್ಳುವುದಕೋಸ್ಕರವೂ, ಮರಾಟೆಯವರು ಲೆಕ್ಕಾಚಾರದಲ್ಲಿ ಬುದ್ದಿವಂತರೆನ್ನಿಸಿ ಕೊಂಡಿದ್ದರಿಂದಲೂ, ಈ ಸೀಮೆಯ ಅಧಿಕಾರಗಳಿಗೆ ಅಲ್ಲಿನ ಜನರನ್ನು ಹೇರಳವಾಗಿ ತಂದನು. ಅವರು ಹಿಂದವಿಯಲ್ಲಿಯೇ ಸರ್ಕಾರದ ಕಾಗದಪತ್ರಗಳನ್ನು ಇಡುತ್ತಾ ಬಂದರು. ಈ ಭಾಷೆಯು ಟಿಪ್ಪು ಸುಲ್ತಾನನ ದಿವಸದಲ್ಲಿಯೂ ಕೃಷ್ಣರಾಜನ ಒಡೆಯರವರ ರಾಜ್ಯಭಾರದಲ್ಲಿಯೂ ಮತ್ತೂ ವೃದ್ಧಿಗೆ ಬಂತು. ಆದ್ದರಿಂದ ಇದು ರಾಜಭಾಷೆಯೆನಿಸಿಕೊಂಡಿತ್ತು. ಇದನ್ನು ಕಲಿಸುವ ಉಪಾಧ್ಯಾಯರಿಗೆ ಪಂತೋಜಿಗಳೆಂದು ಹೆಸರು. ಇತರ ಕನ್ನಡ

ಉಪಾಧ್ಯಾಯರಿಗಿಂತಲೂ ಇವರಿಗೆ ಗೌರವ ಹೆಚ್ಚಾಗಿತ್ತು. ಹುಡುಗರೂ ಸಹಿತ ಹೆಚ್ಚಾಗಿ ಬರುತಿದ್ದರು. ಪಂತೋಜಿಗಳ ವರಮಾನವೂ ಹೆಚ್ಚಾಗಿಯೇ ಇತ್ತು. ಈ ಮಠಗಳಿಗೆ ಸಾಲೆ ಎಂದು ಹೇಳುತ್ತಾರೆ. ಹೀಗಿರಲು, ಮಹಾದೇವನಿಗೆ ತಾರಾಬಲವನ್ನು ನೋಡಿ ಒಳ್ಳೇದಿವಸ ಎಣ್ಣೆಶಾಸ್ತ್ರವನ್ನು ಮಾಡಿ ಎರೆದು ಹತ್ತು ಗಂಟೆಮೇಲೆ ಲಗ್ನಕ್ಕೆ ಹನ್ನೊಂದನೆಕಡೆ ಗುರು ಇರಲಿಕ್ಕಾಗಿ, ಅಕ್ಷರಾಭ್ಯಾಸವನ್ನು ಮಾಡಿಸಿದರು. ಮಧ್ಯಾಹ್ನ ಬ್ರಾಹ್ಮಣರಿಗೂ ಮುತ್ತೆದೆಯರಿಗೂ ಸಂತರ್ಪಣೆಯನ್ನು ಮಾಡಿ ರಾತ್ರಿ ಆರತಿ ಅಕ್ಷರತೆ ಮಾಡಿ ಉಂಡೆಚಕ್ಕುಲಿ ಬಾಗಿನವನ್ನು ಕೊಟ್ಟರು. ಮಹಾದೇವನು ದಿನಚರಿಯಲ್ಲಿಯೂ ಬೆಳಗ್ಗೆ ಮಧ್ಯಾಹ್ನ ಸಹಾ ಮಠಕ್ಕೆ ಹೋಗಿ ಉಪಾಧ್ಯಾಯರು ಹೇಳಿದಹಾಗೆ ಕಲಿತುಕೊಳ್ಳುತ್ತಾ ಬಂದನು. ಏಟು ಮುಂಚು ಮಾತು ಹಿಂಚು, ಎಂದುಕೊಂಡು ಹುಡುಗರನ್ನು ಯಾವಾಗಲೂ ಹೊಡೆದು ಹೆದರಿಸುತಾ ಪಾಠಗಳನ್ನು ಹೇಳುತಾ ಇದ್ದ ಈ ಉಪಾಧ್ಯಾಯನ ಕೈಯಿಂದ ಯಾವಾಗಲಾದರೂ ಮಹಾದೇವನಿಗೆ ಒಂದೊಂದು ಪೆಟ್ಟು ಬೀಳುತಿತ್ತು.

ಈ ಪಂತೋಜಿಯು ತನ್ನನ್ನು ಹೊಡೆದಾಗ ಮಹಾದೇವನ ಕಣ್ಣಿನಲ್ಲಿ ಸಾಧಾರಣವಾಗಿ ನೀರು ಬರುತ್ತಾ ಇತ್ತು. ಆದರೆ ಇತರ ಹುಡುಗರನ್ನು ಹೊಡೆಯುವಾಗ ಅವರು ದುಃಖಪಡುವುದನ್ನು ನೋಡಿ ಮಹಾದೇವನು ಬಹಳವಾಗಿ ಅಳುತ್ತಿದ್ದನು. ಇವನನ್ನು ಸಮಾಧಾನಮಾಡುವುದು ಕಷ್ಟವಾಗುತಿತ್ತು. ಒಂದು ದಿನ ಸದಾಶಿವದೀಕ್ಷಿತನು ಮಗನನ್ನು ನೋಡಿ,

ಸದಾಶಿವ - ಯಾಕೆ ಮಗು, ಮಠಕ್ಕೆ ಹೋಗುವುದಿಲ್ಲವೆ?

ಮಹಾದೇವ - ಪಂತರು ಹೊಡೆಯುತ್ತಾರೆ.

ಸದಾ - ನಿನ್ನನ್ನು ಹೊಡೆದರೆ? ಯಾವಾಗ? ಯಾಕೆ?

ಮಹಾ - ಭಾವ, ನನ್ನನ್ನು ಹೊಡೆದರೂ ಹೊಡೆಯಲಿ, ಎಲ್ಲಾ ಹುಡುಗರನ್ನೂ ಹೊಡೆಯುತ್ತಾರೆ. ಆ ಹುಡುಗರು ಅಳುವುದನ್ನು ನೋಡಿದ ನನಗೆ ಏನೋ ಸಂಕಟವಾಗಿ ಕಣ್ಣಿನಲ್ಲಿ ನೀರು ಬರುತ್ತೆ.

ಸದಾ - ಹುಡುಗರು ತಪ್ಪಿದರೆ ಹೊಡೆಯುತ್ತಾರೆ.

ಮಹಾ - ಪಾಠ ಕೊಟ್ಟರೂ ಹೊಡೆಯುತ್ತಾರೆ ಇಲ್ಲದಿದ್ದರೂ ಹೊಡೆಯುತ್ತಾರೆ, ತುಂಟತನ ಮಾಡಿದರೂ ಹೊಡೆಯುತ್ತಾರೆ, ಇಲ್ಲದಿದ್ದರೂ ಹೊಡೆಯುತ್ತಾರೆ.

ಸದಾ - ಅದು ಹೇಗೆ?

ಮಹಾ - ಹಾಗಾದರೆ ಹೇಳುತೇನೆ ಕೇಳು. ಹುಡುಗರು ಏನಾದರೂ ತಿಳಿಯದೇ ಹೋದಾಗ ಪಂತರನ್ನು ಕೇಳಿದರೆ ಅಂಥಾ ಹುಡುಗರನ್ನು ಚೆನ್ನಾಗಿ ಹೊಡೆಯುತ್ತಾರೆ. ಕೇಳಿದ್ದನ್ನು ಹೇಳಿಕೊಡುವುದೂ ಇಲ್ಲ ಯಾರಾದರೂ

ಹುಡುಗರು ಗಟ್ಟಿಯಾಗಿ ಕೂಗಿ ಗದ್ದಲ ಮಾಡಿದರೆ ತಮ್ಮ ಜಗಲೀಮೇಲಿನಿಂದ ದುಮಿಕಿ ಬಂದು ಹತ್ತರ ಯಾವ ಹುಡುಗ ಕೈಗೆಸಿಕ್ಕುತಾನೋ ಅವನನ್ನೇ ಹಿಡಿದು ಹೊಡೆಯುತ್ತಾರೆ. ತಪ್ಪಿಲ್ಲದಿದ್ದರೂ ಹೊಡೆಯುತ್ತಾರೆ.

ಸದಾ - ನಾನಲ್ಲ ಎಂದು ಆ ಹುಡುಗ ಹೇಳಬೇಕು.

ಮಹಾ - ಹಾಗೆ ಅವ ಅಂದರೆ ಅವನ ಆಶೆಯೇ ಇಲ್ಲ, ಬೆತ್ತ ಮುರಿಯ ಹೊಡೆಯುತ್ತಾರೆ. ಅದೂ ಸಾಲದೆ ಮುಷ್ಟಿಯಿಂದ ತಲೆಯಮೇಲೆ ಮಟ್ಟಿ ಮಟ್ಟಿ ತಲೆಯನ್ನೆಲ್ಲಾ ಹರಳಕಾಯಿ ಮಾಡುತ್ತಾರೆ. ಹೆಚ್ಚಾಗಿ ರೋಷದಿಂದ ಹಿಂತಿರುಗಿ ತಿರುಗಿ ಬಂದು ಮೊಳಕೈಯಿಂದ ತಲೆಯ ಮೇಲೂ ಬೆನ್ನ ಮೇಲೂ ಕುಕ್ಕುತಾರೆ, ಕಿವಿಹಿಡಿದು ಮೇಲಕ್ಕೆ ಎತ್ತುತ್ತಾರೆ, ಒಳಸುಂಟಿಗಳಂತೂ ಗೊತ್ತೇ ಇಲ್ಲ, ಆ ಗೋಳನ್ನು ನಾನು ನೋಡಲಾರೆ ಭಾವ.

ಸದಾ - ಇಷ್ಟೇ ತಾನೆ!

ಮಹಾ - ಇನ್ನೂ ಹೇಳುತೇನೆ ಕೇಳು, ಮಧ್ಯಾಹ್ನದಲ್ಲಿ ಬಂದು ಅವರ ಜಗಲೀಮೇಲೆ ಹಾಕಿರುವ ಚಾಪೇಮೇಲೆ ಕೂತುಕೊಂಡು ತೂಕಡಿಸುತ್ತಾರೆ. ಆಮೇಲೆ ಗೊರ್ ಗೊರ್ ಎಂದು ನಿದ್ರೆಮಾಡುತ್ತಾರೆ. ಆಗ ಹುಡುಗರೆಲ್ಲಾ ಪಿಸಪಿಸನೆ ಮಾತನಾಡುತ್ತಾರೆ. ಸಿದ್ದ ಎನ್ನುವ ಹುಡುಗ ಇದಾನೆ. ಇವನು ಪಂತರಿಗೆ ನಿತ್ಯವೂ ಬೆಳಗ್ಗೆ ಒಂದು ಕಾಸಿನ ನೆಸ್ಯ ಮಧ್ಯಾಹ್ನದ ಮೇಲೆ ಎಲೆ ಅಡಕೆ ತಂದುಕೊಡುತ್ತಾನೆ. ಇವನು ಏನ ಮಾಡಿದರೂ ಪಂತರು ಇವನನ್ನು ಹೊಡೆಯುವುದಿಲ್ಲ ಹುಡುಗರೆಲ್ಲಾ ಇವನಿಗೆ ತಿಂಡೀ ತಂದುಕೊಡಬೇಕು. ಇಲ್ಲದಿದ್ದರೆ ಪಂತರಸಂಗಡ ಸುಮ್ಮಸುಮ್ಮನೆ ಚಾಡಿ ಹೇಳುತ್ತಾನೆ. ತಾನೇ ಹುಡುಗರನ್ನು ಚಿವುಟುವುದು ಅವರು ಚಿವುಟಿದರೆಂದು ತಾನೇ ಅವರ ಮೇಲೆ ಚಾಡಿ ಹೇಳುವುದು. ಹೀಗೆಲ್ಲಾ ಏನೇನೋ ತುಂಟತನ ಮಾಡುತ್ತಾನೆ. ಈ ಸಿದ್ದನು ಅವ ಬೈದ ಇವ ಉಗುಳಿದ ಅಂತ ಸುಳ್ಳು ಸುಳ್ಳು ಕೂಗುತ್ತಾನೆ. ಆಗ ಪಂತರು ನಿದ್ದೆ ಗಣ್ಣಿನಲ್ಲಿಯೇ ಎದ್ದು ಬಂದು ಬೆತ್ತದಿಂದ ಎಲ್ಲರನ್ನೂ ನಾಲ್ಕು ನಾಲ್ಕು ಏಟು ಹೊಡೆಯುತ್ತಾರೆ. ಸಿದ್ದನ್ನ ಹೊಡೆಯುವುದಿಲ್ಲ, ಚಾಡೀ ಹೇಳುವವರನ್ನು ಹೊಡೆಯುವುದಿಲ್ಲ. ಉಳಿದವರೆಲ್ಲರಿಗೂ ಏಟು.

ಸದಾ - ನಿನ್ನನ್ನು ಹಾಗೆ ಹೊಡೆದರೆ?

ಮಹಾ - ನಿತ್ಯವೂ ಹೊಡೆಯುತ್ತಾರೆ. ಬೆಳಗ್ಗೆ ಎದ್ದು ಬೆಕ್ಕಿನ ಮುಖ ನೋಡಬೇಡ, ಉಪಾದ್ರು ಹೊಡೆಯುತ್ತಾರೆ ಎಂದು ಅಜ್ಜಿ ಹೇಳಿದಾಳೆ. ನಾನು ಬೆಕ್ಕಿನಮುಖ ನೋಡುವುದೇ ಇಲ್ಲ ಆದರೂ ನನಗೆ ಏಟು ಬೀಳುತ್ತೆ. ರಾತ್ರೆ ಬಾಯಿಪಾಠ ಮುಗಿದಮೇಲೆ ಹುಡುಗರಿಗೆ ಮಾನ್ಯ ಸೊನ್ನೆ ಹಾಕುವಾಗುವಂತೂ ಗೊತ್ತೇಯಿಲ್ಲ ಮೊನ್ನೆ ಬೆಳಿಗ್ಗೆ ನಾನು ಮೊದಲು ಮಠಕ್ಕೆ ಹೋದೆ. ಆಮೇಲೆ ಎಲ್ಲಾ ಹುಡುಗರೂ ಬಂದರು. ನಾನು ಅವಲಕ್ಕಿಪುರಿ ಕೊಡಲಿಲ್ಲ ಅಂತ ಸಿದ್ದ - ಮಹಾದೇವ ಹದಿನೈದನೆಯವನು ಎಂದು ಸುಳ್ಳಾಗಿ ಕೂಗಿದ. ಪಂತರು ನನ್ನನ್ನು ಕೇಳದೆ, ನನಗೆ ಹದಿನೈದು ಏಟುಗಳನ್ನು ಬಲವಾಗಿ ಹೊಡೆದರು. ಕೈ ಊಟ ಮಾಡುವುದಕ್ಕಾಗುವುದಿಲ್ಲ.

ಸದಾ - ಹಾಗೆ ಹೊಡೆಯಬೇಡಿ ಎಂದು ನಾನು ಹೇಳುತ್ತೇನೆ, ಸುಮ್ಮನಿರು.

ಮಹಾ - ನಾಳೆಯಿಂದ ನಾನು ಮನೆಯಲ್ಲಿಯೇ ಓದುತೇನೆ, ಪಾಠವನ್ನೆಲ್ಲಾ ನಿನ್ನ ಹತ್ತರ ಸರಿಯಾಗಿ ಒಪ್ಪಿಸುತೇನೆ.

ಸದಾ - ಹಾಗೆ ಮಾಡಬಾರದು. ಮಠಕ್ಕೆ ಹೋಗಬೇಕು.

ಮಹಾ - ಅಲ್ಲಿಗೆ ಹೋದರೆ ನನಗೆ ಅಳು ಬರುತ್ತೆ. ನನ್ನನ್ನು ಹೊಡೆದರೂ ಹೊಡೆಯಲಿ, ಚಿಕ್ಕಹುಡುಗರನ್ನೆಲ್ಲಾ ಬಹಳವಾಗಿ ಹಿಂಸೆಮಾಡುತಾರೆ. ತಪ್ಪಿರಲಿ ಇಲ್ಲದೇ ಇರಲಿ, ಹುಡುಗರನ್ನು ಕೋದಂಡಕ್ಕೆ ಎತ್ತಿ ತೂಗಕಟ್ಟಿ ಕಾಲಮೇಲೆ ಹೊಡೆಯುತ್ತಾರೆ. ಗುಗ್ಗರಗೋಲುಹಾಕಿ ಹಿಂದುಗಡೆ ಮೆಣಸಿನಕಾಯ ಹೊಗೆ ಹಾಕುತ್ತಾರೆ. ಗೋಡೆಗೆ ಕುರುಚಿ ಕೂರಿಸಿ ಹಲಗೆ, ಚಪ್ಪಡೇಕಲ್ಲು ಏನು ಸಿಕ್ಕಿದರೆ ಅದನ್ನು ತಂದು ಸೇರುತ್ತಾರೆ. ಆ ಹುಡುಗರು ಅಳುವುದನ್ನು ನೋಡಿದರೆ ನನಗೂ ಬಹಳವಾಗಿ ಅಳುಬರುತ್ತೆ. ನನ್ನ ಮುಖವನ್ನು ಪಂತರು ನೋಡಿ - ನೀನು ಯಾಕೆ ಅಳುತೀಯಲಾ ಎಂದು ಕೂಗುತಾ ಬೆತ್ತದಿಂದ ನನ್ನನ್ನು ಸೆಳೆಯುತ್ತಾರೆ. ಪುಂಡಮಾತ ಬೈಯುತಾರೆ.

ಸದಾ - ನಾನು ಪಂತರನ್ನು ಕಂಡು ಹೊಡೆಯಬೇಡಿ ಎಂದು ಹೇಳುತೇನೆ. ನೀನು ಈ ದಿವಸ ಹೋಗಿಬಾ.

ಹೀಗೆ ತಂದೆ ಮಕ್ಕಳು ಮಾತನಾಡುತ್ತಾ ಇರುವಾಗ, ಮಠದಿಂದ ಇಬ್ಬರು ಹುಡುಗರು ಬಂದು - ಮಹಾದೇವ, ಯಾಕಪ್ಪ ಮಠಕ್ಕೆ ಬರಲಿಲ್ಲ? ಪಂತರು ಕರೆದುಕೊಂಡು ಬರಹೇಳಿದರು, ನಿಮಗೆ ಆಗುತ್ತೆ ಬನ್ನಿ ಎಂದರು. ಆಗ ಮಹಾದೇವನು ಅಳುತಾ ತಂದೆಯ ಮುಖವನ್ನು ನೋಡಿ ಬಿಕ್ಕಳಿಸುತ್ತಾ ನಿಂತುಕೊಂಡನು. ಆಗ ಸದಾಶಿವದೀಕ್ಷಿತನು ತನ್ನ ಮನಸ್ಸಿನಲ್ಲಿ - ಅಯ್ಯೋ, ಈ ಉಪಾಧ್ಯಾಯನು ಯಾಕೆ ಹೀಗೆ ಹುಡುಗರನ್ನು ಹೊಡೆಯುತಾನೋ ತಿಳಿಯದಲ್ಲ ಹೊಡೆದರೆ ವಿದ್ಯೆ ಬರುತ್ತೆಯೇ? ಮಕ್ಕಳು ಇದ್ದದ್ದೂ ಮೊಂಡಿಗೆ ಬೀಳುತ್ತಾರೆ. ಅವರಿಗೆ ಪೆಟ್ಟಿನ ಭಯದಲ್ಲಿ ಬಂದದ್ದೂ ಮರೆತು ಹೋಗುತ್ತೆ, ಎಂದುಕೊಳ್ಳುತಾ ಮಠದ ಹುಡುಗರನ್ನು ಕುರಿತು - ಎಲ ಹುಡುಗರ, ನಮ್ಮ ಮಹಾದೇವನನ್ನು ಹೊಡೆಯಬೇಡಿ ಎಂದು ಪಂತರಿಗೆ ಹೇಳಿ, ನಾನು ಹೇಳಿದರು ಎಂದು ಹೇಳಿ, ಹೀಗೆಂದು ಮಹಾದೇವನನ್ನು ಸಾಲೆಗೆ ಕಳುಹಿಸಿದನು. ಪಂತನು ಮಠದ ಬಾಗಿಲಲ್ಲಿ ಉದ್ದವಾದ ಸಂಣ ಬೆತ್ತವನ್ನು ಹಿಡಿದು ಅಳ್ಳಾಡಿಸುತಾ ದೂರದಲ್ಲಿಯೇ ಹುಡುಗರ ಸಂಗಡ ಮಹಾದೇವ ಬರುವುದನ್ನು ಕಂಡು - ಎಳೆದುಕೊಂಡು ಬನ್ನಿರೋ ಅವನನ್ನ ಎಷ್ಟು ಹೊತ್ತು ಬರುವುದು? ಎಂಬುದಾಗಿ ಆಲಿ ಅಬ್ಬರಿಸುತಾ ಮಹಾದೇವನನ್ನು ಮನಸ್ಸು ಬಂದಹಾಗೆ ಬೆತ್ತದಿಂದ ಹೊಡೆಯಲು ಆರಂಭಿಸಿ - ನಿನ್ನನ್ನು ಮಠದಲ್ಲಿ ಗುಂಡೀತೋಡಿ ಹೂಳಿಬಿಡುತ್ತೇನೆ, ಎಂದನು. ಆಗ ಮಹಾದೇವನನ್ನು ಕರೆದು ತಂದ ಹುಡುಗರು - ಪಂತರೆ, ಮಹಾದೇವನ ಅಪ್ಪ ನಿಮಗೆ ಹೇಳು ಎಂದರು. ಹೊಡೆಯಬೇಡಿಯಂತ ಹೇಳು ಎಂದು ಹೇಳಿದರು. ಅದಕ್ಕೆ ನಾರಪ್ಪಯ್ಯನು - ಶಿಪಾರ್ಶಿ ತಂದೆಯೇನೋ ಶಿಪಾರ್ಶಿ? ಎನ್ನುತಾ ಮಹಾದೇವನನ್ನು ಇನ್ನೂ ಎರಡು ಏಟು ಹೆಚ್ಚಾಗಿ ಹಾಕಿದನು. ಮಹಾದೇವನು ಹೊಡೆತವನ್ನು ತಾಳಲಾರದೆ ಸಂಕಟಪಡುವುದನ್ನು ಕಂಡು ಮಠದ ಹುಡುಗರೆಲ್ಲಾ - ಇಂಥಾ ಒಳ್ಳೆ

ಹುಡುಗನನ್ನು ಹೀಗೆ ಅನ್ಯಾಯವಾಗಿ ಹೊಡೆದರಲ್ಲಾ ಎಂದು ಅಳುತ್ತಾ ಇರುವ ಮಹಾದೇವನ ಮುಖವನ್ನು ನೋಡಿ ಸಹಿಸಲಾರದೆ ತಾವೂ ಅಳುವವರ ಹಾಗೆ ಮುಖರಸವನ್ನು ತೋರಿಸುತಾ ಪರಿತಾಪ ಪಡುತಾ, ತಮ್ಮೊಳಗೆ ಗುಸಗುಸನೆ ಏನೋ ಮಾತನಾಡಿಕೊಳ್ಳುತ್ತಿದ್ದರು. ಆ ದಿವಸವೆಲ್ಲಾ ಪಂತನ ಕೋಪ ಇಳಿಯಲೇ ಇಲ್ಲ, ಮಧ್ಯಾಹ್ನದಲ್ಲಿ ಹಲಗೇ ಬರೆಯುವ ಹುಡುಗರಿಗೆ ಕೈ ಬೆರಳ ಗಿಂಣುಗಳ ಮೇಲೆ ಏಟು ಬಿತ್ತು. ಕರಡು ಎಂದರೆ ಕಾಗದದ ಮೇಲೆ ಬರೆದು ಮಸುಕು ಮಾಡುವ ಹುಡುಗರಿಗೆ ಲೆಕ್ಕಣಿಕೆಯಲ್ಲಿ ಚೆನ್ನಾಗಿ ಪೆಟ್ಟುಬಿತ್ತು. ಮರಳ ಮೇಲೆ ಬರೆಯುವ ಚಿಕ್ಕ ಹುಡುಗರ ಬೆನ್ನಿನಮೇಲಂತೂ ಬೆತ್ತ ಸೀಳಿ ಮುರಿದುಹೋಗುವ ಮಟ್ಟಿಗೂ ಛಡಿಯಾಗಿ ಹೋಯಿತು. ಎಲ್ಲಾ ಬಾಲಕರಿಗೂ ಆ ದಿವಸ ಪ್ರಾಯಶ್ಚಿತ್ತವಾಯಿತು. ಎಲ್ಲರಿಗೂ ಮೈಯೆಲ್ಲಾ ಬಾಸುಂಡೆ ಬಂತು.

ತರುವಾಯ ಪ್ರದೋಷ ಬಂತು. ಸಾಯಂಕಾಲದಲ್ಲಿ ಎಂದಿನಂತೆ ಸರಸ್ವತೀ ಪೂಜೆ ಮೊದಲಾದ್ದು ಜರುಗಿತು. ವಾಡಿಕೇಮೇರೆ ಕಾಗದ ಪುಸ್ತಕ ಓದುವ ಹುಡುಗರು ತಲೆಗೆ ಒಂದು ದುಡ್ಡನ್ನೂ ಹಲಗೇ ಬರೆಯುವವರು ಮೂರು ಕಾಸನ್ನೂ ನೆಲದಮೇಲೆ ಪಳ್ಳಿ ಬರೆಯುವವರು ಎರಡು ಕಾಸನ್ನೂ ತಂದು ಪಂತರಿಗೆ ಆ ದಿವಸಕೊಟ್ಟು ಶಾರದಾಪೂಜೆಯನ್ನು ಮಾಡಿದರು. ಪಂತರಿಗೆ ಆ ದಿನ ಸಾಯಂಕಾಲ ಬಹಳ ಸಂತೋಷವಾಯಿತು. ಆಗ ಆ ಹುಡುಗರೆಲ್ಲಾ - ಪಂತರೇ, ನಾಳೆಯಿಂದ ಮೂರು ದಿವಸ ಅನಧ್ಯಯನ, ಸಾಲೆಯಿಲ್ಲ. ಮಠದಲ್ಲಿ ಕಸ ಹೆಚ್ಚಾಗಿದೆ, ಈ ಮೂರುದಿವಸದೊಳಗಾಗಿ ಗುಡಿಸಿ ಸಾರಿಸಿ ಚೊಕ್ಕಟ ಮಾಡುತ್ತೇವೆ ಎಂದರು. ನಾರಪ್ಪಯ್ಯನು ಹಾಗೇ ಆಗಲಿ ಎಂದು ಒಪ್ಪಿಕೊಂಡು ಮನೆಗೆ ಹೊರಟುಹೋದನು.

ರೂಪಿನಲ್ಲಿ ಲಕ್ಷಣವಾಗಿಯೂ, ಬುದ್ಧಿಯಲ್ಲಿ ವಿಶೇಷವಾಗಿ ಪಟುವಾಗಿಯೂ, ಗುಣದಲ್ಲಿ ಹೆಚ್ಚಾದ ಸಾತ್ವಿಕ ಸ್ವಭಾವವುಳ್ಳವನಾಗಿಯೂ, ಇದ್ದ ಮಹಾದೇವನಿಗೆ ಬಿದ್ದ ಏಟಿನ ಪ್ರಸ್ತಾಪವನ್ನು ಪದೇಪದೇ ಮಠದ ಹುಡುಗರೆಲ್ಲಾ ಹೊರಗೂ ಮನೆಯಲ್ಲಿಯೂ ಮಾತನಾಡಿಕೊಳ್ಳುತ್ತಾ ಇದ್ದರು. ಪಂತರು ಇತರ ಹುಡುಗರಿಗೆ ಕೊಟ್ಟ ಏಟೂ ಅವರು ಸಂಕಟ ಪಡುವುದೂ ಸಹಿತ ಈ ಸಂದರ್ಭದಲ್ಲಿ ಜ್ಞಾಪಕಕ್ಕೆ ಬರತಕ್ಕದ್ದು ಸಹಜವಾಗಿಯೇ ಇದೆ. ಈ ಹುಡುಗರಲ್ಲಿ ಬಸವನೆಂಬ ಸುಮಾರು ಹದಿನೆಂಟು ವರುಷದ ಒಬ್ಬ ಹುಡುಗನಿದ್ದನು. ಇವನು ಆಗಾಗ್ಗೆ ಮಠಕ್ಕೆ ಬಾರದೆ ತಪ್ಪಿಸಿಕೊಂಡು ಓಡಿ ಹೋಗುತಿದ್ದ ಕಾರಣ, ಇವನ ಕಾಲಿಗೆ ಒಂದು ಕಬ್ಬಿಣದ ಸರಪಣಿಯನ್ನು ಹಾಕಿ ಅದರ ಕೊನೆಗೆ ಒಂದು ಬಲವಾದ ಹುಣಿಸೇ ಕೊರಡನ್ನು ತಗಲಿಸಿದ್ದರು. ಇವನು ತುಂಟ ಹುಡಗರಲ್ಲಿ ಅಗ್ರಗಣ್ಯನಾಗಿದ್ದನು. ಯಾವ ಕೆಟ್ಟತನಕ್ಕೂ ಗಣೇಶನ ಪೂಜೆ ಇವನದೇ ಆಗಿತ್ತು. ಈ ಪಂತೋಜಿಯ ಕೈಯಿಂದ ಬಗೆಬಗೆಯಾದ ಹಲವು ಶಿಕ್ಷೆಗಳನ್ನು ಹೊಂದಿ ಈ ಬಸವನ ಮೈ ಜಡ್ಡು ಕಟ್ಟಿಹೋಗಿತ್ತು. ಇವನು ಇತರರನ್ನು ಕುರಿತು - ಈ ಸರಪಣಿಯನ್ನೂ ಕೊರಡನ್ನೂ ಏನಾದರೂ ಮಾಡಿ ನೀವೆಲ್ಲಾ ತೆಗೆಯಿಸಿಬಿಟ್ಟರೆ, ಈ ಹಾಳ ಪಂತನಕಾಟ ಯಾರಿಗೂ ಇಲ್ಲದಂತೆ ನಾನು ಉಪಾಯವನ್ನು ಹೇಳುತ್ತೇನೆ ಎಂದನು. ಪಡ್ಡೆ ಹುಡಗರೆಲ್ಲಾ ಸೇರಿ ಇದಕ್ಕೆ ಒಪ್ಪಿ ಚೆಂಡಾಡುವ ನೆವದಲ್ಲಿ ಹೊಲಗಳಿಗೆ ಹೋಗಿ ತಕ್ಕ ಪ್ರಯತ್ನದಿಂದ ಬಸವನ ಕಾಲಿಗೆ ಹಾಕಿದ್ದ ಕೊರಡನ್ನು ಕಡಿದು, ಸರಪಣಿಯ ಕೊಂಡಿಯನ್ನು ಮುರಿದುಬಿಟ್ಟರು. ಬಸವನ ಕಾಲಲ್ಲಿದ್ದ ಸಂಕೋಲೆ ತಪ್ಪಿ ಹೋಯಿತು. ಇವನನ್ನು ಮುಂದಾಳಾಗಿ

ಮಾಡಿಕೊಂಡರು. ಇವರೆಲ್ಲರೂ ಸೇರಿ ಮಠವನ್ನು ಚೆನ್ನಾಗಿ ಸಾರಿಸಿ ಗುಡಿಸಿದರು. ರಂಗವಲ್ಲಿಯನ್ನು ಹಾಕಿದರು. ಪಂತೋಜಿಯು ಕೂತುಕೊಳ್ಳುವುದಕ್ಕೆ ವಿಸ್ತಾರವಾಗಿ ಚೌಕನಾಗಿರತಕ್ಕ ಒಂದು ಜಗಲಿ ಇತ್ತು. ಪಂತನು ತನ್ನ ನೆಸ್ಯದ ಸಿಂಬಳವನ್ನು ಒರೆಯಿಸಿ ಒರೆಯಿಸಿ ಪಕ್ಕದ ಗೋಡೆಯೆಲ್ಲಾ ಕರಗಾಗಿತ್ತು. ಪಂತನು ಕೂತುಕೊಳ್ಳುವ ಹಳೇ ಚಾಪೆಯ ಕೆಳಗೆ ಅವನು ಸೀತ ಸಿಂಬಳವು ಹೆಚ್ಚಾಗಿ ಕರೆಕಟ್ಟಿತ್ತು. ಹುಡುಗರು ಆ ಚಾಪೆಗೆ ಬದಲಾಗಿ ಬೇರೆ ಹೊಸ ಚಾಪೆಯನ್ನು ತಂದುಹಾಕಿ ಪಕ್ಕದ ಗೋಡೆಗೆ ಸುಣ್ಣವನ್ನು ತೊಡೆದು ದಿಟ್ಟನಾಗಿ ಮಾಡಿದರು.

ತ್ರಯೋದಶಿಯ ದಿವಸ ಪಂತನು ಮಹಾದೇವನನ್ನು ಹೊಡೆದಿದ್ದಕ್ಕೆ ಮೈಯೆಲ್ಲಾ ಬಾಸುಂಡೆಯಾಗಿ ರಕ್ತ ಉಮ್ಮಿಕೊಂಡು ಬರುತಿತ್ತು. ಈ ಹುಡುಗನು ಬಿಕ್ಕಳಿಸಿ ಬಿಕ್ಕಳಿಸಿ ಕೊಂಡು ಗೊಳೋ ಎಂದು ಅಳುತಾ ಮನೆಗೆ ಬಂದನು. ಇವನ ಸ್ಥಿತಿಯನ್ನು ನೋಡಿ ಅಜ್ಜಿಯಾದ ಪಾರ್ವತಮ್ಮನು ಅಳುವುದಕ್ಕೆ ಆರಂಭಿಸಿದಳು. ಇವನನ್ನು ಮಗುವಿನಿಂದಲೂ ಎತ್ತಿ ಆಡಿಸಿ ಹೆಚ್ಚಿನ ಲಾಲನೆಯಿಂದ ನೋಡಿಕೊಳ್ಳುತಿದ್ದ ತಿಮ್ಮಮ್ಮನ ದುಖವನ್ನು ನೋಡಿ ಸಹಿಸುವುದು ಕಷ್ಟವಾಯಿತು. ತಾಯಿಯಿಲ್ಲದ ಮಗುವನ್ನು ಕಟ್ಟಿಕೊಂಡು ಸಾಕಿ ಸಲಹಿ ಚಿಕ್ಕದನ್ನು ದೊಡ್ಡದಾಗಿ ಮಾಡಿದವರಿಗೆ ಲಕ್ಷಣವಾಗಿ ಗುಣವಂತನಾದ ಹುಡುಗನಲ್ಲಿ ಅಧಿಕವಾದ ವಾತ್ಸಲ್ಯವಿರುವುದು ಅನುಭವಸಿದ್ಧವಾಗಿದೆ. ಆಗ ಹೊರಗಿನಿಂದ ಮನೆಗೆ ಬಂದ ಸದಾಶಿವದೀಕ್ಷಿತನು ಹುಡುಗನ ಸ್ಥಿತಿಯನ್ನು ನೋಡಿ ಕಣ್ಣಿನಲ್ಲಿ ನೀರಹಾಕುವವರೆಗೂ ಒಳಗೆ ಪೇಚಾಡುತಾ ಮಗುವಿಗೆ ಆಗಿದ್ದ ಪೆಟ್ಟಿನ ಗಾಯವನ್ನೆಲ್ಲಾ ನೋಡಿದನು. ಮಗನನ್ನು ವಹಿಸಿಕೊಂಡು ತಾನು ಯಾವ ಮಾತನಾಡಿದರೂ ಉಪಾಧ್ಯಾಯನಲ್ಲಿ ಹುಡುಗನಿಗೆ ಗೌರವ ಕೆಟ್ಟಿತು, ಅಲಕ್ಷ್ಯ ಹುಟ್ಟಿತು, ಹಾಗಾದರೆ ಉಪಾಧ್ಯಾಯ ಏನಹೇಳಿಕೊಟ್ಟಾಗೂ ಅದು ಹುಡುಗನಿಗೆ ಬರುವುದಿಲ್ಲ ಎಂಬ ಯೋಚನೆಯಿಂದ ತನ್ನ ಮಾತಿನಲ್ಲಿಯೂ ರೀತಿಯಲ್ಲಿಯೂ ಮಗನಕಡೆಗೆ ವಾಲದೇ ತೂಕಮಾಡಿದಂತೆ ಮಾತನಾಡುತಿದ್ದ ದೂರದರ್ಶಿಯಾದ ಸದಾ ಶಿವದೀಕ್ಷಿತನಿಂದ ಕೂಡ ಉಪಾಧ್ಯಾಯರ ಮೇಲೆ ಆಕ್ಷೇಪಣರೂಪವಾಗಿ ಹಲವು ಮಾತುಗಳನ್ನು ಆ ತರಳನ ಸ್ಥಿತಿಯು ಹೊರಡಿಸಿತು. ಆಗ ಆತನು ಮಗುವನ್ನು ಇಷ್ಟು ಕಷ್ಟಪಟ್ಟು ಸಾಕಿದ್ದು ಇಲ್ಲಿಗೆ ಬಂತೆ, ಎಂದುಕೊಂಡು ಒಳಗೇ ಸಂಕಟಪಡುತಾ ಮಗುವನ್ನು ಉಪಚರಿಸಿದನು, ಪೆಟ್ಟಿನ ಬಾಧೆಯಿಂದ ಮನೆಯಲ್ಲಿಯೇ ಆಡಿಕೊಂಡು ಚತುರ್ದಶಿ ಆದಿಯಾದ ಮೂರು ದಿವಸವನ್ನೂ ಮನೆಯಲ್ಲಿಯೇ ಕಳೆಯುತ್ತಿದ್ದ ಮಹಾದೇವನಿಗೆ ಬಹುವಾಗಿ ಮನೆಯವರೆಲ್ಲಾ ಉಪಚರಿಸಿದರು. ಪೆದ್ದನಾದ ಕಿಟ್ಟನೂ ಸಹಿತ ಹಾರಾಡುವುದಕ್ಕೆ ಮೊದಲು ಮಾಡಿದನು. ಇವನು ಆಗ - ನಿಮ್ಮ ಮಗೂನ ಆ ಹಾಳ ಮಠಕ್ಕೆ ಕಳಿಸಬೇಡ ಕಣೆ, ಭಾವ ಏನಾದರೂ ಹೇಳಲಿ, ಈ ಕುಂಟು ಪಾದ್ರಿಗೆ ಬುದ್ಧಿಕಲಿಸಿ ಬಿಡುತೇನೆ ಬುದ್ದೀನ, ನನ್ನ ಹೀಗೆ ಹೊಡೆಯುತ್ತಾ ಇದ್ದ ನಾನು ಕಾಲಿಗೆ ಬುದ್ಧಿ ಹೇಳಿದೇ ಕೆಲಸ! ಅಷ್ಟಲ್ಲದೇ ಏನು? ನಮ್ಮ ಮಗುವನ್ನು ಇವನು ಯಾಕೆ ಹೊಡೆಯುವುದು, ಇವನ ಮಗುವನ್ನು ನಾವೇನಾದರೂ ಹೊಡೆದೆವೆ? ಅವನ ಪ್ರತಿಷ್ಠೆ ಅಷ್ಟರಲ್ಲಿಯೇ ಇದೆ. ಇವನ ಧಾರಾಳವನ್ನು ನಾವೇನೂ ಕಾಣೆವೋ? ಅವತ್ತು ಒಂದು ಚಿಟಕಿ ನೆಶ್ಯಾಕೊಡೊ ಎಂದರೆ ಕೊಡಲಿಲ್ಲ, ಕೊಟ್ಟಿದ್ದರೆ ಇವರ ಅಪ್ಪನ ಗಂಟು ಹೋಗುತಿತ್ತೋ! ಭಾವ, ಈ ಉಪಾದ್ರಿ ಮಠಕ್ಕೆ ಮಹಾದೇವನನ್ನು ಕಳುಹಿಸಬೇಡ, ಇನ್ನು ಮೇಲೆ ಮಗೀಗೆ ನಾನು ಎಲ್ಲಾ ಹೇಳಿಕೊಟ್ಟು ಕಲಿಸಿಬಿಡುತ್ತೇನೆ. ಹೀಗೆಂದು ಮನಸ್ವಿ ಹರಟೆಹೊಡೆದನು. ಆಗ

ಸದಾಶಿವದೀಕ್ಷಿತನು ಇವನನ್ನು ಸಮಾಧಾನಮಾಡಿ ಪಂತನಲ್ಲಿ ಹುಡುಗನಿಗೆ ಗೌರವತಪ್ಪದ ಹಾಗೂ ಹುಡುಗನಿಗೆ ಆಪ್ಯಾಯನವಾಗಿರುವ ಹಾಗೂ ಯಾವ ರೀತಿಯಲ್ಲಿ ಮಾತನಾಡಬೇಕೋ ಹಾಗೆ ಮಾತನಾಡಿದನು.

ಅನಧ್ಯಯನ ಕಳೆಯಿತು. ಬಿದಿಗೆ ದಿವಸ ಬೆಳಗ್ಗೆ ಮಹಾದೇವನಿಗೆ ಮುಖವನ್ನು ತೊಳೆದು ತಿಂಡಿಯನ್ನು ಕೊಟ್ಟು - ನೀನು ಮಠಕ್ಕೆ ನಡೆ, ನಾನೂ ನಿನ್ನ ಹಿಂದೆಯೇ ಬರುತೇನೆ, ಹೊಡೆಯಬೇಡಿ ಎಂದು ಪಂತರಿಗೆ ಹೇಳುತ್ತೇನೆ, ನಡೆ - ಎಂದು ಅಂಗಿಯನ್ನು ತೊಡಿಸಿ ದಪ್ತರವನ್ನು ಕೈಗೆ ಕೊಟ್ಟು ಒಳ್ಳೆಮಾತನ್ನು ಹೇಳಿ ತಿರುಗಿ ಮಗನನ್ನು ದೀಕ್ಷಿತನ ಮಠಕ್ಕೆ ಕಳುಹಿಸಿದನು. ದಿನವಹಿ ಹೊತ್ತು ಮಾಡಿಕೊಂಡು ಬರುತ್ತಾ ಇದ್ದ ಹುಡುಗರೆಲ್ಲಾ ಆದಿನ ಬೆಳಗ್ಗೆ ಮಹಾದೇವ ಹೋಗುವುದರೊಳಗಾಗಿ ಮಠಕ್ಕೆ ಬಂದಿದ್ದರು. ಇವನೂ ಹೋಗಿ ಅವರ ಸಂಗಡ ಸೇರಿದನು. ಇವನನ್ನು ನೋಡಿ ಹುಡುಗರು ಬಹಳವಾಗಿ ಉಪಚಾರದ ಮಾತುಗಳನ್ನಾಡಿ ಕನಿಕರವನ್ನು ತೋರಿಸಿದರು. ಯಾರೂ ಮಠದಲ್ಲಿ ಕೂತುಕೊಳ್ಳದೇ ಅಲ್ಲಲ್ಲಿ ನಿಂತಿದ್ದರು. ಬಸವನೇ ಮೊದಲಾದ ಹಿರೀಹುಡುಗರು ಗುಸಗುಸನೆ ಮಾತನಾಡಿಕೊಳ್ಳುತ್ತಾ ಇದ್ದರು.

ಆಗ ಪಂತರ ಸವಾರಿ ಬಂತು. ಆ ದಿನ ನಾರಪ್ಪಯ್ಯನು ಉದ್ದವಾದ ಹೊಸಬೆತ್ತವನ್ನು ಹಿಡಿದು ಅದನ್ನು ಅಳ್ಳಾಡಿಸುತಾ ಮಠಕ್ಕೆ ಬಂದು - ಯಾಕರೆಲಾ, ಓದದೇ ಸುಮ್ಮನೇ ನಿಂತಿದೀರಿ? ಎಂದು ಕೂಗಿ ಸಿಕ್ಕಿದ ಒಬ್ಬಿಬ್ಬರಿಗೆ ಎರಡೇಟು ಕೊಟ್ಟು ತಾನು ಎಂದೂ ಕೂತುಕೊಳ್ಳತಕ್ಕ ಜಗಲೀ ಬಳಿಗೆ ಹೋಗಿ ಅದನ್ನು ಹತ್ತಿದನು. ಸುತ್ತಲೂ ಗೋಡೆಗೆಲ್ಲಾ ಸುಣ್ಣವನ್ನು ತೊಡೆದು ಜಗಲಿಯಮೇಲೆ ಹೊಸಚಾಪೆಯನ್ನು ಹಾಸಿದ್ದರು. ಇದನ್ನು ನೋಡಿ ಸಂತೋಷಪಟ್ಟು - ದಿನವಹಿ ಹೀಗೆ ಚೊಕ್ಕಟವಾಗಿ ಮಾಡುವುದಕ್ಕೆ ನಿಮಗೇನು ಕೇಡುಬಂದಿದೆ? ಎಂದುಕೊಳ್ಳುತ್ತಾ ಎಂದೂ ತಾನು ಕೂತುಕೊಳ್ಳುವ ಸ್ಥಳದಲ್ಲಿ ಕೂತುಕೊಂಡನು. ಅಯ್ಯೋ! ಆಗ ಆ ಪ್ರಾಣಿಗೆ ಸಂಭವಿಸಿದ ವಿಪತ್ತನ್ನು ಏನೆಂದು ವರ್ಣಿಸಲಿ? ಉಪಾಧ್ಯಾಯನು ಕೂತುಕೊಂಡಕೂಡಲೆ ಮೇಲೆ ಹಾಸಿದ್ದ ಹೊಸಚಾಪೆ ದೊಸಕೊಂಡಿತು. ನಾರಪ್ಪಯ್ಯನು ಕಿಟ್ಟನೆ ಕಿರುಚಿಕೊಂಡನು. ದೂರದೂರವಾಗಿ ನಿಂತಿದ್ದ ದೊಡ್ಡ ಹುಡುಗರೆಲ್ಲಾ ಕೂಗದೆ ದುಡದುಡನೆ ಓಡಿ ಹೋದರು. ಉಪಾಧ್ಯಾಯನಿಗೆ ಹೆದರಿಕೊಂಡು ತಮ್ಮ ಮಟ್ಟಿಗೆ ತಾವು ಮಠಕ್ಕೆ ಬಂದಾಗಿನಿಂದ ಓದಿಕೊಳ್ಳುತ್ತಾ ಕೂತಿದ್ದ ಮಹಾದೇವನೇ ಮೊದಲಾದ ೩-೪ ಜನ ಸಣ್ಣ ಹುಡುಗರು ಈ ಕಿರುಚಲನ್ನು ಕೇಳಿ ಗಾಬರಿಯಾಗಿ ಉಪಾಧ್ಯಾಯನ ಜಗಲೀ ಕಡೆ ನೋಡಿದರು. ಕಣ್ಣುಗುಡ್ಡೆ ಮೇಲಕ್ಕೆ ಸಿಕ್ಕಿಕೊಂಡು ಬಾಯಿಯನ್ನು ತೆರೆದುಕೊಂಡು ಹಳ್ಳಕ್ಕೆ ಬಿದ್ದಿದ್ದ ಅವನನ್ನು ನೋಡಿ ಹೆದರಿಕೆಯಿಂದ ತಂತಮ್ಮ ಮನೆಗೆ ಓಡಿಹೋದರು. ಮಠದಲ್ಲಿ ಯಾರೂ ಇಲ್ಲವಾಯಿತು. ಆಗ ಕೂಡಲೆ ಮಹಾದೇವನು ತಮ್ಮ ಮನೆಗೆ ಓಡಿಹೋಗಿ ಪ್ರಾತರಾಹ್ನಿಕವನ್ನು ಮುಗಿಸಿಕೊಂಡು ದೇವತಾರ್ಚನೆಯನ್ನು ಮಾಡಲು ಗಂಧವನ್ನು ತೇಯುತಾ ದೇವರಮನೆಯಲ್ಲಿ ಕೂತಿದ್ದ ತಂದೆಯಮುಂದೆ ಬಂದು ಅಳುತ್ತಾ ನಿಂತುಕೊಂಡನು. ಉಪಾದ್ರಿಯು ಪುನಃ ಹೊಡೆದನೋ ಏನೋ ಆದ್ದರಿಂದ ಮಗುವು ಹೀಗೆ ಹೆದರಿಕೊಂಡು ಗಡಗಡನೆ ನಡುಗುತಾ ಓಡಿಬಂತು, ಎಂದು ಗಾಬರಿಯಾಗಿ - ಯಾಕಪ್ಪ, ಏನಾಯಿತು, ಉಪಾದ್ರಿ ಹೊಡೆದನೆ? ಎಂದು ಕೇಳುತಾ ಹುಡುಗನ ಹಿಂದೆಯ ಮನೆಯವರೆಲ್ಲರೂ ಓಡಿಬಂದರು. ಹುಡುಗನು ಯಾರ ಸಂಗಡಲೂ

ಮಾತನಾಡಲಿಲ್ಲ. ಸುಮ್ಮನೆ ಅಳುತಾ ನಿಂತಿದ್ದನು. ಮಗನನ್ನು ನೋಡಿ ದೀಕ್ಷಿತನು - ಏನಾಯಿತಪ್ಪ, ಯಾಕೆ ಅಳುತೀಯ, ಉಪಾದ್ರು ಹೊಡೆದರೆ? ಎಷ್ಟು ಹೇಳಿದರೂ ಆತನ ಕೆಟ್ಟ ಚಾಳಿಯನ್ನು ಆತ ಬಿಟ್ಟಾನೆ! ಎಂದನು. ಆಗ ಮಹಾದೇವನು - ಹೊಡೆಯಲಿಲ್ಲ ಉಪಾದ್ರು ಜಗಲೀಮೇಲೆ ಹಳ್ಳದೊಳಕ್ಕೆ ಬಿದ್ದಿದಾರೆ, ಒಂದು ಸಾರಿ ಗಟ್ಟಿಯಾಗಿ ಕಿರುಚಿಕೊಂಡರು. ಹುಡುಗರೆಲ್ಲಾ ಮಠದಿಂದ ಓಡಿಹೋದರು, ನಾನೂ ಇನ್ನಿಬ್ಬರು ಹುಡುಗರೂ ಮಾತ್ರ ಜಗಲೀಬಳಿ ಹೋಗಿ ನೋಡಿದೆವು, ಹೆದರಿಕೆಯಾಯಿತು, ನಾವು ಓಡಿಬಂದೆವು, ಅಯ್ಯೋ ಪಾಪ! ಉಪಾದ್ರು ಹಾಗೆ ಬಿದ್ದಿದಾರೆ, ನೀನು ಬಂದು ನೋಡು, ಈಗಲೇ ಬರಬೇಕು ಎಂದನು. ಆಗ ದೀಕ್ಷಿತನು - ಅಯ್ಯೋ ಏನಾಯಿತೋ ಕಾಣೆ, ಆ ಬ್ರಾಹ್ಮಣನಿಗೆ ಇನ್ನು ಯಾರೂ ದಿಕ್ಕಿಲ್ಲವಲ್ಲಾ ಎಂದು ತಾನು ಮಾಡುತ್ತಾ ಇದ್ದ ಕೆಲಸವನ್ನು ಅಲ್ಲಿಯೇ ಬಿಟ್ಟು ಮಠಕ್ಕೆ ಹೋಗಿ ನೋಡಿದನು. ಅಲ್ಲಿ ನೆರೆಹೊರೆಯವರಿಬ್ಬರು ಮಠದ ಬಾಗಿಲಲ್ಲಿ ನಿಂತು - ಒಳ್ಳೇಕೆಲಸವಾಯಿತು, ಅವನು ಹುಡುಗರ ಗೋಳನ್ನು ಹೊಯಿದುಕೊಳ್ಳುತ್ತಾ ಇದ್ದ ಅವರ ಗೋಳೆಲ್ಲಾ ಅವನಿಗೆ ತಟ್ಟಿತು, ಎಂದು ಮಾತನಾಡಿಕೊಳ್ಳುತ್ತಾ ನಿಂತಿದ್ದರು. ಸದಾಶಿವದೀಕ್ಷಿತನು ಮಠದೊಳಕ್ಕೆ ಹೋಗಲು ಆ ಜನರೂ ಬಂದರು. ಅಲ್ಲಿ ನಡೆದಿದ್ದ ಪ್ರಮಾದವನ್ನು ಎಷ್ಟು ವಿವರಿಸೋಣ! ನಾರಪ್ಪಯ್ಯನಿಗೆ ಕಂಬುಗುಡ್ಡೆ ಮೇಲಕ್ಕೆ ಸಿಕ್ಕಿಕೊಂಡು ಹೋಗಿತ್ತು. ಜ್ಞಾನವಿರಲಿಲ್ಲ, ಮೇಲೆಹಾಸಿದ್ದ ಈಚಲ ಚಾಪೆ ಸಹಿತವಾಗಿ ಪಂತನು ಸುಮಾರು ಸೊಂಟದುದ್ದ ದೊಸಕೊಂಡು ಬಿದ್ದಿದ್ದನು. ಕತ್ತು, ಭುಜ, ಬೆನ್ನು ಮಗ್ಗುಲು, ಹಸ್ತ, ಪೃಷ್ಠ ಭಾಗ, ತೊಡೆ, ಮೊಣಕಾಲಕೆಳಗೆ ಮೀನಕಂಡ, ಇದೆಲ್ಲಾ ಕೆಳಗೆ ಬಿದ್ದಿತ್ತು. ಒಂದು ಕೊನೆಯಲ್ಲಿ ತಲೆ ಸ್ವಲ್ಪ ಎತ್ತಿಕೊಂಡಿತ್ತು. ಮತ್ತೊಂದು ಕೊನೆಯಲ್ಲಿ ಪಾದಗಳೆರಡೂ ಹಾದುಕೊಂಡು ನೆಟ್ಟಗೆ ನಿಂತಿತ್ತು. ಮುಖದಮೇಲೂ ಮೈಮೇಲೂ ಎಂಥಾದ್ದೋ ಪುಡಿಬಿದ್ದು ಅದು ಅಲ್ಲಿಯೆಲ್ಲಾ ಚೆಲ್ಲಾಡಿತ್ತು. ಆ ಪುಡಿಯು ಇನ್ನೂ ಸ್ವಲ್ಪ ಸ್ವಲ್ಪವಾಗಿ ಮೇಲಿನಿಂದ ಉದುರುತ್ತಲೇ ಇತ್ತು. ಜಗಲಿಯ ಮೇಲೆ ಹಾಸಿದ್ದ ಈಚಲ ಚಾಪೆಯ ಅಂಚಿನ ಮಧ್ಯೆ ಒಂದುಕೊನೆಗೆ ಹೊಲಿಯುವ ದಾರವನ್ನು ಕಟ್ಟಿ ಅದರ ಇನ್ನೊಂದು ಕೊನೆಯನ್ನು ಒಂದು ಬಟ್ಟೆಗಂಟಿಗೆ ಸುತ್ತಿ ಆ ಗಂಟನ್ನು ಉಪಾದ್ರಿಯ ತಲೆಯಮೇಲೆ ಸರಿಯಾಗಿ ಕಟ್ಟಿದ್ದರು. ಚಾಪೆ ದೊಸಕೊಂಡಕೂಡಲೆ ಸಂಣದಾರ ಕಿತ್ತುಹೋಯಿತು. ಮೇಲುಗಡೆ ಇದ್ದ ಚೀಲದ ಬಾಯಿ ತೆರೆದುಹೋಯಿತು. ಅದರಿಂದ ಸಂಣಹುಡಿ ಸುರಿದು ಚೆಲ್ಲಾಡಿತ್ತು, ಇನ್ನೂ ಸುರಿಯುತ್ತಲೂ ಇತ್ತು. ಸಮೀಪದಲ್ಲಿ ನೋಡುವಾಗ್ಗೆ ನಾರಪ್ಪಯ್ಯನ ಮೈಗೆ ಮುಳ್ಳು ಚುಚ್ಚಿಕೊಂಡಿತ್ತು. ಚಾಪೆಯ ಕೆಳಗೆಲ್ಲಾ ನೆಗ್ಗಲಮುಳ್ಳು ಹರಡಿತ್ತು. ಇದರಿಂದ ಜಗಲಿಯ ಕೊನೆಯಲ್ಲಿ ನಿಂತುಕೊಂಡು ಅವನನ್ನು ಮೇಲಕ್ಕೆ ಎತ್ತುವುದೂ ಕಷ್ಟವಾಗಿತ್ತು. ದೀಕ್ಷಿತನಲ್ಲಿ ಆವೂರ ಜನರಿಗೆಲ್ಲಾ ಹೆಚ್ಚಾದ ಗೌರವವಿದ್ದ ಕಾರಣ, ಈತನ ಮಾತಿನಂತೆ ೧೫-೨೦ ಜನರು ಸೇರಿದರು. ಉಪಾಯವಾಗಿ ನಾರಪ್ಪಯ್ಯನನ್ನು ಮೇಲಕ್ಕೆ ಎತ್ತಿದರು. ಆದರೂ ಅವನಿಗೆ ಮೂರ್ಛೆ ತಿಳಿಯಲಿಲ್ಲ, ಮುಳ್ಳು ಚಾಪೆಯೊಳಗಿನಿಂದ ಹಾದು ದೇಹಕ್ಕೆ ನಾಟಿಕೊಂಡಿತ್ತು. ಮುಳ್ಳು ನಾಟಿಕೊಂಡಿದ್ದ ಕಾರಣ ಚಾಪೆಯನ್ನು ಕೀಳುವುದು ಕಷ್ಟ ಸೂಜಿ ಊರುವುದಕ್ಕೆ ಸ್ಥಳವಿಲ್ಲದಂತೆ ಮುಳ್ಳು ರೋಮ ರೋಮದ ಕುಳಿಗೂ ಬಲಿದಿತ್ತು. ಚಾಪೆಯನ್ನೇ ಕಿತ್ತರೆ ದೇಹದ ಕಂಡವೇ ಕಿತ್ತುಬರುವ ಹಾಗಿತ್ತು. ಒಂದೊಂದು ಮುಳ್ಳನ್ನು ಕೀಳುವುದೂ ಅದಕ್ಕಿಂತಲೂ ಕಷ್ಟವಾಗಿತ್ತು. ಕೆಳಗೆ ಮಲಗಿಸುವುದಕ್ಕಿಲ್ಲ ಕೂರಿಸುವುದಕ್ಕಿಲ್ಲ ಹೀಗೆ ಉಭಯವೇಧೆ ಉಂಟಾಗಿತ್ತು. ದೇಹದ ಮುಂಭಾಗದಲ್ಲಿ ಮುಳ್ಳು

ಬಲಿದಿರಲಿಲ್ಲವಾಗಿ ಆ ಬಡಪಾಯಿಯನ್ನು ಮುಖ ಅಡಿಯಾಗಿ ಮಲಗಿಸಿ ಉಪಾಯವಾಗಿ ಚಿಮ್ಮಟದಿಂದ ಮುಳ್ಳನ್ನು ಒಂದೊಂದಾಗಿ ಕಿತ್ತುಹಾಕಲು ತೊಡಗಿದರು. ಉಪಾದ್ರಿಯ ಬಾಯಿಗೆ ನೀರನ್ನು ತಂದು ದೀಕ್ಷಿತನು ಹಾಕಿ ಕಿವಿಯಲ್ಲಿ ಊದಿದನು. ಸ್ವಲ್ಪ ಪ್ರಜ್ಞೆಬಂತು, ಕಂಣಬಿಟ್ಟನು, ಮುಳ್ಳನ್ನು ಕಿತ್ತಕೂಡಲೆ ರಕ್ತಸುರಿಯಲು ಆರಂಭವಾಯಿತು. ಎಲ್ಲಾ ಕಡೆಗಿಂತಲೂ ಪೃಷ್ಠ ಭಾಗದಲ್ಲಿ ಬಹಳ ಅಪಾಯಕರವಾಗಿತ್ತು. ಆಸನದ್ವಾರಕ್ಕೆ ಉದ್ದವಾದ ಪಾಪಾಸುಕಳ್ಳಿಯ ಮುಳ್ಳು ನಾಟಿಕೊಂಡಿತ್ತು. ಹೀಗೆಹಾಗೆ ಅಲುಗುವುದಕ್ಕೂ ಆಸ್ಪದವಿರಲಿಲ್ಲ, ಆ ಮುಳ್ಳನ್ನು ಬಲವಂತವಾಗಿ ಕಿತ್ತರು. ಅದರಿಂದ ರಕ್ತದ ಪ್ರವಾಹವೇ ಹರಿಯುವುದಕ್ಕೆ ಮೊದಲಾಯಿತು. ಅದುವರೆಗೆ ಪಂತನನ್ನು ಎತ್ತಿ ಇಳಿಸಿ ಒರಗಿಸಿಕೊಂಡು ಹೀಗೆಲ್ಲಾ ಮಾಡಿದವರ ಮೈಕೈಗೆಲ್ಲಾ ಅವನ ಮೇಲೆ ಸುರಿದಿದ್ದ ಪುಡಿಯು ಅಂಟಿಕೊಂಡು ಕಡಿತಕ್ಕೂ ಉರಿಗೂ ಮೊದಲಾಯಿತು. ಎಲ್ಲರೂ ಕೆರೆದು ಸಾಕಾಗಿ ಮೈಕೈಯೆಲ್ಲಾ ಕೆಂಪಗೆ ಗಂದೆಯಾಯಿತು. ಬಟ್ಟೆಗಂಟಿನಲ್ಲಿ ಉಪಾದ್ರಿಯ ಜಗಲೀಮೇಲು ಗಡೆ ಕಟ್ಟಿದ್ದು ತರುವಾಯ ಅವ ದೊಸಗೊಂಡಾಗ ದಾರಕಿತ್ತು ಗಂಟುಬಿಚ್ಚಿ ಹೋಗಿ ಉದುರಿದ ಈ ಹುಡಿಯು ನಸುಗುನ್ನಿಕಾಯಿಯ ಚೂರ್ಣವೆಂದು ಗೊತ್ತು ಮಾಡಿದರು. ಪಂತನ ಮೈಯಲ್ಲಿ ರಕ್ತಸುರಿಯುತ್ತಿರುವ ಗಾಯಕ್ಕೆ ಈ ಪುಡಿ ಸೋಕಿದೊಡನೆಯೇ ಗಾಯದಲ್ಲಿ ಕಡಿತಕ್ಕೆ ಮೊದಲಾಗಿ ಕೆರೆದರೆ ಮೈಯೆಲ್ಲಾ ಒಂದೇ ಹುಂಣಾಗುವ ಸಂಭವವಿತ್ತು. ಅದೆಲ್ಲವನ್ನೂ ಉಪಾಯವಾಗಿ ಕೂಡಿದಮಟ್ಟಿಗೂ ತೆಗೆದರು. ಆದಾಗ್ಯೂ ಆ ಪುಡಿಯು ತನ್ನ ಕೆಲಸವನ್ನು ತಾನು ತೋರಿಸಿಯೇ ಬಿಟ್ಟಿತು. ತಂಣೀರನ್ನು ಹಾಕಿ ಎಲ್ಲವನ್ನೂ ತೊಳೆದರು. ಈ ಬಡ ಉಪಾದ್ರಿಯ ಹೆಂಡತಿ ಹೆರಿಗೆಗೆ ತೌರುಮನೆಗೆ ಹೋಗಿದ್ದಳು, ಇನ್ನು ಯಾರೂ ದಿಕ್ಕಿಲ್ಲದೆ ತಾನೇ ಅಡಿಗೆ ಮಾಡಿಕೊಳ್ಳುತಿದ್ದನು. ಹಬ್ಬ ಹರಿದಿನಗಳಲ್ಲಿ ಅವರಿವರ ಮನೆಗೆ ಔತಣಕ್ಕೆ ಹೇಳುತಿದ್ದರು. ಇಂಥಾ ಅಸಂದರ್ಭಕಾಲದಲ್ಲಿ ಈ ವಿಪತ್ತು ಸಂಭವಿಸಿತು. ಸದಾಶಿವದೀಕ್ಷಿತನು ಹೆಚ್ಚಿನ ಮರುಕದಿಂದ ದುಬಟಿಯ ಜೋಳನೆಯಲ್ಲಿ ಅವನನ್ನು ತನ್ನ ಮನೆಗೆ ಸಾಗಿಸಿಕೊಂಡು ಹೋದನು.

ಇತ್ತ ಉಪಾದ್ರಿಯ ಗದ್ದಿಗೇಮೇಲೆ ನೋಡಲಾಗಿ ಇವನು ಕೂತುಕೊಳ್ಳುತಿದ್ದ ಕಡೆ ದೊಡ್ಡದಾಗಿ ಹಳ್ಳವನ್ನು ತೋಡಿದ್ದರು. ಅದರೊಳಗೆ ಗೊಬ್ಬಳೀಮುಳ್ಳು, ಕೊಳವಳಿಕೇ ಮುಳ್ಳು, ಗುಬ್ಬಿಮುಳ್ಳು, ಇವುಗಳನ್ನು ತಂದು ತುಂಬಿದ್ದರು. ಆ ಪ್ರಾಂತ್ಯದಲ್ಲಿ ಹುಡುಕಿದರೂ ಅಪೂರ್ವವಾಗಿದ್ದ ಪಾಪಾಸುಕಳ್ಳಿಮುಳ್ಳೂ ಗಾಜೂ ಸೇರಿತ್ತು. ಇವೆಲ್ಲವನ್ನೂ ಗುಂಡಿಯಿಂದ ಈಚೆಗೆ ತೆಗೆದು ನೋಡಲಾಗಿ ಕಬ್ಬಿಣದ ಮೊಳೆಗಳೂ ಮುರುಕು ಸೂಜಿಗಳೂ ಸಹಿತ ಅಲ್ಲಿ ಸಿಕ್ಕಿದವು. ಒಂದುಮಾತ್ರ ಬಹಳ ಆಶ್ಚರ್ಯಕರವಾದ್ದು. ಗಾಜಿನ ಸಾಮಾನುಗಳೂ ಪಿಂಗಾಣಿ ಬಟ್ಟಲುಗಳೂ, ಸೀಸೆಗಳೂ ಹಡಗುಗಳ ತುಂಬಾ ತುಂಬಿ ಈ ಕಾಲದಲ್ಲಿ ಬರುವಹಾಗೆ ಆಗ ಬರುತಿರಲಿಲ್ಲ. ಆದಾಗ್ಯೂ ಅಷ್ಟೊಂದು ಗಾಜು ಆಗ ಹೇಗೆ ಸಿಕ್ಕಿತೋ ತಿಳಿಯದು. ನ್ಯಾಯವಾಗಿಯೋ ಅನ್ಯಾಯವಾಗಿಯೋ ಉಪಾದ್ರಿಯು ಪ್ರತಿನಿತ್ಯವೂ ಹುಡುಗರಿಗೆ ಮಾಡುತ್ತಾ ಇದ್ದ ಶಿಕ್ಷೆಗೆ ಪ್ರತಿಯಾದ ಶಿಕ್ಷೆಯನ್ನು ಮಾಡಿದರೆಂದು ಆ ಪುರಜನರಲ್ಲಿ ಹುಡುಗರು ಮಾಡಿದ ಈ ಕೆಲಸಕ್ಕೆ ಸಂತೋಷ ಪಡತಕ್ಕವರು ಕೆಲವರು. ಬಾಲಕರ ದೌಷ್ಟ್ಯವನ್ನೇ ಮುಂದುಮಾಡಿಕೊಂಡು ಅವರನ್ನು ಬೈದು ಯಾರಾದರೂ ಸಿಕ್ಕಿದರೆ ತಕ್ಕ ಪ್ರಾಯಶ್ಚಿತ್ತ ಮಾಡಿಯೇ ಬಿಡಬೇಕು, ಈ ಹಾರವಯ್ಯನ ಸಂಕಟವನ್ನು ನೋಡಿ ಯಾರು ಸಹಿಸಬಹುದೆಂದು ಮಾತಿನಲ್ಲಿಯೇ ಹಾರಾಡಿದ ವಾಕ್ ಪೌರುಷದ ಗೃಹಸ್ಥರು

ಕೆಲವರು, ಹೀಗೆ ಗ್ರಾಮಸ್ಥರಲ್ಲಿ ನಾನಾ ವಿಧವಾಗಿ ಮಾತನಾಡಿಕೊಳ್ಳುತಿದ್ದರು. ಆ ಗುಂಡಿಯಿಂದ ಮುಳ್ಳುಗಳನ್ನು ತೆಗೆಯುವುದು ಬಹಳ ಶ್ರಮವಾದ್ದರಿಂದ ಅದೆಲ್ಲಕ್ಕೂ ಅಲ್ಲಿಯೇ ಬೆಂಕೀಹಾಕಿ ಸುಟ್ಟು ಜಗಲಿಯ ಹಳ್ಳವನ್ನು ಮುಚ್ಚಿಬಿಟ್ಟರು.

ಪಂತನು ಹಳ್ಳದೊಳಕ್ಕೆ ದೂಸಕೊಂಡ ಕೂಡಲೆ ದಿಕ್ಕುದಿಕ್ಕಿಗೂ ಓಡಿಹೋದ ಹುಡುಗರಲ್ಲಿ ಸ್ವಲ್ಪ ಜನ ೧-೩ ದಿವಸವಾದರೂ ತಂತಮ್ಮ ಮನೆಗೆ ಬರಲೇಇಲ್ಲ, ಇನ್ನು ಸ್ವಲ್ಪ ಜನ ಆದಿನ ಸಾಯುಂಕಾಲವೂ ಮಾರನೇದಿನವೋ ಮನೆಗಳಿಗೆ ಬಂದರು. ಆಯಾ ಹುಡುಗರ ತಂದೆತಾಯಿಗಳ ಯೋಗ್ಯತೆ ಇದ್ದಂತೆ ಬಾಲಕರು ಮಾಡಿದ ರಾಕ್ಷಸಕೃತ್ಯದ ವಿಚಾರವಾಗಿ ಮಾತನಾಡಿಕೊಳ್ಳುತಿದ್ದರು.

ಸದಾಶಿವದೀಕ್ಷಿತನು ಉಪಾಧ್ರಿಯನ್ನು ತನ್ನ ಮನೆಗೆ ತೆಗೆಯಿಸಿಕೊಂಡು ಹೋಗಿ ಅಲ್ಲಿ ಆತನಿಗೆ ಬೇಕಾದ ಉಪಚಾರಗಳನ್ನು ಮಾಡುತಾ ಗಾಯದೆಂಣೆ ಅಂಟು ಮುಲಾಮು ಮೊದಲಾದ್ದನ್ನು ಹಾಕುತಾ, ಬೇಕಾದಾಗ ಕಾಡೀನೀರಿನಲ್ಲಿ ಹುಂಣುಗಳನ್ನು ತೊಳೆಯುತಾ ಪುನಃ ಅದಕ್ಕೆ ಔಷಧಗಳನ್ನು ಹಾಕುತಾ ಪಂತನಿಗೆ ಬೇಕಾದ ಪಥ್ಯವನ್ನು ಮಾಡಿಸಿ ಉಪಚರಿಸುತ್ತಾ ಇದ್ದನು. ಮನೇಜನರೆಲ್ಲರೂ ಸ್ವಲ್ಪವೂ ಅಸಹ್ಯಪಟ್ಟುಕೊಳ್ಳದೆ ಆತನನ್ನು ಉಪಚರಿಸಿದರು. ಎಷ್ಟು ಮಾಡಿದಾಗ್ಯೂ ಪಂತನಿಗೆ ಪೂರ್ತಿಯಾಗಿ ಗುಣವಾಗುವುದಕ್ಕೆ ನಾಲ್ಕು ತಿಂಗಳ ಮೇಲಾಯಿತು.

---

## ೫ನೆ ಅಧ್ಯಾಯ

ಚಾಮರಾಜನಗರದಲ್ಲಿ ಉಪ್ಪಲಿಗರಿಗೂ ಪರಿವಾರದವರಿಗೂ ವಿಪರೀತವಾಗಿ ನಡೆದ ಕಲಹವನ್ನು ಕುರಿತು ಹಿಂದೆ ಸೂಚಿಸಿದೆಯಷ್ಟೆ ಈ ಎರಡು ಜಾತಿಯವರಿಗೂ ಇರುವ ಪರಸ್ಪರ ದ್ವೇಷವು ಆಗತಾನೇ ಹುಟ್ಟಿದ್ದಲ್ಲ ತಲಾಂತರದಿಂದಲೂ ನಡೆದುಬರುವ ಈ ವೈಷಮ್ಯವು ಆಯಾ ಕುಲಕ್ಕೆ ಬಂದದ್ದು, ಚಾಮರಾಜನಗರದಲ್ಲಿ ಈ ಜಾತಿಯ ಜನಗಳು ನಡಸಿದ ಗಲಭೆಯ ಶಖೆಯು ಆವೂರಮಟ್ಟಿಗೇ ನಿಲ್ಲಲಿಲ್ಲ ಸುತ್ತಮುತ್ತ ಇರುವ ಊರುಗಳಿಗೂ ಗ್ರಾಮಗಳಿಗೂ ವ್ಯಾಪನೆಯಾಗಿತ್ತು. ಸಂಜವಾಡಿಯಲ್ಲಿ ಉಪ್ಪಲಿಗರ ಒಕ್ಕಲು ಹೆಚ್ಚಾಗಿಯೂ ಪರಿವಾರದವರ ಮನೆ ಕಡಿಮೆಯಾಗಿಯೂ ಇತ್ತು. ಹೆಚ್ಚಾಗಲಿ ಕಡಿಮೆಯಾಗಲಿ, ಜಾತಿವೈರವೇನೋ ಏಕರೀತಿಯಾಗಿತ್ತು. ಆದರೆ ವಿಶೇಷ ಸಮಯಗಳಲ್ಲಿ ಈ ಜಾತಿಯವರಿಗೆ ಪರಸ್ಪರ ಇದ್ದ ಬೆಂಕಿಯ ಹೊಗೆ ಕಂಣಿಗೆ ಕಾಣಿಸುತಾ ಇತ್ತೇ ಹೊರತು ಉಳಿದ ಕಾಲಗಳಲ್ಲಿ ತೊರೆಯರೂ ಉಪ್ಪಲಿಗರೂ ಸಹಾ ಒಬ್ಬರಿಗೊಬ್ಬರು ಮಿತ್ರಭಾವದಲ್ಲಿಯೇ ಇರುತ್ತಾ ಇದ್ದರು.

ಆ ಊರಿನಲ್ಲಿ ಉಪ್ಪಲಿಗರೇ ಆಗಲಿ ಪರಿವಾರದವರೇ ಆಗಲಿ ಸಮಯಾಂತರಗಳಲ್ಲಿ ಇವರ ಜೊತೆಗೆ ಸೇರಿಕೊಳ್ಳುತಿದ್ದ ಹೊಲೆಯರೇ ಆಗಲಿ ಸುಖಜೀವಿಗಳಾಗಿ ಇರುತಾ ಮನೆಗೆ ಎಷ್ಟು ಜನ ನೆಂಟರಿಷ್ಟರು ಬಂದಾಗ್ಯೂ ಲಕ್ಷ್ಯವಿಲ್ಲದೆ ಅವರಿಗೆ ಸತ್ಕಾರವನ್ನು ಮಾಡುತಾ ಐಶ್ವರ್ಯವಂತರ ಮನೆಗಳಲ್ಲಿ ಮಾಡತಕ್ಕ ಚೊಕ್ಕ ಭೋಜನವನ್ನು ಮಾಡಿಸುತ್ತಾ ಇದ್ದರು. ಇವರ ಉಡುಪು ಇವರ ಸ್ಥಿತಿಗೆ ನಾಲ್ಕು ಅಂತಸ್ತು ಮೀರಿತ್ತು. ಇವರ ಮನೆಗಳಲ್ಲಿ ಹೆಂಗಸರಾಗಲಿ ಗಂಡಸರಾಗಲಿ ಯಾರೂ ಮೈಮೇಲೆ ಚಿನ್ನ ಬೆಳ್ಳಿ ನಗಗಳನ್ನು ಇಟ್ಟುಕೊಳ್ಳದೇ ಇರುತ್ತಿರಲಿಲ್ಲ, ಮದುವೆ ಮೊದಲಾದ ಶುಭಕಾರಗಳು ನಡೆದಾಗ ಹೆಂಗಸರು ಗಂಡಸರು ಆದಿಯಾಗಿ ಧರಿಸಿಕೊಳ್ಳುವುದಕ್ಕೆ ಸಂಜವಾಡಿಯವರಿಂದ ಇತರರು ದಿವ್ಯವಾದ ಆಭರಣಗಳನ್ನೂ ಉತ್ತಮವಾದ ವಸ್ತ್ರಗಳನ್ನೂ ಎರವಾಗಿ ತೆಗೆದುಕೊಂಡು ಹೋಗುತಿದ್ದರು. ಸುತ್ತಲೂ ಹತ್ತು ಇಪ್ಪತ್ತು ಹಳ್ಳಿಗಳಲ್ಲಿ ಯಾವ ಪ್ರಸ್ತ ಸಮಾರಾಧನೆ ಮೊದಲಾದ್ದು ಜರುಗಿದಾಗ್ಯೂ ಸಂಜವಾಡಿಯವರ ಮನೆಯ ಭಾರೀಕಡಾಯಿ ಮೊದಲಾದ್ದು ಇಲ್ಲದೆ ನಡೆಯುತಾ ಇರಲಿಲ್ಲ, ಇವರ ಮನೆಗಳು ತೊಟ್ಟ ತಿರುಗಿ ಬಲವಾಗಿ ಕಟ್ಟಲ್ಪಟ್ಟಿದ್ದವು. ಆಯಾ ಸಂಸಾರದವರ ಅವಶ್ಯಕತೆ ಇದ್ದ ಹಾಗೆಲ್ಲಾ ಎರಡೂ ಮೂರೂ ತೊಟ್ಟಿಗಳನ್ನು ಕಟ್ಟಿಕೊಂಡು ಗಾರೇಹಾಕಿ ಹಾಲಚೆಲ್ಲಿದರೆ ಹಾಲ ಎತ್ತಬಹುದು ಎನ್ನುವ ಹಾಗೆ ಚೊಕ್ಕಟವಾಗಿ ಮಾಡಿಕೊಂಡಿದ್ದರು.

ಈ ಊರಿಗೆ ಯಕ್ಷಗಾನದ ಆಟದವರು, ಸಂಗೀತಗಾರರು, ನಾಟ್ಯ ಕಟ್ಟುವ ನಾಯಕಸಾನಿಯರು, ಹಾಸ್ಯಗಾರರು, ಯಕ್ಷಿಣಿ ಆಟದವರು, ಕುಸ್ತಿಮಾಡುವ ಪೈಲವಾನರು, ಹೀಗೆಯೇ ವಿನೋದ ಗೋಷ್ಠಿಗೆ ಸಂಬಂಧಿಸಿದ ಅನೇಕರು ಆಗಾಗ್ಗೆ ಬರುತಾ ಇದ್ದರು. ಒಬ್ಬರಲ್ಲದೆ ಆ ಊರಿನ ಹತ್ತು ಇಪ್ಪತ್ತು ಜನರ ಮನೆಯಲಿ ಸಭೆಯಾಗಿ ೮-೧೦ ಊರಸುತ್ತಿದರೂ ಆಗದೆ ಇರುವ ಪ್ರಯೋಜನ ಈ ಒಂದು ಸಂಜವಾಡಿಯಲ್ಲಿಯೇ ಆಗುತ್ತಿತ್ತು. ಆಟ ಮೊದಲಾದ್ದೆಲ್ಲಾ ಮುಗಿದ ತರುವಾಯ ಮುಖ್ಯ ಯಜಮಾನನೇ ಆಗಲಿ ಅಥವಾ ಅಲ್ಲಿ ಸಭೆಗೆ ಸೇರಿದ ಜನರಲ್ಲಿ ಯಾರೇ ಆಗಲಿ ಬಹುಮಾನರೂಪವಾಗಿ ಬಟ್ಟೆಗಳನ್ನೂ ನಗಗಳನ್ನೂ ನಾಣ್ಯಗಳನ್ನೂ ಕೊಟ್ಟರೆ ಅಂಥಾ ಆಟಗಾರರಲ್ಲಿ ಒಬ್ಬನು ಆ ಬಹುಮಾನವನ್ನು ಕೈಯಲ್ಲಿ ಎತ್ತಿ ಹಿಡಿದುಕೊಂಡು, ಕೊಟ್ಟ ದಾತನ ಹೆಸರನ್ನು ಹೇಳಿ ಹೊಗಳತಕ್ಕ ವಾಡಿಕೆ ಈಗಲೂ ಹಳ್ಳಿಗರಲ್ಲಿ ಸ್ವಲ್ಪ ಹತ್ತಿದೆ. ಪೂರ್ವದಲ್ಲಿ ಪಟ್ಟಣಗಳಲ್ಲಿಯೂ ಕೂಡ ಈ ಕರ್ಣಾಟಕ ಪದ್ಧತಿಯು ಹೇರಳವಾಗಿತ್ತು. ಹೆಚ್ಚಾಗಿ ಕೊಟ್ಟವರನ್ನು ಹೆಚ್ಚಾಗಿಯೂ ಕಡಮೆಯಾಗಿ ಕೊಟ್ಟವರನ್ನು ಕಡಮೆಯಾಗಿಯೂ ಆಟಗಾರರು ಹೊಗಳುತಿದ್ದರು. ಹೀಗಾದ ಕಾರಣ ಹೆಚ್ಚುಹೆಚ್ಚಾಗಿ ಇನಾಮನ್ನು ಕೊಟ್ಟು ಹೆಚ್ಚುಹೆಚ್ಚಾಗಿ ಹೊಗಳಿಸಿಕೊಳ್ಳಲು ನಾನುತಾನೆಂದು ಆ ಊರಿನ ಚತುರ್ಥಮಹಾಜನಗಳು ಮುಂದುವರಿಯುತ್ತಾ ಇದ್ದರು. ಆಟಗಾರರ ಸಂಪಾದನೆ ಈ ಊರಿನಲ್ಲಿ ಹೆಚ್ಚಾಗಲು ಇದೂ ಒಂದು ಕಾರಣವಾಗಿತ್ತು. ಇಂಥಾ ಆಟ ಮೊದಲಾದ್ದನ್ನು ಹೂಡಿದ ದಿವಸಗಳಲ್ಲಿ ನಗರದ ಸುಭೇದಾರರೇ ಮೊದಲಾದವರನ್ನೆಲ್ಲಾ ಕರೆದು ಬಹುಬಗೆಯಾಗಿ ಹೆಮ್ಮೆಯನ್ನೂ ಹೆಬ್ಬುಬ್ಬನ್ನೂ ತೋರ್ಪಡಿಸುತ್ತಿದ್ದರು. ಇದೆಲ್ಲವನ್ನೂ ನೋಡತಕ್ಕವರಿಗೆ ಬಹು ವಿನೋದವಾಗಿತ್ತು.

ಸರಕಾರದ ಉದ್ಯೋಗಸ್ಥರು ಸಹಿತ ಈ ಊರಜನರು ಹೇಳಿದಂತೆ ಕುಣಿಯುತಿದ್ದರು. ಹೀಗೆ ಮಾಡಿಕೊಂಡ ಶಕ್ತಿ ಯಾತರದು? ಈ ಊರಿನವರ ಮಟ್ಟಿಗೆ ಆಕಾಶದಿಂದ ಸುವರ್ಣವೃಷ್ಟಿಯಾಯಿತೆ? ಅಥವಾ ಒಬ್ಬೊಬ್ಬರಿಗೂ ನಿಕ್ಷೇಪಗಳೇನಾದರೂ ಸಿಕ್ಕಿದವೆ?

ಆ ಸಂಜವಾಡಿ ಊರಮುಂದೆ ಒಂದು ಮಾರಿಗುಡಿ ಒಂದು ಗಣೇಶನ ಗುಡಿ ಇವುಗಳ ಹಿಂಭಾಗದಲ್ಲಿ ಒಂದು ಗರಡಿಮನೆ ಇದ್ದವು. ಆ ಊರಿನ ತುಂಡಾಂಡಿಗಳೆಲ್ಲಾ ಆ ಗುಡಿಯ ಕೈಸಾಲೆಯಲ್ಲಿಯೂ ಗರಡಿಮನೆಯಲ್ಲಿಯೂ ಸಹ ಸೇರುತಿದ್ದರು. ಬೆಳಗಿನಿಂದ ರಾತ್ರಿ ಗಸ್ತಿಹೊರಡುವತನಕ ಈ ಜನರು ದಂಡೆ, ಹೊರಳಿಕೆ, ಬೈಸಿಗೆ, ಪರಟೆ, ಕಂಬಕಟ್ಟುವುದು, ಕೊಣತ ಕಟ್ಟುವುದು, ಕುಸ್ತಿ, ಬೈಲಿನಲ್ಲಿ ದೊಂಣೇ ವರಸೆ, ಕತ್ತಿವರಸೆ, ಪಟಾವರಸೆ, ಈ ಬಗೆ ಸಾಧಕಗಳನ್ನು ಮಾಡುತಿದ್ದರು. ಮಧ್ಯೆ ಪಗಡೆ, ದಚ್ಚಿಬಾರ, ಹುಲೇಕಲ್ಲು ಮೊದಲಾದ ಆಟಗಳನ್ನು ಆಡಿ ಚಿಕ್ಕ ಬೆಳ್ಳಿಹಣ ದೊಡ್ಡ ಬೆಳ್ಳಿಹಣಗಳನ್ನು ಹಿಡಿಹಿಡಿಯಲ್ಲಿ ಇಟ್ಟಾಡುತಿದ್ದರು. ಇದರಲ್ಲಿ ಜಗಳ ಹುಟ್ಟುವುದು ಸಹಜವಾದಷ್ಟೆ ಹಾಗೆ ಜಗಳಬಂದಾಗ ಒಬ್ಬರಿಗೊಬ್ಬರು ಕಾದು ಜಗಳವಾಡಿ ತಲೇ ಒಡೆದುಕೊಳ್ಳುತಿದ್ದರು. ಈ ವ್ಯಾಜ್ಯವೆಲ್ಲಾ ತಂತಮ್ಮೊಳಗೇ ಫೈಸಲಾಗುತ್ತಿತ್ತೇ ಹೊರತು ಕಚೇರಿವರೆಗೂ ಹೋಗುತಿರಲಿಲ್ಲ. ಪ್ರತಿತಿಂಗಳಲ್ಲಿ ಬಹುಳ ೧೦ ಮೊದಲುಮಾಡಿಕೊಂಡು ಶುದ್ದವರೆಗೂ ಈ ಜನರಲ್ಲಿ ಅನೇಕರು ಊರಲ್ಲಿರುತ್ತಿರಲಿಲ್ಲ, ಆ ದಿವಸಗಳು ಬಂದರೆ ಇವರು ಮನೆಯನ್ನು ಬಿಟ್ಟು ಬೇರೆ ಬೇರೆ ಹೊರಟು ಹೋಗುತಿದ್ದರು. ಯಾವ ಊರಿಗೆ ಹೋಗುತ್ತಾರೆಂಬುವುದು ಇವರಿವರ ಮನೇ ಜನರಿಗೂ ಸಹಾ ತಿಳಿಯದು. ಇವರುಗಳ ಮನೆಗಳಲ್ಲಿ ವಿಚಾರಿಸಿದರೆ, "ಈದಿವಸ ಬೆಳಿಗ್ಗೆ ಎಲ್ಲಿಯೋ ಹೋದರು, ಸಾಯಂಕಾಲದೊಳಗಾಗಿ ಬರುತ್ತಾರೆ' ಎಂದು ಹೆಂಗಸರೂ ಹುಡುಗರೂ ಏಕರೀತಿಯಾಗಿ ಉತ್ತರ ಹೇಳುತಿದ್ದರು.

ಈ ಜನರು ಈ ಬಗೆಯಾದ ಮೋಹಿಂ ಹೊರಡುವುದಕ್ಕೆ ಕೆಲವು ದಿವಸ ಮುಂಚೆ ಇನ್ನೊಂದು ಕೆಲಸವನ್ನು ಮಾಡುತಿದ್ದರು. ಆ ಊರಿನಲ್ಲಿ ಒಬ್ಬ ಕೊರಮರವನು ಅನೂಚಾನವಾಗಿ ಅಲ್ಲಿನ ಗ್ರಾಮ ದೇವತೆ ಪೂಜೆಯನ್ನು ಮಾಡುತಾ ಆ ದೇವರಿಗಾಗಿ ಸರ್ಕಾರದವರು ಬಿಟ್ಟಿದ್ದ ಮಾನ್ಯದ ಭೂಮಿಯನ್ನು ಅನುಭವಿಸಿಕೊಂಡು ಅರ್ಚನೆಯನ್ನು ತಪ್ಪದೇ ನಡಸುತಿದ್ದನು.

ಮೈಸೂರು ಸರಕಾರದ ದಂಡಿನವರು ಅದುವರೆಗೆ ವಿಶೇಷವಾಗಿ ಪರಾಕ್ರಮದಲ್ಲಿಯೂ ವಿಜಯಸಂಭ್ರಮದಲ್ಲಿಯೂ ಹೆಸರುಗೊಂಡಿದ್ದರು. ಇಂಥಾ ದಂಡಿಗೆ ಬಕ್ಷಿ ರಾಮರಾಯರೂ ಇವರ ಅಂಣನ ಮಗ ಬಕ್ಷಿ ಭೀಮರಾಯರೂ ಮುಖ್ಯ ಸೇನಾ ನಾಯಕರಾಗಿದ್ದರು. ಇವರ ಖ್ಯಾತಿಯು ಅನಂತಶಯನದಿಂದ ದಿಳ್ಳಿವರೆಗೂ ವ್ಯಾಪಿಸಿತ್ತು. ಈ ಸರದಾರುಗಳಿಬ್ಬರೂ ತಮ್ಮ ಧಣಿಗಳಾದ ಮೈಸೂರು ರಾಜರಿಗಾಗಲಿ ಕಂಪೆನಿ ಸರ್ಕಾರವರಿಗಾಗಲಿ ಎರಡೆಣಿಸದೆ ಕೇವಲ ಭಕ್ತಿಯಿಂದಲೂ ನಂಬಿಕೆಯಿಂದಲೂ ನಡೆದುಕೊಳ್ಳುತಿದ್ದರು. ಇವರ ಪರಾಕ್ರಮದಿಂದ ಮೇಲೂ ಸಾಹಸದಿಂದ ಮೈಸೂರ ಸೀಮೆಯ ಸೇನೆಗೆ ಬಂದ ಹೆಸರುವಾಸಿಯು ಹಿಂದುಸ್ಥಾನದಲ್ಲಿಯೂ ಯೂರೋಪು ದೇಶಗಳಲ್ಲಿಯೂ ಚಿತ್ರಿತವಾಗಿದೆ. ಆ ಗಲಾಟೆಯಲ್ಲಿ ಕೊಲ್ಲಾಪುರದ

ರಾಜ್ಯವನ್ನೂ ಇವರು ಹಿಡಿಯಬೇಕಾಗಿ ಬಂತಂತೆ. ಸೇನೆಯವರು ಆ ಊರನ್ನು ಕೊಳ್ಳೆ ಹೊಡೆಯಲು ಆರಂಭಿಸಿದರು, ಅಲ್ಲಿ ಮಹಾಲಕ್ಷ್ಮೀ ಗುಡಿ ಇದೆ. ಈ ದೇವರಿಗೆ ಲಕ್ಷಾಂತರಜನ ಭಕ್ತಾದಿಗಳಿದ್ದಾರೆ. ಇಲ್ಲಿ ವಿಶೇಷವಾಗಿ ಮಹತ್ತು ನಡೆಯುವುದೆಂದು ಪ್ರವಾದವಿದೆ. ಶಾಕ್ತೇಯರಿಗೆ ಇದು ಒಂದು ದಿವ್ಯಸ್ಥಳ. ವೀರಾವೇಶದಿಂದಲೂ ದುರಾಶೆಯಿಂದಲೂ ಮನಸ್ಸು ಬಂದ ಹಾಗೆ ಹಾವಳಿ ಮಾಡುವ ಸೇನೆಯವರು ಈ ಊರನ್ನೆಲ್ಲಾ ಲೂಟಿಮಾಡುತಿರುವಾಗ ಇವರಿಗೆ ಉಚ್ಚವೂ ಇಲ್ಲ ನೀಚವೂ ಇಲ್ಲ, ಬಹುದಿವಸದಿಂದ ಪ್ರಸಿದ್ಧವಾದ ಈ ಗುಡಿಗೆ ಅನೇಕ ರಾಜರು ಬೇಕಾದ ಐಶ್ವರ್ಯವನ್ನು ಕೊಟ್ಟಿದಾರೆ, ಅನೇಕಜನ ಭಕ್ತಾದಿಗಳು ಬೇಕಾದ್ದನ್ನು ಹರಕೆಯಾಗಿಯೂ ಮುಡುಪಾಗಿಯೂ ತಂದು ಒಪ್ಪಿಸಿದ್ದಾರೆ. ಅದೆಲ್ಲಾ ಗುಡಿಯಲ್ಲಿ ಸೇರಿದೆ. ಇಂಥಾದ್ದನ್ನು ಬಿಟ್ಟಾರೆ? ಈ ಗುಡಿತಂಟೆಗೆ ಹೋಗದೆ ದೇವರಿಗೆ ನಮಸ್ಕಾರವನ್ನು ಮಾಡಿ ಹೊರಟು ಹೋಗುವುದಕ್ಕೆ ದಂಡಿನವರು ಅಂಥಾ ಪುಣ್ಯವನ್ನು ಮಾಡಿರುವದೇನು? ಇಂಥಾ ಸಮಯ ದೊರೆತಿರುವಾಗ್ಗೆ ಬಿಡುವುದಕ್ಕೆ ಹೇಗೆ ಆಗುತ್ತೆ? ದಂಡಿನವರು ಗುಡಿಯೊಳಕ್ಕೆ ನುಗ್ಗಿಯೇ ನುಗ್ಗಿದರು. ಅಲ್ಲಿ ಸಿಕ್ಕಿದ್ದನ್ನೆಲ್ಲಾ ತೆಗೆದುಕೊಂಡು ಹೋಗುವಾಗ್ಗೆ ಗರ್ಭಗೃಹದಲ್ಲಿ ಅಮ್ಮನವರ ಮೂಗಿಗೆ ಹಾಕಿದ್ದ ಮೂಗುತಿಯ ಗಾತ್ರವಾದ ಮುತ್ತನ್ನು ತೆಗೆದುಕೊಂಡು ಹೋದರಂತೆ. ಆಗ ಅಮ್ಮನವರಿಗೆ ಆಗ್ರಹ ಬಂದು ಈ ಮುತ್ತು ಯಾವಯಾವ ದೇಶಕ್ಕೆ ಹೋಗುತ್ತೋ ಅಲ್ಲೆಲ್ಲಾ ವಾಂತಿಭೇದಿ ರೋಗ ಆಗ ಹುಟ್ಟಿ ಹರಡಿಕೊಂಡು ಜನರನ್ನು ಕೊಲ್ಲಲು ಮೊದಲುಮಾಡಿತಂತೆ. ಸಾಧಾರಣ ಜನರೆಲ್ಲಾ ಹೀಗೆ ನಂಬಿಕೊಂಡರು. ಅದಕ್ಕೆ ಮುಂಚೆ ಅನೇಕ ವರುಷಗಳ ಹಿಂದೆ ಹುಟ್ಟಿದ್ದ ವಾಗ್ಭಟ ಅಥವಾ ಬಾಹಟವೆಂಬ ವೈದ್ಯಗ್ರಂಥಗಳಲ್ಲಿ ವಿಷೂಚಿ ಜಾಡ್ಯವೆನ್ನಿಸಿಕೊಂಡಿರುವ ಈ ರೋಗಕ್ಕೆ ಚಿಕಿತ್ಸೆಯನ್ನು ಹೇಳಿದ್ದಾರೆ. ಇದೇ ಮೊದಲಾದ ಕಾರಣಗಳಿಂದ ವಾಂತಿಭೇದಿಜಾಡ್ಯವು ಮೈಸೂರ ಸೇನೆಯವರು ಕೊಲ್ಲಾಪುರದಮ್ಮನ ಮೂಗುತಿಯ ಮುತ್ತನ್ನು ತಂದಾಗಿನಿಂದ ಹುಟ್ಟಿತೆಂದು ಹೇಳುವುದು ಹೇಗೆ? ಏವಂಚ ಈ ವಿಷೂಚಿಯ ಆಗಿನಿಂದ ಈಚೆಗೆ ವಿಶೇಷವಾಗಿ ಹರಡಿಕೊಂಡದ್ದೇನೋ ನಿಜ.

ಅದು ಮೊದಲುಗೊಂಡು ಈ ಸಂಜವಾಡಿಗೆ ಅನೇಕವೇಳೆ ವರುಷಕ್ಕೆ ಎರಡುಸಾರಿ ವರುಷಕ್ಕೆ ಒಂದುಸಾರಿ ಈ ರೋಗ ಬಂದು ಮನೆಮನೆಗೂ ತನ್ನ ಕೆಲಸವನ್ನು ಮಾಡಿಕೊಂಡು ಹೋಗುತಿತ್ತು. ಆಗ ಊರಜನರೆಲ್ಲಾ ಹೆಚ್ಚಾಗಿ ಹೆದರಿಕೊಂಡು ಇದು ಮಾರೀ ಉಪದ್ರವೆಂಬದಾಗಿ ಎಲ್ಲರೂ ಆವೂರ ದೇವತೆಗೆ ಅತ್ಯಂತ ಭಯಭಕ್ತಿಯಿಂದ ನಡೆದುಕೊಳ್ಳುತಿದ್ದರು. ಆ ದೇವರಿಗೆ ಕೊಲ್ಲಾಪುರದ ಮಹಾಲಕ್ಷ್ಮೀ ಎಂದು ಹೆಸರಾಯಿತು. ಇವರ ಭಕ್ತಿ ಹೆಚ್ಚಿದಹಾಗೆಲ್ಲಾ ದೇವರಲ್ಲಿ ಮಹತ್ತು ಹೆಚ್ಚುತ್ತಾ ಬಂತು. ಈ ದೇವರಿಗೆ ಮೀಸಲಗಂಟು, ಕಪ್ಪದ ಮುಡುಪು, ಕಾಣಿಕೆದುಡ್ಡು ಗೋಲಕದ ಪುಡಿ ಕಾಸು ಇವುಗಳೆಲ್ಲಾ ಹೆಚ್ಚಾಗಿ ವರಮಾನವಾಗಿ ಬರುತಿತ್ತು. ಅಷ್ಟುಹೊತ್ತಿಗೆ ಮೊದಲಿದ್ದ ಹಳೇ ಪೂಜಾರಿ ಸತ್ತು ಹೋದನು. ಅವನ ವಂಶದ ಹೆಸರನ್ನು ಹೇಳುವುದಕ್ಕೆ ಯಾರೂ ಇರಲಿಲ್ಲ ಆಗ ಸಮೀಪದ ಊರಿನಲ್ಲಿ ಸೇರಿಕೊಂಡು ಊರೂರನ್ನು ಅಲೆಯುತಾ ಹಗಲಿನ ಹಿಟ್ಟಿಗೂ ರಾತ್ರೆ ಅಂಬಲಿಗೂ ಸಹ ಗತಿಯಿಲ್ಲದೆ ಇದ್ದ ಸಿದ್ದನೆಂಬ ಕೊರಮನು ಸತ್ತುಹೋದ ಪೂಜಾರಿಗೆ ತಾನು ಸಮೀಪ ದಾಯಾದಿ ಎಂತಲೂ, ತಾನು ಸಂಜವಾಡಿ ಗ್ರಾಮದೇವತೆಯ ಪೂಜೆಯನ್ನು ಮಾಡುತೇನೆಂತಲೂ, ಗ್ರಾಮಸ್ಥರೆಲ್ಲರಲ್ಲಿಯೂ ಹೇಳಿಕೊಂಡು, ಆ

ಊರಿಗೆ ಬಂದು ಸೇರಿದನು. ಅದುವರೆಗೆ ಆ ದೇವರಿಗೆ ಪೂಜೆಮಾಡ ತಕ್ಕವರು ಯಾರೂ ಸಿಕ್ಕಿಯೂ ಇರಲಿಲ್ಲ ತಾತ್ಕಾಲಕ್ಕೆ ಸಿದ್ದನೇ ಪೂಜೆಮಾಡುತಾ ಇರಲಿ, ಇಂಥಾ ಕೆಟ್ಟಕಾಲದಲ್ಲಿ ಅಮ್ಮನವರ ಪೂಜೆಯನ್ನು ನಿಲ್ಲಿಸಿಬಿಟ್ಟರೆ ಯಾವ ವಿಪತ್ತು ಸಂಭವಿಸೀತೋ ಎಂದು ಗ್ರಾಮದ ಮಹಾಜನಂಗಳೆಲ್ಲಾ ಒಪ್ಪಿದರು. ಅದರಂತೆ ಈ ಸಿದ್ದನು ಹಳೇ ಪೂಜಾರಿಯ ಮನೆಯಲ್ಲಿಯೇ ವಾಸವಾಗಿರುತಾ ಆ ದೇವದಾಯದ ಮಾನ್ಯದ ಭೂಮಿಯನ್ನು ಅನುಭವಿಸುತ್ತಾ ದೇವರ ಪೂಜೆಗೆ ಆರಂಭಿಸಿದನು. ಕುಚೇಷ್ಟೆಯಿಲ್ಲದೆ ಪ್ರತಿಷ್ಠೆಬಾರದು. ಆದ್ದರಿಂದ ಸಿದ್ದನು ದಿನೇದಿನೇ ದೇವರ ಪೂಜೆಯಲ್ಲಿ ಹೊಸ ಏರ್ಪಾಡುಗಳನ್ನು ಮಾಡುತ್ತಾ ಬಂದನು. ಶುಕ್ರವಾರ ಮಂಗಳವಾರದ ಪೂಜೆ ಇದ್ದುದು ನಿತ್ಯಗಟ್ಟಲೇ ಪೂಜೆಗೆ ಆರಂಭವಾಯಿತು. ಹಗಲು ಒಂದೇ ಹೊತ್ತು ನಡೆಯುತ್ತಿದ್ದುದು ಹಗಲು ರಾತ್ರೆ ಎರಡು ಹೊತ್ತೂ ಆರಾಧನೆ ಜರುಗುತಾ ಬಂತು. ದಿನಚರಿ ಒಂದೊಂದು ಅಲಂಕಾರ ಮಾಡುವುದು, ಶುಕ್ರವಾರ ಮಂಗಳವಾರ ಹೆಚ್ಚಾದ ವಿಭವವನ್ನೂ ದೀಪಾರಾಧನೆಯನ್ನೂ ಮಾಡುವುದು, ಕಾಣಿಕೆ ಮೊದಲಾದ ಹಣದಲ್ಲಿ ಲೋಕವಿಡಂಬನಾರ್ಥವಾಗಿ ಬೇಕಾದ ವೆಚ್ಚವನ್ನು ಮಾಡಿ ಜನರನ್ನು ಮೆಚ್ಚಿಸುವುದು, ಆಗಾಗ್ಗೆ ದೇವರ ನಿವೇದನಕ್ಕಾಗಿ ಬೇಕಾದ ಪಣಿವಾರವನ್ನು ಜೋಯಿಸರ ಮನೆಯವರಿಂದ ಮಾಡಿಸಿ ಅಮ್ಮನವರ ಪ್ರಸಾದವೆಂದು ಆ ಊರಲ್ಲಿ ಮನೆಮನೆಗೂ ಗೃಹಪ್ರಾಪ್ತಿಯಾಗಿ ಕಳುಹಿಸುವುದು, ಹೀಗೆ ಜರುಗಿಸಲು ಸಿದ್ಧನು ಆರಂಭಿಸಿದನು.

ಇಷ್ಟೇ ಅಲ್ಲ ಈ ಹೊಸ ಪೂಜಾರಿಯು ದಿನಕ್ರಮೇಣ ಕ್ಷೌರವನ್ನು ಮಾಡಿಸಿಕೊಳ್ಳದೆ ದೀಕ್ಷೆ ಬಿಟ್ಟನು. ಹಣೆಗೆ ಕುಂಕುಮವನ್ನು ಇಟ್ಟುಕೊಂಡು ಬೆಳ್ಳಿಕಟ್ಟುಗಳನ್ನು ಹಾಕಿದ ಒಂದು ಕರೀ ಬೆತ್ತವನ್ನು ಹಿಡಿದು ದಿನವಹಿ ಸ್ನಾನವನ್ನು ಮಾಡುತಾ ಮಡಿಬಟ್ಟೆಯನ್ನು ಉಡುತಾ ದೇವರ ಪೂಜೆಯನ್ನು ಬಹಳ ಭಕ್ತಿಯಿಂದ ಮಾಡುತಾ ಶುಕ್ರವಾರ ಮಂಗಳವಾರ ರಾತ್ರೆ ಮಂಗಳಾರತಿಯಾದ ಮೇಲೆ ಮುಖಕ್ಕೆಲ್ಲಾ ಕುಂಕುಮವನ್ನು ಬಳಿದುಕೊಂಡು ಕೆಂಪು ದಾಸವಾಳದ ಹುಬ್ಬಿನ ದಂಡೆಯನ್ನು ಹಾಕಿಕೊಂಡು ಕೈಮುಗಿದುಕೊಂಡು ದೇವರ ಮುಂದೆ ಯಾವ ಮಾತೂ ಆಡದೆ ಕಂಣಮುಚ್ಚಿಕೊಂಡು ಸುಮ್ಮನೆ ಕೂತುಕೊಳ್ಳುತ್ತಾ ಬಂದನು. ಹಾಗೆಯೇ ಒಂದೊಂದು ಸಾರಿ ತಟ್ಟನೆ ಎದ್ದುನಿಂತುಕೊಂಡು ಒಂದು ಹಿಡಿ ಕುಂಕುಮವನ್ನು ತೆಗೆದು ಎರಚಿ "ದಯಮಾಡಬೇಕು ತಾಯೇ ಕೊಲ್ಲಾಪುರದ ಮಹಾತಾಯಿ, ಭಕ್ತರನ್ನು ಕಾಪಾಡ ಬಂದೆಯ ಮಹಾತಾಯಿ?" ಎಂದು ಬಾಯಿಯಲ್ಲಿ ಹೇಳುತಾ ನಮಸ್ಕಾರವನ್ನು ಮಾಡಿ ಮಂಗಳಾರತಿಯನ್ನು ಮಾಡುತಿದ್ದನು. ಅರಿಯದ ಜನರು ಇದಕ್ಕೆಲ್ಲಾ ಅರ್ಥಮಾಡ ತಕ್ಕದ್ದನ್ನು ಕೇಳಬೇಕೆ? ಕೊಲ್ಲಾಪುರದ ಮಹಾಲಕ್ಷ್ಮಿ ಇಲ್ಲಿ ಬಂದು ನೆಲಸಿದಳು ಎಂದು ಕೆಲವರು, ಸಿದ್ದಪ್ಪನಿಗೆ ದೇವತೆ ಪ್ರತ್ಯಕ್ಷವಾಗಿದಾಳೆ ಎಂದು ಕೆಲವರು, ಹೀಗೆ ಮನಸ್ವಿ ಹೇಳಿಕೊಳ್ಳುವುದಕ್ಕೆ ಆರಂಭವಾಯಿತು. ಹಾಗೆ ಪೂಜಾರಿಯು ಮೌನವಾಗಿ ದೇವರಮುಂದೆ ಕೂತುಕೊಂಡಾಗ ಬೇಕಾದ ಜನರು ಮುಂದೆ ಬಂದು ನಿಂತು ತಾವು ತಾವು ಕುರಿತ ಕಾರ್ಯಗಳನ್ನು ಕೇಳುತಿದ್ದರು. ಅದಕ್ಕೆ ಸಿದ್ದನು ಸ್ವಲ್ಪ ಹೊತ್ತು ಸುಮ್ಮನೇ ಇರುತಾ ಕೆಲವರಿಗೆ ಒಂದೊಂದು ಸಾರಿ "ವಸಗೆ" ಎಂತಲೂ "ಜಯ" ಎಂತಲೂ, ಮತ್ತೆ ಕೆಲವರಿಗೆ "ಇಲ್ಲ' ಎಂತಲೂ "ಹೋಗು" ಎಂತಲೂ, ಹೇಳುತ್ತಾ ಇದ್ದನು. ಇದೂ ಅಲ್ಲದೆ ಇವನು ಕಣಿಹೇಳುವುದು ಸಹಾ ಉಂಟು. ಇದರಿಂದೆಲ್ಲಾ ಸಿದ್ದ ಸಿದ್ದಪ್ಪನಾದ, ಸಿದ್ದಪ್ಪ ಸಿದ್ದಪ್ಪಾಜಿಯವರಾದರು, ಸಿದ್ದಪ್ಪಾಜಿಯವರು ಹೋಗಿ ಅಪ್ಪಾಜಿಯವರಾದರು. ಕೊಲ್ಲಾಪುರದಮ್ಮ ಬಂದು

ನೆಲಸಿದಾಳೆ. ಅಪ್ಪಾಜಿಯವರಿಗೆ ಪ್ರತ್ಯಕ್ಷವಾಗಿದಾಳೆ. ಅವರ ಮಾತು ಸುಳ್ಳಾದೀತೆ? ದೇವರ ಮಹಿಮೆಗಿಂತಲೂ ಪೂಜಾರಿಯ ಮಹಿಮೆ ಹೆಚ್ಚಾಯಿತು. ದಿನೇದಿನೇ ಇವನನ್ನು ಕಾಣುವುದಕ್ಕಾಗಿ ಅನೇಕರು ಬರುವುದಕ್ಕೆ ಆರಂಭವಾಯಿತು. ಪಿಶಾಚ ಹಿಡಿದವರು, ಬ್ರಹ್ಮರಾಕ್ಷಸ ಹಿಡಿದವರು, ಮೋಹಿನಿಗ್ರಸ್ತರು, ಇತರ ವಿಧವಾದ ಪ್ರಾರಬ್ಧಕರ್ಮ ಪೀಡಿತರು, ಇವರು ಒಂದುಕಡೆಯಲ್ಲಿಯೂ; ದೀರ್ಘ ರೋಗಿಗಳು ಕುಷ್ಟರೋಗಿಗಳು ಕುರುಡರು ಕಿವುಡರು ಇವರು ಒಂದು ಕಡೆಯಲ್ಲಿಯೂ; ಹೆಂಣು ಕೊಟ್ಟು ತೆಗೆದುಕೊಳ್ಳಲು ಉದ್ಯುಕ್ತರಾದವರು, ಸರಕಾರದಲ್ಲಿ ನಡೆಯುತಾ ಇರುವ ಕಕ್ಷಿಗಳು ಒಂದು ಕಡೆಯಲ್ಲಿಯೂ, ಇವರೇ ಮೊದಲಾಗಿ ಅನೇಕರು ಸಂಜವಾಡಿಗೆ ವಾರೀನಡೆಯುತ್ತಾ ಬಂದರು. ಗುಡಿಯ ಆವರಣವು ಇನ್ನೂ ದೊಡ್ಡದಾಗಿ ಕಟ್ಟಲ್ಪಟ್ಟಿತು. ಅಪ್ಪಾಜಿಯವರ ಹಜಾರವೆಂದು ಒಂದು ದೊಡ್ಡ ಹಜಾರವೂ ಆಯಿತು. ಅದರಲ್ಲಿ ಅಪ್ಪಾಜಿಯವರ ಗದ್ದಿಗೆಯೂ ಒಂದು ನಿರ್ಮಾಣವಾಯಿತು.

ಅಪ್ಪನವರ ಪ್ರಭಾವ ಹೀಗಿರಲಿಕ್ಕಾಗಿ, ಸಂಜವಾಡಿಯ ಮಹಾಜನರು ಆಗಾಗ್ಗೆ ವಿಜಯಯಾತ್ರೆಗಾಗಿ ಹೊರಡುತಾ ಇದ್ದರಷ್ಟೆ ಹಾಗೆ ಪ್ರಯಾಣ ಮಾಡುವುದಕ್ಕೆ ಮುಂಚಿತವಾಗಿ ಅಪ್ಪಾಜಿಯವರಲ್ಲಿ ಕಣಿಕೇಳಿ ಅವರಲ್ಲಿ ಸೈ ಎನ್ನಿಸಿಕೊಂಡು ಕೊಲ್ಲಾಪುರದ ಅಮ್ಮನವರಿಗೆ ಬೇಕಾದ ಸೇವೆಯನ್ನು ಮಾಡಿ ಹರಕೆ ಹೊತ್ತು ಅಪ್ಪಾಜಿಯ ಅಪ್ಪಣೆಯನ್ನು ಪಡೆದು ಹೊರಡುತ್ತಿದ್ದರು. ಈ ಜನರು ಸಾಧಾರಣವಾಗಿ ದಕ್ಷಿಣದೇಶಕ್ಕೆ ಹೋಗುತಿದ್ದರು. ಆದರೆ ಇವರ ದಾರಿಯು ಎಲ್ಲರೂ ತಿರುಗತಕ್ಕ ತೊನ್ನೂರು ಕಣಿವೆ ಗೆಜ್ಜಲ ಹಟ್ಟಿ ಕಣಿವೆ ಇವುಗಳಲ್ಲ, ಇವರು ಯಾವಾಗಲೂ ಜನಸಂಚಾರವಿಲ್ಲದ ಕಾಡುದಾರಿಯಲ್ಲಿ ಬೆಟ್ಟವನ್ನು ಹತ್ತಿ ಬೆಟ್ಟವನ್ನು ಇಳಿದುಕೊಂಡು ಹೋಗಿ ಬರುತಿದ್ದರು. ಒಂದುಸಾರಿ ಹೋಗಿಬಂದ ದಾರಿಯಲ್ಲಿ ಪುನಃ ತಿರುಗಾಡುತ್ತಿರಲಿಲ್ಲ, ಇವರ ಬಟ್ಟೆ ಇಂಥಾದ್ದೆಂದು ಯಾರಿಗೂ ಗೊತ್ತಿಲ್ಲ ಊರಬಿಟ್ಟು ಇವರು ಹೊರಟ ಮೇಲೆ ಇವರ ಹೆಸರು ವೇಷ ಬೇರೆಬೇರೆಯಾಗುತಿತ್ತು. ಪೆಟ್ಟಿಗೆಗಾಡಿ, ಸಾರೋಟುಗಾಡಿ, ಜಿಂಕೆ, ಕರಡಿ, ಹಂದಿ, ನೆಲಗವಿ ಸಿದ್ದೇಶ್ವರ, ನಾಗರಮುರಿ, ಹೀಗೆ ಬಗೆಬಗೆಯಾಗಿ ಹೆಸರನ್ನು ಇಟ್ಟುಕೊಂಡಿದ್ದರು. ಇದಕ್ಕೆ ಸರಿಯಾಗಿ ವೇಷವನ್ನೂ ಬದಲಾಯಿಸಿಕೊಳ್ಳುತಿದ್ದರು. ಹೆತ್ತ ತಾಯಿ ಬಂದು ನೋಡಿದರೂ ಇಂಥವನೇ ತನ್ನ ಮಗನೆಂದು ಕಂಡುಹಿಡಿಯುವುದು ಕಷ್ಟವಾಗುವಹಾಗೆ ವಿರೂಪ ಮಾಡಿಕೊಳ್ಳುತಿದ್ದರು. ಇವರಿಗೆ ಕನ್ನಡ ತೆನಗು ಅರವು ಮಲೆಯಾಳಿ ಹಿಂದುಸ್ಥಾನಿ ಕೊರಚರ ಮಾತು ತೊದವರಮಾತು ಲಂಬಾಣಿಯವರಮಾತು ಇದೆಲ್ಲಾ ಬರುತಿತ್ತು. ಕೊಡಗರ ಮಾತನ್ನೂ ಆಡುತಿದ್ದರು. ಹಣಿಮಟ್ಟದ ದೊಣ್ಣೆ ಒಂದು, ಕೈಬಾಕು ಒಂದು, ಇದು ಒಬ್ಬೊಬ್ಬರಲ್ಲಿಯೂ ಇರುತ್ತಿತ್ತು. ತಮ್ಮ ಕೆಲಸಕ್ಕೆ ಬೇಕಾದ ಇತರ ಸಾಮಾನುಗಳನ್ನು ತೆಗೆದುಕೊಂಡು ಕಣಿವೇ ಕೆಳಗೆ ದೊಡ್ಡ ಊರುಗಳಿಗೆ ಹೋಗಿ ಅಲ್ಲಿ ಜೋಗಿ, ಜಂಗಮ, ದಾಸ, ಗೊರವ, ಪಂಡಾರ, ಬುಡುಬುಡಕೆ, ಕೊರವಂಜಿ, ಇದೇ ಮೊದಲಾದ ವೇಷಗಳನ್ನು ಹಾಕಿಕೊಂಡು ಬೇರೆಬೇರೆ ಇರುತಿದ್ದರು. ಕೆಲವರು ಭಾರಿವರ್ತಕರ ವೇಷವನ್ನೂ ಇನ್ನು ಕೆಲವರು ಬ್ರಾಹ್ಮಣರ ವೇಷವನ್ನೂ ಹಾಕಿಕೊಂಡು ಇರುತಿದ್ದರು. ಆದರೆ ಇವರೆಲ್ಲಾ ಊರಿಗೆ ದೂರವಾಗಿ ರಹಸ್ಯವಾದ ಒಂದುಕಡೆ ಸಮರಾತ್ರೆಯಲ್ಲಿ ಸೇರಿ ಬೇಕಾದ ಮಾತುಗಳನ್ನಾಡಿಕೊಳ್ಳುತಿದ್ದರು. ಮಳೆಗಾಲ ಕತ್ತಲೆಕಾಲ ಕಳೆದಮೇಲೆ ಈ ಜನರು ಒಬ್ಬೊಬ್ಬರಾಗಿ ಊರಿಗೆ ಬಂದು

ಸೇರಿಕೊಳ್ಳುತಿದ್ದರು. ಇವರು ಹೋದದ್ದು ಹೇಗೆ ಯಾರಿಗೂ ಗೊತ್ತಾಗುತ್ತಿರಲಿಲ್ಲವೋ ಹಾಗೆಯೇ ಇವರು ಊರಿಗೆ ಬಂದದ್ದೂ ಗೊತ್ತಾಗುತ್ತಿರಲಿಲ್ಲ. ಒಂದು ಸಾರಿ ಹೋಗಿಬಂದರೆ ಒಬ್ಬೊಬ್ಬ ಐನೂರು ರೂಪಾಯಿಗೆ ಕಡಮೆಯಿಲ್ಲದೆ ಸಂಪಾದನೆ ಮಾಡಿಕೊಂಡು ಬಂದು ಗೋಪ್ಯವಾಗಿ ಸೇರಿಕೊಂಡು ಇರುತಿದ್ದರು.

ಇವರು ಮಾಡಿಕೊಂಡು ಬಂದ ಸಂಪಾದನೆಯು ಅಪ್ಪಾಜಿಯವರು ಕಣಿಯನ್ನೂ ಶಕುನವನ್ನೂ ಹೇಳಿದಮೇಲೆ ಅಮ್ಮನವರ ಪ್ರಸಾದದಿಂದಲ್ಲವೇ ಆದದ್ದು? ಅಂಥಾ ಅಮ್ಮನವರ ಸೇವೆಗೂ ಅಪ್ಪಾಜಿಯವರ ಹಸಾದಕ್ಕೂ ಕಾಣಿಕೆಯನ್ನು ಕೊಡದಿದ್ದರೆ ಆದ ಸಂಪಾದನೆ ದಕ್ಕೀತೆ? ಆದ್ದರಿಂದ ಮೋಹಿಂ ಹೋಗಿ ಬಂದ ವೀರರೆಲ್ಲರೂ ಸಾಗಿಸಿಕೊಂಡು ಬಂದ ಐಶ್ವರ್ಯದಲ್ಲಿ ಒಬ್ಬೊಬ್ಬರೂ ಹತ್ತರಲ್ಲಿ ಒಂದು ಭಾಗವನ್ನು ಒಪ್ಪಿಸುತಿದ್ದರು. ಹನಿ ಹನಿ ಕೂಡಿ ಹಳ್ಳವಾಗಿ ಅಪ್ಪಾಜಿಯವರಿಗೆ ಗಂಟು ದಪ್ಪನಾಗಿಯೇ ಬರುತಿತ್ತು. ಹೀಗೆ ಬಂದ ಹಣದಲ್ಲಿ ಅಮ್ಮನವರಿಗೆ ಬೇಕಾದ ಒಡವೆಗಳನ್ನು ಮಾಡಿಸಿ ಮಿಕ್ಕದ್ದನ್ನು ಬಡಬಗ್ಗರಿಗೂ ಬ್ರಾಹ್ಮಣರಿಗೂ ಉತ್ವವಾದಿಗಳಿಗೂ ಪೂಜಾರಿಯು ವಿನಿಯೋಗಿಸುತಿದ್ದನು. ಮದುವೆಮುಂಜಿ ಇತರ ಹವ್ಯಕವ್ಯಾದಿಗಳು ಎಂದು ಬಂದವರಿಗೆಲ್ಲಾ ಜನರ ಯೋಗ್ಯತಾನುಸಾರವಾಗಿ ಕೊಟ್ಟು ಸಹಾಯ ಮಾಡುತಿದ್ದನು. ಯಾವಾಗಲೂ ಇವನ ಸಮೀಪದಲ್ಲಿ ಜನರು ಸೇರಿಕೊಂಡೇ ಇರುತಾ ಇವನನ್ನು ಅತ್ಯಂತ ಗೌರವವಾಗಿ ಕಂಡುಕೊಂಡಿದ್ದರು.

---

## ೬ನೆ ಅಧ್ಯಾಯ

ಅತ್ತಲಾ ಮಠದಲ್ಲಿ ಹುಡುಗರು ಮಾಡಿದ್ದ ಕೆಟ್ಟತಂತ್ರದಿಂದ ಮೈ ಎಲ್ಲಾ ಗಾಯವಾಗಿ ಪ್ರಾಣ ಉಳಿಯುವುದೋ ಹೋಗುವುದೋ ಎಂಬ ಸ್ಥಿತಿಯಲ್ಲಿದ್ದ ಉಪಾಧ್ಯಾಯ ನಾರಪ್ಪಯ್ಯನನ್ನು ಸದಾಶಿವದೀಕ್ಷಿತನು ತನ್ನ ಮನೆಗೆ ಸಾಗಿಸಿಕೊಂಡು ಹೋಗಿ, ಬಗೆಬಗೆಯಾದ ಔಷಧಗಳನ್ನು ಹಾಕಿ ಬೇಕಾದ ಉಪಚಾರಗಳನ್ನು ಮಾಡಿ ಅವನ ಮೈಗಾಯವನ್ನೆಲ್ಲಾ ವಾಸಿ ಮಾಡಿದನು. ಆ ಬ್ರಾಹ್ಮಣನ ಸಂಕಟವನ್ನು ನೋಡಿ ಸಹಿಸಲಾರದೆ ಪಾರಮಾರ್ಥಿಕವಾಗಿ ಜೋಯಿಸರ ಮನೇಜನವೆಲ್ಲಾ ಅವನಿಗೆ ಆರೈಕೆಯನ್ನು ಮಾಡಿದರು. ಚಿರಂಜೀವಿಯಾದ ಮಹಾದೇವನೂ ಕೂಡ ಈ ಪಂತನು ತನ್ನನ್ನು ಹೊಡೆಯುತಿದ್ದದನ್ನೆಲ್ಲಾ ಮರೆತು ಬಹಳವಾಗಿ ಆತನಿಗೆ ಉಪಚರಿಸುತಿದ್ದನು. ಈ ಬಾಲಕನ ಗುಣಾತಿಶಯಗಳನ್ನು ನೋಡಿ ಪಂತನಿಗೇ ನಾಚಿಕೆಯುಂಟಾಯಿತು. ನಾರಪ್ಪಯ್ಯನಿಗೆ ಪೂರ್ತಿಯಾಗಿ ವಾಸಿಯಾಗಲು ४-೫ ತಿಂಗಳು ಬೇಕಾಯಿತು. ಹೆರಿಗೆಗಾಗಿ ಊರಿಗೆ ಹೋಗಿದ್ದ ಈತನ ಹೆಂಡತಿಗೆ ದೇಹದಲ್ಲಿ ಏನೋ ಜಡ್ಡು ಪ್ರಾಪ್ತವಾಗಿ ಆಕೆ ತೌರುಮನೆಯಲ್ಲಿಯೇ ಔಷಧವನ್ನು ತೆಗೆದುಕೊಳ್ಳುತ್ತಾ ಇದ್ದಳು. ಈ ಕಾರಣದಿಂದ ಪಂತನು ಜೋಯಿಸರ ಮನೆಯಲ್ಲಿಯೇ ನಿಂತನು.

ಮಹಾದೇವನಿಗೆ ಮಠದಲ್ಲಿ ಓದು ತಪ್ಪಿ ಹೋಯಿತು. ಆದಕಾರಣ ಸದಾಶಿವ ದೀಕ್ಷಿತನು ಮಗನಿಗೆ ತಾನೇ ಪಾಠಹೇಳಲು ಆರಂಭಿಸಿದನು. ಗರ್ಭಾಷ್ಟಮದಲ್ಲಿ ಮಗನಿಗೆ ಉಪನಯನವನ್ನು ಮಾಡಿದನು. ಬೆಳಗಿನ ಜಾವದಲ್ಲಿ ಅಮರ ಶಬ್ದಸ್ತೋತ್ರಾದಿಗಳನ್ನು ಹೇಳುತಿದ್ದನು. ತರುವಾಯ ಬಾಲಕನು ಎದ್ದು ಕೈಕಾಲಿಗೆ ಹೋಗಿಬಂದು ಮೈತೊಳೆದು ಕೊಂಡು ಸಂಧ್ಯಾವಂದನೆ ಅಗ್ನಿಕಾರ್ಯ ಮೊದಲಾದ್ದನ್ನು ಮಾಡಿ, ತರುವಾಯ ರಘುವಂಶ ಮಾಘ ಮೊದಲಾದ ಕಾವ್ಯಗಳನ್ನು ಚಿಂತನೆ ಮಾಡುತ್ತಾ ಇದ್ದನು. ಮಧ್ಯಾಹ್ನ ಊಟವಾದಮೇಲೆ ಕರಡನ್ನು ಮಸಕುಮಾಡುವುದು, ಲೆಕ್ಕ ಮೊದಲಾದ್ದನ್ನು ಹೇಳಿಸಿಕೊಳ್ಳುವುದು, ಬರೆದ ಕಾಗದಗಳನ್ನು ಓದುವುದು, ಈ ಪಾಠಗಳು ನಡೆಯುತ್ತಾ ಇದ್ದವು. ದೀಕ್ಷಿತನು ಮಡಿ ಉಟ್ಟುಕೊಂಡಮೇಲೆ ಮಗನಿಗೆ ಅಧ್ಯಯನವನ್ನು ಹೇಳವುದೂ ಸಹಾ ಕ್ಲುಪ್ತವಾಗಿ ಜರುಗುತಾ ಇತ್ತು. ಮಹಾದೇವನು ಸಹಜವಾಗಿ ಜಾಣ. ತಂದೆಯು ಉಪಾಯವಾಗಿಯೂ ಮಕ್ಕಳಿಗೆ ತಿಳಿಯುವ ಹಾಗೆಯೂ ಬೋಧಿಸುತ್ತಾ, ಅವರಿಗೆ ಅಸಹ್ಯವೂ ಬೇಸರಿಕೆಯೂ ಭೀತಿಯೂ ಇಲ್ಲದ ಹಾಗೆ ಪಾಠದಲ್ಲಿ ಒಂದು ಅಕ್ಕರೆಯನ್ನು ಹುಡುಗರಿಗೆ ಹುಟ್ಟಿಸಿ, ಬೋಧಿಸುವ ಕ್ರಮವು ಬಹಳ ಶ್ಲಾಘನೀಯವಾಗಿತ್ತು. ಪಾಠವನ್ನು ಓದಲಿಲ್ಲ ವಿದ್ಯಾವ್ಯಾಸಂಗವನ್ನು ಮಾಡಲಿಲ್ಲ ಎಂಬ ವಿಚಾರದಲ್ಲಿ ಒಂದು ದಿವಸವೂ ದೀಕ್ಷಿತನು ಮಗನನ್ನು ಶಿಕ್ಷಿಸಲಿಲ್ಲ ಹಾಗೆ ಶಿಕ್ಷಿಸಬೇಕಾದ ಅಗತ್ಯವೂ ಇರಲಿಲ್ಲ. ಹೀಗೆ ವಿದ್ಯಾಭ್ಯಾಸ ಜರುಗುತ್ತಿರುವಾಗ ಒಂದು ದಿವಸ ಮಹಾದೇವನು ಗಣಿತಭಾಗವನು ಹೇಳಿಸಿಕೊಳ್ಳುತಾ ತಿಳಿಯದೇಹೋದ ಒಂದೇ ವಿಷಯವನ್ನು ಕುರಿತು ಎರಡು ಮೂರು ಸಾರಿ ತಂದೆಗೆ ಪ್ರಶ್ನೆ ಮಾಡಿದನು. ಎರಡು ಮೂರು ಸಾರಿಯೂ ವಿವರಿಸಿ ಹೇಳಿ ತಂದೆಗೆ ಸಾಕಾಯಿತು. ಆಗ ಮಗನನ್ನು ನೋಡಿ ದೀಕ್ಷಿತನು - ಮಹಾದೇವ, ನಿನಗೆ ಎಷ್ಟು ಹೇಳಿದರೂ ತಿಳಿಯುವುದಿಲ್ಲ, ನೀನು ಮಡ್ಡಿ ಹುಡುಗ ಎಂದನು. ಈ ಮಾತನ್ನು ಕೇಳಿ ಯಾವಾಗಲೂ ಒಂದು ಕೆಟ್ಟ ಮಾತನ್ನೂ ಆಡದೆ ಪ್ರೀತಿಯಾದ ಮಾತನಾಡುತಾ ಇದ್ದ ತಂದೆಯು ಮುಖವನ್ನು ಗಂಟು ಹಾಕಿಕೊಂಡು, ನೀನು ಮಡ್ಡಿ ಹುಡುಗ, ಎಂದು ಹೇಳಿದ ಮಾತಿನಿಂದ ಬಾಲಕನಿಗೆ ಬಹಳವಾಗಿ ಅಪಮಾನವಾದ ಹಾಗೆ ಆಯಿತು. ಈ ಯೋಚನೆಯಲ್ಲಿ ಆ ದಿನ ರಾತ್ರೆ ಚೆನ್ನಾಗಿ ಊಟವನ್ನೂ ನಿದ್ರೆಯನ್ನೂ ಮಾಡದೆ ಮಹಾದೇವ ಸುಮ್ಮನೇ ಮಲಗಿಕೊಂಡನು.

ಪಾಠವನ್ನು ಹೇಳಿ ಮುಗಿಸಿ ದೀಕ್ಷಿತನು ಸಾಯಂಕಾಲದ ಸಂಧ್ಯಾವಂದನೆಗಾಗಿ ಹೊರಗೆ ಹೊರಟನು. ಪಾಠ ಹೇಳುವುದನ್ನೆಲ್ಲಾ ಕೇಳುತಾ ಕೂತಿದ್ದ ಉಪಾಧ್ಯ ನಾರಪ್ಪಯ್ಯನು ದೀಕ್ಷಿತನ ಸಂಗಡ ಹೊರಟು ಮಾತನಾಡಿಕೊಂಡು ಹೋಗುತಾ ಇರುವಾಗ -

ನಾರಪ್ಪಯ್ಯ - ಮಹಾದೇವ ಪೂರ್ವಕ್ಕೆ ಈಗ್ಗೆ ಎಷ್ಟೋ ಬುದ್ಧಿಶಾಲಿಯಾಗಿದಾನೆ ಮಠದಲ್ಲಿ ಓದುವಾಗ ಮಾತ್ರ ಅವನಿಗೆ ಮಡ್ಡಿತನ ಬಂದಿತ್ತು. ಅದು ಸಹವಾಸ ದೋಷವೆಂದು ಹೇಳಬೇಕು. ಎಷ್ಟು ಹೇಳಿದರೂ ಅವನ್ನ ಮನಸ್ಸಿಗೆ ಅಂಟುತ್ತಲೇ ಇರಲಿಲ್ಲ,

ದೀಕ್ಷಿತ - ಹುಡುಗರನ್ನು ಉಪಾಯವಾಗಿ ಮಾರ್ಗಕ್ಕೆ ತರಬೇಕು.

ನಾರ - ಎಷ್ಟು ಉಪಾಯ ಮಾಡಿದರೂ ಹುಡುಗರು ಮನಸ್ಸಿಟ್ಟು ಓದದಿದ್ದರೆ ಪ್ರಯೋಜನವೇನು?

ದೀಕ್ಷಿ - ಅವರಿಗೆ ಪಾಠದಲ್ಲಿ ಮಮತೆ ಹುಟ್ಟುವಹಾಗೆ ಮಾಡುವುದು ಪಾಠ ಹೇಳತಕ್ಕವರ ಕೆಲಸವಾಗಿದೆ.

ನಾರ - ಹಾಗೆ ಎನ್ನುವುದಕ್ಕಾಗುವುದಿಲ್ಲ, ನಾನೂ ನೋಡುತ್ತಾ ಇದೇನಷ್ಟೆ ಪಾಠಹೇಳುವುದರಲ್ಲಿ ಇನ್ನು ತಮಗಿಂತಲೂ ಉಪಾಯವಾಗಿ ಹೋಗತಕ್ಕವರನ್ನು ನಾನು ಅರಿಯೆ. ಆದಾಗ್ಯೂ ಮಹಾದೇವ ಆ ಗಣಿತವನ್ನು ತಿಳಿದುಕೊಳ್ಳಲಿಲ್ಲ ಹುಡುಗರು ಮನಸ್ಸಿಟ್ಟು ಓದುವುದಿಲ್ಲ

ದೀಕ್ಷಿ - ನಾನು ಹೇಳುತಿದ್ದ ಗಣಿತವು ಸ್ವಲ್ಪ ಕಷ್ಟವಾದ್ದು, ಅದು ದೊಡ್ಡವರಿಗೇ ಗುಟುಕುನೀರಾಗುತ್ತೆ. ಆದಾಗ್ಯೂ ಇನ್ನೊಂದು ವೇಳೆ ಹೇಳಿ ವಿವರಿಸೋಣವೆಂದು ಪಾಠವನ್ನು ಅಲ್ಲಿಗೆ ನಿಲ್ಲಿಸಿಬಿಟ್ಟೆ

ನಾರ - ತಾವು ಅಷ್ಟು ಹೇಳಿದರೂ ತಿಳಿದುಕೊಳ್ಳದಿದ್ದರೆ ಇನ್ನೇನ ಹೇಳಬೇಕು?

ದೀಕ್ಷಿ - ಮಧ್ಯಾಹ್ನದಿಂದಲೂ ಪಾಠ ಓದುತಾ ವ್ಯಾಸಂಗ ಮಾಡುತ್ತಲೇ ಇದ್ದು ಬುದ್ಧಿ ಹೆಚ್ಚಾಗಿ ದಣಿದಿರುವಾಗ ಕ್ಲಿಷ್ಟವಾದ ಹೊಸ ಸಂಗತಿಗಳು ಮನಸ್ಸಿಗೆ ಹತ್ತುವುದಿಲ್ಲ.

ನಾರ - ತಾವು ಹೇಳುವುದು ಯಳೇಮಕ್ಕಳಿಗೂ ಸಹಾ ತಿಳಿಯುತ್ತೆ. ನನಗಂತೂ ತಾವು ಹೇಳಿದ ಅಂಶ ಅರೆದು ಹುಯಿದ ಹಾಗಾಯಿತು.

ದೀಕ್ಷಿ - ಆಗ ಅವನ ಬುದ್ಧಿ ಎಷ್ಟು ಆಯಾಸ ಪಟ್ಟಿತ್ತೋ ಅಷ್ಟು ಆಯಾಸ ನಮ್ಮ ಬುದ್ಧಿಗೆ ಆಗಿರಲಿಲ್ಲ ಮತ್ತು ಒಂದುವೇಳೆ ಅಷ್ಟು ಕ್ಲೇಶ ನಮಗೆ ಉಂಟಾಗಿದ್ದಾಗ್ಯೂ ದೊಡ್ಡವರಾದ್ದರಿಂದ ನಾವು ತಡೆದುಕೊಳ್ಳಬಲ್ಲೆವು. ಅವನು ಇನ್ನೂ ಬಾಲಕನಾದ್ದರಿಂದ ತಡೆಯಲಾರ.

ನಾರ - ಬುದ್ಧಿ ಇದ್ದರೆ ಸರಿ. ದೊಡ್ಡವರೇನು? ಚಿಕ್ಕವರೇನು? ಬುದ್ಧಿಗೆ ಆಯಾಸವೆಂದರೇನು? ಹುಡುಗರು ಆಟಕ್ಕೋಸ್ಕರ ಹಾಗೆ ಅತ್ತ ಇತ್ತ ಗಮನವನ್ನು ಕೊಟ್ಟು ಹೇಳಿಕೊಟ್ಟ ಪಾಠವನ್ನು ತಿಳಿದುಕೊಳ್ಳದೇ ಕಾಲಹರಣ ಮಾಡುತ್ತಾರೆ. ಬಿಸಿಬಿಸಿಯಾಗಿ ನಾಲ್ಕು ಏಟನ್ನು ಸೆಳೆದರೆ ಆ ಮಂಕುತನವೆಲ್ಲಾ ಹೋಗಿ ಜ್ಞಾನ ಉಂಟಾಗುತ್ತೆ.

ದೀಕ್ಷಿ - ಹಾಗಲ್ಲ ಉಪಾಧ್ಯಾಯರೆ, ವಿದ್ಯಾಭ್ಯಾಸ ವಿಚಾರವಾಗಿ ನಮಗೂ ನಿಮಗೂ ಇರುವ ಭಿನ್ನಾಭಿಪ್ರಾಯ ಇಲ್ಲಿಯೇ. ಎಳೆಮಕ್ಕಳು ತೊದಲು ಮಾತನಾಡುತ್ತಾರೆ. ಎರಡು ಮೂರು ವರುಷ ವಯಸ್ಸು ಆದ ಹಾಗೆಲ್ಲಾ ಮಾತನ್ನು ಹೆಚ್ಚಾಗಿ ಹೆಚ್ಚಾಗಿ ಆಡುತ್ತಾರೆ. ಆದರೆ ಅವರು ಅಕ್ಷರಗಳನ್ನು ಜೋಡಿಸಬಲ್ಲರೆ? ಲೆಕ್ಕ ಮಾಡಬಲ್ಲರೆ? ಇಲ್ಲ, ಅದಕ್ಕೆ ಇನ್ನೂ ಕೆಲವು ವರುಷಗಳು ಆಗಬೇಕು. ದೇಹ ಬಲಿತಹಾಗೆಲ್ಲಾ ತಲೆಯ ಮಿದುಳು ಬಲಿಯುತಾ ಬರುತ್ತೆ. ಹಾಗೆಯೇ ಭೇದಾಭೇದಗಳನ್ನೂ ಸಾಮಾನ್ಯ ಧರ್ಮಗಳನ್ನೂ ಬುದ್ಧಿಯಿಂದ ತಿಳಿದುಕೊಳ್ಳುತ್ತಾರೆ. ವಯಸ್ಸು ಹೆಚ್ಚಿದಹಾಗೆಲ್ಲಾ ಈ ತಿಳಿವಳಿಕೆ ಹೆಚ್ಚಾಗುತ್ತಾ ಬರುತ್ತೆ. ದೇಹದಾರ್ಢ್ಯ ಹೆಚ್ಚಾಗಿರುವ ದೊಡ್ಡವರು ಹೆಚ್ಚು ಹೊತ್ತು ಕೆಲಸಮಾಡುತ್ತಾರೆ. ಶಕ್ತಿ ಕಮ್ಮಿಯಾಗಿರುವ ಬಾಲಕರು ಕಡಮೆಯಾಗಿ ಕೆಲಸ ಮಾಡುತ್ತಾರೆ. ಹುಡುಗರಿಂದ ಹೆಚ್ಚಾಗಿ ಕೆಲಸ ಮಾಡಿಸಿದರೆ ಅವರಿಗೆ ಆಯಾಸ ಹೆಚ್ಚಾಗುತ್ತೆ. ದೊಡ್ಡವರಿಗೆ

ಜಾಗ್ರತೆಯಾಗಿ ಆಯಾಸವಾಗುವುದಿಲ್ಲ. ದೇಹಕ್ಕೆ ಹೇಗೆಯೋ ದೇಹಸಂಬಂಧವುಳ್ಳ ಬುದ್ಧಿಗೂ ಹಾಗೆಯೇ, ಇದು ಅನುಭವಸಿದ್ಧವಾದ ವಿಚಾರವಾಗಿದೆ. ಹೀಗೆ ಚಿಕ್ಕವರಿಗೆ ಬುದ್ಧಿಶಕ್ತಿ ಕಡಮೆಯಾಗಿಯೂ ದೊಡ್ಡವರಿಗೆ ಹೆಚ್ಚಾಗಿಯೂ ಇರುವುದು. ಬುದ್ಧಿಗೆ ಆಯಾಸವುಂಟು. ದೊಡ್ಡವರಿಗೆ ಹುಡುಗರು ಎಲ್ಲಾ ವಿಚಾರದಲ್ಲಿಯೂ ಸಮಾನರು ಎಂದು ತಾವು ತಿಳಿಯಕೂಡದು.

ನಾರ - ಹಾಗಾದರೆ ಕೇಳಿದ್ದಕ್ಕೆ ತಟ್ಟನೆ ಕೆಲವು ಹುಡುಗರು ಉತ್ತರ ಕೊಡುತಾರಲ್ಲ? ಉಳಿದವರೂ ಹಾಗೆಯೇ ಯಾಕೆ ತಿಳಿದುಕೊಳ್ಳಬಾರದು? ಒಂದೇ ವಯಸ್ಸಿನ ಹುಡುಗರು ಒಂದೇ ಪಾಠವನ್ನು ಓದುವಾಗ ಒಬ್ಬನಿಗೆ ತಿಳಿಯುವುದೇನು ಇನ್ನೊಬ್ಬನಿಗೆ ತಿಳಿಯದೇ ಹೋಗುವುದೇನು?

ದೀಕ್ಷಿ - ಆ ಸಂಗತಿಯನ್ನು ಚೆನ್ನಾಗಿ ವಿಚಾರಮಾಡಿದರೆ ಗೊತ್ತಾಗುತ್ತೆ, ಬುದ್ಧಿಗೂ ಬುದ್ಧಿಗೂ ತಾರತಮ್ಯವಿದೆ. ಚಟುವಟಿಕೆ ಹೆಚ್ಚು ಕಡಮೆಯಾಗಿರುವುದು ಅವರವರ ಪ್ರಾಚೀನಕರ್ಮಾನುಸಾರವಾದ ಸಹಜಧರ್ಮ. ಆದರೇ ಹೇಳಿದ್ದನ್ನು ತಿಳಿದುಕೊಳ್ಳುವ ಕಾಲದಲ್ಲಿ ಹುಡುಗನ ದೇಹಸ್ಥಿತಿ, ಅವನು ತಿಂದಿದ್ದ ಆಹಾರ, ಹೇಳಿಕೊಟ್ಟಾಗ ಅವನ ಬುದ್ಧಿಗೆ ಇರಬಹುದಾದ ಇತರ ಗಲಭೆ, ಹೇಳಿಕೊಟ್ಟಾಗ ಬಾಲಕನು ಗಮನಿಸಿ ಕೇಳಿದ ರೀತಿ, ಮನಸ್ಸಿನಲ್ಲಿರುವ ಸಂಗತಿಯನ್ನು ಬಾಯಿಂದ ವಿವರಿಸಿ ಹೇಳುವ ಸಾಮರ್ಥ್ಯ, ಅದನ್ನು ಹೇಳುವುದಕ್ಕೆ ಬೇಕಾಗುವ ನಿಶ್ಚಯವಾದ ತಿಳಿವಳಿಕೆ, ತೋರಿದ್ದನ್ನು ಹೇಳುವುದಕ್ಕೆ ಮನಸ್ಸಿಗೆ ಉಂಟಾಗುವ ಭೀತಿಯ ಪರಿಮಿತಿ, ಇವೇ ಮೊದಲಾಗಿ ಅನೇಕ ಕಾರಣಗಳು ಹುಡುಗ ಹುಡುಗರಿಗೆ ಇರುವ ತಾರತಮ್ಯಕ್ಕೆ ಆಧಾರವಾಗಿವೆ. ಅದರ ಸೂಕ್ಷ್ಮ ಭಾಗಗಳೆಲ್ಲವನ್ನೂ ಶೋಧಿಸಿಕೊಂಡು ಹೋದರೆ ಅದೆಲ್ಲಾ ಗೊತ್ತಾಗುವುದು.

ನಾರ - ಇದೆಲ್ಲವನ್ನೂ ನೋಡಿಕೊಳ್ಳುತಾ ಪಾಠಹೇಳುವುದು ಸಾಧ್ಯವೆ?

ದೀಕ್ಷಿ - ಹವುದು ಪಂತರೆ, ಇದೆಲ್ಲವನ್ನೂ ವಿಚಾರಮಾಡಿಕೊಂಡು ಬಾಲಕನ ಬುದ್ಧಿಜಾತಿಯನ್ನೂ ಅದರ ತ್ರಾಣವನ್ನೂ ತಿಳಿದು ಅದಕ್ಕೆ ಅನುಸಾರವಾಗಿ ಪಾಠಹೇಳತಕ್ಕವರೇ ನಿಜವಾದ ಉಪಾಧ್ಯಾಯರು. ಹುಡುಗರಿಗೆ ಬೋಧೆ ಮಾಡುವುದೂ ಪರಕಾಯ ಪ್ರವೇಶಮಾಡುವುದೂ ಎರಡೂ ಒಂದೇ. ಒಬ್ಬ ಬಾಲಕನು ನಾ ಹೇಳಿಕೊಟ್ಟದ್ದನ್ನು ಯಾವ ರೀತಿ ಅನುಸರಿಸಿ ತಿಳಿದುಕೊಳ್ಳುತಾನೋ ಅದೇ ರೀತಿಯಲ್ಲಿ ನಾನೂ ತಿಳಿದುಕೊಳ್ಳುವುದಕ್ಕೆ ಯತ್ನಿಸಿದರೆ ವಿದ್ಯಾರ್ಥಿಗೆ ಬಂದದ್ದೂ ಬಾರದ್ದೂ ಆಗ ಗೊತ್ತಾಗುತ್ತೆ. ನಮಗೆ ತಿಳಿಯದ ಒಂದು ಸಂಗತಿಯನ್ನು ಬೇರೊಬ್ಬರು ನಮಗೆ ಹೇಳಿಕೊಡುವಾಗ ನಮ್ಮ ಸ್ಥಿತಿ ಹೇಗೆ ಇರುವುದು ಎಂಬ ಅಂಶ ಜ್ಞಾಪಕದಲ್ಲಿಡಬೇಕು. ಬೋಧಕರಲ್ಲಿರಬೇಕಾದ ಈ ಗುಣಕ್ಕೆ ಸಹನವೆಂದು ಹೆಸರು. ಇದನ್ನು ಬಿಟ್ಟು ಉಪಾಧ್ಯಾಯರು ತಪ್ಪು ದಾರಿಯನ್ನು ಹಿಡಿಯುವರು. ತರಳರು ತಮ್ಮನ್ನು ಕಂಡರೆ ವಿಶೇಷವಾಗಿ ಭಯಪಡುವಹಾಗೆ ಅವರ ಮನಸ್ಸಿನಲ್ಲಿ ಭೀತಿಯನ್ನು ಹುಟ್ಟಿಸುವುದು ಉಪಾಧ್ಯಾಯರೆಂಬ ಹೆಸರಿಗೂ ಪದವಿಗೂ ಮೊದಲನೇ ಕೆಲಸವೆಂದು ಕೆಲವರು ತಿಳಿದಿದ್ದಾರೆ. ಪಾಠಹೇಳುವಾಗಲೂ ಪಾಠಕೇಳುವಾಗಲೂ ಬಾಲಕರು ವಿಷಯವನ್ನು ಚೆನ್ನಾಗಿ ನಿಧಾನವಾಗಿ ತಿಳಿದುಕೊಳ್ಳಬೇಕು. ಅದಕ್ಕೆ ಅವಕಾಶವಿಲ್ಲದಹಾಗೆ ಏಟನ ಭೀತಿಯು ಮನಸ್ಸಿನಲ್ಲಿ ನಾಟುವಂತೆ,

ಕೂತರೆ ಪೆಟ್ಟು ನಿಂತರೆ ಪೆಟ್ಟು ಉಪಾದ್ರಿ ಕೇಳಿದ್ದಕ್ಕೆ ಜಾಗ್ರತೆಯಾಗಿ ಉತ್ತರ ಹೇಳಿದರೆ ನಿನ್ನನ್ನು ಯಾರು ಕೇಳಿದರು ಎಂದು ಪೆಟ್ಟು: ಕೂಡಲೆ ಉತ್ತರ ಹೇಳದೇ ಹೋದರೆ ಪೆಟ್ಟು; ಹೀಗೆ ಹುಡುಗನಿಗೆ ಪೆಟ್ಟಿನ ಸೇವೆಯೇ ಮುಕ್ಕಾಲು ಪಾಠವಾಗುವುದು. ತಾನು ಹೇಳಿಕೊಟ್ಟ ಪಾಠವನ್ನು ಸುಮ್ಮನೆ ಜಾಗ್ರತೆ ಜಾಗ್ರತೆಯಾಗಿ ಹತ್ತುಸಾರಿ ಒರಲಿಸು ಎಂದು ಉಪಾದ್ರಿ ಹೇಳುತ್ತಾನೆ. ಚೆನ್ನಾಗಿ ಉಚ್ಚರಿಸಬಹುದಾದ ಶಬ್ದವಾದರೂ, ಶಿಷ್ಯನು ಮೊದಲು ಸರಿಯಾಗಿ ಉಚ್ಚರಿಸುತ್ತಾ ಇದ್ದರೂ, ಉಪಾದ್ರಿಯು ಎಲ್ಲಿ ಹೊಡೆಯುತಾನೋ ಎಂಬ ಭೀತಿ ಮನಸ್ಸಿನಲ್ಲಿ ಅಂಟಿಕೊಂಡಿರುವ ಕಾರಣ, ವೇಗವಾಗಿ ಆ ಶಬ್ದವನ್ನು ಹೇಳುವಾಗ ನಾಲಗೆ ಪಲ್ಲಟವಾಗಿ ಅಪಶಬ್ದ ಹೊರಡುವುದು. ಅದಕ್ಕಾಗಿ ಹುಡುಗನಿಗೆ ಪುನಃ ಏಟು ಬೀಳುವುದು.

ನಾರ - ಹಾಗಾದರೆ ನಾನು ಇದುವರೆಗೆ ಶಿಷ್ಯರನ್ನು ಶ್ರಮಪಟ್ಟು ತಯಾರಾಗಿದ್ದು ಹೊಳೆಯಲ್ಲಿ ಹುಣಸೇಹಣ್ಣ ಕದರಿದ ಹಾಗಾಯಿತು. ಹಾಗಾದರೆ ನನ್ನ ಬಾಳು ಬಹು ಚೆನ್ನಾಯಿತು!

ದೀಕ್ಷಿ - ಪಂತರೆ, ಕೋಪಗೊಳ್ಳಬೇಡಿ. ಇದ್ದ ಸಂಗತಿ ಹೇಳಿದೆ.

ನಾರ - ಪೆಟ್ಟು ಬೀಳುತ್ತೆಂಬ ಭಯಕ್ಕೆ ಜ್ಞಾಪಿಸಿಕೊಂಡು ಹೇಳುತ್ತಾರೆ.

ದೀಕ್ಷೆ - ಪೆಟ್ಟಿನ ಭಯವು ಮನಸ್ಸಿನಲ್ಲಿ ಹೊಕ್ಕು ಆಗಿನಮಟ್ಟಿಗೆ ಜ್ಞಾಪಕ ಶಕ್ತಿಯನ್ನು ಚುರುಕು ಮಾಡಬಹುದು. ಬಾಲಕನ ಮನಸ್ಸಿನಲ್ಲಿ ಪೆಟ್ಟಿಗೂ ಅದರ ಭಯದಿಂದ ಹೊರಡುವ ಸಂಗತಿಗೂ ಸಂಬಂಧ ಕಲ್ಪನೆಯಾಗುವುದು. ಆ ಸಂಗತಿ ಹೇಳುವಾಗೆಲ್ಲಾ ಪೆಟ್ಟಿನ ಜ್ಞಾಪಕ ಬರುವ ಕಾರಣ, ಈ ಭಯವೂ ಆ ಅಂಶವೂ ಒಟ್ಟಿಗೆ ಸೇರಿಕೊಳ್ಳುವವು. ಭಯವೆಂದರೆ ಬುದ್ದಿಯು ಹೇಗೆ ಓಕರಿಸಿಕೊಳ್ಳುವುದೋ ಅದಕ್ಕೆ ಸಂಬಂಧಿಸಿದ ವಿಷಯವನ್ನು ಕಂಡರೂ ಹಾಗೆಯೇ ಅಸಹ್ಯಪಡುವುದು. ಮನಸ್ಸಿಗೆ ಅಸಹ್ಯವಾದ್ದು ಜ್ಞಾಪಕದಲ್ಲಿ ನಿಲ್ಲುವುದಿಲ್ಲ ಹೀಗೆ ಭೀತಿಗೆ ಮೂಲ ಕಾರಣವಾದ ಪೆಟ್ಟಿನದೆಸೆಯಿಂದ ತಿಳಿದುಬಂದ ಅಂಶವು ಮನಸ್ಸಿನಲ್ಲಿ ನಿಲ್ಲದೆ ಖಂಡಿತವಾಗಿಯೂ ಮರೆತು ಹೋಗುವುದು. ನಮ್ಮ ಇಷ್ಟಕ್ಕೆ ವಿರೋಧವಾಗಿ ಒಂದು ಸಂಗತಿಯನ್ನು ನಾಲ್ಕುಸಾರಿ ಉರು ಹಾಕಿದರೆ ಸದ್ಯಕ್ಕೆ ಆ ಅಂಶ ಮನಸ್ಸಿಗೆ ಹತ್ತಿದರೂ, ಆಮೇಲೆ ಮರೆಯುವುದು ಸಹಜವಾದ ಮನೋವೃತ್ತಿಯಾಗಿದೆ. ಇಂಥಾದ್ದರಲ್ಲಿ ನಿಜವಾದ ಭೀತಿಯಿಂದೊಡಗೂಡಿದ ಅಂಶ ಮನಸ್ಸಿನಲ್ಲಿ ನಿಂತೀತೇ? ಹೀಗೆ ಹೇಳಿಕೊಟ್ಟ ಸಂಗತಿಯನ್ನು ಮರೆಯುವುದಕ್ಕೆ ನಾವೇ ಮಾರ್ಗವನ್ನು ಕಲ್ಪಿಸಿ ಮರೆತುಬಿಟ್ಟೆ ಎಂದು ಹುಡುಗರನ್ನು ಶಿಕ್ಷಿಸುವುದು ನ್ಯಾಯವೆ?

ನಾರ - ನಾನು ಹೇಳಿಕೊಟ್ಟದ್ದನ್ನೆಲ್ಲಾ ಹುಡುಗರು ಮರೆತುಬಿಡಲಿ ಎಂದು ನಾನು ಪಾಠಮಾಡಿಸಿದ ಹಾಗಾಯಿತಲ್ಲ?

ದೀಕ್ಷಿ - (ಈ ವಿಷಯವನ್ನು ಶೋಧಿಸಿ ಒಳಹೊಕ್ಕು ಮಾತನಾಡುತ್ತಾ ಇರುವಾಗ ಹಿಂದಿನ ಚರ್ಯೆಗಳೆಲ್ಲಾ ಜ್ಞಾಪಕಕ್ಕೆ ಬಂದು ಕೋಪವೂ ಸ್ವಲ್ಪ ತಲೆದೋರುವ ಹಾಗೆ ಮಾತನಾಡಲು ಆರಂಭಿಸಿದನು.) ನೀವು ಹೇಳಿಕೊಟ್ಟ

ಪಾಠವನ್ನು ಮರೆತರೆ ಹೋಗಲಿ. ನಿಮ್ಮ ಏಟಿನಿಂದ ಪಾಠದಮೇಲೆ ಹುಟ್ಟಿದ ದ್ವೇಷ ಗುರುಗಳಾದ ನಿಮ್ಮ ಮೇಲೆಯೂ ತಿರುಗುವುದು. ಇದು ನಿಜವೋ ಸುಳ್ಳೋ ನೀವೇ ಬಲ್ಲಿರಿ. ಇಷ್ಟು ದಿವಸದವರೆಗೂ ನೀವು ಅನುಭವಿಸಿದ ಯಾತನೆಯೇ ಇದಕ್ಕೆ ಸಾಕ್ಷಿ. ಹುಡುಗರೆಲ್ಲಾ ದಿಕ್ಕೆಟ್ಟು ಹೊರಟುಹೋಗಿ ಮಠವೇ ಇಲ್ಲದೆ ತಿಂಗಳಿಗೆ ೫ ಅಥವಾ ೬ ವರಹ ಬರುತಾ ಇದ್ದದ್ದು ತಪ್ಪಿ ಹೋದದ್ದೇ ಸಾಕ್ಷಿ, ಉಪಾಧ್ಯಾಯನ ಯೋಗ್ಯತೆ ಇದ್ದ ಹಾಗೆ ಹುಡುಗರು ತಯಾರಾಗುತ್ತಾರೆ.

ನಾರ - ನನ್ನ ಮಠದಲ್ಲಿ ಹುಡುಗರು ತಯಾರಾಗಲೇ ಇಲ್ಲ?

ದೀಕ್ಷಿ - ಎಷ್ಟು ಜನ ಎಷ್ಟರಮಟ್ಟಿಗೆ ತಯಾರಾಗಬಹುದಾಗಿತ್ತೋ ಅಷ್ಟರಮಟ್ಟಿಗೆ ಆಗಲಿಲ್ಲ

ನಾರ - ಕೆಲವರಾದರೂ ತಯಾರಾದರಷ್ಟೆ?

ದೀಕ್ಷಿ - ನೀವು ಹೊಡೆಯುತ್ತಾ ಹೇಳಿಕೊಟ್ಟದ್ದು ಯಾರಿಗೂ ಯಾವುದೂ ಬರುವುದಿಲ್ಲ, ಭೀತಿಪಡಿಸದೆ ನಿಧಾನವಾಗಿ ಹೇಳಿಕೊಟ್ಟ ಪಾಠವನ್ನು ಕಲಿತುಕೊಂಡ ಕೆಲವರು ಮಾತ್ರ ಅದನ್ನು ತಿಳಿದುಕೊಂಡಿರಬಹುದು. ನಾನೂ ಮಠದಲ್ಲಿ ಏಟನ್ನು ತಿಂದಿದೇನೆ. ಏಟುಬಿದ್ದು ನಾನು ಭಯದಿಂದಲೂ ಗಾಬರಿಯಿಂದಲೂ ಸಂಕಟಪಡುವಾಗ ಹೇಳಿಕೊಟ್ಟದ್ದು ಯಾವುದೂ ನನಗೆ ಜ್ಞಾಪಕವಿಲ್ಲ.

ನಾರ - ಹಾಗಾದರೆ ನೀವು ಹೇಳುವ ಮಾತಿನಿಂದ ನಾನು ಕೆಲಸಕ್ಕೆ ಬಾರದವನಾದೆನಷ್ಟೆ?

ದೀಕ್ಷಿ - ಉಪಯೋಗಕ್ಕೆ ಬಾರದ ವಸ್ತುವೂ ಇಲ್ಲ ಮನುಷ್ಯನೂ ಇಲ್ಲ

ನಾರ - ನೀವು ಹೇಳಿದ ಮಾತಿನಿಂದ ನಾನು ಅಪ್ರಯೋಜಕನಾದೆ.

ದೀಕ್ಷಿ - ನಾನು ಹೇಳಿದ ಮಾತಿನಿಂದ ತಮಗೆ ಕೋಪಬಂದ ಹಾಗೆ ತೋರುತ್ತೆ, ಪಂತರೆ. ಚಿತ್ತಕ್ಕೆ ಕೋಪಬೇಡ. ಇದೇ ಸಂದರ್ಭದಲ್ಲಿ ಇನ್ನೂ ಕೆಲವು ರಹಸ್ಯಗಳನ್ನು ಹೇಳುತೇನೆ, ಕೇಳಿ. ನಾನು ಹೇಳುವ ಮಾತಿಗೆ ಕೋಪಮಾಡಿಕೊಳ್ಳಲೇಬೇಕೆಂದು ನೀವು ಶಪಥ ಮಾಡಿಕೊಂಡಿದ್ದರೆ, ಯಾರು ಹೇಳಿದರೂ ಸಮಾಧಾನವಾಗುವುದಿಲ್ಲ. ಇದೇ ಸಂದರ್ಭದಲ್ಲಿ ಹೇಳಬೇಕಾದ ಅಂಶಗಳು ಇನ್ನೂ ಇವೆ, ಅದನ್ನೂ ಹೇಳಿಬಿಡುತ್ತೇನೆ, ಕೇಳಿಬಿಡಿ. ನೀವು ಈಗಷ್ಟು ಆಗಷ್ಟು ಕೋಪ ಮಾಡಿಕೊಳ್ಳದೆ ತಮ್ಮ ಆಗ್ರಹವು ಏಕಕಾಲದಲ್ಲಿ ಪ್ರಜ್ವಲಿಸಿದರೂ ಪ್ರಜ್ವಲಿಸಲಿ.

ನಾರ - ಹಾಗಾದರೆ ಅಪ್ಪಣೆ ಕೊಡಿಸಿ.

ದೀಕ್ಷಿ - ಹೇಳುತೇನೆ ಕೇಳಿ. ಮಕ್ಕಳು ಅತ್ತರೆ ಮರುಗದ ಹೃದಯವು ಕೇವಲ ಕಠಿಣವಾದ್ದು ಎಂದು ಹೇಳಬೇಕು. ಇಂಥಾ ಕಠಿಣಮನಸ್ಸುಳ್ಳವರಿಗೆ ಮಕ್ಕಳಾಗುವುದು ಅಪೂರ್ವ. ಆದರೂ ಬದುಕುವುದು ಅಪೂರ್ವ.

ಮುಖ್ಯವಾಗಿ ಮಕ್ಕಳಾಗದೆ ಇರುವುದಕ್ಕೆ ಹೃದಯಕಾಠಿಣ್ಯವೂ ಒಂದುಕಾರಣ. ಸಾಧಾರಣವಾಗಿ ಹೃದಯ ಮಾರ್ದವ ಉಳ್ಳವರಿಗೆ ಮಕ್ಕಳಾಗುವುದು, ಮಕ್ಕಳು ಹುಟ್ಟಿದ ಹೃದಯಮಾರ್ದವ ಹೆಚ್ಚುವುದು. ದುರ್ಬಲರಾದ ಹುಡುಗರೂ ಮುದುಕರೂ ಬಡವರೂ ಸಹ ಆ ಪರಮಾತ್ಮನಿಗೆ ಹೃದಯ ಪದಕಗಳಾಗಿದಾರೆ. ಭಗವಂತನಿಗೆ ಈ ಮೂರು ಜನರಮೇಲೆ ಹೆಚ್ಚಾದ ಅಭಿಮಾನವಿರುವುದು. ನಿರ್ಮಲಚಿತ್ತರಾದ ಬಾಲಕರು ಯಾವಾಗಲೂ ಸ್ವಾಮಿಯ ಸಮೀಪ ವೃತ್ತಿಯಲ್ಲಿಯೇ ಇರುವರು. ಪರಬ್ರಹ್ಮನು ಸನಕ, ಸನಂದನ, ಸನತ್ಕುಮಾರ, ಸನತ್ಸುಜಾತರೆಂಬ ನಾಲ್ಕು ಜನ ಮಹಾಯೋಗಿಗಳನ್ನು ತನ್ನ ಮನಸ್ಸಿನಿಂದ ನಿರ್ಮಾಣಮಾಡಿ ಅವರಿಗೆ ಯಾವಾಗಲೂ ಬಾಲ್ಯಾವಸ್ಥೆಯೇ ಇರುವಂತೆ ಅನುಗ್ರಹಿಸಿ ಅವರನ್ನು ಯಾವಾಗಲೂ ತನ್ನ ಸಮೀಪದಲ್ಲಿಯೇ ಇರಿಸಿಕೊಂಡು ಆನಂದಪಡುವನು. ಹಾಗಲ್ಲದಿದ್ದರೆ ಧ್ರುವರಾಯ ಬದುಕಿದ್ದು ಹೇಗೆ? ಪ್ರಹ್ಲಾದನನ್ನು ಕಾಪಾಡಿದವರು ಯಾರು? ಕೋಳೂರು ಕೊಡಗೂಸಿನ ಪ್ರಾರ್ಥನೆಗೆ ಬಾಯನ್ನು ಬಿಟ್ಟು ಹಾಲನ್ನು ಕುಡಿದು ಕೊನೆಗೆ ಆ ಮಗುವನ್ನು ರಕ್ಷಿಸಲಿಲ್ಲವೆ, ಆ ಪರಮೇಶ್ವರ? ತಾಯಿಯ ಹರಕೆಗೋಸ್ಕರ ತೇರಿನ ಗಾಲಿಕೆಳಕ್ಕೆ ಒಪ್ಪಿಸಲ್ಪಟ್ಟ ಶಿಶುವನ್ನು ಲೇಶವೂ ಕುಂದಕವಿಲ್ಲದಂತೆ ಕಾಪಾಡಿದವರು ಯಾರು? ಅತ್ಯಂತ ವೃದ್ಧರಾದ ಮಹರ್ಷಿಗಳು ಯಾವಾಗಲೂ ಎಡೆಬಿಡದೆ ಭಗವಂತನ ಸಮೀಪದಲ್ಲಿಯೇ ಇರುತ್ತಾರೆ. ಆ ತಪಸ್ವಿಗಳ ಮನಸ್ಸೆಲ್ಲಾ ಸ್ವಾಮಿಯಲ್ಲಿಯೇ ಲೀನವಾಗಿರುವ ಕಾರಣ ಭಕ್ತಪರಾಧೀನನೆಂಬ ಬಿರುದು ಪರಮಾತ್ಮನಿಗೆ ಮೊದಲಿನಿಂದಲೂ ಬಂದಿದೆ.

ಬಡವರ ಮೇಲಂತೂ ಅವನ ಕಟಾಕ್ಷ ಸಂಪೂರ್ಣವಾಗಿರುವ ಅಂಶವನ್ನು ಹೇಳಬೇಕಾದ್ದೇ ಇಲ್ಲ, ಸುಧಾಮನನ್ನು ಸ್ವಾಮಿ ಹೇಗೆ ಉಪಚರಿಸಿದನೋ ಅವನ ಬಡತನವು ಹೇಗೆನೀಸಿತೋ ಅದೆಲ್ಲವನ್ನೂ ನೀವೇ ಬಲ್ಲಿರಿ. ಶ್ರೀಕೃಷ್ಣನು ಸಂಧಿ ಮಾಡುವುದಕ್ಕಾಗಿ ಹಸ್ತಿನಾವತಿಗೆ ಹೋದಾಗ ಅನೇಕ ಚಕ್ರಾಧಿಪತಿಗಳು ಭಗವಂತರನ್ನು ಎದುರುಗೊಂಡು ಕರೆದುಕೊಂಡು ಹೋಗಿ ಸತ್ಕಾರಮಾಡಲು ಸಿದ್ದರಾಗಿ ಕಾದುಕೊಂಡಿದ್ದಾಗ್ಯೂ ಅವರೆಲ್ಲರನ್ನೂ ಬಿಟ್ಟು ನಿನಗೆ ಕೊಡಲು ನನಗೆ ಏನೂ ಗತಿ ಇಲ್ಲವಲ್ಲಾ ಸ್ವಾಮೀ, ಎಂದು ಪೇಚಾಡುತಾ ಇದ್ದ ವಿದುರನ ಮನೆಗೆ ಹೋಗಿ, ಅಲ್ಲಿ ಅವನು ತನ್ನ ಅಂಗೈಗೆ ಹಾಕಿದ ಒಂದು ತೊಟ್ಟು ಹಾಲನ್ನು ನೆಕ್ಕಿ ಅವನ ಮನೆಬಾಗಿಲಲ್ಲಿ ಹಾಲಿನ ಕೋಡಿಯನ್ನು ಹರಿಸಿದ ಆ ಭಕ್ತಪರಾಧೀನ ಮೂರ್ತಿಗೆ ತನ್ನ ಭಕ್ತರನ್ನು ಕಾಪಾಡುವುದರಲ್ಲಿ ಇನ್ನು ಎಷ್ಟು ಅಕ್ಕರೆಯೋ ನಾನು ಅರಿಯೆ.

ನಾರ - ಏನೋ ಆ ಪುರಾಣಗಳೆಲ್ಲಾ ನನಗೆ ಏಕೆ? ತಾವು ದೊಡ್ಡ ಪಂಡಿತರು. ತಾವು ಹೇಳಿದ ಸಂಗತಿಗಳೆಲ್ಲವನ್ನೂ ಕೇಳಿದಮೇಲೆ ನನಗೆ ಈಗ ಜ್ಞಾನೋದಯವಾಗುತಾ ಇದೆ. ಇನ್ನು ಆಡಿಕೊಂಡು ಪ್ರಯೋಜನವೇನು?

ದೀಕ್ಷಿ - ಇನ್ನೊಂದು ಮಾತನ್ನು ಹೇಳುತೇನೆ ಕೇಳಿ. ಒಂದೊಂದು ವೇಳೆ ಬಾಲಕರನ್ನು ಶಿಕ್ಷಿಸಬೇಕಾದ ಸಂದರ್ಭ ಬರುವುದು. ಆಗ ದೇಹಕ್ಕೆ ನಾನಾ ವಿಧವಾಗಿ ಹಿಂಸೆಯುಂಟಾಗುವಂತೆ ಮಾಡಿದರೇ ಶಿಕ್ಷೆ ಬೇರೆ ಇನ್ನು ಯಾವದೂ ಶಿಕ್ಷೆಯಲ್ಲವೆಂದು ತಿಳಿಯಬಾರದು. ಮಕ್ಕಳನ್ನು ಪ್ರೀತಿಯಿಂದಲೇ ಕಾಣುತಾ ಅವರಿಂದ ಆಗಬೇಕಾದ

ಕೆಲಸವನ್ನು ಮಾಡಿಸಬೇಕು. ಅವರು ತಪ್ಪು ಮಾಡಿದಾಗ ನಾವು ತೋರಿಸತಕ್ಕೆ ಪ್ರೀತಿಯಲ್ಲಿ ಸ್ವಲ್ಪ ಕಡಮೆ ಮಾಡಿದರೆ ಅಷ್ಟೇ ಸಾಕು. ಒಂದಕ್ಕೆ ಹತ್ತರಷ್ಟು ದಂಡನೆಯಾದಂತೆ ಬಾಲಕರು ಭಾವಿಸುವರು. ಹೀಗೆ ಮಾತನಾಡಿಕೊಂಡು ದೀಕ್ಷಿತನೂ ನಾರಪ್ಪಯ್ಯನೂ ತಮ್ಮ ಸಂಧ್ಯಾವಂದನೆಯನ್ನು ಹೊಳೆಯಲ್ಲಿ ತೀರಿಸಿಕೊಂಡು ಮನೆಗೆ ಬಂದರು. ದೀಕ್ಷಿತನು ಆಡಿದ ಮಾತು ನಾರಪ್ಪಯ್ಯನ ಮನಸ್ಸಿನಲ್ಲಿ ಚೆನ್ನಾಗಿ ಅಂಟಿತು. ಆ ವಿಷಯವನ್ನೇ ಹಿಂದೂ ಮುಂದೂ ಯೋಚಿಸುತ್ತಾ ಹಿಂತಿರುಗಿ ಮನೆಗೆ ಬರುವಾಗ ಯಾವ ಮಾತನ್ನೂ ಆಡದೆ ಅದುವರೆಗೂ ಮೌನವಾಗಿಯೇ ಇದ್ದ ದೀಕ್ಷಿತನು ಪುನಃ ಉಪಾಧ್ಯಾಯನನ್ನು ಕುರಿತು,

ದೀಕ್ಷಿ - ನಾನು ಹೇಳಿದ ಅಂಶವೇನೋ ನಿಷ್ಠುರೋಕ್ತಿಯಾಗಿಯೇ ತೋರುತ್ತೆ. ಇನ್ನೂ ಇದರಲ್ಲಿ ಸೂಕ್ಷ್ಮಾಂಶಗಳು ಇವೆ. ತಂದೆಯಾಗಲಿ ತಾಯಿಯಾಗಲಿ ಉಪಾಧ್ಯಾಯನಾಗಲಿ, ಹುಡುಗರಿಗೆ ವಿಶೇಷವಾಗಿ ಭಯವನ್ನು ಹುಟ್ಟಿಸಿ ಶಿಕ್ಷೆಯನ್ನು ಮಾಡುತ್ತಾ ಬಂದರೆ, ಆ ಬಾಲಕರಿಗೆ ದೊಡ್ಡವರು ಹೇಳುವ ಮಾತಿನಲ್ಲಿ ಗೌರವ ಹುಟ್ಟುವುದಕ್ಕೆ ಬದಲಾಗಿ ಅವರ ಮಾತೆಲ್ಲಾ ಏಟೇ ಎಂದು ಮನಸ್ಸಿನಲ್ಲಿ ನಾಟಿಕೊಂಡು, ಹಿರಿಯರಲ್ಲಿಯೂ ಗುರುಗಳಲ್ಲಿಯೂ ದ್ವೇಷವೇ ವೃದ್ಧಿಯಾಗುತ್ತಾ ಬರುತ್ತೆ. ಮಕ್ಕಳು ತಂದೆ ತಾಯಿಗಳನ್ನು ಕಂಡು ದ್ವೇಷಮಾಡತಕ್ಕದ್ದು ಈ ಕಾರಣದಿಂದಲೇ, ಶಿಷ್ಯರು ಗುರುವನ್ನು ಕಂಡು ದ್ವೇಷಮಾಡತಕ್ಕದ್ದು ಈ ಕಾರಣದಿಂದಲೇ ಇದನ್ನು ನಾವು ಎಷ್ಟು ಯೋಚಿಸಿಕೊಂಡು ಹೋದರೆ ಅಷ್ಟು ಸೂಕ್ಷ್ಮಾಂಶಗಳು ತೋರುತ್ತಿವೆ.

ಹೀಗೆ ಮಾತನಾಡುತಾ ಉಭಯರೂ ಮನೆಗೆ ಹೋಗಿ ಭೋಜನ ಮಾಡಿ ಮಲಗಿಕೊಂಡರು. ನಾರಪ್ಪಯ್ಯನಿಗೆ ನಿದ್ರೆ ಬರಲಿಲ್ಲ ಸದಾಶಿವದೀಕ್ಷಿತ ಹೇಳಿದ ಮಾತೆಲ್ಲಾ ಅವನ ಮನಸ್ಸಿಗೆ ಅಂಟಿತು. ರಾತ್ರಿಯೆಲ್ಲಾ ಅಳೆದು ಸುರಿದು ಯೋಚನೆ ಮಾಡುತ್ತಲೇ ಇದ್ದನು, ಉಪನ್ಯಾಸ ರೂಪವಾದ ದೀಕ್ಷಿತರ ಮಾತಿನಲ್ಲಿ ಭಾವಗರ್ಭಿತವಾಗಿ ಸೇರಿಕೊಂಡಿರುವ ತನ್ನ ವಿಷಯವಾದ ತಿರಸ್ಕಾರವು ಈ ಉಪಾಧ್ಯಾಯನ ಮನಸ್ಸನ್ನು ವಿಶೇಷವಾಗಿ ಕಲಕಿಬಿಟ್ಟಿತು. ಯಾರಿಗಾದರೂ ಸರಿಯೆ, ತನ್ನ ತನ್ನ ಲೋಪ ಬಂದರೆ ಕೋಪ ಬರುವುದು ಸಜವಾಗಿದೆ. ಆದ್ದರಿಂದ ಅದೇ ತೊಳಲು ಅಂಟಿಕೊಂಡು ನಾರಪ್ಪಯ್ಯನ ಮನಸ್ಸನ್ನು ಕೆಡಿಸಿತು. ತನಗೆ ಅಪಮಾನಮಾಡಬೇಕೆಂಬ ಉದ್ದೇಶದಿಂದ ದೀಕ್ಷಿತನು ಹೀಗೆಲ್ಲಾ ಆಡಿದನೆಂಬದಾಗಿ ಉಪಾದ್ರಿಯು ತಿಳಿದುಕೊಂಡು ಮನಸ್ಸಿನಲ್ಲಿ ಕಲ್ಮಷವನ್ನು ಇರಿಸಿಕೊಂಡನು.

ಈ ಮಧ್ಯೆ ಹುಡುಗರು ಯಾರೂ ಬಾರದೇ ಮಠ ಒಡೆದು ಹೋದ ಮೇಲೆ ನಾರಪ್ಪಯ್ಯನು ಯಾತನೆಯನ್ನು ಅನುಭವಿಸುತಾ ೫-೬ ತಿಂಗಳು ಬಿದ್ದಿದ್ದನು; ತರುವಾಯ ಗುಣವಾಗಿ ಮೈಗಾಯವೆಲ್ಲಾ ವಾಸಿಯಾದ ಮೇಲೆ, ಹೊತ್ತು ಗೊತ್ತಿಗೆ ದೀಕ್ಷಿತರ ಮನೆಯಲ್ಲಿ ಸಣ್ಣಕ್ಕಿ ಅನ್ನ ಬೆಣ್ಣೆ ಕಾಸಿದ ತುಪ್ಪವನ್ನು ಉಂಡುಂಡು ಮಾಡುವುದಕ್ಕೆ ಕೆಲಸವಿಲ್ಲದೆ ಹಗಲು ಸಾಯಂಕಾಲ ಕೊಲ್ಲಾಪುರದ ಅಮ್ಮನ ಗುಡಿಯಲ್ಲಿ ಕೂತುಕೊಳ್ಳುತ್ತಾ, ಸಿದ್ದಪ್ಪಾಜಿಯವರ ಸ್ನೇಹವನ್ನೂ ಅನುಸರಣೆಯನ್ನೂ ಹೆಚ್ಚಾಗಿ ಮಾಡುತಾ ಬಂದನು. ಇವರಿಬ್ಬರಿಗೂ ಒಂದೇ ಕತ್ತಿನಲ್ಲಿ ಪ್ರಾಣಹೋಗುವ ಮಟ್ಟಿನ ಗೆಳೆತನ ಉಂಟಾಯಿತು. ಸ್ವಲ್ಪ ಹೊತ್ತು ನಾರಪ್ಪಯ್ಯ ಗುಡಿಗೆ ಹೋಗದಿದ್ದರೆ ಕೂಡಲೆ ಸಿದ್ದಪ್ಪಾಜಿಯು ಹೇಳಿಕಳುಹಿಸುತ್ತಿದ್ದನು. ಈ ದೆಸೆಯಿಂದ ಆ ಗ್ರಾಮದ ಮುಖ್ಯ ಮಹಾಜನಂಗಳ ಸ್ನೇಹವೂ ಪಂತನಿಗೆ ಹೆಚ್ಚಾಯಿತು.

ಆ ಜನರು ಕತ್ತಲೇ ಕಾಲದಲ್ಲಿ ವಾಡಿಕೆಯಾದ ವಿಜಯಯಾತ್ರೆಗೆ ಹೊರಡುವಾಗ ಆ ನಾರಪ್ಪಯ್ಯನ ಸಂಗಡಲೂ ಬೇಕಾದ ಆಲೋಚನೆಯನ್ನು ಮಾಡುತ್ತಾ ಇದ್ದರು. ಬರುತ ಬರುತಾ ಆ ಗ್ರಾಮದ ಹೊಂತಕಾರಿಗಳೆಲ್ಲಾ ಇವನಲ್ಲಿ ಹೆಚ್ಚಾದ ಭಕ್ತಿಯನ್ನೂ ನಂಬಿಕೆಯನ್ನೂ ಇಟ್ಟುಕೊಂಡಿದ್ದರು.

ಈ ಉಪಾಧ್ರಿಯು ಆ ಜನರಿಗೆ ನಾನಾ ಬಗೆಯಲ್ಲಿ ಸಹಾಯವಾಗಿ ಅವರಿಗೆ ಉಪಕಾರವನ್ನು ಮಾಡುತ್ತಾ ಇದ್ದನು. ಈ ಮಧ್ಯಕಾಲದಲ್ಲಿ ಮೇಲೆ ಹೇಳಿದಂತೆ ದೀಕ್ಷಿತರ ವಿಷಯವಾಗಿ ಈ ನಾರಪ್ಪಯ್ಯನಿಗೆ ಅಸಮಾಧಾನ ಉಂಟಾಗಿತ್ತು. ಇದು ಬೂದಿಮುಚ್ಚಿದ ಕೆಂಡವಾಗಿ ಒಳಗೆ ಪ್ರಜ್ವಲಿಸುತಾ ಮೇಲೆ ಸತ್ವಸಾಧಾರಣವಾಗಿರುತಾ ಇತ್ತು. ನನ್ನನ್ನು ಅಪ್ರಯೋಜಕ ಎಂದನಲ್ಲ ಈ ದೀಕ್ಷಿತ! ಎಂದು ಉಪಾಧ್ರಿಯು ಆಗಾಗ್ಗೆ ತೊಳಲುತಾ ಇದ್ದನು. ತನಗೆ ಚೆನ್ನಾಗಿ ಅಹಂಕಾರ ಮೋಟನವಾದ್ದಕ್ಕೆ ಯಾವ ರೀತಿಯಲ್ಲಿ ಏನ ಮಾಡಿದರೆ ಪ್ರತೀಕಾರವಾಗುತ್ತೆ ಎಂದು ನಾರಪ್ಪಯ್ಯನು ತನ್ನ ಮನಸ್ಸಿನಲ್ಲಿಯೇ ಯೋಚಿಸಿಕೊಳ್ಳುತಾ ತನಗೆ ಪರಮಾಪ್ತನಾಗಿದ್ದ ಗುಡೀ ಸಿದ್ದಪ್ಪಾಜಿಯಲ್ಲಿ ಆಗಾಗ್ಗೆ ಹೇಳಿಕೊಳ್ಳುತ್ತಾ ಇದ್ದನು. ಈ ಯೋಚನೆಯ ಆವರ್ತಿ ದಿನೇದಿನೇ ಹೆಚ್ಚುತ್ತಾ ಬಂದ ಹಾಗೆಲ್ಲಾ ಅಸಮಾಧಾನವು ದ್ವೇಷ ರೂಪವಾಗಿ ಪರಿಣಮಿಸುತ್ತಾ ಬಂತು. ದೀಕ್ಷಿತನು ಇವನ ಕ್ಷೇಮಕ್ಕಾಗಿ ಹೇಳಿದ ಮಾತೂ ಮಾಡಿದ ಉಪಕಾರವೂ ಸಹಾ ಕ್ರೋಧದ ಹೊಗೆಯಲ್ಲಿ ಮುಚ್ಚಿಹೋಯಿತು. ಇಷ್ಟಾದರೂ ಉಪಾಧ್ರಿಯು ದೀಕ್ಷಿತರ ಮನೆಯಲ್ಲಿಯೇ ಊಟ ಮಾಡುವುದು ಅವರ ಮನೆಯಲ್ಲಿಯೇ ಮಲಗಿಕೊಳ್ಳುವುದು ಇದನ್ನು ಮಾತ್ರ ಬಿಡಲಿಲ್ಲ ಬಿಟ್ಟರೆ ಇವನಿಗೆ ಆವೂರಲ್ಲಿ ಒಂದು ಹೊತ್ತಾದರೂ ಅನ್ನ ಹುಟ್ಟುವುದು ಹೇಗೆ? ಎಲ್ಲರೂ ಬಾಯಲ್ಲಿ ಮಾತನಾಡುತ್ತಾರೆ, ಬೇಕಾದಷ್ಟು ಸ್ನೇಹವನ್ನು ನಟಿಸುತ್ತಾರೆ. ಕಾರ್ಯದಲ್ಲಿ ಸಹಾಯಮಾಡಬೇಕಾದರೆ ಹಿಂತೆಗೆಯುತ್ತಾರೆ. ಸಾವಿರ ಸಾರಿ ಗೋವಿಂದ ಎನ್ನಬಹುದು, ಒಬ್ಬ ದಾಸಯ್ಯನಿಗೆ ಇಕ್ಕುವುದು ಕಷ್ಟ ಉಪಾಧ್ರಿಯ ದ್ವೇಷವು ಪ್ರಚ್ಛನ್ನವಾಗಿಯೇ ಇತ್ತು.

## ೭ನೆ ಅಧ್ಯಾಯ

ಈ ಮಧ್ಯೆ ಮಹಾದೇವನ ವಿದ್ಯಾಭ್ಯಾಸವು ಸಾಂಗವಾಗಿ ನಡೆಯಿತು. ಯಾರು ನೋಡಿದರೂ ಒಳ್ಳೇ ವಿದ್ವಾಂಸ ಎನ್ನುವ ಹಾಗೆ ಇತ್ತು. ಇವನ ರೂಪವನ್ನೂ ಯೋಗ್ಯತೆಯನ್ನೂ ಇವರ ತಂದೆಯ ಆಸ್ತಿಯನ್ನೂ ನೋಡಿ ಎಲ್ಲರೂ ಇವನಿಗೆ ಹೆಂಣ ಕೊಡುವುದಕ್ಕೆ ನಾನು ತಾನೆಂದು ಮೇಲಾಡುತಿದ್ದರು. ದೀಕ್ಷಿತನು ತನ್ನ ಸೋದರ ಮಾವನಾದ ಪಶುಪತಿ ಸಾಂಬಶಾಸ್ತ್ರಿಯ ಮಾತು ವಿನಾ ಶುಭಕಾರ್ಯಗಳು ಯಾವುದನ್ನೂ ಜರುಗಿಸುತ್ತಿರಲಿಲ್ಲ. ಕಡೆಗೆ ಸಾಂಬಶಾಸ್ತ್ರಿಯ ಮಗನ ಮಗಳನ್ನು ಕೊಡುವುದಾಗಿ ನಿಶ್ಚಯವಾಯಿತು. ಹನ್ನೆರಡು ಕೂಟಗಳು ಸರಿಬಂತು. ಮೈಸೂರಲ್ಲಿಯೇ ಲಗ್ನ ಬೆಳೆಯಿತು. ಹುಡುಗಿಯ ರೂಪವನ್ನೂ ಅವಳ ಗುಣಾತಿಶಯಗಳನ್ನೂ ಹೀಗೆಂದು ಇಲ್ಲಿ ನಾನು ವರ್ಣಿಸಲಾರೆ. ಮುಂದೆ ಎಲ್ಲಾ ತಿಳಿಯಬಹುದಾಗಿದೆ. ಪಶುಪತಿ ಸಾಂಬಶಾಸ್ತ್ರಿಯ ಯೋಗ್ಯತೆಯಲ್ಲಿ ಶ್ರೀಕೃಷ್ಣರಾಜ

ಪ್ರಭುವಿಗೆ ಇದ್ದ ಗೌರವವನ್ನು ತೋರಿಸಲು ಈ ಸಮಯವನ್ನು ದೊರೆಯು ಬಿಡದೆ ಚೆನ್ನಾಗಿ ಉಪಯೋಗಿಸಿಕೊಂಡರೋ ಎನ್ನುವ ಹಾಗೆ ಮದುವೆಗೆ ಬೇಕಾದ ಸೋಬಸ್ಕರಗಳೆಲ್ಲವನ್ನೂ ಅರಮನೆಯಿಂದ ಕಳುಹಿಸುವಂತೆ ಅಪ್ಪಣೆಯಾಯಿತು. ಮತ್ತು ವಿಜೃಂಭಣೆಯಿಂದ ನಡೆಯತಕ್ಕ ಆ ಪ್ರಸ್ತುತದ ಮೆರವಣಿಗೆ ಮುಂತಾದಕ್ಕೆ ಆನೆ, ಅಂಬಾರಿ, ಮುವ್ವತ್ತು ಬೆಳ್ಳಿಕಟ್ಟಿಗೆ, ಕೊಂಬು, ತಮಟೆ, ತಾಸಾ ಮರಫ, ಖಾಸಾ ಓಲಗದವರು, ಒಂದು ಜೋಡಿ ತಾಫೆದವರು, ಇಲಾಲುಗಳು, ಫರಮೀನುಗಳು, ಅದಕ್ಕೆ ಬತ್ತಿ ಎಂಣೆ ಸಹಾ, ಇಬ್ಬರು ಅವಸರದ ಹೋಬಳಿ ಕಟ್ಟಿಗೆಯವರು, ಇದೆಲ್ಲವನ್ನೂ ಮದುವೆಯ ಕೊನೇ ಮೆರವಣಿಗೇ ದಿವಸದವರೆಗೂ ಕಳುಹಿಸಬೇಕೆಂದು ಅಪ್ಪಣೆಯಾಯಿತು. ಅರಮನೆಯ ಅಹಲೇಕಾರರು ಕಚೇರಿಯ ಉದ್ಯೋಗಸ್ತರು ಸಮ್ಮುಖದ ವಿದ್ವಾಂಸರು ಮೊದಲಾದವರಿಗೆಲ್ಲಾ ಔತಣ ಹೇಳಿದ್ದರು. ಪ್ರಸ್ತದಲ್ಲೆಲ್ಲಾ ಒಂದೊಂದು ದಿವಸ ಒಂದೊಂದು ಬಗೆ ರವೆ ಭಕ್ಷ್ಯವನ್ನು ಮಾಡುತಿದ್ದರು. ಪ್ರತಿ ದಿನವೂ ಆರತಿ ಅಕ್ಷತೇ ಕಾಲದಲ್ಲಿ ಸೂಳೆಯರ ಮೇಳ, ಸಂಗೀತಗಾರರ ಗಾನ, ಮಧ್ಯೆ ಮಧ್ಯೆ ನಕಲೀ ನಾರಣಪ್ಪನ ಹಾಸ್ಯ, ಇದೆಲ್ಲವನ್ನೂ ಮೀರಿಸುವ ಹಾಗೆ ನಡೆಯುತ್ತಿದ್ದ ವೇದಘೋಷ, ಶಾಸ್ತ್ರಾರ್ಥವಿಚಾರ, ಇವುಗಳೆಲ್ಲಾ ಜರುಗಿದವು.

ಇಷ್ಟೊಂದು ಸಂತೋಷಕ್ಕೂ ಅಟ್ಟಹಾಸಕ್ಕೂ ಯಾರ ಔದಾರ್ಯವು ಮುಖ್ಯವಾದ ತಲಪರಗಿಯಾಗಿತ್ತೋ ಆ ಪುಣ್ಯಾತ್ಮನ ಪಾದ ಸ್ಪರ್ಶವು ಪ್ರಸ್ತದ ಮನೆಗೆ ಆದಲ್ಲಿ ತಾನು ಕೃತಾರ್ಥನಾದೆನೆಂದು ತಿಳಿದುಕೊಂಡಿದ್ದ ಸಾಂಬಶಾಸ್ತ್ರಿಯು ಪ್ರಸ್ತದಲ್ಲಿ ಒಂದು ದಿನ ವಿರಾಮ ಮಾಡಿಕೊಂಡು ಅರಮನೆಗೆ ಹೋಗಿ ಕಾದಿದ್ದು ಖಾಸಾ ಶಿವಪೂಜೆಯಾದ ಮೇಲೆ ಆರೋಗಣೆಗೆ ಸವಾರಿ ದಯಮಾಡಿಸುವುದಕ್ಕೆ ಮುಂಚೆ ಸಮಯವನ್ನು ನೋಡಿ ತಾನು ತೆಗೆಯಿಸಿಕೊಂಡು ಬಂದಿದ್ದ ಮಂತ್ರಾಕ್ಷತೆ, ತಟ್ಟೆ ಮೇಲೆ ತಟ್ಟೆ ತುಂಬಿದ ಬಗೆಬಗೆ ಫಲಗಳು, ಹೂವು, ಮೊದಲಾದ್ದೆಲ್ಲವನ್ನೂ ಒಪ್ಪಿಸಿ, ವಿನಯದಿಂದ ತಲೆಬಾಗಿ ನಿಂತುಕೊಂಡನು. ಸದಾಶಿವದೀಕ್ಷಿತನೂ ಆತನ ಸಂಗಡಲೇ ದೂರವಾಗಿ ನಿಂತಿದ್ದನು. ಆಗ ದೊರೆ - ಏನು ಶಾಸ್ತ್ರಿಗಳೆ ಮದುವೆ ಬೆಳೆಯಿತೆ?

ಸಾಂಬಶಾಸ್ತ್ರಿ - ಮಹಾಸ್ವಾಮಿಯ ಕೃಪೆಯಿಂದ ಬೆಳೆಯಿತು.

ದೊರೆ - ಏನಯ್ಯ ಸಿಡಿಲಮರಿ, ಉತ್ತಮವಾದ ಸಂಬಂಧವನ್ನು ಮಾಡಿದೆ ಎಂದು ಬಡಾಯಿನಿಂದ ನಮ್ಮ ಸಂಗಡ ಮಾತನಾಡದೆ ಸುಮ್ಮನೇ ದೂರದಲ್ಲಿ ನಿಂತುಕೊಂಡೆ? (ನಗುತಾ ಹೀಗೆ ಅಪ್ಪಣೆಯಾಯಿತು.)

ಸದಾಶಿವದೀಕ್ಷಿತ - ಮಹಾಸ್ವಾಮಿ! ಅಪ್ಪಣೆಯಾದ ಹಾಗೆ ನಾನು ಗರ್ವ ಪಡುವುದಕ್ಕೆ ಸನ್ನಿಧಾನವೇ ಕಾರಣ.

ದೊರೆ - ಏನಯ್ಯ ಮೆಲ್ಲಗೆ ನನ್ನ ಬುಡಕ್ಕೇ ತಂದೆ?

ಸದಾ - ನಮ್ಮ ಮಾವಂದಿರೇನೋ ಸಮ್ಮುಖದ ಮಹಾಪಂಡಿತರು. ಅವರ ವಿಚಾರದಲ್ಲಿ ಅರಿಕೆ ಮಾಡುವುದಿಲ್ಲ, ಹಳ್ಳಿ ಮುಕ್ಕನಾದ ನಾನು ಯಾವ ಪದಾರ್ಥವೆಂದು ಗಣನೆಗೆ ಬರಲಿ? ಹಳ್ಳಿಗೂ ದಿಳ್ಳಿಗೂ ಯಾವ

ಸಂಬಂಧ? ಆದಾಗ್ಯೂ ಅಲ್ಪನಾದ ನನ್ನ ಮೇಲೆ ಇಷ್ಟರ ಮಟ್ಟಿನ ಕೃಪೆ ಇರುವಾಗ ನನ್ನ ಬಡಾಯಿ ಯಾಕೆ ಹೆಚ್ಚಬಾರದು?

ದೊರೆ - ಲಕ್ಷಾಂತರ ಹಳ್ಳಿ ಸೇರಿದ್ದರಿಂದಲ್ಲವೆ ದಿಳ್ಳಿ ದಿಳ್ಳಿಯಾಯಿತು?

ಸದಾ - ಹಳ್ಳಿ ಮಹಾ ಸನ್ನಿಧಾನದಿಂದ ರಕ್ಷಿತವಾದ್ದರಿಂದಲೇ ಹಳ್ಳಿಹಳ್ಳಿಯಾಗಿ ನಿಂತಿದೆ?

ದೊರೆ - ಮಾತಿನಲ್ಲಿ ನಿನಗೆ ಯಾರು ಉತ್ತರ ಕೊಟ್ಟಾರು? ಮೊದಲೇ ಸಿಡಿಲ ಮರಿ ಎಂದು ಹೆಸರನ್ನು ಇಟ್ಟುಕೊಂಡಿದ್ದೀಯೆ.

ಸದಾ - ಮಹಾಸ್ವಾಮಿ ಕೊಟ್ಟ ಬಿರುದು.

ದೊರೆ - ನಿಮ್ಮಿಬ್ಬರನ್ನೂ ನೋಡಿದರೆ ಏನೋ ಒಂದು ವಿಷಯವನ್ನು ಅರಿಕೇ ಮಾಡಲಾರದೆ ಮನಸ್ಸಂಕೋಚದಿಂದ ನಿಂತಿರುವವರ ಹಾಗೆ ಕಾಣುತ್ತೆ, ಅದೇನು ಹೇಳಿ, ಏನು ಲೋಪವಾಯಿತು?

ಪಶುಪ - ಎಲ್ಲಾ ಸಂತೋಷಕ್ಕೂ ಕಾರಣಭೂತರಾದ ಮಹಾಸ್ವಾಮಿಯ ಪಾದಸ್ಪರ್ಶದ ಐಶ್ವರ್ಯ್ಯ ಸುಖಕ್ಕೆ ಪ್ರಸ್ತದ ಮನೆಯ ಭೂಯಿಷ್ಠವು ಪಾತ್ರವಾಗದೇ ಇರುವುದೇ ದೊಡ್ಡ ಲೋಪವಲ್ಲವೆ, ಮಹಾಪ್ರಭು?

ದೊರೆ - ನಾನು ನಿಮ್ಮ ಮನೆಗೆ ಬರಬೇಕೆಂಬ ನಿಮ್ಮ ಭಾವ ಗೊತ್ತಾಯಿತು. ನಿಮ್ಮ ಮನೆಯ ಭೂಯಿಷ್ಠ ಪರಿಶುದ್ಧವಾಗುವುದೆಂಬ ಮಾತು ಉಪಚಾರೋಕ್ತಿ. ಮೊದಲು ನಿಮ್ಮಂಥಾ ವಿದ್ವಾಂಸರ ಮನೆಯ ನೆಲವು ನನಗೆ ಸ್ಪರ್ಶವಾದ ಕೂಡಲೆ ನನ್ನ ಜನ್ಮ ಪವಿತ್ರವಾಗುವುದು.

ಪಶುಪ - ಜನ್ಮಾಂತರದಲ್ಲಿ ಅನೇಕ ತಪಸ್ಸನ್ನು ಮಾಡುತ್ತಾ ಇರುವಾಗ ಲೇಶಮಾತ್ರ ತಪಸ್ಸು ಭಂಗವಾಗಿ ಪುನರ್ಜನ್ಮ ಬಂದು ಮಹಾಪದವಿ ದೊರೆಯುವುದು. ಅಂಥಾ ತಪಸ್ವಿಗಳ ಸ್ಪರ್ಶದಿಂದ ಇತರರು ಪವಿತ್ರರಲ್ಲವೆ?

ದೊರೆ - ನಿಮ್ಮ ಮಾತಿನಮೇಲೆ ಏನು ಹೇಳುವುದಕ್ಕೂ ನನಗೆ ತೋರುವುದಿಲ್ಲ ನಿಮ್ಮ ಇಷ್ಟ ಹೇಗೆ ಇದೆಯೋ ಹಾಗಾಗಲಿ.

ಈ ಪ್ರಕಾರ ಅಪ್ಪಣೆಯಾಯಿತು. ಅದಕ್ಕೆ ತಕ್ಕ ಏರ್ಪಾಡುಗಳೆಲ್ಲಾ ಆಯಿತು. ಗೊತ್ತಾದ ದಿವಸ ಸಾಯಂಕಾಲ ಶಿವಪೂಜೆ ಬೆಳೆದ ಮೇಲೆ ಪ್ರಭುವು ಗುಲಾಬಿರಂಗಿನ ಶಾಲುರುಮಾಲನ್ನು ಸುತ್ತಿ ಬಿಳೀಸಂದರ ಖಾನೆ ಅಂಗಿಯನ್ನು ತೊಟ್ಟು ಕಠಾರಿಕಚ್ಚೆ ಹಾಕಿ ಕರೀ ಅಂಚಿನಪಂಚೆಯನ್ನುಟ್ಟು ರತ್ನಪಡಿಕಾರ ಚುರಿಪಿಕಿಂತಾಬು ಕೆಲಸಮಾಡಿರುವ ಪಾಪಾಸನ್ನು ಮೆಟ್ಟಿ ಮೇನಾದಲ್ಲಿ ಸವಾರಿ ಬಿಜಮಾಡಿದರು. ಬ್ರಾಹ್ಮಣಾಶೀರ್ವಾದ, ಫಲಮಂತ್ರಾಕ್ಷತೆ, ಕನ್ನಡಿ ಕಲಶವನ್ನು ಹಿಡಿದ ಮುತ್ತೈದೆಯರು, ಓಲಗ ಮೊದಲಾದ ವಾದ್ಯಗಳು, ಇವೇ ಮುಂತಾದ ರಾಜಮರ್ಯ್ಯಾದೆಗಳೊಡನೆ ಮದುವೆ ಮನೆಯ ಬಾಗಿಲಲ್ಲಿ ಇದಿರುಗೊಂಡು ಸಾಂಬಶಾಸ್ತ್ರಿಯೂ ಇತರರೂ

ಸವಾರಿಯನ್ನು ಒಳಕ್ಕೆ ಬಿಜಮಾಡಿಸಿದರು. ಅಲ್ಲಿ ಮೇಲುಕಟ್ಟು ಮೊದಲಾಗಿ ವಿಧವಿಧವಾಗಿ ಶೃಂಗಾರಮಾಡಿ ರಚಿಸಿದ್ದಂಥಾ ಪೀಠದ ಮೇಲೆ ಕೃಷ್ಣರಾಜ ಪ್ರಭುಗಳು ಬಿಜಯಂಗೈದು ಕುಶಲ ಪ್ರಶ್ನೆಯನ್ನು ಮಾಡಿದರು. ಅಲ್ಲಿದ್ದ ವೈದಿಕರು ವೇದಹನಸುಗಳನ್ನು ಹೇಳಿ ಆಶೀರ್ವಾದವನ್ನು ಮಾಡಿ ಫಲಮಂತ್ರಾಕ್ಷತೆಯನ್ನು ಒಪ್ಪಿಸಿದರು. ಉಳಿದವರೆಲ್ಲಾ ನಮಸ್ಕಾರ ಮಾಡಿದರು. ಒಂದು ಪಕ್ಷದಲ್ಲಿ ಮದುಮಕ್ಕಳು ಹಸೆಯ ಮೇಲೆ ಕೂತುಕೊಂಡಿದ್ದರು. ಮೇಳಕಟ್ಟಿತ್ತು. ಹೆಂಗಸರು ಹಾಡನ್ನು ಹೇಳುತ್ತಿದ್ದರು. ಆ ದಿವಸಕ್ಕೆ ಆ ಸಮಯಕ್ಕೆ ತಕ್ಕ ಹಾಗೆ ಸದಾಶಿವದೀಕ್ಷಿತನು ಮೂರುನುಡಿಯುಳ್ಳ ಒಂದು ಕೀರ್ತನೆಯನ್ನು ಹೊಸದಾಗಿ ಮಾಡಿದ್ದನು. ಬಹಳ ಚತುರನಾದ ಒಬ್ಬ ಸಂಗೀತಗಾರನು ಅದನ್ನು ಹಾಡುತ್ತಿದ್ದನು. ಮದುವೇ ಮನೆಯ ಗದ್ದಲದ ವಿಭವ ಹೀಗೆಲ್ಲಾ ಇರುವಾಗ, “ಯಾ ಇಲಾಹ ಇಲ್ಲಿಲ್ಲಾ ಮೊಹಮ್ಮದ್ ರಸೂಲಿಲ್ಲಾ ಅಲ್ಲಾ ಹೋ ಅಕಬರ್' ಎಂದು ಸಭೆಯ ಮಧ್ಯೆ ಗಟ್ಟಿಯಾದ ಕೂಗು ಕೇಳಿತು. ಅದರಲ್ಲಿಯೂ ಈ ಸದ್ದು ವೈದಿಕ ಮಂಡಲಿಯಿಂದ ಬಂತು. ತಾಳ ಮೇಳಗಳೆಲ್ಲಾ ನಿಂತು ಹೋದವು. ಎಲ್ಲರಿಗೂ ಗಾಬರಿಯಾಯಿತು. ಎಲ್ಲಿಂದ ಈ ಕೂಗು ಬಂತೋ ಗೊತ್ತಾಗಲಿಲ್ಲ ಸವಾರಿಯ ಸಂಗಡ ಬಂದಿದ್ದ ಚೋಪದಾರರನ್ನು ಕರೆದು ಕೇಳುವಲ್ಲಿ ಅವರು ಹಾಗೆ ಕೂಗಲಿಲ್ಲವೆಂದು ತಿಳಿಯಿತು. ಕೊನೆಗೆ ಉದಾಸೀನ ಭಾವದಿಂದ ಬಿಟ್ಟು ಸಭೆಯು ತಂತಮ್ಮ ಮುಂದಿನ ಕೆಲಸವನ್ನು ನಡೆಯಿಸಲು ಆರಂಭವಾಯಿತು.

ಆಗ ಬಿಳೀ ಸೀರೆಯನ್ನುಟ್ಟು ತಲೆಯಮೇಲೆ ಸೆರಗನ್ನು ಹೊದ್ದು ಹೆಂಗಸರ ಗುಂಪಿನೊಳಗಿನಿಂದ ಸರ್ರನೆ ಒಬ್ಬ ಮುತ್ತೈದೆಯು ಬಂದು ಹಸೆ ಮೇಲೆ ಕೂತಿದ್ದ ಮದುಮಕ್ಕಳ ಮುಂದೆ ಆರತಿಮಾಡಿ ಇರಿಸಿದ್ದ ತಟ್ಟೆಯನ್ನು ಹಿಡಿದು ಯಾರಾದರೂ ಬನ್ನಿರೆ. ಯಂಕ, ದೊಡ್ಡಚ್ಚಿ ಯಾರಾದರೂ ಬನ್ನಿರೆ; ಪಾತಿ, ನೀ ಬಾರೆ; ಸಾಕಿ, ನೀನು ಹಿಡಿಯೆ; ಒಳ್ಳೇದಾಯಿತು, ಆರತಿ ಎತ್ತಿದ್ದನ್ನು ಹೇಳಿ ಸಾಕುಕಣೆ, ಹೇಳಿ ಒಂದು ನುಡಿ; ಸವಾರಿ ಎಷ್ಟು ಹೊತ್ತು ಕೂತಿರಬೇಕು, ನಿಮಗೆ ಬಾರದೇ ಇದ್ದರೆ ಒಳ್ಳೇದಾಯಿತು, ನಾನಾದರೂ ಒಂದುನುಡಿ ಹೇಳುತೇನೆ, ಬನ್ನಿ ;

ಅಂಗೈಯ್ಯ ಹಸೆಮಣೆಮೇಲೆ । ನೆಸ್ಯಮಾಲಕುಮಿ ಕುಳ್ಳಿರಲು ॥
ಬಾಲೆಯರೆಲ್ಲಾ ಅತಿಹರುಷದಲಿ । ನೆಸ್ಯಮಾಲಕುಮಿಗು ॥
ಸುಂಣದರಾಯಗು ತಿಕ್ಕುವಾರಾತಿಯ ಬೆಳಗಿರೆ ॥
ಸೋಬಾನೆ!

ಸೋಬಾನೆ ಎನ್ನುವುದಕ್ಕೆ ಕೂಡ ಕೈಲಾಗದೇನರೆ, ಸುಪನಾತೀರ? ನಾನೆಲ್ಲೂ ಕಾಣೆ ನಮ್ಮವ್ವ, ಬಾರದೇ ಇದ್ದರೆ ಬಿಡಿ, ಆರತಿ ಹಣ ನಿಮಗೇ ಇಲ್ಲ ನಿಮ್ಮಿಂದ ನನಗೂ ತಪ್ಪಿಹೋಯಿತು. ಮನೆಗೆ ಹೋದರೆ ಅವರು ಇನ್ನು ತಕ್ಕೋತಾರೆ ಮೂಲೇ ಗುರಿಕಾರರನ್ನ ರಾತ್ರೆ ಇಷ್ಟೊತ್ತು ಮಾಡಿಕೊಂಡು ಬಂದೆಯಲ್ಲ ಏನತಂದೆ ಎಂದು ಲಗಾಯಿಸುತ್ತಾರೆ. ನಾನು ಏನ ಜವಾಬು ಹೇಳಲಿ? ಛೇ! ಎಂದು ತಾನು ಮುಖವನ್ನು ಅರೆಯಾಗಿ ಮುಚ್ಚಿಕೊಂಡು ಇದ್ದ ಸೆರಗನ್ನು ಆಕೆಯು ಶುದ್ಧವಾಗಿ ಕೆಳಕ್ಕೆ ಜಾರಿಸಿ ಬಿಡಲು, ಹೊದ್ದಪಂಚೆಯನ್ನೇ ಹೆಂಗಸರಹಾಗೆ ಹೊದ್ದಿದ್ದ ವ್ಯಕ್ತಿ ಹೆಂಗಸಲ್ಲ ನಕಲೀ ನಾರಣಪ್ಪನೆಂದು ತಿಳಿದುಕೊಂಡರು. ಸಭೆಯಲ್ಲಾ ಹುಣ್ಣಾಗುವಹಾಗೆ ನಕ್ಕಿತು, ಹೆಂಣು ಗಂಡು

ಆದಿಯಾಗಿ ಹಾಸ್ಯ ರಸದಲ್ಲಿ ಮುಳುಗಿದರು. ಆಗ ದೊರೆಯು ನಗುತ್ತಾ ಈ ಹಾಳ ನಾರಾಯಣನ ವಿಲಾಸ ಎಲ್ಲಿಹೋದರೂ ಬಿಡದು ಎಂದರು.

ನಕಲಿ ನಾರಣಪ್ಪ - ಮಹಾಸ್ವಾಮಿ, ನಾರಾಯಣನ ವಿಲಾಸ ಯಾವಾಗ ಬಿಡುತ್ತೆ? ಬೆಳಗ್ಗೆ ಎದ್ದರೆ ಹಾಸಿಗೆಮೇಲೆ ನಾರಾಯಣ, ರಾತ್ರೆ ಹಾಸಿಗೆಮೇಲೆ ಮಲಗುವಾಗ ನಾರಾಯಣ, ಹಸಿದಿದ್ದರೆ ನಾರಾಯಣ, ಈ ಪಶುಪತಿ ಸಾಂಬಶಾಸ್ತ್ರಿಗಳ ಮನೇ ಊಟದಹಾಗೆ ರಾಮರಗಡಾದ ಊಟ ಈಗ ೮-೧೦ ದಿವಸದಿಂದ ಸಿಕ್ಕಿದ ಹಾಗೆ ಸಿಕ್ಕಿದರೆ ನಾರಾಯಣ, ಸಾಲಾಮಾಡುವಾಗ ಸಂತೋಷವಾಗಿ ನಾರಾಯಣ, ಸಾಲಾತೀರಿಸುವಾಗ ಅಳುತಾ ನಾರಾಯಣ, ಎಲ್ಲಿ ಹೋದರೂ ನಾರಾಯಣ ವಿಲಾಸವೇ ಮಹಾಸ್ವಾಮಿ. ದೇವರಗುಡಿಗೆ ಹೋದರೆ ನಾರಾಯಣ ವಿಲಾಸ, ಅದೆಲ್ಲವನ್ನೂ ತಪ್ಪಿಸಿಕೊಂಡು ಇಲ್ಲಿ ಮಹಾಸನ್ನಿಧಿಗಾದರೂ ಬರೋಣವೆಂದರೂ ನಾರಾಯಣ ವಿಲಾಸ, ಏನೈಯ್ಯ ಹವುದೋ ಅಲ್ಲವೋ?

ಆಗ ಸವಾರಿಯ ಸಮೀಪದಲ್ಲಿಯೇ ಯಾವಾಗಲೂ ಇರುತ್ತಾ ಇದ್ದ ಒಬ್ಬ ಕಟ್ಟಿಗೆಯವನು ಯಾವ ಮಾತನಾಡಿದರೂ "ನಾರಾಯಣವಿಲಾಸ" ಎಂದು ಹೇಳಿ ಮುಂದೆ ಮಾತನಾಡುವ ವಾಡಿಕೆ ಇಟ್ಟಿದ್ದನು. ಇವನಿಗೆ ನಾರಾಯಣ ವಿಲಾಸ ಎಂತಲೇ ಅಡ್ಡಹೆಸರಾಗಿ ಹಾಗೆಯೇ ಎಲ್ಲರೂ ಕರೆಯುತಿದ್ದರು. ನಕಲೀನಾರಣಪ್ಪ ಕೇಳಿದ ಪ್ರಶ್ನೆಗೆ ಆ ಕಟ್ಟಿಗೆಯವನು "ಸ್ವಾಮಿ ನಾರಾಯಣವಿಲಾಸ" ಎಂದನು. ಆಗ ನಾರಣಪ್ಪ ಹವುದೋ ಅಲ್ಲವೋ ಹೇಳಯ್ಯ ಹೇಳಯ್ಯ ಎಂದು ಅವನ ಬೆನ್ನ ಮೇಲೆ ಪೊಳ್ಳುಗುದ್ದು ಹಾಕಲು ಆರಂಭಿಸಿದ ಹಾಗೆಲ್ಲಾ "ನಾರಾಯಣವಿಲಾಸ, ನಾರಾಯಣ ವಿಲಾಸ" ಎಂದು ಅವನು ಕೂಗುತಾಬಂದನು. ಈ ವಿನೋದನವನ್ನು ಸಭೆಯಲ್ಲಾ ನೋಡಿ ನಕ್ಕುನಕ್ಕು ಬೇಜಾರಾದರು. ತರುವಾಯ ಹೆಂಗಸರು ಮದುಮಕ್ಕಳಿಗೆ ಆರತಿ ಎತ್ತುವುದಕ್ಕೆ ಬಾರದೆ ಬಹುವಾಗಿ ನಾಚಿಕೊಂಡರು.

ಖಾಸಸವಾರಿಯು ಅರಮನೆಗೆ ಬಿಜಮಾಡಿಸುವುದಕ್ಕೆ ಏಳುವ ಸಮಯವಾಯಿತು. ಆಗ ನಕಲೀ ನಾರಣಪ್ಪನು - ಮಹಾಸ್ವಾಮಿಯ ಪಾದದಲ್ಲಿ ಇನ್ನೊಂದು ಅರಿಕೆ ಇದೆ. ಪಶುಪತಿ ಸಾಂಬಶಾಸ್ತ್ರಿಗಳು ದೊಡ್ಡ ಶಾಸ್ತ್ರಿಗಳಾಗಿದ್ದಾರೆ. ಇವರು ಮಾಡುವ ಅಕೃತ್ಯವನ್ನು ನಿಲ್ಲಿಸುವವರೇ ಇಲ್ಲ ಹೇಳಿ ಪ್ರಯೋಜನವೇನು? ಮಹಾರಾಯ ವೆಂಕಟಸುಬ್ಬಯ್ಯನವರು; ಅವರು ವೀಣೇತೆಗೆದುಕೊಂಡು ಕೂತುಕೊಂಡರೆ ಸರಸ್ವತೀ ಮುರುಕೇ ಸರಿ, ಇತರರ ಮನೆಗೆ ಅವರನ್ನು ಊಟಕ್ಕೆ ಕರೆದರೆ ಅವರು ವಿನಾಯಕನ ತುಂಡೇ ಸರಿ. ಮಹಾರಾಯ ನಮ್ಮಪ್ಪ ; ಬ್ರಾಹ್ಮಣ ಭೋಜನ ಮಾಡಿಸಬೇಕು ಅವರೇ ಮಾಡಿಸಬೇಕು. ಅವರು ಶೋಭನ ಪ್ರಸ್ತದ ಸಮಾರಾಧನೆಯನ್ನು ಮಾಡಿಸಿದರು. ಅದರ ವಿಜೃಂಭಣೆಯನ್ನು ವಿವರಿಸಲು ಹತ್ತು ಬಾಯಿ ಸಾಲದು. ಅರವತ್ತು ಬಗೆ ಅನ್ನ ಸಾವಿರಬಗೆ ಸಾರು, ಕೋಟಿಬಗೆ ಕೋಸುಂಬರಿ ಎನ್ನುವಂಥಾ ಪಂಚಭಕ್ಷ್ಯ ಪರಮಾನ್ನದ ಸಮಾರಾಧನೇ ಊಟದ ಪರಿಕರವನ್ನು ನಾನು ಏನೆಂದು ಹೇಳಲಿ! ಆದರೆ ಅಂಥಾದ್ದು ಯಾವುದೂ ಇಲ್ಲ, ಕೇಸಕ್ಕಿ ಅನ್ನ ಮೆಣಸಿನ ನೀರು ಕಂಗೇರಮಜ್ಜಿಗೆ ಇದನ್ನು ಬಡಿಸಿ ನಮ್ಮ ಅಜೀರ್ಣವನ್ನೆಲ್ಲಾ ಹೋಗಲಾಡಿಸಿದರು.

"ಅನ್ನಂ ಪಾಟಲಿಪುಷ್ಪ ವರ್ಣಸದೃಶಂ ಕಿಂಚ್ಚಿತ್ತುಷಾರಾನ್ವಿತಂ... ಭಗ್ನಾ ಚ ದಂತಾವಳೀ ಆಜ್ಯಂ ದೂರತರಂ ನವಾಪಿಲವಣಂ ಶಾಖಾಸು ವಸ್ತಾನಹಿನಿತ್ಯಂ ಚಿತ್ರ ವಿಚಿತ್ರಭೋನಜಮಿದಂ ಪ್ರತ್ಯಕ್ಷ ಚಾಂದ್ರಾಯನಂ" ಈ ಶ್ಲೋಕಕ್ಕೆ ಅನುಸಾರವಾಗಿಯೇ ಇತ್ತು. ಈ ಶಾಸ್ತ್ರಿಗಳು ಮನಸ್ಸುಬಂದ ಹಾಗೆ ತಿಂಡಿಯನ್ನು ಹಾಕಿ ಹೊಟ್ಟೆ ಎತ್ತದ ಹಾಗೆ ಮಾಡಿದಾರೆ ಮಹಾಸ್ವಾಮಿ," ಹೀಗೆಂದು ನಕಲೀ ನಾರಣಪ್ಪನು ಕೂಗಿದನು.

ಆಗ ರಾಜರು ನಗುತಾ ಮೇಲಕ್ಕೆ ಏಳಲಾಗಿ ಶಾಸ್ತ್ರಿಗಳು ಅನೇಕ ತಟ್ಟೆಗಳಲ್ಲಿ ನಸರನ್ನು ಒಪ್ಪಿಸಿದರು. ದೊರೆಯು ವಾಡಿಕೆ ಪ್ರಕಾರ ಅದೆಲ್ಲವನ್ನೂ ಸುಮ್ಮನೆ ಕೈಯಿಂದ ಮುಟ್ಟಿ ವಧೂವರರಿಗೆ ಖಿಲ್ಲತ್ತನ್ನು ತರಿಸಿಕೊಟ್ಟು - ಶಾಸ್ತಿಗಳೆ, ಪಾತಿವ್ರತ್ಯಕ್ಕೆ ಬೇಕಾದ ಸಮಸ್ತಲಕ್ಷಣಗಳೂ (ಮದುವೇ ಹೆಂಣನ್ನು ತೋರಿಸುತಾ) ಈ ಹೆಂಣುಮಗಳಲ್ಲಿರುವ ಕಾರಣ ಈಕೆಗೆ ಸೀತಮ್ಮನೆಂದು ನೀವು ನಾಮಕರಣಮಾಡಿದ್ದು ಸಾರ್ಥಕವಾಯಿತು, ಎಂಬದಾಗಿ ಅಪ್ಪಣೆಕೊಡಿಸಿ, ಅಲ್ಲಿದ್ದ ಆಬಾಲವೃದ್ಧರ ಸಂಗಡ ಮಾತನಾಡಿ ಭಟರಾಜುಗಳ ಹೊಗಳಿಕೆಯ ಧ್ವನಿಯಿಂದ ಅರಮನೆಗೆ ಬಿಜಮಾಡಿದರು. ಆ ಸಮಯದಲ್ಲಿ ಸಾಂಬಶಾಸ್ತ್ರಿಯು ಮಹಾಸ್ವಾಮಿ, ಈ ಹೊತ್ತಿನ ಆನಂದವನ್ನು ನಾನು ಹುಟ್ಟಿದಾಗಿನಿಂದ ಅರಿಯೆ ಎಂದನು. ಅಲ್ಲಿದ್ದ ಸಭೆಯೆಲ್ಲಾ ಮಹಾರಾಜರ ಸೌಲಭ್ಯವನ್ನೂ ವಿನಯವನ್ನೂ ದಾತೃತ್ವವನ್ನೂ ಹತ್ತು ಬಾಯಲ್ಲಿ ಹೊಗಳಿದರು.

ಇಂಥಾ ಸೌಲಭ್ಯವೂ ಮೃದುಸ್ವಭಾವವೂ ಗಾಂಭೀರದೊಡನೆ ಮಿಳಿತವಾಗಿ ಸೇರಿಕೊಂಡು ಒಂದರಿಂದ ಇನ್ನೊಂದು ಕೆಡದ ಹಾಗೆ ಇರುವುದು ಬಹು ಅಪೂರ್ವ. ಮಹಾ ಪದವಿಯನ್ನು ಅನುಭವಿಸತಕ್ಕವರಿಗೆ ಇಂಥಾ ಗುಣವಿರತಕ್ಕದ್ದು ಪೂರ್ವಾರ್ಜಿತ ಫಲವಾಗಿದೆ. ತತ್ರಾಪಿ ಈ ಕಾಲಗಳಲ್ಲಿ ಸರ್ಕಾರದ ಒಂದು ಸಾಧಾರಣವಾದ ಉದ್ಯೋಗ ದೊರೆತಾಗ್ಯೂ ಜನರು ಅಟ್ಟಹಾಸದಿಂದ ಮೆರೆಯುತ್ತಾರೆ. ಗಣ್ಯವಾದ ಉದ್ಯೋಗ ದೊರೆತರೆ ತಮ್ಮ ಗರ್ವವನ್ನು ಜನರಮೇಲೆ ತೋರಿಸಿ ಅವರಿಗೆ ಬಗೆ ಬಗೆಯಾದ ಬಾಧೆಗಳನ್ನು ಹುಟ್ಟಿಸುತ್ತಾರೆ. ಅವರ ದೂರುಗಳನ್ನು ಕೇಳದೆ ಅವರ ಸಂಗಡ ಮಾತನಾಡಿದರೆ ತಮ್ಮ ಗೌರವ ಭಂಗವಾಯಿತೆಂದು ಮೆಡ ಮೆಟ್ಟೆಯನ್ನು ಹತ್ತುತಾ, ಸುಮ್ಮನಿದ್ದರೆ ಅವರ ದೂರೇ ಏನೂ ಇಲ್ಲವೆನ್ನುತಾ, ಮಾತನಾಡಿದರೆ ತುಂಟನೆನ್ನುತಾ, ನಾಲ್ಕುಮಾತ ಹೆಚ್ಚಾಗಿ ಆಡಿದರೆ ಅಂಥವರಮೇಲೆ ದ್ವೇಷವನ್ನಿಟ್ಟು ಅವರನ್ನು ನಾಶಮಾಡುತ್ತಾ, ತಾವು ಅಜ್ಞಾನದಿಂದಲೂ ಅವಿವೇಕದಿಂದಲೂ ಕ್ರೋಧದಿಂದಲೂ ಮಾಡುವ ಕೆಲಸವೆಲ್ಲಾ ದೊರೆಯ ಅಪ್ಪಣೆಯಂತೆ ಮಾಡಿದೆವೆನ್ನುತಾರೆ. ಆಗಭೋಗ ಅಗಸ್ತೇಶ್ವರನಿಗೆ ಸತ್ಯ ಪ್ರಮಾಣ ಮಾರ್ಕಂಡೇಶ್ವರನಿಗೆ ಎಂಬ ಗಾದೆಗೆ ಸರಿಯಾಗಿ, ಒಳ್ಳೆ ಕೆಲಸವೇನಾದರೂ ಆದರೆ ಅದನ್ನು ತಾವು ಮಾಡಿದೆವೆನ್ನುತಾ, ಕೆಟ್ಟದೇನಾದರೂ ಆದರೆ ಅದಕ್ಕೆ ದೊರೆಯ ತಲೆಯನ್ನು ಗುರಿಮಾಡಿ ಜನರು ಅರಸನ ಸಮೀಪಕ್ಕೆ ಯಾವಾಗಲೂ ಯಾರೂ ಹೊದ್ದದಹಾಗೆ ಮಾಡುತ್ತಾ, ತಮ್ಮ ಮೇಲೆ ಯಾರು ಏನ ಹೇಳಿಯಾರೋ ಎಂದು ಕಾದುಕೊಂಡಿರುತಾ, ಅರಸನನ್ನು ಮುಂದೆ ಹೊಗಳುತಾ ಹಿಂದೆ ಬಯ್ಯುತಾ ತಮ್ಮ ಪ್ರಯೋಜನವನ್ನು ನಾನಾ ವಿಧದಲ್ಲಿಯೂ ಕಾಪಾಡಿಕೊಳ್ಳುತ್ತಾರೆ. ಮತ್ತರಾದ ಅರಸರು ತಮ್ಮ ಸಮೀಪದಲ್ಲಿದ್ದುಕೊಂಡು ಹಗಲು ರಾತ್ರೆಯೂ ಕರ್ಣದಲ್ಲಿ ಜಪಿಸುವ ಜನರೇ ಆಪ್ತರೆಂದು ತಿಳಿಯುತ್ತಾರೆ. ಅಂಥವರು

ಹೇಳಿದ ಹಾಗೆ ನಡೆಯತಕ್ಕದ್ದು ಮನುಷ್ಯ ಸ್ವಭಾವವಾಗಿದೆ. ಹೀಗೆ ಅರಸುಗಳು ಸಮೀಪದಲ್ಲಿ ಸೇರತಕ್ಕವರು ಅರಸನಿಗೂ ಜನರಿಗೂ ಮಧ್ಯೆನಿಂತು ಕೇಣವಿಲ್ಲದೆ ಅವರವರಿಗೆ ತಂದು ಹಾಕುತ್ತಾರೆ. ಕೊನೆಗೆ ಅರಸನ ಭೇಟಿಯೇ ಪ್ರಜೆಗಳಿಗಾಗದಂತೆ ಮಾಡುತ್ತಾರೆ. ಇಂಥ ಆಚರಣೆಯು ರೂಢಿಗೆ ಬಂದು ಪ್ರಜೆಗಳಲ್ಲಿ ತಾವು ಮಾತನಾಡಿದರೂ ತಮ್ಮ ಗೌರವ ಭಂಗವಾಯಿತೆಂದು ಅರಸು ತಿಳಿಯುತ್ತಾನೆ. ಇಂಥಾ ನಡತೆಯಿಂದ ದೊರೆಗೂ ಪ್ರಜೆಗಳಿಗೂ ಪೂರ್ತಿಯಾಗಿ ಅಗಲಿಹೋಗಿ, ಇವರ ಮನಸ್ಸು ಅವರಿಗೂ, ಅವರ ಮನಸ್ಸು ಇವರಿಗೂ, ಗೊತ್ತಾಗದೆ ಪರಸ್ಪರ ದ್ವೇಷ ಹುಟ್ಟುವುದು. ಈ ಪ್ರಕಾರ ಬಲಿಷ್ಠರಾದ ದೊರೆಗಳು ಪ್ರಜೆಗಳಿಗೆ ಇಲ್ಲದ ಕಷ್ಟವನ್ನು ಕೊಡುತ್ತಾ ತಮ್ಮ ಆನಂದದಲ್ಲಿ ಕಾಲವನ್ನು ಕಳೆಯುತಾರೆ.

ಈ ರೀತಿಯಾದ ನಡತೆಯು ಈ ಪ್ರಾಗ್ದೇಶದ ಅರಸರಲ್ಲಿ ಹೆಚ್ಚಾಗಿ ಇದ್ದದು ನಿಜ. ದೊರೆಗಳು ಎನ್ನಿಸಿಕೊಂಡವರೆಲ್ಲರಿಗೂ ಈ ಭಾಗದಲ್ಲಿ ಲಲಾಟರೇಖೆಯು ಏಕರೀತಿಯಾಗಿದೆಯೋ ಎನ್ನುವ ಹಾಗೆ ರಾಜಸಗುಣವು ಈ ಪುರುಷಶ್ರೇಷ್ಠರಲ್ಲಿ ಸ್ವೇಚ್ಛೆಯಾಗಿ ವಿಹರಿಸುವುದು. ಆದಾಗ್ಯೂ ಯುಗಾಂತರದಲ್ಲಿ ಪುರಾಣ ಪ್ರಸಿದ್ಧರಾದ ನಳ ಮಾಂಧಾತ ಶ್ರೀರಾಮ ಮೊದಲಾದ ಚಕ್ರವರ್ತಿಗಳೂ ಮತ್ತು ಈಚೆಗೆ ಇದ್ದ ಅನೇಕ ರಾಜರೂ ಪ್ರಜೆಗಳೇ ತಮ್ಮ ದೈವವೆಂದು ತಿಳಿದು ರಾಜಸದ ಅಟ್ಟಹಾಸವನ್ನು ಬಿಟ್ಟು ಎಲ್ಲರಲ್ಲಿಯೂ ಲಲಿತವಾಗಿ ಇರುತ್ತಾ ಅವರ ಕಷ್ಟಸುಖಗಳನ್ನು ಅರಿತು ಲೋಕೋಪಕಾರವನ್ನು ಮಾಡುತಿದ್ದರು. ಪಾಶ್ಚಾತ್ಯರಲ್ಲಿಯೂ ಹಿಂದೆ ಇದ್ದ ಅನೇಕ ರಾಜರು ಪ್ರಜೆಗಳ ಸ್ಥಿತಿಯನ್ನು ವಿಚಾರಿಸುವುದರಲ್ಲಿ ಸ್ವಲ್ಪವೂ ಡಂಭವಿಲ್ಲದೆ ಕೇವಲ ಸುಲಭರಾಗಿದ್ದ ಕಾರಣ ಪ್ರಜಾ ಪರಿಪಾಲನೆಯೂ ಅದಕ್ಕೆ ತಕ್ಕ ಹಾಗೆ ಸರಿಯಾಗಿಯೇ ನಡೆಯುತಿತ್ತು. ಆ ಕಾಲದಲ್ಲಿ ಪಾಶ್ಚಾತ್ಯರು ಪ್ರಬಲರಾಗಿರಲಿಲ್ಲ, ಅವರ ದೊರೆಗಳೂ ಕೇವಲ ಹೆಮ್ಮೆಯನ್ನು ವಹಿಸಿರಲಿಲ್ಲ. ಪ್ರಜೆಗಳಲ್ಲಿ ಹೆಚ್ಚಾದ ಅನುರಾಗವನ್ನು ಇಟ್ಟುಕೊಂಡಿದ್ದರು. ಈಚೆಗೆ ಪ್ರಾಗ್ದೇಶಕ್ಕೂ ಆ ಜನರಿಗೂ ಬಳಕೆ ಹೆಚ್ಚಾಗುತ್ತಾ ಬಂತು. ಇಲ್ಲಿ ಆಗಿದ್ದ ದೊರೆಗಳ ಡಂಭವನ್ನು ನೋಡಿ ತಾವೂ ಅವರಂತೆ ಮತ್ತತೆಯನ್ನು ಅವಲಂಬಿಸುತ್ತಾ ಬಂದರು. ರಾಜಸವನ್ನೂ ಪ್ರಜಾಪರಿಪಾಲನೆಯನ್ನೂ ಒಟ್ಟಿಗೆ ಏಕಕಾಲದಲ್ಲಿ ಅನುಸರಿಸುವ ಅಭ್ಯಾಸ ಪ್ರಾಗ್ದೇಶದ ಅರಸರಿಗೆ ಇರುವಷ್ಟು ಪಾಶ್ಚಾತ್ಯರ ರಾಜರಲ್ಲಿ ಇರಲಿಲ್ಲವಾದ ಕಾರಣ, ತಮ್ಮ ರಾಜರು ಹೊಸದಾಗಿ ಸ್ವೀಕರಿಸಿದ ದುರ್ಗುಣದ ಫಲವನು ಪಶ್ಚಿಮ ದೇಶದ ಪ್ರಜೆಗಳು ಸಹಿಸಲಾರದೆ ಆಗಾಗ್ಗೆ ಆ ದೇಶದ ರಾಜರೊಡನೆ ವ್ಯಾಜ್ಯವನ್ನಾಡಿ ವಿಧ ವಿಧವಾದ ಮಾನ್ಯಗಳನ್ನು ಅರಸುಗಳಿಂದ ಬಲವಂತವಾಗಿ ಕಸಿದುಕೊಂಡು ಅರಸು ಕೆಟ್ಟರೂ ಪ್ರಜೆಗಳೂ ರಾಜ್ಯವೂ ಕೆಡದ ಹಾಗೆ ಪ್ರಜೆಗಳ ಅಭಿಮತಾನುಸಾರವಾಗಿ ರಾಜ್ಯವಾಳುವ ಸಂಸ್ಥೆಗಳನ್ನು ಏರ್ಪಡಿಸಿಕೊಂಡು ಇದಾರೆ. ಹಾಗಾದರೂ ಕೂಡ ಒತ್ತಟ್ಟೆ ಪ್ರಜೆಗಳ ಕೈಬಲವಾಗುತಾ ಇದ್ದಾಗ್ಯೂ ಒತ್ತಟ್ಟೆ ರಾಜರ ಅಟ್ಟಹಾಸವೂ ಡಂಭವೂ ಪ್ರಜೆಗಳನ್ನು ಅಲ್ಪರೆಂದು ದೂರಮಾಡುವುದೂ ಸ್ವಪ್ರಯೋಜನ ಪರಾಯಣರಿಗೆ ಕಿವಿಕೊಟ್ಟು ತಪ್ಪುದಾರಿಗಳನ್ನು ಅನುಸರಿಸುವುದೂ ಸಹಾ ಅರಸರಲ್ಲಿ ಪ್ರಜೆಗಳ ಅನುರಾಗವನ್ನು ದಿನೇ ದಿನೇ ಕಡಮೆಮಾಡುತ್ತಲಿದೆ. ಇದರಿಂದ ಜನರಿಗೆ ರಾಜಭಕ್ತಿ ಲೇಶವೂ ಇಲ್ಲದೆ ರಾಜರಿಗೆ ಅವರ ಪದವಿಯೇ ತಪ್ಪಿ ಹೋದ ಕಥೆಗಳು ಎಷ್ಟೋ ಇವೆ. ಈ ಜಗಳದಲ್ಲಿ ಪ್ರಜೆಗಳೂ ರಾಜರೂ ಪ್ರಾಣಬಿಟ್ಟ ಕಥೆಗಳೂ ಎಷ್ಟೋ ಇವೆ.

ಇಂಥಾ ವಿಪರೀತಗಳು ಪಾಶ್ಚಾತ್ಯರಲ್ಲಿ ಅನೇಕವಾಗಿ ನಡೆದು ನಮ್ಮ ದೇಶಗಳಲ್ಲಿ ಮಾತ್ರ ಹೀಗೆ ನಡೆಯದೇ ಇರಲು ಕಾರಣವೇನೆಂದು ವಿಚಾರಿಸಿ ನೋಡಿದರೆ, ಪ್ರತಿಷ್ಠೆಯೂ ಡಂಭವೂ ನಮ್ಮ ಸೀಮೆಯ ರಾಜರುಗಳಲ್ಲಿ ಹೆಚ್ಚಾಗಿದ್ದರೂ, ಸಮಯ ಬಂದಾಗ ತಮ್ಮ ಪದವಿ ಎಂಬ ಪ್ರತಾಪದ ಗಂಟನ್ನು ಅತ್ತ ಇರಿಸಿದವರಾಗಿಯೂ ಪ್ರಜೆಗಳಲ್ಲಿ ಪ್ರಜೆಯಾಗಿಯೂ ವಿಶೇಷವಾದ ಸೌಲಭ್ಯದಿಂದ ನಡೆದುಕೊಂಡು ಪ್ರಜೆಗಳನ್ನು ಕೇವಲ ಆದರದಿಂದ ಕಾಣುವ ಸಹಜವಾದ ಗುಣವು ನಮ್ಮ ಹಲವು ರಾಜರಲ್ಲಿರುವುದರಿಂದ ಎಂಥಾ ತುಂಟನಾದರೂ ರಾಜನ ಒಳ್ಳೆತನದಿಂದ ಜಿತನಾಗುವನು. ಈ ಗುಣವು ನಮ್ಮ ಅರಸರಲ್ಲಿರುವುದರಿಂದಲೇ ಪಾಶ್ಚಾತ್ಯರ ರಾಜರಿಗೆ ಉಂಟಾದ ಅನೇಕ ಬಾಧಕಗಳು ನಮ್ಮ ದೇಶಗಳಲ್ಲಿ ಹುಟ್ಟಲಿಲ್ಲ ಈಚೆಗೆ ಯೂರೋಪಿನ ರಾಜರಹಾಗೆ ನಮ್ಮ ದೊರೆಗಳೂ ಪ್ರಜೆಗಳ ವಿಷಯದಲ್ಲಿ ಬಿರ್ರನೆ ಬೀರಿಕೊಂಡು ಅಸಹ್ಯವಾದ ಮುರುಕನ್ನು ತೋರಿಸುತಾ ಇರುವುದು ತನ್ನ ಸರಣಿಯಲ್ಲಿ ಅದರ ಫಲವನ್ನು ತೋರಿಸದೇ ಇರದು. ಇಂಥಾ ದುರ್ಗುಣಗಳು ಸಮೀಪವೃತ್ತಿಯಲ್ಲಿರತಕ್ಕವರ ದುರ್ಗುಣದ ಪ್ರತಿಬಿಂಬವಾಗಿದೆ. ಈ ಅಂಶವನ್ನು ಬಿಟ್ಟು ಯೋಚಿಸಿದರೆ ಮುಮ್ಮಡಿ ಕೃಷ್ಣರಾಜ ಒಡೆಯರ ಸೌಲಭ್ಯವೂ ಧಾರಾಳವೂ ಎಂಥಾ ಶತ್ರುಗಳನ್ನಾದರೂ ಮಿತ್ರಸ್ಥಾನಕ್ಕೆ ತರುತಾ ಇದ್ದವು. ಪ್ರಜೆಗಳು ಎಂದರೆ ತನ್ನ ಮಕ್ಕಳು ಎಂದು ಭಾವಿಸಿಕೊಂಡಿದ್ದ ಈ ಮಹಾರಾಯನ ವಿವೇಕದಿಂದಲೇ ಮೈಸೂರ ರಾಜ್ಯವು ಇದುವರೆಗೆ ಇಷ್ಟರಮಟ್ಟಿಗೆ ಉಳಿದಿದೆ.

ಈ ರೀತಿಯಲ್ಲಿ ಮದುವೆ ಬೆಳೆಯಿತು. ಬೀಗರ ಔತಣ, ಜೇನವಾಸದ ಮನೆ ತುಂಬಿಸಿಕೊಳ್ಳುವುದು, ಅಳಿಯನಿಗೆ ಚಕ್ಕುಲಿಹೆಡಿಗೆ ತಂದಿರಿಸುವುದು, ಕಳಹುವೂಟ, ಅಳಿಯನನ್ನು ನಿಬ್ಬಣತೆರಳಿ ಸಾಗಕಳುಹಿಸುವುದು, ಇದೆಲ್ಲಾ ಸಾಂಗವಾಗಿ ಜರುಗಿದವು. ಬೀಗರೆಲ್ಲರೂ ಸಂಜವಾಡಿಗೆ ಪ್ರಯಾಣಮಾಡಿ ಹೊರಟು ಹೋದರು. ಶಿಷ್ಯನಾದ ಮಹಾದೇವನ ಮದುವೆಗೆ ಉಪಾಧ್ಯಾಯ ನಾರಪ್ಪಯ್ಯನೂ ಬಂದಿದ್ದನು. ಇವನು ಈ ವಿವಾಹದ ಅಟ್ಟಹಾಸವನ್ನೆಲ್ಲಾ ನೋಡಿ ಉಭ ಶುಭ ಎನ್ನದೆ ಯಾವ ಮಾತನ್ನೂ ಆಡದೆ ದುಮ್ಮೆಂದುಕೊಂಡೇ ಇರುತಿದ್ದನು. ತೌರುಮನೆಯಲ್ಲಿ ಸೀತಮ್ಮನಿಗೆ ನೋಹಿ ವ್ರತಾದಿಗಳೆಲ್ಲಾ ಸಾಂಗವಾಗಿ ಬೆಳೆದವು. ಮದುವೆಯಲ್ಲಿಯಾಗಲಿ, ಬಾಗಿನಮೊದಲಾದ್ದು ಕೊಡಿಸುವುದರಲ್ಲಿಯಾಗಲಿ, ಮುಯಿಗೆ ಮುಯಿ ಮಾಡುವುದರಲ್ಲಿಯಾಗಲಿ ಬೀಗ ಬೀಗರಿಗೆ ಯಾವ ಗಲಗೂ ಇಲ್ಲದೆ ಯಾರಿಗೂ ಮನಸ್ಸು ಕಪ್ಪಾಗದ ಹಾಗೆ ಎಲ್ಲಾ ನಡವಳಿಕೆಗಳೂ ಜರುಗಿದವು. ಕೆಲವು ದಿವಸಗಳ ಮೇಲೆ ಸೀತಮ್ಮನನ್ನು ಅತ್ತೆಮನೆಗೆ ಕರೆದುತಂದು ಕೆಲವು ದಿವಸ ಇರಿಸಿಕೊಂಡಿದ್ದರು. ಅಳಿಯನನ್ನು ಅತ್ತೆಮನೆಗೆ ಯುಗಾದಿ ದೀವಳಿಗೆ ಮೊದಲಾದ ಹಬ್ಬಕ್ಕೆ ಕರೆದು ವಿಭವವಾಗಿ ಆರತಿ ಅಕ್ಷತೆ ಮೊದಲಾದ್ದನ್ನು ಮಾಡಿದರು. ಕೆಲವು ದಿವಸದಲ್ಲಿ ಈ ಹುಡುಗಿ ಮೈನೆರೆದಳು, ಋತುಶಾಂತಿಪಸ್ತವೂ ಜರುಗಿತು. ಹುಡುಗಿಯನ್ನು ಅತ್ತೆಮನೆಗೆ ಕರೆದುತಂದು ಬಿಟ್ಟು ಅಳಿಯನಿಗೂ ಮಗಳಿಗೂ ಚಿನ್ನಬೆಳ್ಳಿ ಸಾಮಾನುಗಳೇ ಮೊದಲಾಗಿ ಅನೇಕ ಪದಾರ್ಥಗಳನ್ನೂ ವಸ್ತ್ರಗಳನ್ನೂ ಬಳುವಳಿಯಾಗಿ ಕೊಟ್ಟರು. ಸೀತಮ್ಮನು ಅತ್ತೆಮನೆಗೆ ಬಂದು ಬಾಳಿಕೊಂಡಿರಲು ಆರಂಭವಾಯಿತು.

---

# ೮ನೆ ಅಧ್ಯಾಯ

ತಿಮ್ಮಮ್ಮನ ಹೊಟ್ಟೆಯಲ್ಲಿ ಒಂದು ಹೆಂಣುಮಗುವಾಯಿತು. ಆ ಹುಡುಗಿಗೆ ಸಾವಿತ್ರಿ ಎಂದು ಹೆಸರಿಟ್ಟಿದ್ದರು. ಮುದ್ದಿಗೆ ಸಾತಿ ಎಂದು ಕರೆಯುತ್ತಿದ್ದರು. ಸೀತಮ್ಮ ನೆರೆದು ಗಂಡನ ಮನೆಗೆ ಬಂದಾಗ ಸಾತಿಗೆ ಒಂಭತ್ತು ವರುಷ ತುಂಬಿತ್ತು. ಈ ಹೆಂಣು ರೂಪಿನಲ್ಲಿಯೂ ತಾಯಿಯನ್ನೇ ಹೆಚ್ಚಾಗಿ ಹೋತಿತ್ತು. ಈ ಹುಡುಗಿಯನ್ನು ಅರಿಕೊಟಾರದ ದೇವರಪ್ಪ ಒಡೆಯರ ಮಗನಿಗೆ ಕೊಟ್ಟಿತ್ತು. ಚಾಮರಾಜನಗರಕ್ಕೆ ಅರಿಕೊಟಾರವೆಂದು ಪೂರ್ವದ ಹೆಸರು. ತಿಮ್ಮಮ್ಮನ ಹೊಟ್ಟೆಯಲ್ಲಿ ಬೇರೇ ಮಕ್ಕಳಿಲ್ಲದೆ ಇದ್ದ ಕಾರಣ ಸಾತಿಯೇ ಆಕೆಗೆ ಕೇವಲವಾಗಿ ಮುದ್ದಿನ ಕಂದವಾಗಿದ್ದಳು. ನೋಹಿವ್ರತಾದಿಗಳನ್ನು ಈ ಹುಡುಗಿಯೂ ಸೀತಮ್ಮನೂ ಒಟ್ಟಿಗೇ ಸೇರಿ ಮಾಡುತಿದ್ದರು. ವೈದಿಕರಾಗಿಯೂ ವಿಶೇಷವಾಗಿ ಆಸ್ತಿಕ್ಯವುಳ್ಳವರಾಗಿಯೂ ಇದ್ದ ಸಂಸಾರದಲ್ಲಿ ಈ ಬಗೆ ಆಚರಣೆಗಳು ಬಲವಾಗಿಯೇ ನಡೆಯುವವು. ಪುಣ್ಯವಂತರಾಗಿದ್ದ ಜೋಯಿಸರ ಮನೆಯವರು ಯಾತರಲ್ಲಿಯೂ ಲೋಪವಿಲ್ಲದಂತೆ ನಡೆಸುತಿದ್ದರು. ಲೋಕ ವಿಡಂಬನಾರ್ಥವಾಗಿ ಇದೆಲ್ಲಾ ಹೀಗೆ ನಡೆಯುತ್ತಿತ್ತು. ಆದಾಗ್ಯೂ ಈ ಸೊಸೆಯನ್ನು ಕಂಡರೆ ತಿಮ್ಮಮ್ಮನಿಗೆ ಆಗುತ್ತಿರಲಿಲ್ಲ ಆ ಹೆಣ್ಣನ್ನು ಕಂಡರೆ ವಿಷದಂತೆ ಕಾಣುತಿದ್ದಳು. ಮಹಾದೇವನಿಗೆ ಮೊದಲು ಬೇರೇ ಒಂದು ಕನ್ಯವನ್ನು ಕೊಡಲು ಮಾತು ನಡೆದಿತ್ತು. ಆ ಕನ್ಯವು ತಿಮ್ಮಮ್ಮನ ಸೋದರಮಾವನ ಮೊಮ್ಮಗಳು. ಈ ಸಂಬಂಧವು ಸದಾಶಿವ ದೀಕ್ಷಿತನಿಗೆ ಸಮಾಧಾನವಾಗಿರಲಿಲ್ಲ, ಹೆಂಣು ಅಷ್ಟು ಲಕ್ಷಣವಾದ್ದಲ್ಲ, ಆ ಸಂಬಂಧದ ಜನರು ಕೇವಲ ಜಗಳಗಂಟರು. ಸೋದರಮಾವನಾದ ಪಶುಪತಿ ಸಾಂಬಶಾಸ್ತ್ರಿಗಳ ಸಂಬಂಧವನ್ನು ಮುಂದಕ್ಕೆ ಬೆಳೆಯಿಸುವುದರಲ್ಲಿ ಆಸಕ್ತಿ ಹೆಚ್ಚಾಗಿತ್ತು. ಮಹಾಸ್ವಾಮಿಯವರ ಅಪ್ಪಣೆಯೂ ಅದರಂತೆಯೇ ಆಯಿತು. ಆದ್ದರಿಂದ ಬೇರೆ ಸಂಬಂಧ ತಪ್ಪಿಹೋಗಲು ಆಸ್ಪದವಾಯಿತು. ಸಾಂಬಶಾಸ್ತ್ರಿಗಳಿಗೆ ಇದ್ದ ಐಶ್ವರ್ಯವೂ ರಾಜ ಪೂಜ್ಯತೆಯೂ ಬೇರೆ ಸಂಬಂಧಕ್ಕೆ ಸದಾಶಿವದೀಕ್ಷಿತನು ಮನಸ್ಸು ಮಾಡಲು ಪ್ರತಿಬಂಧಕಗಳಾಗಿರಲಿಲ್ಲವೆಂದು ಹೇಳುವುದಕ್ಕೆ ಆಗುವುದಿಲ್ಲ.

ಆದರೇನಾಯಿತು? ಇಂಥಾ ಸಂದರ್ಭದಲ್ಲಿ ಗಂಡನ ಮನಸ್ಸು ಇದ್ದ ಹಾಗೆಯೇ ಹೆಂಡತಿಯ ಮನಕ್ಕೂ ಇರುವುದು ಹೇಗೆ? ಅವರವರ ಸಂಬಂಧಾನು ಬಂಧಗಳೇ ಬೇರೆ. ಅವರವರ ಅಭಿಮತಗಳೇ ಬೇರೆ. ಆದಕಾರಣ ತಿಮ್ಮಮ್ಮನು ಮೈಸೂರ ನಂಟತನಕ್ಕೆ ವಿರೋಧಿಯಾಗಿದ್ದಳು. ಈ ವಿರೋಧವು ನಂಟತನದಿಂದ ಸೊಸೆ ಮೇಲಕ್ಕೆ ಹಾರಿತು. ಎಲ್ಲರ ಮೇಲಿನ ಕೋಪವನ್ನೂ ತಿಮ್ಮಮ್ಮನು ಸೊಸೆಮೇಲೆ ತೆಗೆಯಲು ಆರಂಭಿಸಿದಳು.

ಸೀತಮ್ಮನಿಗೆ ಋತುಶಾಂತಿ ಪ್ರಸ್ತುತ ಬೆಳೆದ ತರುವಾಯ ಗಂಡನ ಸಂಗಡ ಮಗಳನ್ನು ಪ್ರಯಾಣಮಾಡಿ ಕಳುಹಿಸಿ ಕೊಡುವಾಗ ತಂದೆ ತಾಯಿಗಳಿಗೂ ಮತ್ತು ಇತರ ಸಂಬಂಧಿಗಳಿಗೂ ಮನಸ್ಸು ವಿಕಲ್ಪವನ್ನು ಹೊಂದಿ ಕಂಣಿನಲ್ಲಿ ಚುಳ್ಳೆನ್ನುವುದು ಮನುಷ್ಯನ ಸ್ವಭಾವಕ್ಕೆ ಸೇರಿದ ಸಂಗತಿಯಾಗಿದೆ. ಆ ಕಾಲದಲ್ಲಿ ವಾಡಿಕೇಪ್ರಕಾರ

ಮೊಮ್ಮಗಳು ತಾತನಾದ ಪಶುಪತಿ ಸಾಂಬಶಾಸ್ತ್ರಿಗೆ ನಮಸ್ಕಾರ ಮಾಡುವುದಕ್ಕೆ ಬಂದಳು. ಆಗ ಈತನಿಗೂ ಬುದ್ಧಿ ಕಳವಳಗೊಂಡಿತು. ಆ ಶಾಸ್ತ್ರಿಯು ಸೀತೆಯನ್ನು ಕುರಿತು-ತಾಯಿ, ಗಂಡನ ಮನೆಗೆ ಹೋಗಿ ಬರುತೀಯ? ಜೋಕೆ, ಬುದ್ಧಿವಂತಳಾಗಿರು ಎಂದು ಹೇಳಿ ಪ್ರಯಾಣ ಮಾಡಿಸಿದನು.

ಮಾವನಮನೆಗೆ ಬಂದಮೇಲೆ ಸೀತಮ್ಮನ ನಡತೆಯನ್ನು ಇಲ್ಲಿ ಸಂಕ್ಷೇಪವಾಗಿ ಕಾಣಿಸಬೇಕಾಗಿದೆ. ಈ ಹುಡುಗಿಯು ಅತ್ತೆ, ಮಾವ, ಗಂಡ, ಇವರು ಏನ ಹೇಳಿದಾಗ್ಯೂ ಕೋಪ ಮಾಡಿಕೊಳ್ಳುತಿರಲಿಲ್ಲ, ಅವರ ಸಂಗಡ ಮಾತನಾಡುವಾಗ ಹಸನ್ಮುಖಿಯಾಗಿ ಮಾತನಾಡುತಿದ್ದಳು. ಇತರರ ಸಂಗಡ ನಗುತನಗುತಾ ಮಾತನಾಡುತಿರಲಿಲ್ಲ, ಪರಪುರುಷರ ಸಂಗಡ ಮಾತನಾಡುವುದೇ ಇಲ್ಲ ಅಥವಾ ಸಂದರ್ಭ ತಪ್ಪಿ ಮಾತನಾಡಬೇಕಾಗಿ ಬಂದರೆ ಆ ಪುರುಷನ ಮುಖವನ್ನು ನೋಡದೆ ತಲೆಯನ್ನು ಬಗ್ಗಿಸಿಕೊಂಡು ನಗದೆ ಮಿತವಾಗಿ ಮಾತನಾಡುತಿದ್ದಳು. ತನ್ನ ಗಂಡನೇ ತನಗೆ ದೇವರೆಂದು ತಿಳಿದುಕೊಂಡಿದ್ದಳು. ಮನೆಯ ಕೆಲಸವನ್ನೂ ಮಾಡಿಕೊಂಡು ಒಳ್ಳೆಮಾರ್ಗದಲ್ಲಿ ಕಾಲವನ್ನು ಕಳೆಯುತಾ ಒಳ್ಳೇಕಥೆಗಳನ್ನು ಕೇಳುತಾ ಕೆಟ್ಟಜನರ ಸಂಗಡ ಸೇರದೆ ಅವರೊಡನೆ ಮಾತನಾಡದೆ ಇರುತಿದ್ದಳು. ತನಗೆ ಕೇಡನ್ನು ಮಾಡಿದವರೇ ಕೆಟ್ಟವರೆಂದು ಈಕೆ ತಿಳಿಯುತ್ತಿರಲಿಲ್ಲ. ತನ್ನ ಗೋಜಿಗೆ ಬಾರದೇ ಇತರರಿಗೆ ಕೇಡನ್ನು ಮಾಡತಕ್ಕವರೂ ತನಗೆ ಶತ್ರುಗಳೆಂದು ತಿಳಿಯುತ್ತಿದ್ದಳು. ಮನೆಯಲ್ಲಿ ಚಾಕರಿ ಮಾಡುವ ಬಾಂದಿಗಳಲ್ಲಿ ಹೆಚ್ಚು ಮಾತನಾಡುತ್ತಿರಲಿಲ್ಲ, ಒಡವೆ ಇಲ್ಲ ಸೀರೆ ಇಲ್ಲ ಎಂದು ಮನಸ್ಸನ್ನು ಚಿಕ್ಕದಾಗಿ ಮಾಡಿಕೊಂಡವಳೇ ಅಲ್ಲ, ಹಬ್ಬ ಹರಿದಿನಗಳಲ್ಲಿ ಬೇಕಾದ ಒಡವೆಯನ್ನು ಇಟ್ಟುಕೊಳ್ಳುತ್ತಿದ್ದರೂ ಡಂಭವಾದ ಸೀರೆಯನ್ನು ಮಾತ್ರ ಉಡುತಿರಲಿಲ್ಲ, ಇಟ್ಟ ಒಡವೆ ಇತರರಿಗೆ ಕಾಣಲೆಂದು ಸೆರಗನ್ನು ತೆಗೆದುಹಾಕುವುದನ್ನು ಇವಳು ಅರಿಯಳು. ಹೆಚ್ಚಾಗಿ ಶೃಂಗಾರಮಾಡಿಕೊಳ್ಳುವದರಲ್ಲಿ ಇಚ್ಛೆ ಇಲ್ಲ, ಮಹಾ ಪತಿವ್ರತೆಯರ ಚರಿತ್ರೆಯನ್ನು ಯಾವಾಗಲೂ ಮನಸ್ಸಿನಲ್ಲಿ ಸರಿಸುತಲೇ ಇರುತ್ತಿದ್ದಳು. ನೆರೆಹೊರೆಯವರು ಅಸಮಾಧಾನಪಟ್ಟುಕೊಳ್ಳುವ ಒಂದು ಗುಣ ಈಕೆಯಲ್ಲಿತ್ತು. ಯಾರ ಸಂಗಡಲೂ ಹೆಚ್ಚಾಗಿ ಮಾತನಾಡುತಿರಲಿಲ್ಲ ಯಾರ ಮನೆಗೆ ಕರೆದರೂ ಹೋಗುವುದಕ್ಕೆ ಇವಳಿಗೆ ಮನಸ್ಸಿಲ್ಲ. ಮನೆಯಲ್ಲಿ ಹುಡುಕಿಕೊಂಡು ಏನಾದರೂ ಒಂದು ಕೆಲಸವನ್ನು ಮಾಡುತ್ತಲೇ ಇರುತಿದ್ದಳು. ಇದರಿಂದ ಈ ಹುಡುಗಿಗೆ ವಿಶೇಷವಾಗಿ ದುರಹಂಕಾರವಿದೆ ಎಂದು ಇತರರು ತಿಳಿಯುವ ಹಾಗಿತ್ತು.

ಗಂಡನಿಗೆ ಹೆಂಡತಿಯಲ್ಲಿ ವಿಶೇಷವಾದ ಪ್ರೀತಿ ಇತ್ತು. ಮಾವನಿಗೆ ಇವಳ ನಡತೆ ಅಚ್ಚುಮೆಚ್ಚಾಗಿತ್ತು. ಕಾರ್ಯೆಷು ದಾಸೀ ಕರಣೇಷು ಮಂತ್ರೀ ರೂಪೇಚ ಲಕ್ಷ್ಮೀ ಕ್ಷಮಯಾ ಧರಿತ್ರೀ ಭೋಜೇಷು ಮಾತಾ ಶಯನೇಷು ವೇಶ್ಯಾ ಷಡ್ಧರ್ಮಯುಕ್ತಾ ಕುಲಧರ್ಮಪತ್ನಿ'- ಇದಕ್ಕೆ ಅನುಸಾರವಾಗಿ ಸೀತಮ್ಮ ಇದ್ದಳು. ಕಿಟ್ಟ ಜೋಯಿಸನು ಯಾರು ಹೇಗೆ ಮಾತನಾಡಿದರೆ ಅವರಂತೆ ಹರಟೇ ಬಡಿಯುತಾ ಐಲಾಟವನ್ನು ಹತ್ತಿಕೊಂಡಿದ್ದನು. ಸಾತಿಯ ರೀತಿ ಮುಂದೆ ಗೊತ್ತಾಗುವುದು. ತಾನು ಶ್ರಮಪಟ್ಟು ಸಾಕಿದ ಮಹಾದೇವನ ಸಂಸಾರ ಅಚ್ಚುಕಟ್ಟಾಯಿತಲ್ಲ ಎಂಬ ಸಂತೋಷದಲ್ಲಿ ಪಾರ್ವತಮ್ಮ ಮುಳುಗಿದ್ದಳು. ವೆಂಕಮ್ಮನು ತನ್ನ ತಮ್ಮ ನೀಲಕಂಠ ಜೋಯಿಸರ ಮನೆಯ

ಹೆಸರವಾಸಿ ಇಷ್ಟರಮಟ್ಟಿಗೆ ನಿಂತಿತಲ್ಲಾ ಎಂದು ಹರ್ಷಿತಳಾಗಿಯೇ ಇದ್ದಳು. ಈಕೆ ಅಷ್ಟೊಂದು ಹೋಕೆಯನ್ನು ಅರಿತ ಪ್ರಾಣಿಯಲ್ಲ, ತಿಮ್ಮಮ್ಮನ ಮನಸ್ಸಿನಲ್ಲಿ ಮಾತ್ರ ಹೊಗೆ ಸುತ್ತಿಕೊಂಡೇ ಇತ್ತು. ಸೊಸೆ ಯಾವ ಕೆಲಸವನ್ನು ಮಾಡಿದರೂ ತಿಮ್ಮಮ್ಮನು ಇಲ್ಲದ ದೋಷಾರೋಪಣೆಯನ್ನು ಮಾಡುತಿದ್ದಳು. ಒಂದು ದಿನ ಸೀತನು ಬೆಳಗಿನ ಜಾವಕ್ಕೆ ಎಂದಿನಂತೆ ಎದ್ದು ಮುಖವನ್ನು ತೊಳೆದುಕೊಂಡು ಕುಂಕುಮ ಇಟ್ಟುಕೊಂಡು ಬಾಗಿಲನ್ನೂ ಬೃಂದಾವನದ ಕಟ್ಟೆಯನ್ನೂ ಗುಡಿಸಿ ಸಾರಿಸಿ ರಂಗವಲ್ಲಿಯನ್ನು ಇಟ್ಟಳು. ಆಗ ತಿಮ್ಮಮ್ಮನು ಬೆಳಗಾದಮೇಲೆ ಎದ್ದು ನೋಡಿ- ಇದೇನೆ, ರಂಗವಲ್ಲಿಯನ್ನು ಸಂಣಗೆ ಕೊರೆಯುತ್ತಾ ಕುಕ್ಕರಿಸಿದ್ದೀಯೇ? ಈ ಕೆಲಸ ಮುಗಿದರೆ ಬೇರೆ ಕೆಲಸಾ ಮಾಡಬೇಕಾಗುತ್ತೆ ಎಂದು ಒಂದರಲ್ಲಿ ನಣಿಗಿಯಾಡುತಿದ್ದೀಯೆ; ಈ ನಾಜೋಕನ್ನೂ ನಡವಳಿತವನ್ನೂ ನಾವು ಅರಿಯವು ನಮ್ಮವ್ವ, ನಮಗೇನು ತಿಳಿಯುತ್ತೆ ಹಳ್ಳಿಗಾಡವರಿಗೆ? ಪಟ್ಟಣವಾಸದ ಚದರೇರು, ನೀವು ಬಲ್ಲಿರಿ. ಅಮ್ಮಮ್ಮ ಅವಳೇನು ಸಾಮಾನ್ಯಳೆ, ಹೇಳಿದರೆ ಬಿಡುತಾಳೆಯೆ? ಇನ್ನು ನಾನುತಾನೆ ಈ ಮನೆಯಲ್ಲಿ ಅನ್ನಕ್ಕೆ ಸೇರಿಕೊಂಡಿರೋಳು, ನನ್ನ ಮಾತನ್ನು ನೀನು ಕೇಳೀಯ? ಛಿ, ಎದ್ದು ನಡೆ ಆಚೆಗೆ, ನಾನು ಚೀಮಾರಿ ಮಾಡಿಬಿಟ್ಟೇನು, ನಿನ್ನ ಹಾಳವಿದ್ಯಕ್ಕೆ ಬೆಂಕಿಹಾಕಿ ಸುಡ, ನಿನಗೆ ಕೆಲಸಾ ಕಲಿಸಿದವಳ ಮುಸುಡೀಗೆ ಎಸರಕಾಸಿದರು, ಹೇಳುತ್ತಾ ಇದ್ದರೆ ಹಾಗೇ ಆಟಃ ಹತ್ತುತಾಳೆ, ಸುಮ್ಮನೆ. ಹೀಗೆ ಕೂಗಾಡುತಾ ಅತ್ತೆಯು ಸೀತೆಯ ಕೈಯನ್ನು ಚಿವುಟಿ ಅವಳು ಇಟ್ಟಿದ್ದ ರಂಗವಲ್ಲಿಯನ್ನು ಕಾಲಲ್ಲಿ ಅಳಿಸಿ ರಂಗವಲ್ಲಿ ಮರಗಿಯನ್ನು ಆ ಹುಡುಗಿಯ ಕೈಯಿಂದ ಕಿತ್ತುಕೊಂಡು ಆ ಪುಡಿಯನ್ನು ಅಲ್ಲೆಲ್ಲಾ ಚೆಲ್ಲಾಡಿದಳು. ಸೀತೆಯು ಸುಮ್ಮನೆ ಎದ್ದು ಒಳಕ್ಕೆ ಹೊರಟುಹೋದಳು. ಉಷಃಕಾಲಕ್ಕೇ ಎಂದಿನಂತೆ ಎದ್ದು ಹೊರಕ್ಕೆ ಹೋಗಿದ್ದ ಸದಾಶಿವ ದೀಕ್ಷಿತನು ಒಗೆದ ಪಂಚೆಯ ಹಿಂಡಿಕೆಗಳನ್ನೂ ಹೂ ತುಳಸಿಯ ಬುಟ್ಟಿಯನ್ನೂ ಕೈಯಲ್ಲಿ ಹಿಡಿದುಕೊಂಡು ಹೊರಗಿನಿಂದ ಮನೆಯ ಬಾಗಿಲಿಗೆ ಬಂದುನೋಡಿ - ಇಂದು ಶುಕ್ರವಾರ, ಬಾಗಿಲಿಗೆ ಇಟ್ಟ ರಂಗವಲ್ಲಿಯನ್ನು ಯಾಕೆ ಅಳಿಸಿದೆ? ಅಲ್ಲಿ ರಂಗವಲ್ಲಿಯನ್ನು ಯಾಕೆ ಚೆಲ್ಲಿಯಾಡಿದೆ? ಎಂದು ಕೇಳಿದನು. ಕೆಲವು ಕಡೆ ನಾಜೂಕಾಗಿ ರಂಗವಲ್ಲಿ ಎಳೆಯನ್ನು ಹಾಕಿದ್ದದ್ದು ಇನ್ನೂ ಹಾಗೆಯೇ ಇತ್ತು. ಇದನ್ನು ತನ್ನ ಸೊಸೆ ಇಟ್ಟಿರಬೇಕು, ಹಾಗಿದ್ದರೆ ಇಟ್ಟ ಎಳೆಗಳನ್ನ ಅಳಿಸಿ ಚೆಲ್ಲಿಯಾಡಿರಲು ಕಾರಣವಿಲ್ಲ ಎಂದು ಯೋಚಿಸುತ್ತಾ ಇರುವಲ್ಲಿ ತಿಮ್ಮಮ್ಮನು - ಇದೆಲ್ಲಾ ನಿಮ್ಮ ಸೊಸೆಮಾಡಿದ ನಾಜೂಕಿನ ಕೆಲಸ, ಆಡಿದರೆ ನಾನೇ ಕೆಟ್ಟವಳಾಗುತ್ತೇನೆ. ಜಾಗ್ರತೆಯಾಗಿ ರಂಗವಲ್ಲಿ ಹಾಕಿ ಏಳು, ಎರೆದುಕೊಳ್ಳುವಂತೆ ಎಂದು ನಾನು ಹೇಳಿದ್ದಕ್ಕೆ ಇಟ್ಟ ರಂಗವಲ್ಲಿಯನ್ನು ಅಳಿಸಿ ಸಟ್ಟ ಶುಕ್ರವಾರದ ದಿವಸ, ಅಲ್ಲೆಲ್ಲಾ ಅದನ್ನು ಚೆಲ್ಲಾಡಿ ಮರಗಿಯನ್ನು ಅಲ್ಲಿ ಕುಕ್ಕಿ ಹೊರಟು ಹೋದಳಲ್ಲ? ಅಬ್ಬಬ್ಬ ಅವಳೇನು ಸಾಮಾನ್ಯಳು ಎಂದು ತಿಳಿದಿದೀರೋಕಾಣೆ, ಅದೆಲ್ಲಾ ಹೇಳುವುದಕ್ಕೆ ಹೋದರೆ ಶಾನೆ ಶಾನೆ ಇದೆ ಎಂದಳು. ಆ ಸಮಯದಲ್ಲಿ ಸಾತಿಯು ಅತ್ತಿಗೆಯನ್ನು ಕುರಿತು - ಅತ್ತಿಗೆ, ಇಲ್ಲಿ ಯಾಕೆ ನಿಂತುಕೊಂಡೆಯೇ? ಉಪ್ಪಿಟ್ಟು ತಿನ್ನೋಣ ಬಾರೆ, ಅಮ್ಮನ ರಗಳೆ ಕಂಡೇ ಇದೆ, ಎಂದಳು. ಸೀತಮ್ಮನು - ಸಾತಿ, ಮುಖಾ ತೊಳೆದುಕೊಂಡು ಬಾ, ಉಪ್ಪಿಟ್ಟನ್ನು ನಿನಗೆ ಕೊಡುತೇನೆ ಎಂದಳು. ಆ ಕೂಡಲೆ ಸಾತಿಯು ಹಟ್ಟಿಗೆ ಓಡಿಬಂದು ರಂಗವಲ್ಲಿ ಪ್ರಸ್ತಾಪದಲ್ಲಿ ಗಂಡನ ಸಂಗಡ ಮಾತನಾಡುತ್ತಾ ನಿಂತಿದ್ದ ತಾಯಿಯನ್ನು ಕುರಿತು - ತಿಮ್ಮ ನೋಡೆ ಅತ್ತಿಗೆ ಅಳುತಾ ದೇವರ ಮನೆ ಜಗಲೀ ಬಳಿ ಕೂತಿದ್ದಾಳೆ, ತಿನ್ನುವುದಕ್ಕೆ ಏನಾದರೂ

ಕೊಡು ಎಂದರೆ ಏನೂ ಇಲ್ಲ ಹೋಗು ಎಂದು ಅಟ್ಟಿಕೊಳ್ಳುತ್ತಾಳೆ, ಎಂದು ಹೇಳಿದಳು. - ತಿಮ್ಮಮ್ಮ - (ಗಂಡನನ್ನು ಕುರಿತು) ನೋಡಿದಿರೊ ಅವಳ ಹಮೀರತನವನ್ನ? ಮಗು ಹೋಗಿ ತಿಂಡಿ ಕೇಳಿದರೆ ಹೀಗೇ ಅವಳು ಅಟ್ಟಿಕೊಳ್ಳುವುದು? ಅದೇನು ಮಾಡಿತು ಇವಳಿಗೆ? ಸಾತಿಯನ್ನು ಕಂಡರೆ ವಿಷ ಕಕ್ಕುತಾಳೆ, ಸಾರ್ಥಕವಾಯಿತು.

ಬಯಸಿ ಬಯಸಿ ಬಾಳಹೊಕ್ಕರೆ ಬಡ್ಡಿಗಂಡ ದಡೀತಂದ ಎಂದಹಾಗೆ, ಹುಡುಕಿ ಹುಡುಕಿ, ಹಳೇ ನಂಟತನ ನನ್ನದು ತನ್ನದು ಎಂದು ಮಾಡಿದ್ದಕ್ಕೆ ಈಗ ನನಗೆ ಬಂದಿದೆ.

ಸದಾಶಿವ - ಇನ್ನೂ ಹುಡುಗಿ ತಿಳಿಯದು. ಹೋಗಲಿಬಿಡು, ಸ್ವಲ್ಪ ಮಾತಿಗೆ ಎಷ್ಟುದೂರ ಬೆಳೆಸುವುದು? - ತಿಮ್ಮಮ್ಮ - ನಾನೇ ಬೆಳಿಸುತೇನೆಯೇ? ನನಗೇನುಬೇಕು? ಎತ್ತಲಾಗಾದರೂ ಹೋಗಲಿ, ನಾನು ಅವಳ ಮಾತಿಗೇ ಬರುವುದಿಲ್ಲ. ಅವಳು ಮಾತ್ರ ಹುಡುಗಿಯಾದಳು, ನನ್ನ ಮಗು ದೊಡ್ಡ ಮುದುಕಿಯಾದಳು.

ಹೀಗೆ ಮಾತನಾಡುತ್ತಾ ಇರುವಾಗ ಮಡೀ ಹರವುವುದಕ್ಕೆ ಸದಾಶಿವದೀಕ್ಷಿತ ಹಿತ್ತಲಕಡೆಗೆ ಹೋದನು. ಆಗ ಚಿಕ್ಕಮನೆಯಲ್ಲಿದ್ದ ಮಹಾದೇವನು ಯಾವುದೋ ಕೆಲಸಕ್ಕೆ ಈಚೆಗೆ ಬಂದನು. ಆಗ

ತಿಮ್ಮ - ಏನೋ ಮಹಾದೇವ, ನಿನ್ನ ಹೆಂಡತಿಯ ಪ್ರಭಾವವನ್ನೆಲ್ಲಾ ಕೇಳುತಾ ಒಳಗೇ ಸುಮ್ಮನೇ ಕೂತಿದ್ದು ಈಗ ಹೊರಗೆ ಬಂದೆ?

ಮಹಾದೇವ - ನನಗೇನು ತಿಳಿಯುತ್ತೆ ಚಿಕ್ಕಮ್ಮ ಬುದ್ಧಿ ಕಲಿಸುವವಳು ನೀನು ಇರುವಾಗ?

ತಿಮ್ಮ - ನಾನು ಇದೇನೆ, ನಾನು, ನಾನು ಒಂದು ಲಕ್ಷ್ಯವೆ ಅವಳಿಗೆ ಸದ್ಯ?

ಈ ಮಾತನ್ನು ಕೇಳಿ ಮಹಾದೇವನು ಹೊರಕ್ಕೆ ಹೋದನು. ಈ ಮಾತಿನ ಬಾಲ ಆ ದಿವಸ ಸಾಯಂಕಾಲ, ರಾತ್ರಿವರೆಗೂ ಇದ್ದೇ ಇತ್ತು.

ಇನ್ನೊಂದು ದಿವಸ ಸೀತಮ್ಮನು ಎಂದಿನಂತೆ ಬೆಳಗ್ಗೆ ಎದ್ದು ಬಾಗಿಲನ್ನು ಸಾರಿಸಿ ರಂಗವಲ್ಲಿ ಹಾಕುವಾಗ ರಂಗವಲ್ಲಿ ಎಳೆಯನ್ನು ಸಂಣವಾಗಿ ಹಾಕದೆ ಎರಡು ಎಳೆಯನ್ನು ಹಾಕಿ ಒಂದು ಚಿಕ್ಕದಾದ ಹಸೆಯನ್ನು ಇಕ್ಕಿ ಒಳಕ್ಕೆ ಹೋದಳು. ತಿಮ್ಮಮ್ಮನು ಇದನ್ನು ನೋಡಿ - ಇದೇನು ದನಕ್ಕೆ ಬರೆ ಹಾಕಿದಹಾಗೆ ದಪ್ಪನಾಗಿ ಎರಡೆಳೆ ಹಾಕಿ ಇರುವುದು? ಹಾಕಿರುವ ರಂಗವಲ್ಲಿ ಎಳೆಯನ್ನು ಯಾರಾದರೂ ಎಡವಿ ಬೀಳುವಹಾಗೆ ಇದೆ. ನೋಡಲಾರೆ, ಇದೇ ಪಟ್ಟಣವಾಸದ ನಾಜೋಕು, ನಿಮ್ಮವರು ಹೀಗೇ ಕೆಲಸಾ ಕಲಿಸಿದಾರೋ? ನಿಮ್ಮವ್ವ ಅಷ್ಟು ಜಾಣೆ, ನಿನಗೆ ಕೆಲಸಾ ಕಲಿಸಿರುವುದು ಹೀಗೆ ಅಲ್ಲವೆ? ಶುಕ್ರವಾರದ ದಿವಸ ಲಕ್ಷಣವಾಗಿ ತುಂಬಾ ನಾಜೋಕಾಗಿ ರಂಗವಲ್ಲಿ ಹಾಕುವವರಿಲ್ಲವೆ? ಇದೆಲ್ಲಾ ಹೇಳಿಕೊಡಬೇಕೆ? ಎಷ್ಟು ದಿವಸ ಹೇಳಿದರೂ ಒಂದೇ, ಇನ್ನು ನಿನಗೆ ಕೆಲಸ ಬರುವುದು ಯಾವಾಗ? ಬಹು ಲಕ್ಷಣವಾಯಿತು. ನಾನು ಹೇಳಿದರೆ ನನ್ನ ನಾಲಿಗೆಯ ಕೆಟ್ಟದಾಗುತ್ತೆ. ನನಗೇನು ಬೇಕು, ಎತ್ತಲಾಗಾದರೂ ಹಾಳಾಗಿ ಹೋಗಲಿ, ನಾನು ಆ ಮಾತಿಗೇ ಬರುವುದಿಲ್ಲ ನಮ್ಮವ್ವ. ನನಗೇನಾಗಬೇಕು? ತುಂಡು

ಪಿಂಡ, ಅಲ್ಲಿಗೆ ತೀರಿತು. ಬಾಳಿ ಬದುಕುವವರು ಬೇಕಾದರೆ ಕಲಿತುಕೊಳ್ಳಿ, ಇಲ್ಲದಿದ್ದರೆ ಬಿಡಿ. ಮೊನ್ನೆತಾನೆ ಅರೆಪಾವು ರಾಗಿ ಹಾಕಿ ಹತ್ತು ಸೇರು ರಂಗವಲ್ಲಿ ಕೊಂಡುಕೊಂಡೆ. ಹೀಗೆ ನೀನು ಎಲ್ಲವನ್ನೂ ಹಾಳುಮಾಡಿದರೆ ನಾವು ಬದುಕುವುದು ಹೇಗೆ? ನಿಮ್ಮಪ್ಪನ ಮನೇಗಂಟೆ, ಅಷ್ಟೊಂದು ರಂಗವಲ್ಲಿಯನ್ನು ಹಾಳುಮಾಡಿದೆಯಲ್ಲ? ಈಗ ಅದೆಲ್ಲವನ್ನೂ ಗುಡಿಸಿ ಎತ್ತು. ಇಲ್ಲದಿದ್ದರೆ ಚೆನ್ನಾಗಿ ಸೋಟೆ ಸಿಗಿದುಬಿಟ್ಟೆನು. ನಾನು ಯಾರೂಂತ ತಿಳಿದುಕೊಂಡಿದೀಯ? ನಿಮ್ಮಪ್ಪನ ಮನೆಯಿಂದ ಬರುವಾಗ ಒಂದು ಗಾಡಿ ರಂಗವಲ್ಲಿಯನ್ನು ಹೇರಿಸಿಕೊಂಡು ಬಂದವಳಿಗಿಂತಲೂ ಹೆಚ್ಚಾಗಿ ದುಂಪಾದೂಳಿ ಮಾಡುತೀಯೆ. ಏನಾದರೂ ಹೇಳುವುದಕ್ಕೆ ಹೋದರೆ ಹಲ್ಲುಕಿರಿದುಕೊಂಡು ಮಾತನಾಡುವುದಕ್ಕೆ ಬರುತೀಯೆ. ನಾಚಿಗೆ ಇಲ್ಲವೆ? ಮುಖ್ಯವಾಗಿ ನೀನೇನು ಮಾಡೀಯೆ. ನಮ್ಮ ಹಣೇಬರಹ. ಸಿಕ್ಕುತಾ ಸಿಕ್ಕುತಾ ಇಂಥ ಹಾಳಮನೇ ಹೆಂಣು ಸಿಕ್ಕಬೇಕೆ?

ಪಾರ್ವತಮ್ಮ - ತಿಮ್ಮು ಯಾಕೆ ಹಾಳುಮನೆ ಹೆಂಣು, ಹಾಗೆ ಹೀಗೆ ಎಂದು ಅವರನ್ನು ಬೈದೀಯೇ? ಯಾವ ಕೆಲಸಾ ಹೇಗೆ ಮಾಡಬೇಕೊ ಹಾಗೆ ಮಾಡು ಎಂದು ಹೇಳು. ಮಾಡುತ್ತಾಳೆ. ನೀನಾಡಿದ ಮಾತಿಗೆ ಅವಳು ಉಭಶುಭ ಎನ್ನುವುದಿಲ್ಲ

ತಿಮ್ಮು - ನೀವು ಈ ಮಾತಿಗೆಲ್ಲಾ ಬರಬೇಡಿ. ನಾನು ತಕ್ಕಹಾಗೆ ಬುದ್ದಿ ಕಲಿಸಿ ಬಿಟ್ಟೇನು, ನಿಮ್ಮ ವುಸ್ತಬಂದಿಯಿಂದಲೇ ಅವಳು ಹಮ್ಮು ಹತ್ತಿ ಸಾಯುತಾಳೆ. ಇನ್ನು ನನ್ನದೇನಿದೆ ಈ ಹಾಳಮನೇಲಿ?

ಪಾರ್ವ - ಯಾಕೆ ಬಾಯಿಮಾತು ಬಾಯಲ್ಲಿದ್ದ ಹಾಗೆಯೇ ಹಾಳಮನೆ ಎಂದೀಯ? ಅದೂ, ಹಾಳಾಗಬೇಡ ಇದೂ ಹಾಳಾಗಬೇಡ, ಧರ್ಮ ದೇವತೆ ಅಸ್ತು ಅಸ್ತು ಎನ್ನುತ್ತಲೇ ಇರುತ್ತೆ. ಒಂದು ಗಳಿಗೆ ಇದ್ದ ಹಾಗೆ ಒಂದು ಗಳಿಗೆ ಇರುವುದಿಲ್ಲ

ತಿಮ್ಮು - ಇಲ್ಲದೆ ಇದ್ದರೆ ಎಲ್ಲಾ ಹೋಗಲಿ, ನೀವಿದ್ದೀರಲ್ಲ ಒಳ್ಳೋರು ಲೊಳ್ಳೋರು. ಅಷ್ಟೇ ಸಾಕು. ಇನ್ನು ಎಷ್ಟು ಜನವಿರಬೇಕು. ಹೀಗೆ ಅತ್ತೆ ಸೊಸೆಯರು ಸ್ವಲ್ಪ ಹೊತ್ತು ಜಗಳವಾಡಿ ಸುಮ್ಮನಾದರು. ಗೌರೀ ಹಬ್ಬ ಬಂತು. ಮೊರದಬಾಗಿನಕ್ಕೆ ಅಣಿಮಾಡು ಎಂದು ತಿಮ್ಮಮ್ಮನು ಸೊಸೆಗೆ ಹೇಳಿದಳು. ಆ ಹುಡುಗಿಯು ಮೈಸೂರಲ್ಲಿ ದೊಡ್ಡ ದೊಡ್ಡವರ ಮನೆಗಳಲ್ಲಿ ಮೊರದ ಬಾಗಿನಕ್ಕೆ ಅಣಿಮಾಡಿದ್ದನ್ನು ನೋಡಿದವಳು, ಅದರ ಹಾಗೆಯೇ ಇಲ್ಲಿಯೂ ಮಾಡಬೇಕೇನೋ ಎಂದು ಅಚ್ಚಕಟ್ಟಾಗಿ ಅಣಿ ಮಾಡಿದಳು. ಒಂದು ತೆಂಗಿನಕಾಯಿ ಸಾಲಲಿಲ್ಲ ಹೀಗೆ ಸಾಲಲಿಲ್ಲವೆಂದು ಅತ್ತೆಗೆ ಸೊಸೆ ಹೇಳಿದಳು. ಆಗ -

ತಿಮ್ಮು - ಅಲ್ಲಕಣೆ ಗಯ್ಯಾಳಿಗೌಡಿ, ತೆಂಗಿನಕಾಯಿ ಇರಿಸು ಬಾಗಿನಕ್ಕೆ ಎಂದು ನಿನಗೆ ಯಾರೆ ಹೇಳಿದವರು? ನಿನ್ನೆಡೆಯಲ್ಲಿ ಬೆಯ್ಯುವವರು ಯಾರು ನಮ್ಮವ್ವ. ಹೇಳದೆ ಕೇಳದೆ ಯಾವ ನಿಸೂರಿನಿಂದ ತೆಂಗಿನಕಾಯನ್ನು ಬಾಗಿನಕ್ಕೆಲ್ಲಾ ಇರಿಸಿದೆಯೆ? ನಿನಗೆ ಯಾರ ಸ್ವತಂತ್ರ ಕೊಟ್ಟವರು? ಹೊಟ್ಟೆಗೆ ಅನ್ನಾ ತಿನ್ನುತೀಯೋ ಮಂಣ ತಿನ್ನುತೀಯೊ? ಹೀಗೆಂದು ವಿಪರೀತವಾದ ಕೋಪದಿಂದ ಬಂದು ಒಂದು ತೆಂಗಿನಕಾಯನ್ನು

ತೆಗೆದುಕೊಂಡು ತಿಮ್ಮಮ್ಮನು ಸೊಸೆಯ ತಲೆಯಮೇಲೆ ಕುಕ್ಕಿದಳು. ಪೆಟ್ಟು ಬಲವಾಗಿಯೇ ಬಿತ್ತು. ಆ ಹುಡುಗಿಯು ತಡೆಯಲಾರದೆ ಅಯ್ಯೋ ಎಂದು ಸ್ವಲ್ಪ ಗಟ್ಟಿಯಾಗಿ ಎಂದಳು. ಆಗ ತಿಮ್ಮಮ್ಮನು - ಕೂಗುತೀಯ, ತೊಂಡೂರ ರಾಕ್ಷಸಿ? ಈಗ ನಿನಗಾದ್ದೇನೆ, ಆಪತ್ತು ಬಂದು ಚಾಪೇಲಿ ಸುತ್ತಿಕೊಂಡು ಹೋಯಿತೇನೆ, ಗಯ್ಯಾಳಿಗೌಡಿ, ಎನ್ನುತಾ ಸೀತಮ್ಮನ ಕೆನ್ನೆಯನ್ನು ಹಿಡಿದು ಚಿವುಟಿದಳು. ಆ ಹೊಡೆದಾಟದಲ್ಲಿ ಸೀತೆಯ ಮೂಗಿನಮೇಲೆಯೂ ಒಂದೇಟು ಬಿತ್ತು. ಮೂಗ ಬಟ್ಟಿನ ಕಾವು ಮೂಗಿನ ಹೊಳ್ಳೆಗೆ ಚುಚ್ಚಿಕೊಂಡು ರಕ್ತಬಂತು. ಸೀತಮ್ಮನು ಯಾವ ಮಾತನ್ನೂ ಆಡದೆ ಒಳಕ್ಕೆ ಎದ್ದು ಹೋದಳು.

ಹೀಗೆಯೇ ಸ್ವಲ್ಪ ಮಾತಿಗೆಲ್ಲಾ ಸೀತಮ್ಮನನ್ನು ತಿಮ್ಮಮ್ಮನು ಹೀನಮಾನವಾಗಿ ಬೈಯುತಾ ಹಂಗಿಸುತಾ ಹೀಯಾಳಿಸುತ್ತಾ ಇದ್ದಳು. ಈ ರೀತಿಯಲ್ಲಿ ಕಾಲಕಳೆಯುತಾ ಇರುವಾಗ್ಗೆ ವೆಂಕಮ್ಮ ಪಾರ್ವತಮ್ಮ ಈ ಇಬ್ಬರು ಮುದುಕರಲ್ಲಿ ಯಾರಾದರೂ ಒಬ್ಬರು ಹಗಲಿನ ಅಡಿಗೆಯನ್ನು ಮಾಡಿ ಇರಿಸುತಿದ್ದರು. ಒಂದೊಂದು ದಿವಸ ಆ ಮುದುಕಿಯರಲ್ಲಿ ಯಾರಾದರೂ ಎದ್ದು ಬಡಿಸುವುದು, ಯಾವಾಗಲಾದರೂ ತಿಮ್ಮಮ್ಮನೇ ಎದ್ದು ಬಡಿಸುವುದು, ಹೀಗೆ ಇತ್ತು. ತಿಮ್ಮಮ್ಮನು ಸ್ವಂತವಾಗಿ ಅಡಿಗೇ ಮಾಡುತಿರಲಿಲ್ಲ, ಅಥವಾ ಸಮಯತಪ್ಪಿ ಯಾವಾಗಲಾದರೂ ಇವಳು ಅಡಿಗೇ ಒಲೇ ಮುಂದಕ್ಕೆ ಹೋದರೆ, ಅನ್ನ ಮುಗಳಕ್ಕಿಯೋ ಇಲ್ಲ ಮಿಡೆಯೋ ಆಗುತಿತ್ತು. ಹುಳಿಗೆ ಉಪ್ಪು ಹೆಚ್ಚು, ಎಸರಿಗೆ ಹುಳಿ ಹೆಚ್ಚು ಒಗ್ಗರಣೆ ಇಲ್ಲದೆ ತಾಳಿದ, ಹೀಗೆಲ್ಲಾ ಮಾಡುತಿದ್ದಾಗ್ಯೂ, ನಾಲ್ಕು ಜನ ಇವಳ ಸುತ್ತ ಕೆಲಸಕ್ಕೆ ನಿಂತುಕೊಂಡಿರಬೇಕು. ಉಪ್ಪು ಇಷ್ಟುಹಾಕು, ಹುಳಿ ಅಷ್ಟುಹಾಕು, ಕಾರ ಇದಕ್ಕೆ ಹೆಚ್ಚು ಅದಕ್ಕೆ ಕಡಮೆ, ಎಂದು ಹೇಳತಕ್ಕವರು ನಿಂತೇ ಇರಬೇಕು. ಈ ಪೈಕಿ ಯಾರಾದರೂ ಅತ್ತ ಇತ್ತ ಅಡ್ಡಾಡಿ ಹೋದರೆ, ಕೂಗಿಕೊಳ್ಳುವುದೆಷ್ಟೋ, ಆಲಿ ಅಬ್ಬರಿಸುವುದೆಷ್ಟೋ ಸಿಕ್ಕಿದವರನ್ನು ಸಿಕ್ಕಿದಹಾಗೆ ಅಂದು ಆಡುವುದೆಷ್ಟೋ, ಹೀಗೆಲ್ಲಾ ಮಾಡಿ ಕೊನೆಗೂ ಅಡಿಗೆಯನ್ನು ಕೆಡಿಸಿ ಯಾರಿಗೂ ಅರೆಹೊಟ್ಟೆ ಅನ್ನವೂ ದೊರೆಯದಹಾಗೆ ಮಾಡುತಿದ್ದಳು. ಮಧ್ಯೆ ಮಧ್ಯೆ ದೇವರಿಗೆ ನಿವೇದನವಾಗುವುದಕ್ಕೆ ಮುಂಚೆ ತನ್ನ ಮಗಳನ್ನು ಕರೆದು ಬಡಿಸುತಿದ್ದಳು. ಕೊನೆಗೆ ಬರುತಬರುತಾ ರಾತ್ರಿ ಹೊತ್ತಿನ ಅಡಿಗೆಯನ್ನು ಬಹು ಚೆನ್ನಾಗಿ ಮಾಡುತಿದ್ದಳು. ಪಾಕ ಸ್ವಲ್ಪ ಕೆಟ್ಟು ಹೋಗಿದ್ದರೂ ಸದಾಶಿವದೀಕ್ಷಿತನು ಹೊಟ್ಟೆತುಂಬ ಊಟಮಾಡುತಿರಲಿಲ್ಲ, ಹೀಗೆ ಮಗನಿಗೆ ಅರೆಹೊಟ್ಟೆಯಾಗುವುದಲ್ಲಾ ಎಂಬ ಪೇಚಾಟದಿಂದ ಪಾರ್ವತಮ್ಮನು ದಿನವಹಿ ತಾನೇ ಅಡಿಗೆಗೆ ನಿಲ್ಲುತ್ತಿದ್ದಳು. ಬರುಬರುತಾ ಪ್ರಾಯ ಬರುತ್ತೆಯೆ? ಮೊದಲೇ ಮುದುಕಿ, ಈಚೆಗೆ ಶಕ್ತಿ ಕಡಮೆಯಾಯಿತು. ವೆಂಕಮ್ಮ ಈಕೆಗಿಂತಲೂ ವಯಸ್ಸಾದವಳು. ಆದರೂ ಈ ಇಬ್ಬರು ಮುದುಕರು ಸವರಿಸಿಕೊಳ್ಳುತಿದ್ದರು. ತಿಮ್ಮಮ್ಮನ ಕೆಲಸವಂತೂ ಕಂಡೇ ಇದೆ. ಮುದುಕರ ನೆರವಿಗೆ ಇನ್ನು ಯಾರಿದಾರೆ? ಸೀತಮ್ಮನ ಹೊಟ್ಟೆಯಲ್ಲಿ ಮಕ್ಕಳಾಗುವವರೆಗೆ ಮುದುಕಿಯರು ಯಾರೂ ಇವಳ ಕೈಯಲ್ಲಿ ಊಟ ಮಾಡುವುದಿಲ್ಲ. ಈ ಕಾರಣದಿಂದ ಒಂದುಹೊತ್ತು ತಾವೇ ಮುದುಕಿಯರು ಯಾರಾದರೂ ಮಾಡಿ ಇರಿಸುತಿದ್ದರು. ಪಾರ್ವತಮ್ಮನಿಗೆ ರಾತ್ರೆ ಕಾಲದಲ್ಲಿ ಕಂಣು ಚೆನ್ನಾಗಿ ಕಾಣಿಸದ ಹಾಗೆ ಆಗುತ ಬಂತು. ಈ ಕಾರಣದಿಂದ ರಾತ್ರೆ ಅಡಿಗೆಯನ್ನು ಯಾರೂ ಅಲೆಗಳಿಯುತಿರಲಿಲ್ಲ

ಒಂದು ದಿನ -

ಸದಾಶಿವ - ನಮ್ಮ ಸೀತಮ್ಮ ಪಟ್ಟಣವಾಸದವಳು, ಐಶ್ವರ್ಯವಂತರ ಮನೆಯಲ್ಲಿ ಹುಟ್ಟಿದವಳು. ತೌರುಮನೆಯಲ್ಲಿ ಕೆಲಸ ಮಾಡುವುದಕ್ಕೆ ಜನವೇನೂ ಕಡಮೆಯಾಗಿಲ್ಲ ಅವರೆಲ್ಲಾ ಕೂತುಕೊಂಡು ಇವಳ ಕೈಯಲ್ಲಿ ಕೆಲಸಮಾಡಿಸುತಾರೆಯೆ? ಆದಾಗ್ಯೂ ಇವಳಿಗೆ ಅಡಿಗೆ ಕೆಲಸವೆಲ್ಲವನ್ನೂ ಕಲಿಸಿದಾರಲ್ಲ?

ಪಾರ್ವ - ಅದೇ ನಾನು ಹೇಳುವುದು? ಇದು ಒಂದೇ ಅಲ್ಲ ಮಗು ಯಾವ ಕೆಲಸವನ್ನೂ ನಾಜೋಕಾಗಿ ಮಾಡುತ್ತಾಳೆ. ಸೀತನಿಗೆ ಈ ಕೆಲಸ ಬರುತ್ತೆ ಆ ಕೆಲಸ ಬಾರದು ಎಂತ ಇಲ್ಲ ನೋಡು.

ತಿಮ್ಮ - ಹವುದು, ಹಾಗೇ ಆಗಲಿ. ನಿಮ್ಮ ಸೊಸೆಯೇ ಜಾಣೆ, ಹುಡುಕಿ ಹುಡುಕಿ ಜಾಣೆಯನ್ನೇ ತಂದುಕೊಂಡಿದ್ದೀರಷ್ಟೆ ನಾನು ಹುಚ್ಚಿ ಬೆಪ್ಪಿ ಅಡಿಗೆ ಮಾಡಲಾರೆ, ಯಾವ ಕೆಲಸವೂ ಬಾರದು. ನನ್ನ ಅನ್ನುವುದಕ್ಕೆ ಅಲ್ಲವೆ ಇಷ್ಟೂವೆ? ನಿಮ್ಮ ಮನಸ್ಸಿಗೆ ಏನೇನು ಬರುತ್ತೋ ಎಲ್ಲಾ ಅನ್ನಿ. ಅನ್ನಿಸಿಕೊಳ್ಳುವುದಕ್ಕೇ ನಾನು ಹುಟ್ಟಿರುವುದು. ನಮ್ಮ ಅಪ್ಪ ಯಾವಾಗ ಸತ್ತನೋ ಆಗಲೇ ಆಯಿತು. ಇನ್ನು ಅದೆಲ್ಲಾ ಯಾಕೆ? ಸಿಕ್ಕಿದವರ ಕೈಯಲ್ಲಿ ಅನ್ನಿಸಿಕೊಂಡು ಆಡಿಸಿಕೊಂಡು ನಾನು ಇಷ್ಟು ಹಂಗಿನ ಕೂಳ ತಿನ್ನುತ್ತೇನೆ. ಇನ್ನೂ ಏನೇನು ಆಗುತ್ತೋ ಆಗಲಿ.

ಸದಾ - ನೀನು ಯಾಕೆ, ಇಲ್ಲದ ಮಾತನ್ನೆಲ್ಲಾ ಆಡಬೇಕು? ಉಳ್ಳಿ ತಿಂದಮ್ಮನಿಗೆ ಉಳುಕಿತು ಎಂದಹಾಗಾಯಿತು.

ತಿಮ್ಮ - ಹಾಗೇ ಆಗಲಿ, ಅವಳೇ ಮಾಡಲಿ. ನನಗೂ ಸರಾಗವೇ ಆಯಿತು. ನಾನೂ ಕಾಲಚಾಚಿಕೊಂಡು ಊಟಮಾಡುತೇನೆ.

ಈ ಪ್ರಕಾರ ಮಾತು ನಡೆಯಿತು. ಸೀತಮ್ಮನೇ ರಾತ್ರೆ ಕಾಲದಲ್ಲಿ ಅಡಿಗೆ ಮಾಡುವುದು, ಇಕ್ಕುವುದು, ಇರಿಸುವುದು, ರಾತ್ರೆಯೇ ಮುಸುರೆ ಮೊದಲಾದನ್ನೆಲ್ಲಾ ತೊಳೆದು ಉಪಕರಣಗಳೆಲ್ಲವನ್ನೂ ತೊಳೆದು ಇರಿಸಿ, ಹಾಲಿಗೆ ಹೆಪ್ಪುಹಾಕಿ, ತರುವಾಯ ತಾನು ಊಟಮಾಡಿ ರಾತ್ರಿಯೇ ಕಸಮುಸುರೆ ಕೆಲಸವನ್ನು ಮಾಡಿ ಮುಚ್ಚಿರಿಸುವುದನ್ನು ಮುಚ್ಚಿರಿಸಿ, ಮಲಗಿಕೊಳ್ಳುತಿದ್ದಳು. ಅವಳ ಒಪ್ಪ ಓರಣವನ್ನು ಅವಳಿಂದ ಇತರರು ಕಲಿತುಕೊಳ್ಳುವ ಹಾಗೆ ಇತ್ತು. ಇವಳು ಮಾಡಿದ ಕೆಲಸವನ್ನು ಎಲ್ಲರೂ ಮೆಚ್ಚುವ ಹಾಗೆ ಇತ್ತೇ ಹೊರತು ಯಾರೂ ಹೀಗಲ್ಲ ಹಾಗೆ ಎನ್ನುವಂತೆ ಇರಲಿಲ್ಲ. ಇದೆಲ್ಲಾ ತಿಮ್ಮಮ್ಮನಿಗೆ ಸೈರಣೆ ಇಲ್ಲ, ಏನಾದರೂ ತಪ್ಪು ಸಿಕ್ಕಿತೆ, ಅದನ್ನು ಕಂಡು ಆ ಹುಡುಗಿಯನ್ನು ನಾಲ್ಕು ಮಾತು ಅಂದೇನೆ ಎಂದು ಅತ್ತೆಯು ಕಾದುಕೊಂಡೇ ಇರುತಿದ್ದಳು. ಅದೇ ಕೆಲಸವಾಗಿ ಕೂತುಕೊಂಡು ತಪ್ಪು ಕಂಡುಹಿಡಿಯಬೇಕೆಂಬದಾಗಿ ಕ್ಷಣತ ಎಣಿಸಿಕೊಂಡಿರುವವರಿಗೆ ಏನಾದರೂ ಒಂದು ತಪ್ಪುನೆಪ್ಪು ಸಿಕ್ಕಿಯೇ ಸಿಕ್ಕುವುದು ಸಹಜವಾಗಿದೆ. ಯಾವುದ ಮಾಡಿದರೆ ಅದೇ ತಪ್ಪು ಯಾವುದ ಬಿಟ್ಟರೆ ಅದೇ ತಪ್ಪು ಹೀಗೆಲ್ಲಾ ಒಂದೊಂದು ಕೆಲಸದಲ್ಲಿಯೂ ಆ ಹುಡುಗಿಯ ಮೇಲೆ ಆಕ್ಷೇಪಣೆ ಮಾಡುವುದು, ಹಂಗಿಸುವುದು, ಮೂದಲಿಸುವುದು, ಸಮಯ ಸಿಕ್ಕಿದಾಗ ಸೀತೆಯ ತೌರುಮನೆಯವರನ್ನು ಹೀಯಾಳಿಸುವುದು.

ಇದೆಲ್ಲಾ ದಿನಗಟ್ಟಲೇ ಚಲ್ಯದಲ್ಲಿಯೇ ಸೇರಿ ಹೋಗಿತ್ತು. ಮಧ್ಯೆಮಧ್ಯೆ ಸಾಕಿಯ ಚೇಷ್ಟೆಯನ್ನು ಸಹಿಸುವುದು ಬಹು ಕಷ್ಟವಾಯಿತು. ಒಂದು ದಿವಸ ಸಾಯಂಕಾಲ ಮಡಿವುಟ್ಟುಕೊಂಡು ಒಲೆಯಮೇಲೆ ಅನ್ನಕ್ಕೂ ಸಾರಿಗೂ ಎಸರ ಇರಿಸಿ ನೀರನ್ನು ಸೇದಿಕೊಂಡು ಬರುವುದಕ್ಕೆ ಸೀತೆಯು ಹಿತ್ತಲಕಡೆಗೆ ಬಿಂದಿಗೆ ತೆಗೆದುಕೊಂಡು ಹೋದಳು. ಇದನ್ನು ನೋಡಿಕೊಂಡಿದ್ದ ಸಾಕಿಯು ಕೋಣೆಗೆ ಹೋಗಿ ಅನ್ನದ ಎಸರ ಇರಿಸಿದ್ದ ತಪ್ಪಲೆಗೆ ಒಂದು ಹಿಡಿ ಉಪ್ಪನ್ನು ಹಾಕಿಬಿಟ್ಟು ಗುಟ್ಟಾಗಿ ಹೊರಟುಬಂದಳು. ಸೀತಮ್ಮನು ಅದು ಹೀಗಾಯಿತೆಂದು ಅನುಮಾನಪಡುವುದಕ್ಕೂ ಮಾರ್ಗವಿರಲಿಲ್ಲ ಇವಳು ಒಂದು ಬಿಂದಿಗೆ ನೀರನ್ನು ಎಡದ ಸೊಂಟದ ಮೇಲೆ ಇರಿಸಿಕೊಂಡು ಇನ್ನೊಂದು ಬಿಂದಿಗೆ ನೀರನ್ನು ಬಲಗೈಯಲ್ಲಿ ಹಿಡಿದು ಕೋಣೆಗೆ ಬಂದು ಜಾಗ್ರತೆಯಾಗಿ ಅಡಿಗೆ ಮಾಡಿದಳು. ಯಥಾಪ್ರಕಾರವಾಗಿ ಹೊಳೆಯಲ್ಲಿ ಸಂಧ್ಯಾವಂದನೆಯನ್ನು ತೀರಿಸಿಕೊಂಡು ಬಂದಿದ್ದ ಗಂಡಸರೂ ಇತರರೂ ಊಟಕ್ಕೆ ಎದ್ದರು. ಮಹಾದೇವನು ಮಡಿ ಉಟ್ಟುಕೊಂಡು ಸಂಧ್ಯಾವಂದನೆ ಮಾಡಿ ದೇವರಿಗೆ ಮಂಗಳಾರ್ತಿಯನ್ನು ಮಾಡಿ ತರುವಾಯ ಎಲ್ಲರಿಗೂ ಮಣೆಯನ್ನೂ ಎಲೆಯನ್ನೂ ಹಾಕಿ ಎಲೆಗೆ ನೀರನ್ನು ಚಿಮುಕಿಸಿ ಎಲ್ಲರನ್ನೂ ಊಟಕ್ಕೆ ಎಬ್ಬಿಸಿದನು. ಸದಾಶಿವದೀಕ್ಷಿತ ಮೈಸೂರಿಂದ ಬಂದಿದ್ದ ಇಬ್ಬರು ನಂಟರು ೧೦-೧೫ ವರುಷದಿಂದಲೂ ದೀಕ್ಷಿತನ ಮನೆಯಲ್ಲಿಯೇ ಊಟಮಾಡಿಕೊಂಡಿದ್ದ ಉಪಾದ್ರಿ ನಾರಪ್ಪಯ್ಯ ಇವರೆಲ್ಲರೂ ಎಡೆಯಮೇಲೆ ಬಂದು ಕೂತುಕೊಂಡರು. ತಂದೆಯ ಸಮೀಪದಲ್ಲಿ ಸಾಕಿಯೂ ಬಂದು ಎಲೇ ಮುಂದೆ ಕೂತುಕೊಂಡಳು. ಉಪ್ಪಿನಕಾಯಿ ಮೊದಲಾದ್ದನ್ನು ಬಡಿಸಿದ ತರುವಾಯ ಸೀತಮ್ಮನು ಅನ್ನವನ್ನು ತಂದು ಬಡಿಸಿದಳು. ತಂದೆಯ ಹತ್ತಿರ ಕೂತಿದ್ದ ಸಾಕಿಯು ಇತರರು ಪರಿಷೇಚನೆ ಮಾಡಿ ಪ್ರಾಣಾಹುತಿಯನ್ನು ಹಾಕಿಕೊಳ್ಳುವುದಕ್ಕೆ ಮುಂಚೆ - ಅಪ್ಪಾ ಅನ್ನವೆಲ್ಲಾ ಉಪ್ಪಿನ ಕ್ಷಾರವಾಗಿದೆ, ಎಂದಳು. ದೊಡ್ಡವರು ಊಟಕ್ಕೆ ಕೂತುಕೊಳ್ಳುವುದಕ್ಕೆ ಮುಂಚೆ ಹುಡುಗರು ಎಡೆಯನ್ನು ಮುಟ್ಟುವ ಪದ್ಧತಿ ಇಲ್ಲ, ಇತರರು ಪರಿಷೇಚನೆಯನ್ನೇ ಮಾಡದೆ ಇರುವಾಗ ಸಾಕಿಗೆ ಅನ್ನ ಉಪ್ಪಾಗಿದೆ ಎಂದು ತಿಳಿದದ್ದು ಹೇಗೆ? ಇದು ಹಾಗಿರಲಿ, ಅಂತೂ ಈ ಮಾತನ್ನು ಕೇಳಿದ ಕೂಡಲೆ ಎಲ್ಲರೂ ಆಪೋಶನವನ್ನು ತೆಗೆದುಕೊಂಡು ಬಾಯಿಗೆ ಪ್ರಾಣಾಹುತಿಯನ್ನು ಹಾಕಿಕೊಂಡರು. ಅನ್ನವೆಲ್ಲಾ ಹೆಚ್ಚಾಗಿ ಉಪ್ಪಾಗಿತ್ತು. ಎಲ್ಲರೂ ಅನ್ನವನ್ನು ಚೆಲ್ಲಿ ಎದ್ದುಬಿಟ್ಟರು. ಕೂಡಲೆ ಬೇರೆ ಅನ್ನವನ್ನು ಮಾಡಿ ಬಡಿಸಿದರು. ಹೀಗೆ ಮಾಡಿದಳಲ್ಲಾ ಎಂದು ಊಟಕ್ಕೆ ಕೂತಿದ್ದ ಎಲ್ಲರಿಗೂ ಆಗ್ರಹ ಬಂತು.

ಸದಾ - ಏನು ಸೀತಮ್ಮ ಅಡಿಗೇ ಬಲ್ಲ ಜಾಣೆ ಎಂದು ಅಂದಳದ ಮೇಲೆ ಕೂರಿಸಿದರೆ ಚಕ್ಕೋತನ ಸೊಪ್ಪಿಗೆ ಏಸು ಮೊಗೆ ನೀರು ಎಂದು ಕೇಳಿದ ಸೊಸೆಯ ಹಾಗೆಯ ಆಯಿತಲ್ಲಾ?

ಉಪಾದ್ರಿ - ಏನೋ ಹುಡುಗಿ, ಅರಿಯದೆ ಉಪ್ಪು ಹಾಕಿರಬಹುದು.

ಪಾರ್ವ - ಏನು ಸೀತೆ, ಅಷ್ಟು ಚೆನ್ನಾಗಿ ಅಡಿಗೆ ಮಾಡುತಿದ್ದೆಯಲ್ಲ? ಅನ್ನಕ್ಕೆ ಉಪ್ಪು ಹಾಕುತಾರೆಯೇ? ಅಕ್ಕಿಯಲ್ಲಿ ಏನಾದರೂ ಉಪ್ಪು ಬೆಳೆದಿತ್ತೆ?

ಸೀತ - ಉಪ್ಪು ಬೆರೆದಿರಲಿಲ್ಲ, ಅಕ್ಕಿಯನ್ನು ನಾನು ಅರಕನಹಟ್ಟಿಯಲ್ಲಿ ಹಾಕಿ ತೊಳೆದು ಬಸೀಹಾಕಿ ತಪ್ಪಲೆಗೆ ಹಾಕಿದೆ. ಅನ್ನದೆಸರಿಗೆ ಉಪ್ಪು ನೀರನ್ನೂ ನಾನು ಇರಿಸಿರಲಿಲ್ಲ, ಹೊಳೆ ನೀರನ್ನೇ ಇರಿಸಿದೆ.

ತಿಮ್ಮ - ಹಾಗಾದರೆ ಇನ್ನು ಯಾರಾದರೂ ಬಂದು ಅನ್ನದ ತಪ್ಪಲೆಗೆ ಉಪ್ಪು ಹಾಕಿದರೊ? ಬಿನ್ನಾಣವಾಗಿ ಮಾತನಾಡುತೀಯೆ, ಮುಚ್ಚು ಬಾಯನ್ನ ತಿರುಗೆ. ಯಾರಿಗೂ ಅರೆಹೊಟ್ಟೆಯೂ ಇಲ್ಲದಹಾಗೆ ಮಾಡಿದೆಯ ತಟವಾಣಿ, ನಿನ್ನ ಹಾಳವಿದ್ಯಕ್ಕೆ ಬೆಂಕಿ ಹಾಕ. ಸೊಸೆ ಚೆನ್ನಾಗಿ ಅಡಿಗೆ ಮಾಡುತ್ತಾಳೆ ಎಂದು ಮಾವನವರು ಮೆಚ್ಚಿದರು. ಅಷ್ಟಕ್ಕೇ ಅವಳು ಗಗನಕ್ಕೆ ಏರಿದಳು. ಹಾಳಮನೇ ಹೆಂಣ ತಂದು ಇಷ್ಟು ಹಗರಣವಾಯಿತು. ನೀನು ಯಾಕೇ ಅನ್ನಕ್ಕೆ ಉಪ್ಪು ಹಾಕಿದ್ದು? (ಎಂದು ಅಡಿಗೇ ಒಲೆಯಲ್ಲಿ ಉರಿಯುತ್ತಿದ್ದ ಕೊಳ್ಳಿಯನ್ನು ತೆಗೆದುಕೊಂಡು ಸೀತಮ್ಮನ ಬಲಗೈ ಮೇಲೆ ಎಳೆದಳು.)

ಸೀತಮ್ಮನು ಹುಟ್ಟಿದಾಗಿನಿಂದ ಅದುವರೆಗೆ ಇಂಥಾ ಶಿಕ್ಷೆಯನ್ನು ಹೊಂದಿದ ಅಭ್ಯಾಸವಿರಲಿಲ್ಲವಾದ್ದರಿಂದಲೂ ಸುಖವಾಗಿ ತೌರುಮನೆಯಲ್ಲಿ ಬೆಳೆದ ಹುಡುಗಿಯಾದ್ದರಿಂದಲೂ ತೋಳು ಕೈ ಸಹಾ ವಿಶೇಷವಾಗಿ ಸುಟ್ಟು ಹೋಯಿತು. ಸೀರೆಯ ಸೆರಗೂ ಸುಟ್ಟುಹೋಯಿತು. ಆ ಹುಡುಗಿಯು "ಹಾ' ಎಂದು ಸ್ವಲ್ಪ ಗಟ್ಟಿಯಾಗಿ ಕೂಗಿದಳು. ಆಗ ತಿಮ್ಮಮ್ಮನು ಅತಿ ರೋಷದಿಂದ - ನಾಲಿಗೆ ಮಾಡುತೀಯ, ಶೂರ್ಪನಖಿ, ಎಂದು ಅದೇ ಕೊಳ್ಳಿಯ ಹಿನ್ನೆಯಿಂದ ಸೊಸೆಯ ತಲೆಮೇಲೆ ಕುಕ್ಕಿದಳು. ಆ ಪೆಟ್ಟಿಗೆ ಹುಡುಗಿಯು ಕುಕ್ಕರಿಸಿಕೊಂಡುಬಿಟ್ಟಳು. ಆಗ ಪಾರ್ವತಮ್ಮ ಬಂದು, - ಹೀಗೆ ಹೊಡೆಯುತ್ತಾರೆಯೇನೆ, ತಿಮ್ಮು? ಬೇಕೆಂದು ಅವಳು ಅನ್ನಕ್ಕೆ ಉಪ್ಪು ಹಾಕುತಾಳೆಯೆ? ಎಲ್ಲಿಯಾದರೂ ಪುಣ್ಯವಂತರ ಮನೆಯನ್ನು ಸೇರಿಕೊಂಡು ಬದುಕಿಕೊಳ್ಳುತ್ತಾ ಇದ್ದ ಹೆಂಣನ್ನು ತಂದದ್ದು ಅದರ ಜೀವಸಹಿತ ಕೊಲ್ಲುವುದಕ್ಕಾಯಿತು, ಹೀಗೆಂದು ಆ ಮುದುಕಿಯು ಸೀತೆಯನ್ನು ಆ ಮಾರಿಯ ಎದುರಿನಿಂದ ಒಂದು ಪಕ್ಕಕ್ಕೆ ಎಳೆದುಕೊಂಡಳು. ಸೀತಮ್ಮ ರಾತ್ರಿ ಊಟವೇ ಮಾಡದೆ ಮಡಿಸೀರೆಯನ್ನು ಉಟ್ಟುಕೊಂಡು ಕೋಣೆಯಲ್ಲಿಯೇ ಕೂತುಕೊಂಡಳು. ಅತ್ತೆಯು ತಲೇಮೇಲೆ ಹೊಡೆದ ಪೆಟ್ಟಿನಿಂದಲೂ ಕೈಮೇಲಿನ ಬರೆಯ ಉರಿಯಿಂದಲೂ ಆ ಹುಡುಗಿಗೆ ಜ್ವರ ಬಂತು. ನೆಲದ ಮೇಲೆಯೇ ರಾತ್ರಿಯೆಲ್ಲಾ ಮಲಗಿದ್ದಳು. ಕೊಳ್ಳಿಬರೆಯ ಗಾಯ ಕೀತುಕೊಂಡು ಹೆಚ್ಚಾಗಿ ಯಾತನೆಯಾಯಿತು. ವಾಸಿಯಾಗುವುದಕ್ಕೆ ಎಂಟು ಹತ್ತು ದಿವಸ ಬೇಕಾಯಿತು.

ಈ ಹಗರಣವೆಲ್ಲಾ ಆದಮೇಲೆ ಒಂದು ದಿವಸ ಸೀತಮ್ಮನು ರಾತ್ರೆ ಅತ್ತೆ ಮಲಗಿಕೊಂಡಮೇಲೆ ತಟ್ಟೆಯಲ್ಲಿ ಎಲೆ ಅಡಕೆಯನ್ನು ಹಿಡಿದು ಮುಚ್ಚಿಕೊಂಡು ಗಂಡನ ಚಿಕ್ಕಮನೆಗೆ ಹೋದಳು. ಅಲ್ಲಿ ಹೆಂಡತಿಯು ಗಂಡನಿಗೆ ಎಲೆ ಅಡಕೆಯನ್ನು ಮಡಿಸಿ ಕೊಡುತಿರುವಾಗ ಗಂಡನ ಕೈ ಸೀತಮ್ಮನ ಬರೇ ಗಾಯಕ್ಕೆ ತಗುಲಿತು. ಆಗ ಸೀತಮ್ಮನು "ಹಾ'' ಎಂದಳು.

ಮಹಾ - ಯಾಕೆ "ಹಾ' ಎನ್ನುತೀಯೆ? ಕೈ ಏನಾಗಿದೆ? ಸೀತ - ಗಾಯವಾಗಿ ಊದಿಕೊಂಡಿದೆ.

ಮಹಾ - ಎಲ್ಲಿ ಗಾಯವಾಯಿತು? ಇಷ್ಟು ದೊಡ್ಡ ಗಾಯವಾಗುವ ಹಾಗೆ ಎಲ್ಲಿಯಾದರೂ ತಗಲಿತೆ? ಕಾರಣವೇನು?

ಸೀತ - ವಾಸಿಯಾಗುತ್ತಾ ಇದೆ.

ಮಹಾ - ಇಂಥಾ ಗಾಯಕ್ಕೆ ಕಾರಣವೇನು?

ಸೀತ - ಏನೋ ತಗಲಿತು.

ಮಹಾ - ಏನು ತಗಲಿತು?

ಸೀತೆ - ಕೊಳ್ಳಿ ತಗಲಿತು.

ಮಹಾ - ಕೊಳ್ಳಿ ತಗಲಿಸಿಕೊಂಡು ಇಷ್ಟು ಗಾಯವನ್ನು ಮಾಡಿಕೊಳ್ಳಬಹುದೆ? ಪುಣ್ಯವಂತರ ಮನೆಯಲ್ಲಿ ಸುಖವಾಗಿ ಬೆಳೆದವಳು. ಇಲ್ಲಿ ಕೆಲಸಕ್ಕೆ ಹೊರಟರೆ ಕೈ ಮೈ ಸುಟ್ಟುಕೊಳ್ಳುವುದೇ

ಅದುವರೆಗೂ ಸುಮ್ಮನಿದ್ದ ಸೀತಮ್ಮನಿಗೆ ಸ್ವಲ್ಪ ನಾಚಿಕೆ, ದುಃಖ, ಈ ಮಧ್ಯೆ ಅತ್ತೆಯ ಭಯ ಇವೆಲ್ಲಾ ಸೇರಿಕೊಂಡು ಮುಖ ಒಂದು ಬಗೆಯಾಯಿತು. ಕಂಣಿನಲ್ಲಿ ನೀರು ಬಂತು. ಹಾಕಿದ ಬಾಗಿಲ ಕಡೆ ಹಿಂದೆ ತಿರುಗಿ ನೋಡುತಾ ನೋಡುತಾ ಕಂಣನ್ನು ಒರಸಿಕೊಳ್ಳುತ್ತಾ ಸುಮ್ಮನಾದಳು. ಮಹಾದೇವನು ಈ ಗಾಯವಾಗುವುದಕ್ಕೆ ಏನೋ ಹೆಚ್ಚಾದ ಕಾರಣವಿರಬೇಕು, ತನ್ನ ಹೆಂಡತಿಯು ನಾಚಿಕೆಯಿಂದಲೂ ಭಯದಿಂದಲೂ ಸುಮ್ಮನಾಗಿದಾಳೆ, ಎಂದು ಹೆಚ್ಚು ಮಾತನ್ನಾಡದೆ ತಾನೂ ಮೌನವನ್ನು ಧರಿಸಿದನು.

ಮಾರನೇ ದಿವಸ ಗಂಡಸರು ಯಾರೂ ಮನೆಯಲ್ಲಿಲ್ಲದಿರುವಾಗ ಮೂರನೇ ಜಾವದಲ್ಲಿ ತಿಮ್ಮಮ್ಮನು - ಎಲೆ ಸೀತೆ, ಅದೇನೆ ನಿನ್ನೆ ರಾತ್ರಿ ಚಿಕ್ಕಮನೆಯಲ್ಲಿ ಬಹುವಾಗಿ ಮಾತನಾಡುತಿದ್ದೆ? ಗುಸಗುಸ ಪಿಸಿಪಿಸಿ ಬಹು ಹೆಚ್ಚಾಗಿತ್ತು, ಯಾವ ಕೋಟೇ ಸಾಧನೆ ಮಾಡುವುದಕ್ಕೆ ಗಂಡ ಹೆಂಡಿರಿಬ್ಬರೂ ಮಾತನಾಡಿದಿರಿ? ಇಬ್ಬರೂ ಸೇರಿ ನನ್ನನ್ನು ಮನೆಬಿಟ್ಟು ದಾಟಿಸಿಬಿಡಿ. ಅದು ಒಂದೇ ನನಗೆ ಆಗಬೇಕಾದ ಪ್ರಾಯಶ್ಚಿತ್ತ. ಅದೂ ಆಗಲಿ; ಆ ಹೆಂಣನ್ನೂ ಕರೆದುಕೊಂಡು ಹೋಗಿ ಎಲ್ಲಿಯಾದರೂ ಮುಳುಗಿಕೊಂಡು ಸಾಯುತ್ತೇನೆ. ನಾನು ಈ ಮನೆಯಲ್ಲಿರುವುದರಿಂದ ಹೌದೋ ಅಲ್ಲವೋ ಇಷ್ಟವೆ? ಆ ಪಾಪದ ಕೇಡು ಉಂಟೆ? ನಾನೂ ಕಂಡದ್ದರಲ್ಲಿಯೂ ಕಂಡೆ, ಇಂಥಾ ಗಂಡಹೆಂಡಿರನ್ನು ಎಲ್ಲಿಯೂ ನೋಡಲಿಲ್ಲ. ಈ ತಾಟಕಿ ಸುಮ್ಮನೆ ಇರತಕ್ಕವಳೆ? ಗಂಡನಿಗೆ ಎಲ್ಲಾ ಬೋಧನೆಯನ್ನೂ ಮಾಡಿ ಮಾಡಿ ತನ್ನಂತೆ ಮಾಡಿಕೊಂಡು ಅವನನ್ನು ಒಲಿಸಿಕೊಂಡಿದಾಳೆ. ಅವಳಿಗೆ ಯಾವಯಾವುದು ಬಾರದು? ಮೈಸೂರು ಸೂಳೆಯರು ಸಾವಿರ ಜನಸತ್ತು ಇವಳೊಬ್ಬಳು ಹುಟ್ಟಿದಾಳೆ. ಅವಳಿಗೆ ಯಾವುದು ಬಾರದು? ನಾನೂ ಕಂಡದ್ದರಲ್ಲಿಯೂ ಕಂಡೆ ಇಂಥವಳನ್ನು ಎಲ್ಲಿಯೂ ಅರಿಯೆ. ಅದೇನೆ ಮಾತಾಡಿದ್ದು ಹೇಳು, ಇಲ್ಲದಿದ್ದರೆ ತಕ್ಕ ಶಿಕ್ಷೆ ಮಾಡಿಯೇನು - ಹೀಗೆಂದು ಮನಸ್ಸು ಬಂದಂತೆ ಲಜ್ಜೆಗೆಟ್ಟು ಹೀನವಾದ ಮಾತುಗಳೆಲ್ಲವನ್ನೂ ಆಡಿದ ಅತ್ತೆಯ

ಮಾತಿಗೆ ಯಾವ ಉತ್ತರವನ್ನೂ ಕೊಡದೆ ಸುಮ್ಮನೇ ಇರತಕ್ಕದ್ದೇ ಸೀತನ ಅಭ್ಯಾಸವಾಗಿತ್ತು. ಆದರೆ ಮೈಸೂರ ಸೂಳೆಯರಿಗೆ ಅತ್ತೆಯು ತನ್ನನ್ನು ಹೋಲಿಸಿದ್ದೂ ತನ್ನ ಗಂಡನಾದ ಮಹಾದೇವನ ಮೇಲೆ ಆಕ್ಷೇಪಣೆ ಮಾಡಿದ್ದೂ ಸಹಾ ಸೀತಮ್ಮನಿಗೆ ಬಹಳ ಅಸಮಾಧಾನವನ್ನು ಉಂಟುಮಾಡಿತು. ಆಗ -

ಸೀತ - ಅಮ್ಮ ಯಾಕೆ ಕೋಪಮಾಡಿಕೊಳ್ಳುತೀರಿ? ನಾನು ಯಾರನ್ನೂ ಏನು ಅನ್ನಲಿಲ್ಲ,

ತಿಮ್ಮ - ಮಾತಿಗೆ ಮಾತಕೊಡುವ ಹಾಗಾದೆಯೇನೆ? ಇದನ್ನು ನಿನ್ನ ಗಂಡ ಹೇಳಿಕೊಟ್ಟನೋ? ಅವನನ್ನೂ ನಿನ್ನಂತೆ ಮಾಡಿಕೊಂಡೆ; ಇನ್ನೇನು? ಮನೆ ನಿಮ್ಮದಾಯಿತು, ಬಾಗಿಲು ನಿಮ್ಮದಾಯಿತು, ನಮ್ಮಪ್ಪನ ಆಸ್ತಿಯೆಲ್ಲಾ ಚೆನ್ನಾಗಿ ನಿಮ್ಮದಾಯಿತು. ಇನ್ನು ನನ್ನ ತಲೆಗೆ ಮೂಗಳ ಬೂದೀ ಸುರಿದು ಆಚೆಗೆ ದಾಟಿಸುವುದು ಒಂದೇ ಉಳಿದಿದೆ. ಈ ಹಾಳ ಹೊಟ್ಟೆಗೆ ಹಾಕಿಕೊಳ್ಳದಿದ್ದರೆ ತೀರದು. ಇಷ್ಟು ತುಂಡು ಇಷ್ಟು ಪಿಂಡ, ಎರಡರಲ್ಲಿರಿಸಿದ್ದೀರಿ. ಇನ್ನುಮೇಲೆ ಅದನ್ನೂ ತಪ್ಪಿಸಿ ಆಚೆಗೆ ಅಟ್ಟಿಸುತ್ತೀರಿ. ಗಂಡನ ಸಂಗಡ ಏನೇನು ಹೇಳಿ ಏನೇನು ಮಾಡುವ ಹಾಗಿದ್ದೀಯ? ಛೀ! ಹೋಗಲಿ ಎಂದು ನಾನು ಸುಮ್ಮನಿದೇನೆ. ಇಲ್ಲದೇ ಇದ್ದರೆ ನಿಮ್ಮಾಟ ತಿಳಿಸಿಬಿಟ್ಟೇನು.

ಸಾತಿ - ಅಮ್ಮ ನಾನು ಅನ್ನಕ್ಕೆ ಉಪ್ಪ ಹಾಕಿದೆನಂತೆ ಅತ್ತಿಗೆ ಗಂಡನ ಸಂಗಡ ಹೇಳುತಿದ್ದಳು. ನಾನು ಅವರ ಚಿಕ್ಕಮನೇ ಗಳುವಿನ ಅಟ್ಟದ ಮೇಲೆ ಕೂತುಕೊಂಡು ಕೇಳುತಾ ಇದ್ದೆ ಕಣಮ್ಮ ಇವಳು ಏನೇನೋ ನಮ್ಮೆಲ್ಲರನ್ನೂ ಬಯ್ಯುತ್ತಾ ಇದ್ದಳು.

ಸೀತ - ನಾನು ಯಾರನ್ನೂ ಬಯ್ಯಲಿಲ್ಲ, ಹಾಗೆ ಆಡಿದ್ದರೆ ನನ್ನ ಬಾಯಲ್ಲಿ ಹುಳು ಸುರಿಯಲಿ.

ತಿಮ್ಮ - ಹಾಗಾದರೆ ನನ್ನ ಮಗು ಸುಳ್ಳ ಹೇಳುತ್ತೆಯೆ? ನಿನ್ನ ಗಂಡನ ಸಂಗಡ ಏನತಾನೇ ಹೇಳಿದೆ, ನೀನು ಏನಮಾಡಬಲ್ಲೆ ಅವ ಏನ ಮಾಡಬಲ್ಲ? ನಮ್ಮ ಸಾತಿ ಅನ್ನಕ್ಕೆ ಉಪ್ಪು ಹಾಕಿದಳೆ? ಬಹು ಚೆನ್ನಾಯಿತು, ಅವಳು ಉಪ್ಪಹಾಕಿದಳು ಎಂದು ನೀನು ಕಂಡೆಯ, ಇಲ್ಲದಿದ್ದರೆ ಹೇಗೆ ಹೇಳಿದೆ? ಉಂಟುಮಾಡಿಕೊಂಡು, ಇಲ್ಲವಾದರೆ, ನಾನು ಸುಮ್ಮನೇ ಬಿಡುವುದಿಲ್ಲ ಕಿವಿಕಿತ್ತು ಪಡವಲಕಾಯಿ ಹೋಳಮಾಡಿ ಬಿಟ್ಟೆನು. ಯಾರು ಎಂದು ತಿಳಿದಿದ್ದೀಯೆ ನಿನ್ನ ಮನಸ್ಸಿಗೆ. ಈ ಹೊತ್ತು ಅವರು ಬರಲಿ. ಎರಡರಲ್ಲಿ ಒಂದು ಉಂಟಾಗಬೇಕು. ಅರಿಯದ ಮಗುವಿನ ಮೇಲೆಯೇ ನಿನ್ನ ಚೋಡಿ? ಅವಳೇನು ನಿನ್ನ ತಲೆಯಮೇಲೆ ಕಲ್ಲ ಎತ್ತಿಹಾಕಿರುವುದು. ಇವತ್ತು ಆದ್ದೆಲ್ಲಾ ಆಗಲಿ, ನಿನ್ನಿಂದ ನನಗೆ ಎತ್ತಿಬರುವ ಮಾಗಡೀಮಣಿ ಇಲ್ಲದಿದ್ದರೂ ಚಿಂತೆಯಿಲ್ಲ, ಇಂದು ಅದರ ಮೇಲೆ ಹೇಳಿದೆ ನಾಳೆ ನನ್ನ ಮೇಲೆಯೇ ಹೇಳುತೀಯೆ. ನೀನು ಯಾತಕ್ಕೆ ಹೇಸುತೀಯೆ? ಇಲ್ಲಿ ಬಾರೆ ಇಲ್ಲಿ ಮಾಡಿದ್ದ ಮಾಡಿ ಮೌನದಲ್ಲಿ ಕೂತೆ ಎಂತ, ಆಡುವಮಾತ ಆಡಿ ಹೊರಹೊರಗೇ ತಿರುಗುತೀಯೆ. ಅವರು ಬರಲಿ ಮನೆಗೆ, ಇಲ್ಲ ನಾನು ಇದ್ದದೊಂದು ಇಲ್ಲ ನೀನು ಇದ್ದದೊಂದು.

ಸೀತ - (ಅತ್ತೇ ಎದುರಿಗೆ ಬಂದು ನಿಂತು) ಅಮ್ಮ ಯಾವ ಮಾತನ್ನೂ ಆಡಲಿಲ್ಲಮ್ಮ

ಸದಾ - (ಹೊರಗಿನಿಂದ ಮನೆಗೆಬಂದು) ಇದೇನು ನಮ್ಮಮನೇ ಕೂಗಾಟಕ್ಕೆ ಕೊನೆಮಿತಿಯೇ ಇಲ್ಲವಲ್ಲ?

ತಿಮ್ಮ - ಅಲ್ಲ ನಮ್ಮ ಸಾತಿ ಆ ದಿನ ರಾತ್ರೆ ಅನ್ನಕ್ಕೆ ಉಪ್ಪು ಹಾಕಿದಳು ಎಂದು ಹೇಳಿದಾಳಲ್ಲಾ ನಿಮ್ಮ ಸೊಸೆ? ಸಾತೀನೇ ಕೇಳಿ ಬೇಕಾದರೆ, ನಾನಂತು ಕೆಟ್ಟವಳು, ಯಾರಿಗೂ ಬೇಡವಾದವಳು.

ಸಾತಿ - ಹೌದಪ್ಪ ನಿನ್ನೆ ರಾತ್ರೆ ಅತ್ತಿಗೆ ಗಂಡನ ಸಂಗಡ ಹೇಳುತ್ತಾ ಇದ್ದಳು.

ಸದಾ - ನಿನಗೆ ಹೇಗೆ ತಿಳಿಯಿತು?

ಸಾತಿ - ಅಂಣನ ಚಿಕ್ಕಮನೇಗಳುವಿನ ಅಟ್ಟದ ಮೇಲೆ ಕೂತುಕೊಂಡು ನಾನು ಕೇಳುತಾ ಇದ್ದೆ ನಿನ್ನ ರಾತ್ರೆ, ಆಗ ಅತ್ತಿಗೆ ನಮ್ಮೆಲ್ಲರನ್ನೂ ಬೈದಳು.

ಸದಾ - ಬೈದಮಾತಿರಲಿ, ನೀನು ಅನ್ನದ ತಪ್ಪಲೆಗೆ ಉಪ್ಪ ಹಾಕಿದಳು ಎಂದಳೆ? ಅಷ್ಟೆ ಹೇಳು.

ಸಾತಿ - ಅದೇನೋ, ಗುಸಗುಸ ಅನ್ನುತಿದ್ದಳು. ನನಗೆ ಚೆನ್ನಾಗಿ ಕೇಳಲಿಲ್ಲ,

ಸದಾ - ಛೀ, ನೀನು ಹಾಗೆ ಅವರ ಚಿಕ್ಕಮನೇ ಅಟ್ಟದಮೇಲೆ ಕೂತುಕೊಂಡು ಸಂಚುಕೇಳಿದ್ದು ಯಾಕೆ? ಗಂಡ ಹೆಂಡಿರು ಮಲಗಿರುವಾಗ ನೀನು ಹಾಗೆಲ್ಲಾ ಹೋಗಬಹುದೆ? ಅದು ಗಳುವಿನ ಅಟ್ಟ ಬಿದರು ದೂರ ದೂರಕ್ಕೆ ಹಾಕಿದೆ. ಮೇಲೆ ಮಂಣು ಹಾಕಿಲ್ಲ ನಿನಗೆ ಹದಿಮೂರು ವರುಷವಾಗುತಾ ಬಂತು. ಮೈನೆರೆಯಲಾದ ಹುಡುಗಿ ಹಾಗೆಲ್ಲಾ ಹೋಗಬಾರದು.

ತಿಮ್ಮ - ಅದನ್ನೇ ಅನ್ನುತೀರಿ, ಏನೂ ಅರಿಯದ ಹಸುಳೆಯನ್ನ ಆ ಪೂತನಿ ಅಂದದ್ದೂ ಆಡಿದ್ದೂ ಎಲ್ಲಾ ಎಲ್ಲಿಯೋ ಹೋಯಿತು, ಆ ಹೆಂಣಿನಮೇಲೆಯೇ ದೋಷಾರೋಪಣೆ?

ಸದಾ - ಏನ ಅಂದದ್ದೂ ಆಡಿದ್ದೂ ಎಂದು ಇಲ್ಲದನ್ನೆಲ್ಲಾ ಕಟ್ಟಿಕೊಂಡು ಪೇಚಾಡುತೀಯೆ? ತನಗೆ ಚೆನ್ನಾಗಿ ಕೇಳಲಿಲ್ಲವೆಂದು ಸಾತಿಯೇ ಹೇಳುತಾಳಲ್ಲ ಗಂಡ ಹೆಂಡಿರು ಮಲಗಿರುವಾಗ ಅಟ್ಟದ ಮೇಲೆ ಕೂತು ಈ ಐಲ ಹೆಂಣು ನೋಡಿದ್ರೂ ಸಂಚುಕೇಳಿದ್ದೂ ಮೊದಲು ತಪ್ಪು ಹಿಂದೆಮುಂದೆ ಆಲೋಚಿಸದೆ ಮಾತನಾಡಬಾರದು. ಆಡೋರು ಇಬ್ಬರು ನೋಡೋರು ಹಲವುಮಂದಿ, ಈ ಅವಿವೇಕದ ಮಾತನ್ನು ಕೇಳಿ ನೆರೆಹೊರೆಯವರು ಏನೆಂದಾರು? ಸುಮ್ಮನಿರಿ. ಹೋಗಲಿ. ನಾಚಿಕೆ ಕೇಡು, ಯಾರಾದರೂ ಕೇಳಿದರೆ ನಕ್ಕಾರು.

ತಿಮ್ಮ - ನಗೂಹಾಗೆಯೇ ಆಯಿತು ನನ್ನ ಬಾಳು. ನನ್ನ ತಲೆಗೂ ನನ್ನ ಮಗುವಿನ ತಲೆಗೂ ಮೂಗಳಬೂದಿ ಹುಯಿದು ಆಚೆಗೆ ದಾಟಿಸಿದ್ದೇನೆ ಎಂದು ಕಾದುಕೊಂಡಿದೀರಿ.

ತಿಮ್ಮಮ್ಮನು ಹೀಗೆ ಎನ್ನುತಾ ಇರುವಾಗ ದೀಕ್ಷಿತನು ಈ ಗಲಭೆಗೆ ಅಸಹ್ಯ ಪಟ್ಟುಕೊಂಡು ಮನೆಯಲ್ಲಿರದೆ ಪುನಃ ಹೊರಕ್ಕೆ ಹೋದನು, ಗಂಡನು ನ್ಯಾಯವಾಗಿ ಹೇಳಿದನೆ ಸೊಸೆಯನ್ನು ವಹಿಸಿಕೊಂಡು ಹೇಳಿದನೆ ಎಂದು

ಯೋಚಿಸಿಕೊಳ್ಳದೆ, ತಿಮ್ಮಮ್ಮನು ಆ ದಿನವೆಲ್ಲಾ ಮನೆಯಲ್ಲಿ ವಿಶೇಷವಾಗಿ ಆರ್ಭಟಿಸಿ, ಮನೆಯ ಜನರೆಲ್ಲರನ್ನೂ ಬೈದು, ಅಂದು, ಹಣೆ ಹಣೆ ಚಚ್ಚಿಕೊಂಡು ರೋಷಾವೇಶದಲ್ಲಿ ತಲೆಯನ್ನೆಲ್ಲಾ ಕೆದರಿಕೊಂಡು ಹೋಗಿ ಒಂದು ಮೂಲೆಯಲ್ಲಿ ಮಲಗಿಕೊಂಡಳು. ಊಟಕ್ಕೆ ಏಳಲಿಲ್ಲ, ಸೀತಮ್ಮನು ರಾತ್ರಿ ಎಲ್ಲರಿಗೂ ಅಡಿಗೆಮಾಡಿ ಬಡಿಸಿ ಅತ್ತೆ ಊಟಮಾಡಲಿಲ್ಲವಾದ ಕಾರಣ ತಾನೂ ಊಟಮಾಡದೆ ಮಡಿಸೀರೆಯನ್ನು ಉಟ್ಟುಕೊಂಡು ಕೂತುಕೂತು ಸಾಕಾಗಿ, ಅಡಿಗೇ ಒಲೇಮುಂದೆಯೇ ನೆಲದಮೇಲೆ ಮಲಗಿಕೊಂಡಳು ಸೀತೆಗೆ ನಿದ್ರೆ ಬರಲಿಲ್ಲ. ಬೆಳಗಿನಿಂದ ಸಾಯಂಕಾಲದವರೆಗೂ ಕೆಲಸ ಮಾಡಿ ದಣಿದದ್ದು ಒತ್ತಟ್ಟೆ ಮುನ್ನಾದಿನ ರಾತ್ರೆ ಸಾತಿಯು ಅಟ್ಟದ ಮೇಲೆ ಕೂತು ತಾವು ಗಂಡಹೆಂಡಿರು ಮಲಗಿದ್ದದನ್ನು ನೋಡಿ ಹಾದಿರಂಪ ಬೀದಿರಂಪ ಮಾಡಿದಳಲ್ಲಾ ಎಂಬ ನಾಚಿಕೆಯೊತ್ತಟ್ಟೆ ಹೀಗೆ ತನಗೆ ಮಾನ ಹೋಯಿತಲ್ಲಾ ಎಂಬ ವ್ಯಸನ ಒತ್ತಟ್ಟೆ ಹಸಿದ ಹಾವಿನ ಹಾಗೆ ಮಲಗಿಕೊಂಡಿರುವ ಅತ್ತೆ ಬೆಳಗಾದ ಮೇಲೆ ಇನ್ನೇನು ಮಾಡುತ್ತಾಳೆಯೋ ಎಂಬ ಭಯ ಒತ್ತಟ್ಟೆ ಹೊಟ್ಟೆಯಲ್ಲಿ ಅನ್ನವಿಲ್ಲದ ಸಂಕಟ ಒತ್ತಟ್ಟೆ ಹೀಗೆ ಬಗೆಬಗೆಯಾದ ಚಿಂತನೆಯಿಂದ ಸೀತನಿಗೆ ನಿದ್ರೆ ಬಾರದೆ ಹೋಯಿತು. ಇದೂ ಅಲ್ಲದೆ ತೌರುಮನೆಯಲ್ಲಿದ್ದಾಗ ಪಟ್ಟೆಮಂಚದ ಮೇಲೆ ಸುಪ್ಪತ್ತಿಗೆ ಹಾಕಿ ಅದರ ಮೇಲೆ ಮಲಗಿಕೊಂಡು ಸುಖವಾಗಿ ನಿದ್ರೆ ಮಾಡುತಿದ್ದ ಸುಕುಮಾರಿಯು ಆ ಮುರುಡು ನೆಲದಮೇಲೆ ಮಲಗಿಕೊಂಡರೆ ನಿದ್ರೆ ಹೇಗೆ ಬಂದೀತು?

ಬೆಳಗಾದಮೇಲೆಯೂ ಯಾರು ಎಬ್ಬಿಸಿದರೂ ಏಳದೆ ಮಲಗಿದ್ದ ಮಹಾಮಾಯಿಯಾದ ತಿಮ್ಮಮ್ಮನು ಮಧ್ಯಾಹ್ನದ ಮೇಲೆ ಎದ್ದು ತಾನೇ ಮಡಿ ಉಟ್ಟುಕೊಂಡು ಒದ್ದೆ ಉಟ್ಟು ಬಚ್ಚಲಮನೆಯಲ್ಲಿ ತಾನೇ ಗೊಜ್ಜು ಅನ್ನವನ್ನು ಬೇರೆ ಮಾಡಿಕೊಂಡಳು. ಯಾರ ಸಂಗಡಲೂ ಮಾತನಾಡದೆ ದುಮುದುಮುಗುಟ್ಟುತಾ ಹಾರಾಡುತ್ತಾ ಇದ್ದ ಈ ದುಮಕ್ಕನು ಪಾತ್ರೆಗಳನ್ನು ಕೆಳಗೆ ಕುಕ್ಕುತಾ ಎಲೆಯನ್ನು ಹಾಕಿಕೊಂಡು ಮಗಳನ್ನು ಕುರಿತು ಎಲೆಹೆಂಣೆ, ಸಾತಿ, ಬಾ ನನ್ನಮ್ಮಾ ಬಾ, ಎಂದು ಒಂದು ಪಿಡಿಚೆ ಗೊಜ್ಜು ಅನ್ನವನ್ನು ಅವಳಿಗೆ ಕೊಟ್ಟು ತಾನು ಊಟಮಾಡಿ ಪಾತ್ರೆಗಳನ್ನು ತೊಟ್ಟಿಯಲ್ಲಿ ಇರಿಸಿ ನೆರಮನೆಗೆ ಹೋಗಿ ಮನೆಯ ಮಾತೆಲ್ಲವನ್ನೂ ಮರುಕಳಿಸಿ ಆಕ್ಷೇಪಣೆ ಮಾಡುತ್ತಾ ಹರಟೆ ಬಡಿಯುತ್ತಾ ಕೂತುಕೊಂಡಳು.

---

## ೯ನೆ ಅಧ್ಯಾಯ

ಕೆಲವು ದಿವಸಗಳಲ್ಲಿಯೇ ಋಷಿಪಂಚಮಿ ಬಂತು. ಪಾರ್ವತಮ್ಮ ವೆಂಕಮ್ಮ ಇವರಿಬ್ಬರಿಗೂ ವ್ರತವಾದಕಾರಣ ಇವರು ಯಾರೂ ಹೊತ್ತಿಗೆ ಮುಂಚೆ ಮಡಿ ಉಟ್ಟು ಅಡಿಗೆ ಮಾಡಲು ಆಗಲಿಲ್ಲ, ಹೊಳೆಗೆ ಈ ಮುದುಕರು ಇಬ್ಬರೂ ಹೋದರು. ವ್ರತಾಂಗವಾಗಿ ೩೬೦ ಸಾರಿ ಮೃತ್ತಿ ಕಾಶೌಚ, ೩೬೦ ಸಾರಿ ದಂತಧಾವನ, ೩೬೦ ಸಾರಿ ಸ್ನಾನ ಮಾಡುವುದು, ಇದೇ ಮೊದಲಾದ್ದನ್ನು ತೀರಿಸಿಕೊಂಡು ಮನೆಗೆ ಬರಲು ಸಾಯಂಕಾಲ ನಾಲ್ಕು

ಗಂಟೆಯ ಮೇಲೆ ಹಿಡಿಯಿತು. ಈ ಮುದುಕಿಯರಿಗೆ ಆ ದಿವಸ ಉಪವಾಸವಾದ್ದರಿಂದ ಇವರು ಹಗಲಿನ ಅಡಿಗೆ ಮಾಡಲಿಲ್ಲ ನೇಮದವರು ಯಾರೂ ಇಲ್ಲವಾಗಿ ಸೀತಮ್ಮನೇ ಮಧ್ಯಾಹ್ನದ ಅಡಿಗೆ ಕೆಲಸಕ್ಕೆ ನಿಂತುಕೊಂಡಳು. ಆ ದಿವಸ ಮನೆಗೆ ಯಾರೋ ನಂಟರು ಕೆಲವು ಅಭ್ಯಾಗತರು ಸಹಾ ಬಂದಿದ್ದರು. ಆ ದಿವಸ ಸದಾಶಿವದೀಕ್ಷಿತನು - ಸೀತಮ್ಮ ನಿನ್ನ ವಿನಾಯಕಚೌತಿಯಾಯಿತು. ಕಡುಬಿನ ದಾನ ಕೊಡುವುದಕ್ಕೆ ಸರಿಯಾದ ಬ್ರಾಹ್ಮಣರು ಸಿಕ್ಕಲಿಲ್ಲ ಈ ದಿವಸ ಬ್ರಾಹ್ಮಣರು ತಾವಾಗಿಯೇ ಬಂದಿದಾರೆ. ಕರಿಗಡಬನ್ನು ಮಾಡು, ಮೋದಕದಾನ ಕೊಡೋಣ. ಈ ದಿನವೂ ಹಬ್ಬವೇ. ದೇವರ ನೈವೇದ್ಯಕ್ಕೆ ತೋಯಿ ಎಸರು ಪಾಯಸ ಚಿತ್ರಾನ್ನ ಮಾಡು ಎಂದನು. ಇಷ್ಟರಮಟ್ಟಿನ ಅಡಿಗೆಯನ್ನು ತಾನು ಮಾಡಬಲ್ಲಳು ಎಂಬ ನಂಬಿಕೆ ಮಾವನವರಿಗೆ ಇದೆಯಲ್ಲಾ ಅವರ ಅಪ್ಪಣೆಯಂತೆ ಅಡಿಗೆಯನ್ನೆಲ್ಲಾ ಜಾಗ್ರತೆಯಾಗಿಯೂ, ರುಚಿರುಚಿಯಾಗಿಯೂ ಮಾಡಬೇಕು ಎಂಬ ಔತ್ಸುಕ್ಯದಿಂದ, ಸೀತಮ್ಮನು ಮೇಲೋಗರವನ್ನು ಹೆಚ್ಚಿ ಇರಿಸಿ, ತೆಂಗಿನಕಾಯನ್ನು ಒಡೆದು ತಾನೇ ತುರಿದು ಕಾಯತುರಿಯನ್ನು ಚೊಕ್ಕಟವಾಗಿ ಒಂದು ಮರದ ಮರಗಿಯಲ್ಲಿ ಹಾಕಿ, ಬೆಲ್ಲದ ಅಚ್ಚನ್ನು ತಾನೇ ತೆಳ್ಳಗೆ ಹೆರೆದು ಆ ಹುಡಿಯನ್ನು ಬೇರೆ ಮರಗಿಯಲ್ಲಿರಿಸಿ ಎಲ್ಲದರಮೇಲೂ ಮುಚ್ಚಿ ಇರಿಸಿದಳು. ಸಾತಿಯು ಅತ್ತಿಗೇ ಸಂಗಡ ತಾನೂ ಅಡಿಗೆ ಮಾಡಬೇಕೆಂದು ಒಳಕ್ಕೂ ಹೊರಕ್ಕೂ ಓಡಿಯಾಡುತಾ ಸೀತಮ್ಮ ಮಡಿಗೆ ಹೋದ್ದನ್ನು ನೋಡಿಕೊಂಡು ಇದ್ದು ಅವಳು ಇರಿಸಿದ್ದ ತೆಂಗಿನಕಾಯತುರಿಯನ್ನೂ ಬೆಲ್ಲದ ಹುಡಿಯನ್ನೂ ಬೆರಸಿ ಅದನ್ನು ಎಣ್ಣೆ ಬಾಣಲೆಗೆ ಹಾಕಿ ಹುರಿಯುತೇನೆಂದು ಪ್ರಯತ್ನ ಮಾಡುತಿದ್ದಳು. ಅಷ್ಟರಲ್ಲಿ ಮಡೀ ಉಟ್ಟುಕೊಂಡು ಒಳಕ್ಕೆ ಸೀತೆಯು ಬಂದುನೋಡಿ ಸಾತಮ್ಮ ಮಡಿ ಉಟ್ಟುಕೊಳ್ಳದೆ ಇದೆಲ್ಲವನ್ನೂ ಮುಟ್ಟಬಾರದು, ಕಾಯಿ ಬೆಲ್ಲವನ್ನು ಈಗಲೇ ಯಾಕೆ ಬೆರಸಿದೆ? ದೇವರ ನಿವೇದನ ಮಾಡಿ ದಾನ ಕೊಡಬೇಕೆಂದು ಮಾವಯ್ಯ ಹೇಳಿದಾರೆ, ಎಲ್ಲವನ್ನೂ ಮಡಿಯಲ್ಲಿ ಮಾಡಬೇಕಮ್ಮ ಎಂದಳು. ಸಾತಿಯು - ಹಾಗಾದರೆ ನೀನೇ ಅಡಿಗೆ ಮಾಡಿಕೊ ಎನ್ನುತಾ ಹೊರಕ್ಕೆ ಹೊರಟು ಹೋದಳು. ಸೀತೆಯು ಅಡಿಗೆಯನ್ನೂ ಭಕ್ಷ್ಯವನ್ನೂ ಮಾಡಿ ಪೂರೈಸಿದಳು. ಗಂಡಸರೆಲ್ಲಾ ಮಡಿ ಉಟ್ಟು ಆಕ್ರೋಕಗಳನ್ನೂ ತೀರಿಸಿಕೊಂಡು ಊಟಕ್ಕೆ ಎಲೆ ಹಾಕಿಕೊಂಡರು. ಮಹಾದೇವನು ದೇವರ ಪೂಜೆ ಮೊದಲಾದ್ದನ್ನು ಪೂರೈಸಿದನು. ಸದಾಶಿವದೀಕ್ಷಿತನು ಮೋದಕದಾನವನ್ನು ವಿನಾಯಕ ಪ್ರೀತ್ಯರ್ಥವಾಗಿ ಕೊಟ್ಟು ಎಡೆಮಾಡಿ ಬ್ರಾಹ್ಮಣರನ್ನು ಕೂರಿಸಿ ಎಲ್ಲವನ್ನೂ ಬಡಿಸಿ ತರುವಾಯ ಎಲ್ಲರಿಗೂ ಆಪೋಶನವನ್ನು ಹಾಕಿ ತಾನೂ ಊಟಕ್ಕೆ ಕೂತುಕೊಂಡನು. ಅಡಿಗೆ ಬಹು ಚೆನ್ನಾಗಿದೆ ಎಂದು ಹೇಳುತಾ ಎಲ್ಲರೂ ಭೋಜನ ಮಾಡುತಿದ್ದರು. ಆಗ ಸೀತೆಯು ಕರಿಗಡುಬನ್ನು ತಂದು ಎಲ್ಲರಿಗೂ ಬಡಿಸಿದಳು. ಊಟಕ್ಕೆ ಕೂತಿದ್ದವರು ಅದನ್ನು ಕಚ್ಚಿ ಅಗಿಯಲು ಆರಂಭಿಸಿದರು. ಎಲ್ಲರ ಹಲ್ಲೂ ಗರಗರಗುಟ್ಟಿ ಹೋಯಿತು. ಹೂರಣದಲ್ಲಿ ತುಂಬಾ ಮರಳು ಬೆರೆದಿತ್ತು. ಅದನ್ನು ತಿನ್ನುವುದು ಎಲ್ಲರಿಗೂ ಅಸಾಧ್ಯವಾಯಿತು. ವಿಶಿಷ್ಟರೂ ಕರಿಗಡುಬನ್ನು ತಿನ್ನುವುದು ಎಲ್ಲರಿಗೂ ಅಸಾಧ್ಯವಾಯಿತು. ವಿಶಿಷ್ಟರೂ ಕರಿಗಡುಬನ್ನು ಚೆಲ್ಲಿಬಿಟ್ಟರು. ಸೀತೆಯ ಸೋದರಮಾವನೂ ಆ ದಿವಸ ಊಟಕ್ಕೆ ಕೂತಿದ್ದನು. ಆತನು - ಏನು ಸೀತಮ್ಮ ಇಷ್ಟೊಂದು ಮರಳನ್ನು ಹನುಮಂತನ ಕೈಯಲ್ಲಿ ಸಮುದ್ರದಿಂದಲೇ ತರಿಸಿದೆಯ? ಎಂದು ಕುಚೋದ್ಯವಾಗಿ ಮಾತನಾಡಿದನು. ಹೂರಣದ ಮೇಲೆ ಮುಚ್ಚದೆ ತೆಗೆದು ಇರಿಸಿದ್ದೆಯ? ಮಂಜು ಏನಾದರೂ

ಉದುರಿತೆ? ಇಷ್ಟು ಮರಳು ಇರುವುದಕ್ಕೆ ಕಾರಣವೇನು ಸೀತಮ್ಮ? ಎಂದು ಮಾವನವರು ಕೇಳಿದರು. ಆಗ ಯಾವ ಮಾತಿಗೂ ಕುಂದಣದ ಬಾಯಿ ಓಡು ಮುಂದೆ ಮುಂದೆ ಎಂದು ಸಾತಿಯು - ಅಪ್ಪಾ ಹಾಗಲ್ಲ ಇಳಿಗೆ ಮಣೆಯಲ್ಲಿ ಕಾಯತುರಿ ಇರಿಸಿದ್ದಳು. ಅತ್ತಿಗೆ ಅದನ್ನು ಮರಿಗೆಗೆ ಹಾಕುವಾಗ ಅದೆಲ್ಲಾ ಕೆಳಗೆ ಚೆಲ್ಲಿಹೋಯಿತು. ಉಪಕರಣೆ ತೊಳೆಯುವುದಕ್ಕೆ ಸಂಣ ಮರಳು ಅಲ್ಲಿ ತಂದು ಹಾಕಿತ್ತು. ಅದಕ್ಕೆ ಕಾಯಿತುರಿ ಬಿದ್ದು ಬಿಟ್ಟಿತು. ಅದನ್ನು ಮೇಲೆಮೇಲೆಯೇ ಬವರಿಬವರಿ ಎತ್ತಿಕೊಂಡು ಬೆಲ್ಲಾ ಹಾಕಿ ಬೆರೆಯಿಸಿದಳು. ಬೇಡಕಣೆ ಮರಳು ಇದೆ ಎಂದು ಹೇಳಿದೆ, ಅವಳು ನನ್ನನ್ನು ಅಟ್ಟಿಕೊಂಡಳು, ಹೀಗೆ ಹೇಳಿದಳು. ಆಗ ಸದಾಶಿವದೀಕ್ಷಿತನು - ಆ ಹಾಳ ಕಾಯಿತುರಿ ಹೋದರೆ ಹೋಯಿತು ಬೇರೆ ಕಾಯಿ ಒಡೆದು ತುರಿಯಬಾರದಿತ್ತೆ? ಎಂದು ಬಹಳ ಅಸಮಾಧಾನಪಟ್ಟು ಕೊಂಡನು. ಆಗ ಸೀತಮ್ಮನು ಏನ ಮಾತನಾಡಿಯಾಳು? ತಲೆ ಬಗ್ಗಿಸಿಕೊಂಡು ಗೋಡೆಕಡೆ ಮುಖವನ್ನು ಮಾಡಿಕೊಂಡು ಸುಮ್ಮನೆ ನಿಂತುಕೊಂಡು ಇದ್ದಳು. ಅತ್ತೆ ಇನ್ನೇನು ಶಿಕ್ಷೆ ಮಾಡುತಾಳೊ ಎಂಬ ಹೆದರಿಕೆಯಿಂದ ಯೋಚಿಸುತಿದ್ದಳು. ಹಾಗೆ ಎಂದ ಹಾಗೆಯೇ ಹಗರಣಗಾತಿಯಾದ ತಿಮ್ಮಮ್ಮ ಕೋಣೆಗೆ ಬಂದು ಸೊಸೆಯನ್ನು ನೋಡಿ - ಕಾಯಿಹೂರಣಕ್ಕೆ ಮರಳನ್ನು ಬೆರೆಯಿಸುವುದಕ್ಕೆ ನಿನಗೆ ಬುದ್ಧಿ ಇತ್ತೇ ಇಲ್ಲವೇ? ಮಾಡಿದ ಪದಾರ್ಥವೆಲ್ಲಾ ಹಾಳಾಯಿತಲ್ಲ, ನಿಮ್ಮಪ್ಪನ ಮನೆಯಿಂದ ತಂದಿದ್ದೆಯ ಸಾಮಾನನ್ನು? ಆ ಕಡಬನ್ನೆಲ್ಲಾ ನೀನೇ ತಿನ್ನು ಅದೆಲ್ಲವನ್ನೂ ನೀನು ತಿಂದು ಮುಗಿಸುವ ತನಕ ನಿನಗೆ ಬೇರೆ ಅನ್ನ ಹಾಕುವುದಿಲ್ಲ ಎಂದು ಮನಸ್ಸು ಬಂದಹಾಗೆ ಈ ಹುಡುಗಿಯನ್ನು ಬೈದು ಬಂದ ನಂತರ ಎದುರಿಗೆ ಬಹಳವಾಗಿ ರಂಪಮಾಡಿದಳು. ಸೊಸೆಯ ತೌರುಮನೆಯವರಿಗಂತೂ ಹಿಡಿ ಶಾಪವಾಯಿತು. ಆಗ ಸೀತಮ್ಮನ ಸೋದರಮಾವನು - ಅಮ್ಮ ಆ ಹುಡುಗಿಯ ತೌರುಮನೆಯವರನ್ನು ಯಾಕೆ ಹೀಗೆ ಬಯ್ಯುತೀರಿ? ಇದು ಸರಿಯಲ್ಲ, ಬೇಕೆಂದು ಹೂರಣಕ್ಕೆ ಮರಳನ್ನು ಯಾರಾದರೂ ಬೆರೆಯಿಸಿಯಾರೆ? ಏನೋ ತಿಳುವಳಿಕೆ ಸಾಲದೆ ಕೈತಪ್ಪಿತು. ಮರಳ ಮೇಲೆ ಬಿದ್ದ ಕಾಯನ್ನು ಎತ್ತಬಾರದಾಗಿತ್ತು. ಏನೋ ಕೈತಪ್ಪಿತು. ನಿಮ್ಮ ಸೊಸೆಗೆ ಬೇಕಾದರೆ ಬುದ್ಧಿ ಕಲಿಸಿ. ಅವರ ತಂದೆತಾಯಿಗಳನ್ನು ನೀವು ಹೀಗೆ ಬಯ್ಯಬಾರದು, ಎಂದನು. ಆಗ ತಿಮ್ಮುವು - ನಮ್ಮ ಮನೇ ಮಾತಿಗೆ ನೀವು ಯಾಕೆ ಬರುತ್ತೀರಿ. ಇಷ್ಟಕ್ಕೂ ನೀವು ಯಾರು? ಇನ್ನೆಲ್ಲಿಯೂ ಅನ್ನ ಸಿಕ್ಕಲಿಲ್ಲವೇನೋ ಇಲ್ಲಿಗೆ ಬಂದಿರಿ. ಊಟವಾಯಿತಲ್ಲಾ ಇನ್ನೇನು? ನಾವು ಹಾಗೆಯೇ ಸರಿ. ತೌರುಮನೆಯವರನ್ನೂ ಅನ್ನುತಾರೆ, ಸಿಕ್ಕಿದವರ ಗ್ರಹಚಾರ ಬಿಡಿಸಿಬಿಡುತ್ತಾರೆ. ಅವರ ಮನೆ ಹಾಳಮಾಡಿಕೊಂಡು ನಮ್ಮ ಮನೆ ಹಾಳಾಗಲಿ ಎಂತ ಹೆಂಣಕೊಟ್ಟರು. ಅವರು ಮಾಡಿದ ಮಾಟವೇ, ಅವರು ಮಾಡಿದ ದುರ್ಬೋಧನೆಯೇ ಇಷ್ಟಕ್ಕೆ ತಂದಿತು; ಹೀಗೆ ನಾನಾವಿಧವಾಗಿ ಬಾಯಿ ಹಿಡಿಯದ ಮಾತನ್ನೆಲ್ಲಾ ಮುಖ ನೋಡದೆ ಅಂದಳು.

ಸದಾ - ಅವರ ಸಂಗಡ ಏನು ಹಾಗೆಲ್ಲಾ ಮಾತನಾಡುತೀಯೆ? ಬಹು ಲಕ್ಷಣವಾಯಿತು, ಹತ್ತುಸಾವಿರ ವರಹ ಕೊಟ್ಟರೆ ಅವರು ನಮ್ಮ ಮನೆಗೆ ಬಂದಾರೆ? ಏನುಮಾತು? ಶಂಕರಪ್ಪನವರೆ, ತಾವು ಕೋಪಮಾಡಿಕೊಳ್ಳಬೇಡಿ. ಅವಳ ಸ್ವಭಾವವನ್ನು ನೀವು ಅರಿಯಿರಿ, ಎಂದು ಸಮಾಧಾನ ಮಾಡಿದನು.

ಈ ನರರಾಕ್ಷಸಿಯ ಆರ್ಭಟಕ್ಕೆ ಹೆದರಿಕೊಂಡು ಸೀತಮ್ಮನು ಹದುಗಿ ಹೋದಳು. ಕೊನೆಗೂ ಅವಳಿಗೆ ಅತ್ತೆಯು ಬೇರೇ ಅನ್ನವನ್ನು ಹಾಕಗೊಳಿಸಲಿಲ್ಲ ಸೀತೆಯು ಕೈಲಾದ ಮಟ್ಟಿಗೂ ಉಪವಾಸಮಾಡಿ ಕೊನೆಗೆ ಆ ಕರಿಗಡುಬಿನ ಹೂರಣವನ್ನೆಲ್ಲಾ ಅತ್ತೆ ಕಾಣದಹಾಗೆ ಆಚೆಗೆ ಚೆಲ್ಲುತ್ತಾ ಅದರ ಮೇಲುಗಡೆ ಹಿಟ್ಟಿನ ಹಪ್ಪಳದ ಹೊದಿಕೆಯನ್ನು ತಿಂದು ಮುಗಿಸಿದಳು. ಈ ಒಳಹಿಂಸೆಯನ್ನು ಹೇಳುವುದು ಬಹುಕಷ್ಟ ಅನುಭವಿಸುವುದು ಮತ್ತೂ ಕಷ್ಟ.

ಇನ್ನೊಂದು ದಿವಸ ಬೇರೇ ಹೆಚ್ಚುಗಟ್ಟಲೆ ನಡೆಯಿತು. ಸೀತಮ್ಮನು ಯಾವಾಗಲೂ ತನ್ನ ಸೀರೆಯನ್ನೂ ಇತರರ ಸೀರೆಯನ್ನೂ ಬೇರೇ ಒಂದು ಕಡೆ ಮಡಿ ಹರುವುವುದಕ್ಕಾಗಿ ಮಾಡಿದ್ದ ಸ್ಥಳದಲ್ಲಿ ಹರವಿದ್ದಳು. ಬೆಳಗ್ಗೆ ಮಡಿ ಉಟ್ಟುಕೊಂಡು ಮಡಿ ಸೀರೆಯನ್ನು ಗಳುವಿನ ಮೇಲಿನಿಂದ ಮಡಿ ಕೋಲಿನಲ್ಲಿ ಎಳೆದುಕೊಂಡು ಉಟ್ಟುಕೊಳ್ಳುವುದಕ್ಕಾಗಿ ಜೋಡಿಸಿದಳು. ಸೀರೆಯಲ್ಲಾ ಅಂಗೈ ಅಂಗೈಯಗಲಕ್ಕೆ ಹರಿದು ತೂತುಬಿದ್ದು ಹೋಗಿತ್ತು. ಅದು ಹೊಸಚಟ್ಟ ಹೊಸಸೀರೆ ತೆಗೆದುಕೊಂಡು ಸುಮಾರು ಒಂದು ತಿಂಗಳಾಗಿತ್ತು. ಎಂಟು ಹುಂಚದಡಿ ಸೀರೆ ಬಹು ಚೆನ್ನಾಗಿತ್ತು. ಮಗಳಿಗೋಸ್ಕರ ತೌರುಮನೆಯಿಂದ ಕಳುಹಿಸಿದ್ದರು. ಅದರ ಅಗಲ ಮೊಳವೂ ವರ್ಣವೂ ಅಂಚೂ ಸೆರಗೂ ಎಲ್ಲಾ ಒಂದಕ್ಕೊಂದು ಹೊಂದವಣಿಗೆಯಾಗಿ ಬಹು ಧಡೂತಿಯಾಗಿತ್ತು. ಅದನ್ನು ಉಟ್ಟುಕೊಂಡು ಅತ್ತೆಗೆ ಸೀತೆಯು ನಮಸ್ಕಾರ ಮಾಡಿದಾಗಿನಿಂದಲೂ ಈ ಮಹಾಮಾತೆಗೆ ಕಂಣು ಕೆಂಪಗಾಗಿಯೇ ಇತ್ತು. ಸಮಯ ಬಂದಾಗಲೆಲ್ಲಾ ತಿಮ್ಮಮ್ಮನು-ಅಯ್ಯೋ ಅವಳಿಗೇನು ಬೇಕಾದ ಸೀರೆಯನ್ನು ತೌರು ಮನೆಯಿಂದ ತರಿಸಿಕೊಳ್ಳುತ್ತಾಳೆ. ಬೇಕಬೇಕಾದವರ ಕೈಲಿ ತರಿಸಿಕೊಳ್ಳುತ್ತಾಳೆ. ಬೇಕು ಎಂದರೆ ಇನ್ನೂ ಭಾರಿ ಸೀರೆಗಳೆಲ್ಲಾ ಅವಳಿಗೆ ಬರುತ್ತೆ. ನನ್ನ ಯಾರು ಕೇಳುತಾರೆ, ನನ್ನ ಯಾರು ಸೀಯುತಾರೆ? ಅವರಪ್ಪನಿಗೂ ಅಜ್ಜನಿಗೂ ದೊರೆ ಬೇಕಾದ್ದನ್ನು ಕೊಟ್ಟಿದಾನೆ. ನಮ್ಮಪ್ಪ ಬಡವ. ಇಂಥಾ ಐಶ್ವರ್ಯವೆಲ್ಲಾ ನನಗೆ ಬಾ ಎಂದರೆ ಎಲ್ಲಿಂದ ಬಂದೀತು? ಹೀಗೆ ನಾನಾ ವಿಧದಲ್ಲಿ ನೆವನೆವದಲ್ಲಿ ಸೊಸೆಯನ್ನು ಅನ್ನುತಾ ಹಳಿಯುತಾಲೇ ಇದ್ದಳು. ತಿಮ್ಮುವಿಗೆ ಈ ಸೀರೆಯ ಮೇಲೆ ಬಹುವಾಗಿ ಕಂಣು ಇತ್ತು. ಹೇಗೋ ಏನೋ ಎಂತೋ ಸೀರೆಯಲ್ಲಾ ಅಂಗೈ ಅಂಗೈ ಅಗಲಕ್ಕೆ ತಾತಾತೂತಾಗಿತ್ತು. ಇದನ್ನು ಉಟ್ಟುಕೊಳ್ಳುವುದಕ್ಕೆ ಆಗದು ಬೇರೆ ಮಡಿಸೀರೆ ಇಲ್ಲ ಸೀರೆ ಉಟ್ಟುಕೊಂಡು ಆ ದಿವಸ ಮಾಡಬೇಕಾದ ಮಡಿಕೆಲಸ ಬೇರೆ ಇತ್ತು. ಅದನ್ನು ಮಾಡದಿದ್ದರೆ ಅತ್ತೆಯ ಆಗ್ರಹಶಿಖಿಯು ಆಕಾಶಕ್ಕೂ ಭೂಮಿಗೂ ಏಕವಾಗುವುದು. ತನಗಾದ ಅವಸ್ಥೆಯನ್ನು ಹೇಳಿದರೂ ಕಷ್ಟ ಹೇಳದಿದ್ದರೂ ಕಷ್ಟ ಏನ ಮಾಡಬೇಕು? ಹಾಗೆಯೇ ತಾನು ಉಟ್ಟಿದ್ದ ಒದ್ದೇ ಸೀರೆಯನ್ನೇ ಚೆನ್ನಾಗಿ ಹಿಂಡಿ ಉಟ್ಟುಕೊಂಡು ಒಳಕ್ಕೆ ಹೋದಳು. ಮಡಿಕೆಲಸವೆಲ್ಲಾ ಮುಗಿದಮೇಲೆ ಬೇರೇ ಮೈಲಿಗೆಯನ್ನುಟ್ಟು ಈ ಒದ್ದೆಯನ್ನು ಒಣಗಿಸಿಕೊಂಡಳು.ಹರುಕು ಸೀರೆಯನ್ನು ಬೇರೇ ಕಟ್ಟಿ ಇರಿಸಿ ಯಾರಸಂಗಡಲೂ ಹೇಳದೆ ಆ ದುಖವನ್ನು ತಾನೇ ಸಹಿಸಿಕೊಂಡು ಸುಮ್ಮನಾದಳು.

ಇನ್ನೊಂದು ದಿವಸ ಏನೋ ಹಬ್ಬವಾಯಿತು. ಸೀತಮ್ಮನು ಮಡಿ ಉಟ್ಟುಕೊಳ್ಳುವಾಗ ತಾನು ಹಾಕಿಕೊಂಡಿದ್ದ ಚಿನ್ನದ ಡಾಬನ್ನೂ ಕತ್ತಿಗೆ ಹಾಕಿದ್ದ ಕಠಾಣಿಯನ್ನೂ ತೆಗೆದು ಉಪ್ಪು ಮೆಣಸಿನ ಗೂಡಿನಲ್ಲಿರಿಸಿ ಬಚ್ಚಲ

ಮನೆಗೆ ಹೋದಳು. ಈ ಎರಡು ಆಭರಣಗಳೂ ತೌರುಮನೆಯಲ್ಲಿ ಸೀತೆಗೆ ಕೊಟ್ಟಿದ್ದರು. ಮೈತೊಳೆದು ಕೊಂಡು ಹೋಗಿ ಉಪ್ಪು ಮೆಣಸಿನ ಗೂಡಿನಲ್ಲಿ ನೋಡಿದರೆ ಏಳುಎಳೆ ಕಠಾಣೆಯಲ್ಲಿ ನಾಲ್ಕು ಎಳೆ ಇದೆ ಮೂರೆಳೆ ಇಲ್ಲ ಚಿನ್ನದ ಡಾಬು ಎರಡು ತುಂಡಾಗಿ ಅಲ್ಲಿ ಇರಿಸಿತ್ತು. ಅದನ್ನು ತೆಗೆದು ನೋಡುವಲ್ಲಿ ಸೀತಮ್ಮನ ಸೊಂಟದ ಅಳತೆಗೆ ನಾಲ್ಕು ಬೆಟ್ಟು ಉದ್ದ ಕಡಮೆಯಾಗಿತ್ತು. ಇದನ್ನು ಕಂಡು ಸೀತೆಗೆ ಬಹಳ ದುಃಖ ಬಂತು. ಬಂದರೇನು? ಇವಳು ಯಾರನ್ನೇನು ಮಾಡುವ ಹಾಗಿದಾಳೆ? ಕೂಗದಹಾಗೆ ಸುಮ್ಮನಿದ್ದು ಆದಿನ ರಾತ್ರೆ ಗಂಡನಸಂಗಡ ತನ್ನ ಸೀರೆಗೂ ಒಡವೆಗೂ ಬಂದ ದುರವಸ್ಥೆಯನ್ನು ಹೇಳಿ ಕಂಣಿನಲ್ಲಿ ನೀರ ಹಾಕಿದಳು. ಮಹಾದೇವನು ಇದೆಲ್ಲವನ್ನೂ ಕೇಳಿ ವ್ಯಸನಸೂಚಕವಾಗಿ ಒಂದೆರಡುಸಾರಿ ಲೊಚಗುಟ್ಟಿ ಯಾವ ಮಾತನ್ನೂ ಆಡದೆ ಸುಮ್ಮನಾದನು. ಅವನು ಮತ್ತೇನ ಮಾಡುವುದಕ್ಕೂ ಸಾಧ್ಯವಿರಲಿಲ್ಲ ಪೂರ್ವಕಾಲದಲ್ಲಿ ಗಂಡಹೆಂಡಿರು ಎಷ್ಟು ದೊಡ್ಡವರಾಗಿ ಎಷ್ಟು ದಿವಸದಿಂದ ಬಾಳಿಕೊಂಡಿದ್ದಾಗ್ಯೂ ಹೆಂಡತಿಯ ಮಾತನ್ನು ಗಂಡನೂ ಗಂಡನ ಮಾತನ್ನು ಹೆಂಡತಿಯೂ ಹಿರಿಯರ ಸಂಗಡ ಆಡುತಿರಲಿಲ್ಲ ಮೊಟ್ಟ ಮೊದಲು ನಾಚಿಕೆ, ಎರಡನೆಯದು ಮನೆಯ ಯಜಮಾನರೇ ಎಲ್ಲರ ಯೋಗಕ್ಷೇಮವನ್ನೂ ನೋಡಿಕೊಳ್ಳತಕ್ಕವರೆಂಬ ನಿಬಂಧನೆ. ಅಂಥವರಲ್ಲಿ ಹೆಂಡತಿಯು ವಿಷಯವನ್ನು ಕುರಿತು ಗಂಡನಾಗಲಿ ಗಂಡನ ಪ್ರಸ್ತಾಪವನ್ನು ಕುರಿತು ಹೆಂಡತಿಯಾಗಲಿ ಸ್ವತಂತ್ರಿಸಿ ಮಾತನಾಡಿದರೆ ಯಜಮಾನ್ಯದ ಬಿಗಿ ಕಡಮೆಯಾಗಿದೆ ಎಂದಹಾಗೆ ಆಗಬಹುದು. ಆದಕಾರಣ ತಂದೆಯಲ್ಲಿ ಈ ಸಂಗತಿಯನ್ನು ಕುರಿತು ಮಾತನಾಡುವುದು ಮಾರ್ರ್ಯಾದೆಗೂ ಕಡಮೆ. ಇದಕ್ಕೆಲ್ಲಾ ವಿಪರೀತವಾಗಿ ಅರ್ಥವನ್ನು ಕಲ್ಪಿಸಿ ಆಕ್ಷೇಪಣೆ ಮಾಡತಕ್ಕ ಚಿಕ್ಕಮ್ಮನ ಭಯವು ಎಲ್ಲಕ್ಕಿಂತಲೂ ಹೆಚ್ಚಾದ್ದು ಹೀಗೆ ನಾನಾ ವಿಧದ ಒಳ ಸಂಕಟಗಳು ಇದ್ದಕಾರಣ ಬಂದ ಕಷ್ಟಗಳೆಲ್ಲವನ್ನೂ ಅನುಭವಿಸಿಯೇ ತೀರಬೇಕು. ಇಲ್ಲವಾದರೆ ಲೋಕಾಪವಾದವೂ ಇತರ ಹಿಂಸೆಗಳೂ ಸಂಭವಿಸುವವು ಎಂದು ಆ ಯೌವನಸ್ಥನು ಸುಮ್ಮನಾದನು.

ರಾತ್ರಿಹೊತ್ತು ನಿಯತವಾಗಿ ಸೀತಮ್ಮನೇ ಅಡಿಗೆಮಾಡಿ ಬಡಿಸುತಿದ್ದಳಷ್ಟೆ. ಒಂದುರಾತ್ರೆ ಇಬ್ಬರು ಮೂರುಜನ ಊಟಮಾಡಲಿಲ್ಲ ಮಾಡಿದ್ದರಲ್ಲಿ ಮೂರಾಳು ಅನ್ನ ಮಿಕ್ಕಿತು. ಅದನ್ನು ನೋಡಿ ತಿಮ್ಮಮ್ಮನು ಸೊಸೆಯನ್ನು ಮನಸ್ಸು ಬಂದಹಾಗೆ ಬೈದು - ಅಕ್ಕಿಯನ್ನು ನಿಮ್ಮಪ್ಪನ ಮನೆಯಿಂದ ತಂದಿದ್ದೆಯೇನೆ ದಂದರಹಾಳಿ? ಮಿಕ್ಕ ತಂಗಳೆಲ್ಲವನ್ನೂ ಆಚೆಗೆ ಹಾಕದೆ ನೀನೆ ಮುಗಿಸಬೇಕು, ಅದೆಲ್ಲವನ್ನೂ ನಿನ್ನ ತಲೆಗೆ ಹಾಕಿ ಕಟ್ಟುತ್ತೇನೆ ಎಂದು ಬಾಯಿಗೆ ಬಂದಂತೆ ಬೈದಳು. ಸೀತಮ್ಮನು ಹೆದರಿಕೊಂಡು ಮಾರನೇದಿನ ಬೆಳಗ್ಗೆ ತಂಗಳನ್ನು ಉಂಡಳು. ಆ ದಿನ ರಾತ್ರಿಯೂ ಅದನ್ನೇ ಇಕ್ಕಿಕೊಂಡು ಭುಂಜಿಸಿದಳು. ತಂಗಳನ್ನು ತಿಂದ ಅಭ್ಯಾಸ ಇವಳಿಗೆ ಕಡಮೆಯಾಗಿತ್ತು. ಇದೂ ಅಲ್ಲದೆ ಸೀತೆಯು ಎರಡು ಹೊತ್ತಿನಿಂದಲೂ ಉಂಡದ್ದು ೧-೧॥ ಪಾವು ಅಕ್ಕಿಯ ಅನ್ನ ಹೋಗಲಾಗಿ ಉಳಿದ ಮೂರು ಪಾವು ಅಕ್ಕಿಯ ಅನ್ನುವ ಹಳಸಿ ಹೋಯಿತು. ನೆರೆಮನೆಯ ಯಜಮಾನಿಯಾದ ಸುಬ್ಬಮ್ಮನೆಂಬಾಕೆಯ ಸಂಗಡ ಯಾರೂ ಕಾಣದಹಾಗೆ ಸೀತಮ್ಮನು ಯಾವಾಗಲಾದರೂ ತನ್ನ ಸಂಕಟಗಳನ್ನು ಹೇಳಿಕೊಳ್ಳುವ ವಾಡಿಕೆಯಿತ್ತು. ಯಾವ ಮನುಷ್ಯನೇ ಆಗಲಿ ಸಂಕಟ ಉಂಟಾದಾಗ ಅದನ್ನು ಇತರರ ಸಂಗಡ ಹೇಳಿಕೊಳ್ಳದೆ ಇರುವುದು ಬಹುಶ್ರಮ. ಹಾಗೆ ಸಹಿಸಿಕೊಂಡು ತಮ್ಮೊಳಗೇ ಅದನ್ನು ಅಳೆದು ಸುರಿದು ಮಾಡಿಕೊಂಡಿದ್ದರೆ, ವ್ಯಥೆಯ ಚುರುಕು

ಬಹುವಾಗಿ ಹೆಚ್ಚಿ ಸಹಿಸುವುದಕ್ಕೆ ಅಸಾಧ್ಯವಾಗುವುದು. ಇತರರ ಸಂಗಡ ತಮ್ಮ ಕಷ್ಟವನ್ನು ಹೇಳಿಕೊಂಡರೆ ಅಂಥಾ ಇತರರೂ ಅನುತಾಪ ಪಟ್ಟಲ್ಲಿ ನಮ್ಮ ಅಭಿಪ್ರಾಯ ಅನ್ಯಾಯವಾದ್ದಲ್ಲ ಇತರರೂ ನಮ್ಮಂತೆಯೇ ನಮ್ಮ ಸ್ಥಿತಿಯನ್ನು ಭಾವಿಸುತ್ತಾರೆ ಎಂಬ ಒಂದು ಧೈರ್ಯವು ನಮಗೆ ಸ್ವಲ್ಪ ಆಪ್ಯಾಯನವಾಗಿರುವುದು. ಮೇಲಾಗಿ ಹಾಗೆ ಆ ಕಷ್ಟವನ್ನು ಹೇಳಿಕೊಳ್ಳುವಾಗ ಸಹಜವಾಗಿ ಕಂಣಿನಲ್ಲಿ ನೀರು ಬಂದರೂ ಮಾತಿನಲ್ಲಿ ಗದ್ಗದ ಸ್ವರಹುಟ್ಟಿದರೂ ದುಃಖದ ವೇಗ ಲೇಶವಾದರೂ ಕಡಮೆಯಾಗತಕ್ಕದ್ದು ಮನುಷ್ಯ ಸ್ವಭಾವದಲ್ಲಿ ಸಹಜವಾದ ವೃತ್ತಿಯಾಗಿದೆ. ಹೀಗೆ ತನಗೆ ಸಂಭವಿಸಿದ ಸಂಕಟವನ್ನು ಸುಬ್ಬಮ್ಮನ ಸಂಗಡ ಹೇಳಿಕೊಳ್ಳುವಾಗ ಹಳಸಿದ ಅನ್ನ ಪ್ರಸ್ತಾಪಬಂತು. ಆ ಸುಬ್ಬಮ್ಮ ಈ ಹುಡುಗಿಗೆ ಸಂಭವಿಸಿರುವ ಹಿಂಸೆಗೆ ಬಹಳವಾಗಿ ಮರುಗುತಾ ಆ ತಂಗಳನ್ನವನ್ನು ತಂಣೀರಿನಲ್ಲಿ ಹಾಕಿ ಇರಿಸಿದ್ದು ಅದನ್ನು ಹಿಂಡಿ ಹಾಕಿದರೆ ತಂಗುಳಿನ ದೋಷವೂ ವಾಸನೆಯೂ ಕಡಮೆಯಾಗುತ್ತೆಂದು ಹೇಳಿಕೊಟ್ಟಳು. ಅದರಂತೆ ಸೀತಮ್ಮನು ಮಾಡಿ ಪ್ರಾಣಧಾರಣೆಯನ್ನು ಮಾಡಿದಳು.

ಇನ್ನೊಂದು ದಿವಸ ಸೀತಮ್ಮನು ಅಡಿಗೆಮಾಡಿ ಬಡಿಸಿದಳು. ಅನ್ನದಲ್ಲಿ ಅಗುಳೊಂದು ಕೂದಲು ಒಂದು ಹೀಗೆ ಕೂದಲು ಮಿಶ್ರವಾಗಿತ್ತು. ಊಟ ಮಾಡುವುದು ಬಹುಕಷ್ಟವಾಯಿತು. ಆಗ ಸದಾಶಿವದೀಕ್ಷಿತನು-ಸೀತಮ್ಮ ಅಡಿಗೆ ಮಾಡಿದ ದಿವಸವೆಲ್ಲಾ ಏನಾದರೂ ಒಂದು ದೋಷವಿದ್ದೇ ಇರುತ್ತೆ. ಇದಕ್ಕೆ ಕಾರಣವೇನೋ ನಾನರಿಯೇ ಎಂದು ಅಸಮಾಧಾನಕರವಾಗಿ ಮಾತನಾಡಿದನು. ಆಗ ಮಹಾದೇವನು ಸುಮ್ಮನಿರದೆ ಒಂದು ಅಗುಳಿಗೆ ಒಂದು ಕೂದಲು ಇದೆ ಎಂದನು. ತಿಮ್ಮಮ್ಮ - ನಿನ್ನ ಹೆಂಡತಿ ರಂಭೆ ಮಾಡಿದ ಅಡಿಗೇ ರುಚಿ ಅಷ್ಟರಮಟ್ಟಿಗೆ ಇದೆ : ಇಲ್ಲಿಯೇ ತಲೆಬಾಚಿಕೊಂಡ ಕೂದಲನ್ನು ಹಾಕಿ ನೋಡದೆ ಮಾಡದೆಯಲ್ಲರ ಹೊಟ್ಟೆಗೂ ಕೂದಲ ತೊಂಪೆಯನ್ನು ಹಾಕಿದಳು, ಎಂದಳು. ಮಹಾದೇವನು ಸುಮ್ಮನಿರದೆ - ಅನ್ನದಲ್ಲಿ ಸಿಕ್ಕಿದ ಕೂದಲೆಲ್ಲಾ ಚಿಕ್ಕ ಚಿಕ್ಕದಾಗಿವೆ. ಚೋಟುದ್ದದ ಮೇಲೆ ಯಾವುದೂ ಇಲ್ಲ ಉದ್ದವಾದ ಕೂದಲು ಒಂದು ಇಲ್ಲ ಎಂದನು. ಅದಕ್ಕೆ ತಿಮ್ಮುವು - ಉರಿಮಾರಿಯ ಹಾಗೆ ಕಂಣ ಬಿಡುತಾ - ಏನೋ ಹೆಂಡತಿಯನ್ನು ವಹಿಸಿಕೊಂಡೇ ಮಾತನಾಡುತೀಯ? ನಿನ್ನ ಹೆಂಡತಿಯ ಕೂದಲು ಉದ್ದ ನಮ್ಮ ಹೆಂಣಿನ ಕೂದಲು ತುಂಡು ಎಂದಲ್ಲವೆ ನೀನು ಹೇಳಿದ್ದು? ಹಾಗಾದರೆ ನಮ್ಮ ಸಾತಿ ಹಾಕಿತೋ ಅನ್ನದ ತಪ್ಪಲೆಗೆ ಕೂದಲನ್ನು? ದೈವವೇ ಎಂದು ಅದರಷ್ಟಕ್ಕೆ ಅದು ಎಲ್ಲಿಯೋ ಆಡಿಕೊಂಡಿರುತ್ತೆ. ಅದರ ಮೇಲೆ ಏನು ಇವಳಿಗೆ ಚೋಡಿ? ಆ ಹೆಂಣನ್ನು ಎಲ್ಲಿಗೆ ತಳ್ಳಿಬಿಡಲಿ? ನಿಮ್ಮ ಎಡೆಯಲ್ಲಿ ನಾನು ಬಾಳಲಾರೆ. ಅದನ್ನೂ ಎಲ್ಲಿಯಾದರೂ ಹೊಳೆಗೆ ತಳ್ಳಿ ನಾನೂ ಬಿದ್ದು ಪ್ರಾಣಾ ಕಳೆದುಕೊಳ್ಳುತೇನೆ. ಈ ಯಮಹಿಂಸೆಯಲ್ಲಿ ಯಾರು ಬಾಳಿಯಾರು? ಮಾತು ಮಾತಿಗೂ ನನ್ನ ಮೇಲಿನ ಆಕ್ಷೇಪಣೆ ಆ ಹೆಣ್ಣಿನ ಮೇಲಿನ ಆಕ್ಷೇಪಣೆಯೇ ಆಗಿದೆ. ನೀನು ಇನ್ನೇನು ಮಾಡ್ತೀಯೆ? ಎಲ್ಲಾ ಕೈಗೆ ಸಿಕ್ಕಿತು. ಇನ್ನು ನಮ್ಮನ್ನು ಮನೆಬಿಟ್ಟು ದಾಟಿಸುವುದು ತಾನೆ ಉಳಿದಿದೆ? ಆಗ ನಿಮ್ಮ ಹೊಟ್ಟೆಗೆ ಹಾಲ ಹುಯಿದಹಾಗೆ ಆಗುತ್ತೆ. ನೀವು ತಂದೆಮಕ್ಕಳಿಗೆ ನನ್ನ ಮೇಲಲ್ಲವೆ ಇದೆ? ಹೀಗೆಂದು ವಿಧವಿಧದಲ್ಲಿ ಬಾಯಿ ಹಿಡಿಯದ ಮಾತನ್ನು ಎಂದಳು. ಅದಕ್ಕೆ ಮಹಾದೇವನು - ಚಿಕ್ಕಮ್ಮ ನಾನು ಯಾವ ಮಾತನ್ನೂ ಆಡಲಿಲ್ಲ ಕೂದಲು ಉದ್ದವಾದ್ದಲ್ಲ ಎಂದು ಹೇಳಿದ ಮಾತ್ರಕ್ಕೆ ಇಷ್ಟೊಂದು ಅಂದು ನಮ್ಮ ಗ್ರಹಚಾರವನ್ನು ಬಿಡಿಸಿ ಬಿಟ್ಟೆ ಹೀಗೆಂದು ಹೇಳುತಾ ಆಚೆಗೆ ಹೊರಟು ಹೋದನು. ತರುವಾಯ ಸೀತಮ್ಮನಿಗೆ

ಬೇಕಾದಷ್ಟು ಪ್ರಾಯಶ್ಚಿತ್ತವಾಯಿತು. ತಿಮ್ಮಮ್ಮನು ಕುಟ್ಟಿಕೊಂಡು, ಬಡಿದುಕೊಂಡು, ಅತ್ತು ಕರೆದು, ರಂಪಮಾಡಿದಳು.

ಅತ್ತೆಗೂ ನಾದಿನಿಗೂ ಎರೆದ ತರುವಾಯ ತಾನು ಎರೆದುಕೊಳ್ಳುವುದಕ್ಕಾಗಿ ಸೀತಮ್ಮನು ತಲೆಗೆ ಎಣ್ಣೆಯನ್ನು ತಾನೇ ಇರಿಸಿಕೊಳ್ಳಬೇಕು, ಇನ್ನು ಯಾರೂ ಇವಳಿಗೆ ಎಂಣೆಯನ್ನು ಒತ್ತುತಿರಲಿಲ್ಲ ಇವಳೇ ಎಲ್ಲರಿಗೂ ಎಂಣೇ ಒತ್ತಬೇಕಾಗಿತ್ತು. ಇವಳಿಗೆ ಒಂದು ಮಿಳ್ಳೆ ಎಂಣೆಯೂ ಸಿಕ್ಕುತಿರಲಿಲ್ಲ, ಇವಳು ಎಲ್ಲರಿಗೂ ನೀರನ್ನು ಎರೆಯುತಿದ್ದಳು, ಇವಳಿಗೆ ಎರೆದುಕೊಳ್ಳಲು ಎರಡು ಕೊಡ ನೀರೂ ದೊರೆಯುತ್ತಿರಲಿಲ್ಲ, ಮುದ್ದೆ ಮುದ್ದೆ ಸೀಗೇಕಾಯನ್ನು ಇವಳು ತಿರುವಿ ಇರಿಸುತಿದ್ದಳು. ಇವಳಿಗೆ ಮಾತ್ರ ಗಜ್ಜುಗದಷ್ಟು ಸೀಗೇಕಾಯಿಯೂ ಸಿಕ್ಕುತಿರಲಿಲ್ಲ ಇತ್ತ ಹಂಡೆ ಬರೀದು, ಅತ್ತ ಎಣ್ಣೆಸವಟು ಬರೀದು, ಅತ್ತ ಮರಗಿಯಲ್ಲಿ ಸ್ವಲ್ಪ ಸೀಗೇಕಾಯಿ ಇದ್ದರೂ ಮಂಗಳಮಾಯವಾಗಿ ಅದೂ ಬರೀದು. ಈ ಮಧ್ಯೆ ಸೊಸೆ ಎರೆದುಕೊಳ್ಳುವುದಕ್ಕೆ ಹೊಕ್ಕರೆ ಯಾವ ಎಂಣೆಯೂ ಸಾಲದು ಯಾವ ನೀರೂ ಸಾಲದು ಎಂಬ ದೂರು ಮಾತ್ರ ಬಹು ಗಗನವಾಗಿರುತಿತ್ತು. ಮನೆಯಲ್ಲಿ ಹಬ್ಬ ಹರಿದಿನಗಳಲ್ಲಿ ಏನಾದರೂ ಭಕ್ಷಾದಿಗಳನ್ನು ಮಾಡಿದರೆ ಮಾಡಿದ್ದನ್ನೆಲ್ಲಾ ತಿಮ್ಮುವು ಬೇಗ ತೆಗೆದು ಇರಿಸಿಕೊಂಡು ಹಾಳತವಾಗಿ ಎಲ್ಲರಿಗೂ ತಾನೇ ಬಡಿಸಿ ಕೊನೆಯಲ್ಲಿ ಊಟಮಾಡುತ್ತಾ ಇದ್ದ ಸೀತನಿಗೆ ಒಂದು ಚೂರನ್ನು ಹಾಕದೆ ಹೋಗುತಿದ್ದಳು. ಸೀತನಿಗೆ ಬಡಿಸಿತೆ ಕೊಟ್ಟಿತೆ ಎಂದು ಪಾರ್ವತಮ್ಮ ಕಾವೇರಮ್ಮ ಮೊದಲಾದ ಮುದುಕರು ಯಾರಾದರೂ ಕೇಳಿದರೆ, - ಅಯ್ಯೋ ನಾನು ಮರೆತುಬಿಟ್ಟೆ ಇವಳಿಗೆ ಕೊಡುವುದೇನು ಬಡಿಸುವುದೇನು? ಇರಿಸಿದ್ದ ಕಡೆ ತಾನೇ ತೆಗೆದುಕೊಳ್ಳುತ್ತಾಳೆ. ಪಾಪ ಅವಳು ತಿನ್ನುವುದೇ ಇಲ್ಲ ಪದಾರ್ಥ ಇದ್ದ ಕಡೆಯಲ್ಲಿಯೇ ಮಾಯವಾಗಿ ಮಾತ್ರ ಹೋಗುತ್ತೆ. ಅವಳ ವಿಚಿತ್ರಕ್ಕೆ ಬೆಂಕಿಹಾಕಿದರು. ಉಳಿದವರು ಅದರ ಮುಖವನ್ನೆ ಕಾಣೆವು. ಮಾಡಿದ್ದೆಲ್ಲಾ ಅವಳ ಹೊಟ್ಟೆಗೆ ಹೊಕ್ಕು ಈಚೆಗೆ ಬರಬೇಕು. ನಾನಾಗಲಿ ನಮ್ಮ ಹೆಂಣಾಗಲಿ ಅದರ ಸೆಲೆ ಹೇಗೆ ಇದೆಯೋ ಕಾಣೆವು. ಮಾಡಿದ ದಿವಸ ಎಡೆಗೆ ಬಡಿಸಿದ್ದು ಎಷ್ಟೋ ಅಷ್ಟೇ ನಮ್ಮವ್ವ. ಮಾಡಿದ್ದೆಲ್ಲಾ ಅವರು ಗಂಡಹೆಂಡಿರಲ್ಲಿಯೇ ಐಕ್ಯವಾಗುತ್ತೆ. ಆ ಹಾಳ ವಿದ್ಯವನ್ನೆಲ್ಲಾ ಅವರಪ್ಪನ ಮನೆಯಲ್ಲಿ ಚೆನ್ನಾಗಿ ಅರೆದು ಹುಯಿದುಕೊಂಡು ಬಂದಿದಾಳೆ. ಆ ಮಾಯಾಂಗನೆ ಏನು ಸಾಧಾರಣಳೆ? ಅದೆಲ್ಲಾ ಹೇಳಿದರೆ ಚೆನ್ನಿಲ್ಲ, ಹೀಗಲ್ಲ ಹಾಗೆ ಎಂದರೆ ತೊಂಡೂರು ರಾಕ್ಷಸಿಯ ಹಾಗೆ ಬರುತಾಳೆ, ಎತ್ತಲಾಗಾದರೂ ಹಾಳಾಗಿ ಹೋಗಲಿ, ನನ್ನ ತಾಯಿ; ಅವಳ ಗೋಜೇ ನನಗೆ ಬೇಡ, ಹೀಗೆಂದು ಅನೇಕ ವಿಧವಾಗಿ ಅನ್ವಯವಾಗಿ ಮಾತನಾಡುತಿದ್ದಳು.

# ೧೦ನೆ ಅಧ್ಯಾಯ

ಸೀತಮ್ಮನು ಈ ಹುರಿಪತವನ್ನು ಸಹಿಸಿಕೊಂಡು ಲೇಶವೂ ಪಾತಿವ್ರತ್ಯಧರ್ಮಕ್ಕೆ ಲೋಪವಿಲ್ಲದಂತೆ ನಡೆದುಕೊಳ್ಳುತಿದ್ದಳು. ಹೀಗಿರುವಲ್ಲಿ ಪ್ರತಿದಿನವೂ ರಾತ್ರೆಕಾಲದಲ್ಲಿ ಆವೂರ ಈಶ್ವರನ ಗುಡಿಯಲ್ಲಿ ಸದಾಶಿವದೀಕ್ಷಿತನು ಗ್ರಾಮಸ್ಥರ ಅಪೇಕ್ಷೆಯಂತೆ ಪುರಾಣವನ್ನು ಹೇಳುತ್ತಿದ್ದನು. ಸ್ವತಃ ಪಂಡಿತ, ಕೇವಲ ಸ್ವಧರ್ಮನಿರತ, ಸಾತ್ವಿಕ, ಅನೇಕ ರಹಸ್ಯಗಳನ್ನು ತಿಳಿದ ಅಂತರ್ಮುಖಿ; ಇಂಥಾ ಪುರುಷನು ಹೇಳುವ ಪುರಾಣವು ಬಹುಮಟ್ಟಿಗೆ ಪಂಡಿತರಿಗೂ ಪಾಮರರಿಗೂ ರಂಜನೆಯಾಗಿಯೇ ಇರುತಿತ್ತು. ಇದನ್ನು ಕೇಳುವುದಕ್ಕೆ ಸಮೀಪಗ್ರಾಮದ ಜನರೂ ಸಹಿತವಾಗಿ ಬರುತಿದ್ದರು. ಸೀತಮ್ಮ ಹೊರತು ಉಳಿದ ಹೆಂಗಸರೆಲ್ಲಾ ಪುರಾಣವನ್ನು ಕೇಳುವುದಕ್ಕೆ ಪ್ರತಿನಿತ್ಯವೂ ಹೋಗುತಿದ್ದರು. ಒಂದಾನೊಂದು ದಿವಸ ಪುರಾಣದಲ್ಲಿ ಪತಿವ್ರತೆಯರ ಮಹತ್ತನ್ನೇ ವಿಶೇಷವಾಗಿ ಹೇಳಿದರು. ಮಾರನೇ ದಿವಸ ದ್ವಾದಶಿಯಾದ್ದರಿಂದ ಪುರಾಣವಿರಲಿಲ್ಲ. ಬೆಳಗ್ಗೆ ಹೊತ್ತಿಗೆ ಮುಂಚೆ ಪಾರಣೆಯಾಯಿತು. ಹೆಂಗಸರೆಲ್ಲಾ ಗ್ರಾಮ ಪ್ರದಕ್ಷಿಣೆಯನ್ನು ಮಾಡಿಕೊಂಡು ಬಂದರು. ತಿಮ್ಮಮ್ಮ ವೆಂಕಮ್ಮ ಪಾರ್ವತಮ್ಮ ನೆರೆಮನೇ ಸುಬ್ಬಕ್ಕ, ಹೊರಮನೇ ರಾಧಾಬಾಯಿ ಇವರೇ ಮೊದಲಾಗಿ ಮೂರನೇ ಜಾವಕ್ಕೆ ಜೋಯಿಸರ ಮನೇ ಹಜಾರದಲ್ಲಿ ಸೇರಿದರು. ಮುತ್ತುಗದ ಎಲೆಯನ್ನು ತಂದುಹಾಕಿಕೊಂಡಿದ್ದರು. ಎಲ್ಲರೂ ಊಟದೆಲೆಯನ್ನು ಹತ್ತಿಸುತ್ತಾ ಮುನ್ನಾದಿವಸದ ಪುರಾಣ ಬಹುಚೆನ್ನಾಗಿತ್ತೆಂತಲೂ, ಪತಿವ್ರತಾ ಧರ್ಮವನ್ನೂ ಪತಿವ್ರತೆಯರ ಚರಿತ್ರೆಯನ್ನೂ ದೀಕ್ಷಿತರು ಬಹುಚೆನ್ನಾಗಿ ಹೇಳಿದರೆಂತಲೂ ಮಾತನಾಡಿಕೊಳ್ಳುತಿದ್ದರು. ಅವರಲ್ಲಿ ಒಬ್ಬರು - ಇದ್ದರೆ ಹಾಗೆ ಇರಬೇಕು. ಇಲ್ಲದಿದ್ದರೆ ಈ ಹಾಳ ಜನ್ಮವನ್ನು ಎತ್ತಲೇಬಾರದು. ನಾಲ್ಕು ಜನರಲ್ಲಿ ಸರಿ ಎನ್ನಿಸಿಕೊಳ್ಳದ ಮೇಲೆ ಅದು ಎಂಥಾ ಬಾಳು ಎಂದಳು. ಇನ್ನೊಬ್ಬ ಆಕೆಯು - ಎಲ್ಲರಿಗೂ ಅಂಥಾ ಮಹಾತ್ಮರ ಗುಣಲಭಿಸೀತೆ? ಹಾಗೆ ಕೊಟ್ಟರೆ ವರ ಇಟ್ಟರೆ ಶಾಪ ಎನ್ನುವಂಥ ಪುಣ್ಯಾತ್ಮರು ಯಾರೂ ಕಾಣಿಸಲೂ ಇಲ್ಲ, ಅಥವಾ ಇದ್ದರೂ ಈಗ ಅದೆಲ್ಲಾ ನಡೆಯುವುದೂ ಇಲ್ಲ ಎಂದಳು. ಇನ್ನೊಬ್ಬಳು ಅದೆಲ್ಲಾ ನಡೆಯುವುದಿಲ್ಲ ಎನ್ನಕೂಡದು, ಇದು ಕಲಿಯುಗ, ಇಂಥಾ ಇಂಥಾ ಯುಗದಲ್ಲಿ ಜನರ ನಡತೆ ಹೀಗೆಯೇ ಇರುವುದೆಂದು ಯುಗಧರ್ಮವನ್ನು ಹೇಳುವಾಗ ದೀಕ್ಷಿತರು ಹೇಳಿದರು. ಈ ಕಲಿಯುಗದಲ್ಲಿ ಹೇಗೆ ಇರಬೇಕೋ ಹಾಗೆ ಇದ್ದರೆ ಸಾಕು. ಆ ಕಾಲದಲ್ಲಿ ಜರುಗಿದ್ದೆಲ್ಲಾ ಈಗ ಆಗಬೇಕಾದರೆ ಕಷ್ಟ ಎಂದಳು. ಇನ್ನೊಬ್ಬ ಸ್ತ್ರೀಯು - ಮುಖ್ಯವಾಗಿ ಹಿಂದಿನ ಯುಗಗಳಲ್ಲಿಯೂ ಒಳ್ಳೆಯವರು ಕೆಟ್ಟವರು ಎಂದು ಇರಲಿಲ್ಲವೆ? ಅವರವರ ಪೂರ್ವಾರ್ಜಿತವಿದ್ದ ಹಾಗೆಲ್ಲಾ ನಡೆಯುತ್ತೆ. ಇಲ್ಲದಿದ್ದರೆ ಮಳೆಬೆಳೆ ಆದೀತೆ? ಈಗಲೂ ಯಾವ ಮಹಾರಾಯತಿ ಇದಾಳೋ ಅವಳ ಪಾದವೇ ಗತಿ ಎಂದಳು. ಇನ್ನೊಬ್ಬ ಗರತಿಯು - ಪೂರ್ವಾರ್ಜಿತವೆಂದೂ ಅದನ್ನು ಅನುಸರಿಸಿ ನಮ್ಮ ಬುದ್ದಿಯೂ ಹೋಗುತ್ತೆಂದೂ ಹೇಳಿದರೆ ಹೇಗೆ ಆದೀತು? ಕೆಟ್ಟ ದಾರಿಗೆ ಹೋಗಿ ಕೆಟ್ಟತನದಲ್ಲಿ ಆಳಿ ಮುಳುಗಿ "ಇದು ನನ್ನ ಪ್ರಾಚೀನಕರ್ಮ, ಅದಕ್ಕೆ ಸರಿಯಾಗಿಯೇ ಎಲ್ಲಾ ಸಂದರ್ಭವೂ ಕೂಡಿತು, ಅದಕ್ಕೆ ಸರಿಯಾಗಿಯೇ ನಮಗೆ ಬುದ್ದಿಯೂ ಹುಟ್ಟಿತು, ಅದನ್ನು ತಪ್ಪಿಸಿಕೊಳ್ಳುವುದಕ್ಕೆ ಬ್ರಹ್ಮನಿಂದಲೂ ಆಗದು, ಕೆಟ್ಟದೋ ಒಳ್ಳೆಯದೋ ನಮ್ಮ ಹಣೆಯಲ್ಲಿ ಬರೆದಿದ್ದಂತೆ ಆಗುತ್ತೆ,

ಅದನ್ನು ಯಾರೂ ತಪ್ಪಿಸಲಾರರು," ಎಂದು ತನ್ನ ಮನಸ್ಸಿನಲ್ಲಿ ತಿಳಿದುಕೊಂಡು ದುರ್ಮಾಗಕ್ಕೆ ಹೋದರೆ ತಡೆಯೇನಿದೆ? ಎಂದಳು. ಅವರಲ್ಲಿ ಇನ್ನೊಬ್ಬ ಜಾಣೆಯು ಪೂರ್ವಾರ್ಜಿತಕರ್ಮ ಎಂದುಕೊಳ್ಳುತ್ತಾ ಮನಸ್ಸನ್ನು ಹರೀ ಬಿಡತಕ್ಕದ್ದಲ್ಲ, ನಮ್ಮ ಮನಸ್ಸನ್ನು ಜಿತವಾಗಿ ಇರಿಸಿಕೊಂಡು ಒಳ್ಳೆ ಮಾರ್ಗದಲ್ಲಿಯೇ ಇರಬೇಕೆಂದು ನಾವು ಯತ್ನಮಾಡಿದರೆ, ಕ್ಷಣಮಾತ್ರ ಕೆಟ್ಟಬುದ್ಧಿ ಹುಟ್ಟಿದರೂ ಅದು ಮನಸ್ಸಿನಲ್ಲಿಯೇ ಹುಟ್ಟಿ ಮನಸ್ಸಿನಲ್ಲಿಯೇ ಸೀದು ಹೋಗುವುದು ಎಂದಳು. ಅವರಲ್ಲಿ ಮತ್ತೊಬ್ಬ ಚತುರೆಯು - ನಮ್ಮ ಪೂರ್ವ ಜನ್ಮದ ಕರ್ಮ ಹೆಚ್ಚಾಗಿ ದುಷ್ಕರವಾಗಿದ್ದರೆ ನಮ್ಮ ಮನಸ್ಸು ಹಾಗೆ ಸ್ಥಿರವಾಗಿ ನಿಲ್ಲುವುದೇ ಇಲ್ಲ ಮೊದಲು ಮನಸ್ಸಿನಲ್ಲಿ ಯಾವುದು ಹುಟ್ಟುತೋ ಅದು ಜನ್ಮಾಂತರ ವಾಸನೆಯಿಂದ ಆಗತಕ್ಕದ್ದೇ ಸರಿ ಎಂದು ದೀಕ್ಷಿತರು ಹೇಳಿದರಲ್ಲ ಅದೂ ಅಲ್ಲದೆ ಮನಸ್ಸನ್ನು ನಾವು ಅಡಗು ಮೆಟ್ಟುತಾ ಮೆಟ್ಟುತಾ ಅಭ್ಯಾಸವಾದರೆ, ಹಾಗೆಯೇ ಆ ಕರಫಲವು ಹೋಗಿಬಿಡುತ್ತೆ. ಹಾಗೆ ಮನಸ್ಸಿನಲ್ಲಿಯೇ ಲಯವಾಗಿ ಹೋದ್ದರ ವಾಸನೆ ಮುಂದಿನಜನ್ಮಕ್ಕೆ ಇರುವುದಿಲ್ಲ. ಮನಸ್ಸಿನಲ್ಲಿ ಹುಟ್ಟಿದ್ದು ಯಾವಾಗ ಕಾರವಾಗಿ ಪರಿಣಮಿಸುತ್ತೋ ಆಗಲೇ ಆ ಕಾರದಫಲ ಈ ಜನ್ಮದಲ್ಲಿ ನಾಶವಾಗದೆ ಮುಂದಿನ ಜನ್ಮಕ್ಕೂ ವ್ಯಾಪಿಸಿಕೊಳ್ಳುವುದು' ಎಂತಲೂ ವಿಸ್ತಾರವಾಗಿ ಓದಿ ಹೇಳಿದರಷ್ಟೆ ಎಂದಳು. ಮಗದೊಬ್ಬಾಕೆಯು-ಈ ಕಲಿಯುಗದಲ್ಲಿ ಈ ಜನ್ಮದಲ್ಲಿ ಮಾಡಿದ್ದು ಈ ಜನ್ಮದಲ್ಲಿಯೇ ತೋರಿಸಿಬಿಡುತ್ತೆ. ಮುಂದಿನ ತನಕ ನಿಲ್ಲುವುದೇ ಇಲ್ಲ ಎಂದಳು. ಪುನಃ ಅವರಲ್ಲಿಯೇ ಇನ್ನೊಬ್ಬ ಹೆಂಗಸು - ಪಾಪವೋ ಪುಣ್ಯವೋ ಹೆಚ್ಚಾದರೆ ಈಗಲೇ ಅದರ ಫಲ ತೋರುತ್ತೆ. ಇಲ್ಲದಿದ್ದರೆ ಮುಂದಕ್ಕೂ ಬರುತಿರುತ್ತೆ ಎಂದಳು. ಆಗ ಇನ್ನೊಬ್ಬ ಗರತಿಯು ನಮ್ಮ ಬುದ್ಧಿ ನಮ್ಮ ಕೈಲಿದ್ದರೆ ಮುಂದಕ್ಕೂ ಬರುವುದಿಲ್ಲ ಹಿಂದಕ್ಕೂ ಹೋಗುವುದಿಲ್ಲ ಎಂದು ಒಂದೇ ಮಾತನಾಡಿ ಮುಗಿಸಿದಳು.

ಹೀಗೆ ಇವರೆಲ್ಲಾ ಪುರಾಣದಲ್ಲಿ ಕೇಳಿದ ಸಂಗತಿ ಕುರಿತು ತಮಗೆ ಜ್ಞಾಪಕವಿದ್ದ ಮಟ್ಟಿಗೆ ಮಾತನಾಡಿಕೊಳ್ಳುತಾ ಎಲೆಯನ್ನು ಹತ್ತಿಸುತಿರುವಾಗ, ಅದುವರೆಗೂ ಯಾವ ಮಾತನ್ನೂ ಆಡದೆ ಸುಮ್ಮನೇ ಇದ್ದ ಮುದುಕಿಯಾದ ವೆಂಕಮ್ಮನು - ಜನ್ಮಾಂತರದಲ್ಲಿ ನಾವು ಮಾಡಿದ್ದರ ಫಲವೆಂತಲಾದರೂ ಹೇಳಿ, ಇದಕ್ಕೆ ನಮ್ಮ ಬುದ್ದಿಯೇ ಕಾರಣವೆಂತಲಾದರೂ ಹೇಳಿ, ಒಳ್ಳೆಯವರು ಈಗಿಲ್ಲ ಆಗಿದ್ದರು ಎಂತ ಹೇಳುವುದು ಹೇಗೆ? ಯಾವಾಗಲೂ ಒಳ್ಳೆಯವರೂ ಉಂಟು, ಕೆಟ್ಟವರೂ ಉಂಟು. ನೋಡು ಭಾಗೀರಥಿ, ನಮ್ಮ ಅಮ್ಮ ಇದ್ದಳು. ಅವಳು ಯಾರಿಗೆ ಕಡಿಮೆಯಾಗಿದ್ದಳು? ನೀನೂ ಬಲ್ಲೆಯಷ್ಟೆ? ಎಂದಳು. ಆಗ ಭಾಗೀರಥಮ್ಮನು - ಅಯ್ಯೋ ನಾನು ಅರಿಯೆನೆ ಅರುಂದಮ್ಮನವರನ್ನು? ಬೆಂಕಿಯಂಥಾ ಹೆಂಗಸು, ಇನ್ನು ಅಂಥವರನ್ನು ಹುಟ್ಟಿದವರಲ್ಲಿಯೂ ಕಾಣೆ ಬೆಳೆಯುವವರಲ್ಲಿಯೂ ಕಾಣೆ, ಎಂಬದಾಗಿ ಹೇಳಿದಳು ಪುನಃ ವೆಂಕಮ್ಮನು ಅರುಂದಮ್ಮನ ಕಥೆಯನ್ನು ಹೇಳಿದ್ದು ಹೇಗೆಂದರೆ :

ನಮ್ಮ ಅಮ್ಮನ ಹೆಸರು ಅರುಂದಮ್ಮ ಎನ್ನುವರು. ಅರಿಯದವರು ಅರವಿಂದಮ್ಮ ಎನ್ನುತಿದ್ದರು. ನಮ್ಮ ಹೆತ್ತಯ್ಯನು ಹೇಳುತಿದ್ದರು. ನಾವೆಲ್ಲ ಹುಡುಗರು, ನಮ್ಮನ್ನು ಕೂರಿಸಿಕೊಂಡು ಪ್ರಸ್ತಾಪ ಬಂದಾಗ ಹಳೇ ಕಥೆಯನ್ನೆಲ್ಲಾ ಹೇಳುತಿದ್ದರು. ನಮ್ಮ ಅಮ್ಮನ ಜಾತಕವನ್ನು ನೋಡಿ ಅವಳಿಗೆ ಅರುಂಧತಿ ಎಂಬ ಹೆಸರು

ಸಲ್ಲುವುದು ಎಂದರಂತೆ. ನಾಮಕರಣದಲ್ಲಿಯೂ ಅದೇ ಹೆಸರನ್ನೇ ಇಟ್ಟರಂತೆ. ಅವಳನ್ನು ಅರುಂಧತಿಯಮ್ಮ ಎಂದು ಕರೆಯಲಾರದೆ ಎಲ್ಲರೂ ಅರುಂದಮ್ಮ ಎಂದು ಕರೆಯುತಿದ್ದರು. ಅವಳು ಹುಟ್ಟಿದ ನಕ್ಷತ್ರದ ಫಲದಿಂದ ಅವಳಿಗೆ ಈ ಹೆಸರನ್ನು ಇಟ್ಟರಂತೆ. ನಮ್ಮ ಅಮ್ಮನು ಬಾಲ್ಯದಿಂದಲೂ ದೇವರು ಹಿರಿಯರು ಗುರುಗಳು ಇವರಲ್ಲಿ ಬಹು ಭಕ್ತಿಯನ್ನು ಇರಿಸಿಕೊಂಡಿದ್ದಳು. ಈ ಭಕ್ತಿ ಅವಳು ಸಾಯುವವರೆಗೂ ಇತ್ತು. ತನಗೆ ಒಳ್ಳೇ ಸೀರೆ ಬೇಕು ಒಳ್ಳೇ ಒಡವೆ ಬೇಕು ಈ ತಿಂಡಿ ಬೇಕು ಆ ಹೂವು ಬೇಕು ಎಂದು ಹೀಗೆಲ್ಲಾ ಹಠ ಮಾಡಿದವಳೇ ಅಲ್ಲವಂತೆ. ಏಳು ವರುಷದ ಹುಡುಗಿಯಿಂದಲೂ ತನಗೆ ಒಳ್ಳೆ ಗಂಡ ಬರಲಿ ಎಂದು ನಿತ್ಯವೂ ಬಹು ಭಕ್ತಿಯಿಂದ ಗೌರೀ ಪೂಜೆಯನ್ನು ಮಾಡುತಿದ್ದಳಂತೆ. ಅದಕ್ಕೆ ಸರಿಯಾಗಿಯೇ ಒಳ್ಳೆ ಗಂಡನೇ ಸಿಕ್ಕಿದ. ನಮ್ಮ ಅಪ್ಪ ವಿದ್ಯದಲ್ಲಿ ಎಂಥಾ ದೊಡ್ಡವರೆನಿಸಿಕೊಂಡಿದ್ದರೋ ಗುಣದಲ್ಲಿಯೂ ಹಾಗೆಯೇ ಇದ್ದರು. ಮೊದಲು ನಮ್ಮಪ್ಪ ಬಹು ಬಡವರು. ನಮ್ಮ ತಾಯನ್ನು ಮದುವೆಯಾದ ಮೇಲೆ ಅವರಿಗೆ ಎಲ್ಲಾ ಕೈಗೂಡಿ ಮಂಣುಹಿಡಿದರೂ ಹೊನ್ನಾಗುತಾ ಬಂತಂತೆ, ನಮ್ಮ ತಾಯಿಯನ್ನು ಕಂಡರೆ ನಮ್ಮಪ್ಪನಿಗೆ ಬಹುಪ್ರೇಮವಿತ್ತು. ನೊಂದ ಬಾಯಲ್ಲಿ ನುಡಿಯುತಾ ಇರಲಿಲ್ಲ, ಇವಳ ಗುಣವನ್ನೂ ನಡತೆಯನ್ನೂ ಕಂಡರೆ ಅತ್ತೆ ಮಾವಂದಿರಿಗೂ ಎಷ್ಟೋ ವಿಶ್ವಾಸ. ನಮ್ಮ ಭಾಗದ ಲಕ್ಷ್ಮಿ ನಮ್ಮ ಮನೆಗೆ ಬಂದು ಬೆಳಕು ಮಾಡಿದಳು. ರೂಪಿನಲ್ಲಿ ಸಾಕ್ಷಾತ್ ಆದಿಲಕ್ಷ್ಮಿಯ ಹಾಗಿದಾಳೆ. ಅವಳ ನಡತೆಯೂ ಅದಕ್ಕೆ ಸಮವಾಗಿಯೇ ಇದೆ, ಎಂದು ಕೊಂಡಾಡುತಿದ್ದರು. ಬೆಳಗ್ಗೆ ಉಷಃಕಾಲಕ್ಕೆ ಎದ್ದು ಮನೆಯ ಕೆಲಸವನ್ನೆಲ್ಲಾ ಮುಗಿಸಿಕೊಂಡು ಮಡಿ ಉಟ್ಟುಕೊಂಡು ಅಡಿಗೆ ಮಾಡುತಾಲೇ ನಿತ್ಯ ಗೌರೀಪೂಜೆಯನ್ನೂ ಬೃಂದಾವನದ ಪೂಜೆಯನ್ನೂ ಮುಗಿಸಿ ಅತ್ತೆ ಮಾವಂದಿರಿಗೂ, ಗಂಡನಿಗೂ ನಮಸ್ಕಾರ ಮಾಡುತಿದ್ದಳು. ಸಾಯಂಕಾಲವಾದ ಮೇಲೆಯೂ ಇದೇ ರೀತಿಯಾಗಿ ಮಾಡುತಿದ್ದಳು. ಇದೂ ಅಲ್ಲದೆ ನಿತ್ಯವೂ ಗಂಡನ ಕಾಲನ್ನು ತೊಳೆದು ಆ ತೀರ್ಥವನ್ನು ತಾನು ತೆಗೆದುಕೊಂಡ ಹೊರತು ಊಟ ಮಾಡುತಿರಲಿಲ್ಲ, ಆ ತೀರ್ಥವನ್ನು ಬೇರೆ ಒಂದು ಲೋಟಿಯಲ್ಲಿ ಇರಿಸಿಕೊಂಡಿದ್ದು ಗಂಡ ಊರಿಗೆ ಕೇರಿಗೆ ಹೋದಾಗ ಅದನ್ನು ತೆಗೆದುಕೊಳ್ಳುತಿದ್ದಳು. ಇವಳಿಗಿಂತಲೂ ಹಿರಿಯರಾದವರಿಗೆಲ್ಲರಿಗೂ ಇವಳನ್ನು ಕಂಡರೆ ಪರಮಾಶ್ಚರ್ಯವಾಗುತಿತ್ತು. ಎಲ್ಲರೂ ಇವಳಿಗೆ ಹೆದರಿಕೊಳ್ಳುತಿದ್ದರು. ನಮ್ಮಮ್ಮನಿಗೆ ಆದ್ದು ಎರಡೇ ಮಕ್ಕಳು. ನಾನು ಚೊಚ್ಚಲು ನಮ್ಮ ನೀಲಕಂಠನೇ ಮರಚಲು. ಇನ್ನು ಮಕ್ಕಳಾಗಲೇ ಇಲ್ಲ, ಅವಳು ಆಡಿದಮಾತು ಎಂದಿಗೂ ತಪ್ಪುತ್ತಿರಲಿಲ್ಲ.

ಒಂದು ಸಾರಿ ಮಗ್ಗಲಮನೆಯಲ್ಲಿ ಆ ಮನೇ ಅಳಿಯನಾದ ಗೋಪಾಲನೆಂಬುವನು ಇದ್ದನು. ಇವನಿಗೆ ಬಹು ದಿವಸಕ್ಕೆ ಒಂದು ಗಂಡುಮಗುವಾಗಿತ್ತು. ಆ ಮನೆಗೂ ನಮ್ಮ ಮನೆಗೂ ಮಧ್ಯೆ ಇದ್ದ ನಮ್ಮ ಗೋಡೆ ಬಿದ್ದುಹೋಗಿ ಬಹುದಿವಸದಿಂದಲೂ ಹಿಂಸೆಯಾಗಿತ್ತು. ನಮ್ಮ ಅಪ್ಪನು ಆ ಗೋಡೆಯನ್ನು ಹಾಕಿಸಲು ಹದೀ ತೆಗೆಯಿಸಿದರು. ಆಗ ಆ ಗೋಪಾಲನೆಂಬುವನು ಸರ್ಕಾರದಲ್ಲಿ ಫಿರ್ಯಾದುಮಾಡಿ ನಮ್ಮ ತಂದೆಗೆ ಬಹಳ ಹಿಂಸೆ ಪಡಿಸಿದನು. ಗಂಡನಿಗೆ ಮನಸ್ಸು ಸಂತೋಷವಾಗಿಲ್ಲದಿದ್ದ ಕಾರಣ ನಮ್ಮಮ್ಮನಿಗೆ ಬಹಳ ಅಸಮಾಧಾನವಾಗಿತ್ತು. ಕೇವಲ ಮಾನಭಂಗವಾಗುವಂತೆ ಸಂದರ್ಭವನ್ನು ತಂದಿಟ್ಟು ಗೋಪಾಲನು ಹಿಂಸೆಯನ್ನು ಮಾಡಿದನು. ಈ ವಿವಾದದಲ್ಲಿ ಗಂಡನಿಗೆ ಮಾನಹೋದೀತಲ್ಲಾ ಎಂಬ ಚಿಂತೆಯಿಂದ ನಮ್ಮ ತಾಯಿಯು ನೆರೆಮನೆಯೊಳಕ್ಕೆ ಹೋಗಿ - ಗೋಪಾಲ,

ನೀನು ಚಿಕ್ಕವನು, ಆದರೂ ಚಿಂತೆಯಿಲ್ಲ ಹೇಳಿದವರ ಮಾತನ್ನು ಕೇಳಿ ಮಾನಿಷ್ಠರಾದ ನಮ್ಮ ಮಾನವನ್ನು ಕಳೆಯಬೇಡ. ನಿನ್ನ ಕಾಲಿಗೆ ನಮಸ್ಕಾರ ಮಾಡುತೇನಪ್ಪ ಎಂದಳು. ಅದಕ್ಕೆ ದುರುಳನಾದ ಆ ಗೋಪಾಲನು ಈ ಬಿನ್ನಾಣವನ್ನು ಯಾರಿಗೆ ಕಲಿಸುತೀಯೇ? ಸೂಳೆಯ ಹಾಗೆ ಬಂದು ನಿಂತು ಕೈಬಾಯಿ ತಿರುಗಿಸಿಕೊಂಡು ಮಾತನಾಡುವುದಕ್ಕೆ ಬಂದೆಯ? ಎಂದನು. ಅದನ್ನು ಕೇಳಿದ ಕೂಡಲೆ ಅರುಂದಮ್ಮನ ಕಂಣಿನಲ್ಲಿ ನೀರುಬಂತು. ಆ ದುಃಖವನ್ನು ಸಹಿಸಿಕೊಂಡು ನಮ್ಮ ತಾಯಿಯು - ಎಲಾ ಗೋಪಾಲ, ನಾನು ನಿನ್ನನ್ನು ಬೈಯ್ಯುವುದಿಲ್ಲ, ನಿನ್ನಲ್ಲಿ ಸತ್ಯವಿದ್ದರೆ ನಮಗೆ ಹುಟ್ಟುವ ಕೂಳು ಹುಟ್ಟಬೇಡ; ನನ್ನೆರಡು ಮಕ್ಕಳೂ ಈಗಲೇ ಸುಟ್ಟು ಬೂದಿಯಾಗಲಿ ನಮ್ಮಲ್ಲಿ ಸತ್ಯವಿದ್ದರೆ ನಾನು ಹೇಳುತ್ತೇನೆ ಕೇಳು, ಈ ಸೂರ್ಯನಾರಾಯಣ ಸಾಕ್ಷಿಯಾಗಿದಾನೆ. ನಾನು ಪತಿವ್ರತೆ. ನಿನ್ನ ಎರಡು ಕಾಲಿಗೂ ಕುಷ್ಟರೋಗ ಬಂದು ಬಿದ್ದುಹೋಗುತ್ತೆ. ನಿನ್ನ ನಾಲಿಗೆ ಸೆಳೆದುಹೋಗುತ್ತೆ. ನೀರೂ ನೆರಳೂ ಇಲ್ಲದ ಕಡೆ ನೀನು ಪ್ರಾಣಬಿಟ್ಟು ಅಂತರ್ಪಿಶಾಚಿಯಾಗುತೀಯೆ, ಎಂದು ವಿಶೇಷವಾಗಿ ರೌದ್ರಾಕಾರದಿಂದ ಶಾಪವನ್ನು ಕೊಟ್ಟಳು. ಹಾಗೆ ಎಂದ ಹಾಗೆಯೇ ಆ ಗೋಪಾಲನಿಗೆ ಕೆಲವು ಕಾಲದ ಮೇಲೆ ಜ್ವರ ಬಂತು. ಕಾಲುಗಳೆರಡೂ ಬಾತುಕೊಂಡು ಒಡೆದು ನೀರು ಸುರಿಯುವುದಕ್ಕೆ ಮೊದಲಾಯಿತು. ಕೊನೆಗೆ ಎರಡುಕಾಲೂ ಹುಂಣಾಗಿ ಎರಡುಪಾದಗಳೂ ಕೊಳೆತು ಹುಳುಬಿದ್ದು ಸಾಯಂಕಾಲ ಮೂಳೆಸಹಿತ ಕಳಚಿಕೊಂಡು ಒಂದುಪಾದ ಬಿದ್ದೇ ಹೋಯಿತು. ಆ ರಾತ್ರೆಯೇ ಗೋಪಾಲನಿಗೆ ರಣಸನ್ನಿಯಾಗಿ ನಾಲಿಗೆ ಒಳಕ್ಕೆ ಸೇರಿಕೊಂಡು ಹೋಯಿತು. ವೈದ್ಯರಿಗೆ ತೋರಿಸಬೇಕೆಂದು ಅವನನ್ನು ಗಾಡಿಯ ಮೇಲೆ ಹಾಕಿಕೊಂಡು ಕರೆದುಕೊಂಡು ಹೋಗುತ್ತಿರುವಾಗ ರಾಮಸಮುದ್ರಬಿಟ್ಟು ಚಾಮರಾಜನಗರಕ್ಕೆ ಹೋಗುವ ಮಧ್ಯಮಾರ್ಗದಲ್ಲಿ ಸಂಕಟ ಹೆಚ್ಚಾಗಿ ಗಾಡೀಮೇಲೆಯೇ ಗೋಪಾಲನಿಗೆ ಪ್ರಾಣಹೋಯಿತು. ಇನ್ನೇನು ದೃಷ್ಟಾಂತಬೇಕು?

ಇದೂ ಅಲ್ಲದೆ ಇನ್ನೊಂದು ವಿಚಿತ್ರ ನಡೆಯಿತು. ನಮ್ಮ ಗದ್ದೆ ಮಾಡುತಿದ್ದ ವರದನೆಂಬ ಶೂದ್ರನು ಒಂದುಸಾರಿ ಎಂಟು ಕಂಡಗ ಬತ್ತವನ್ನು ತಂದು ನಮ್ಮ ಮನೆಯಲ್ಲಿ ಅಳೆದುಹಾಕಿದನು. ನಮ್ಮಮ್ಮನೇ ನಿಂತುಕೊಂಡು ಅಳಸಿಕೊಂಡಳು. ನಮ್ಮ ಅಪ್ಪ ಆಗ ಊರಲ್ಲಿರಲಿಲ್ಲ ನಂಜನಗೂಡಿಗೆ ಹೋಗಿದ್ದರು. ಅವರು ಬಂದಮೇಲೆ ಉಳಿದ ಹನ್ನೆರಡು ಕಂಡಗವನ್ನೂ ತಂದುಕೊಡೆಂದು ಆ ಗೌಡನಿಗೆ ವರಾತು ಮಾಡಿದರು. ಅದಕ್ಕೆ ಅವನು ಇಪ್ಪತ್ತು ಕಂಡಗವನ್ನೂ ಅಳತೆಮಾಡಿ ನಮ್ಮ ಮನೆಯಲ್ಲಿ ನಮ್ಮ ಅಮ್ಮನ ವಶಕ್ಕೆ ಕೊಟ್ಟಿದ್ದೇನೆಂದು ಸುಳ್ಳುಹೇಳಿದ. ನಮ್ಮಪ್ಪನು ಅವನನ್ನು ನಮ್ಮ ಮನೆಗೆ ಕರೆದುತಂದ ನಮ್ಮ ತಾಯಿಯ ಎದುರಿಗೆ ಕೇಳಿದರು. ಅವನು ಸ್ವಲ್ಪವೂ ಅಂದೇಶಪಡದೆ, ನಾನು ಇಪ್ಪತ್ತು ಕಂಡಗವನ್ನೂ ಅಳತೇಮಾಡಿ ಈ ಹಜಾರದಲ್ಲಿ ನಿಮ್ಮ ಹಟ್ಟಿಯಲ್ಲಿಯೇ ಸುರಿದುಹೋದೆನಲ್ಲವ್ವ ಎಂದು ಹೇಳಿದನು. ಅದಕ್ಕೆ ನಮ್ಮ ತಾಯಿಯು - ಎಲಾ, ಸುಳ್ಳು ಹೇಳಿದ್ದೀಯೆ. ನೀನು ಹುಟ್ಟಿದ ೬೦ ವರುಷಕ್ಕೆ ನಿನಗೆ ನೀನು ಎತ್ತಿಕೊಂಡಿರುವ ಒಂದು ಗಂಡುಮಗುವಾಗಿದೆ. ನಿನ್ನ ಸುಳ್ಳಿಗೆ ಆ ಮಗು ಸಾಕ್ಷಿಯಾಗಿರಲಿ. ಈ ಮಾತನ್ನು ತಿಳಿದುಕೊ ಎಂದಳು. ಆ ಶೂದ್ರನು ಬಾಯಿಗೆ ಬಂದಹಾಗೆ ಆಡಿಕೊಳ್ಳುತಾ ಮಗುವನ್ನು ಎತ್ತಿಕೊಂಡು ಮನೆಗೆ ಹೋದನು..ಒಂದು ದಿನ ಇವನ ಹೆಂಡತಿಯೂ ಮಗುವೂ ರಾತ್ರೆ ಮಲಗಿರುವಾಗ ಒಳಗೆ ಗೆದ್ದಲು ತಿಂದು ಹೋಗಿದ್ದ ಒಂದು ತೊಲೆ ಮುರಿದು ಮಗುವಿನ ಮೇಲೆ ಬಿತ್ತು. ಆ

ಕ್ಷಣದಲ್ಲಿಯೇ ಮಗು ಸತ್ತು ಹೋಯಿತು. ಆ ಹೆಂಗಸಿಗೆ ಅರೆಜೀವವಾಯಿತು. ಅರುಂದಮ್ಮನ ಶಾಪದಿಂದ ಹೀಗಾಯಿತೆಂದು ಆವೂರಲ್ಲಿಯೂ ಹತ್ತಿರಿರುವ ಗ್ರಾಮಗಳಲ್ಲಿಯೂ ವದಂತಿ ಹರಡಿಕೊಂಡಿತು.

ಇದೂ ಅಲ್ಲದೆ ಆ ಸುತ್ತಲಹಳ್ಳಿಗಳಲ್ಲಿ ಯಾರಿಗೆ ಯಾವ ರೋಗ ಬರಲಿ, ಏನು ಸಂಕಟವಾಗಲಿ, ನಮ್ಮ ಮನೆಗೆ ರೋಗಿಗಳನ್ನು ಕರೆದು ತರುತಿದ್ದರು. ನಮ್ಮಮ್ಮ ಬೇವಿನ ಸೊಪ್ಪನ್ನು ತೆಗೆದುಕೊಂಡು ಮಂತ್ರ ಹಾಕಿ ಮೂರುಸಾರಿ ನಿವಾಳಿ ಹಾಕಿದರೆ ಅವರ ರೋಗ ಹೋಗುತಿತ್ತು. ಆ ಸುತ್ತಿನ ಜನರೆಲ್ಲರೂ ನಮ್ಮಮ್ಮನ ಹೆಸರೆತ್ತಿದ ಕಡೆಗೆ ಕೈ ಮುಗಿಯುತ್ತಿದ್ದರು. ನಮ್ಮ ತಾತನೂ ನಮ್ಮ ಅಜ್ಜಿಯೂ ಮೊದಲೇ ತೀರಿಹೋದರು. ಕೆಲವು ವರುಷಗಳ ಮೇಲೆ ನಮ್ಮ ತಂದೆಗೆ ಜ್ವರ ಬಂತು. ಅವರೂ ಕಾಲವಾದರು. ಅವರಿಗೆ ಆ ಸಾರಿ ಗುಣವಾಗುವುದಿಲ್ಲವೆಂದು ನಮ್ಮ ತಾಯಿ ಹೇಗೋ ಗೊತ್ತು ಮಾಡಿಕೊಂಡಿದ್ದಳು. ಕಂಣಾಗಾಲಕ್ಕೆ ಯಾರ ಕೈಯಲ್ಲಿಯೋ ಒಳಗೇ ಹೇಳಿಕಳುಹಿಸಿ ಅಲ್ಲಿಂದ ಅಪರಕರ್ಮವನ್ನು ಚೆನ್ನಾಗಿ ಬಲ್ಲ ಬ್ರಾಹ್ಮಣರನ್ನು ಕರಸಿದಳು. ನಮ್ಮಪ್ಪನು ರಾತ್ರೆ ಒಂದುಗಂಟೆಗೆ ಸಾಯುತ್ತಾರೆ ಎನ್ನುವಾಗ ಆ ದಿನ ಸಾಯಂಕಾಲವೇ ನನ್ನನ್ನೂ ನಮ್ಮ ನೀಲಕಂಠನನ್ನೂ ಕರೆದು - ನೀಲಕಂಠ, ಅಕ್ಕನ ಕೈಬಿಡಬೇಡ, ವೈಧವ್ಯವನ್ನು ಅನುಭವಿಸುವುದು ಅವಳ ಹಣೆಯಲ್ಲಿ ಬರೆದಿತ್ತು. ಅನುಭವಿಸಿಯೇ ತೀರಬೇಕು. ನಿನಗೆ ೨೫ ವರುಷವಾದರೂ ಏನೂ ಅರಿತವನಲ್ಲ ನಿನಗಿಂತ ಐದು ವರುಷಕ್ಕೆ ವೆಂಕ ದೊಡ್ಡವಳಾದರೂ ಏನೂ ಅರಿತವಳಲ್ಲ ನೀವಿಬ್ಬರೂ ಸೇರಿ ಮನೆಯನ್ನು ನಿಲ್ಲಿಸಬೇಕು. ಕೆಟ್ಟ ಹೆಸರನ್ನು ಎಲ್ಲಿಯಾದರೂ ತಂದೀರಿ. ಈ ಬೀಗದಕೈ ಹಿಡಿ. ಯಜಮಾನರಿಗೆ ಜ್ಞಾನಹೋಯಿತು. ಎಲ್ಲಾ ಸೂಚನೆಯೂ ಕೆಟ್ಟದಾಗಿದೆ. ನನ್ನ ಗತಿಯನ್ನು ನಾನು ನೋಡಿಕೊಳ್ಳುತ್ತೇನೆ. ನಿಮ್ಮ ತಂದೆತಾಯಿಗಳ ಹಂಬಲನ್ನು ಇಲ್ಲಿಗೆ ಬಿಡಿ, ಎಂದು ಅರುಂದಮ್ಮನು ಬುದ್ಧಿವಾದವನ್ನು ಹೇಳಿದಳು. ನನಗಾಗಲಿ ನನ್ನ ತಮ್ಮನಿಗಾಗಲಿ ಯಾವ ಅನುಭವವೂ ಇಲ್ಲ. ನಮ್ಮ ಅಮ್ಮನ ಮಾತನ್ನು ಕೇಳಿ ನಮ್ಮಿಬ್ಬರಿಗೂ ಆಶ್ಚರ್ಯ್ಯವಾಯಿತು ಆದರೂ ನಮ್ಮಮ್ಮನು ಆದಿನ ರಾತ್ರಿ ನನ್ನ ತಮ್ಮನಿಗೆ ಅನ್ನವನ್ನು ಬಡಿಸಿ ನನಗೆ ಏನೋ ಫಲಾಹಾರಕ್ಕೆ ಕೊಟ್ಟಳು. ನಮಗೆ ಏನೂ ಸೇರಲಿಲ್ಲ, ನಾವು ಜಾಗ್ರತೆಯಲ್ಲಿ ಎದ್ದು ಕೈತೊಳೆದುಕೊಂಡೆವು. ಆಗ ಅಮ್ಮನು ನಮ್ಮಿಬ್ಬರನ್ನೂ ಕರೆದು ಹತ್ತಿರ ಕೂರಿಸಿಕೊಂಡು ತಲೆಯನ್ನು ತಡವರಿಸಿ, ಕಂಣಿನಲ್ಲಿ ಸ್ವಲ್ಪ ನೀರನ್ನು ಹಾಕಿ ನಮ್ಮಿಬ್ಬರನ್ನೂ ಬಾಚಿ ತಬ್ಬಿಕೊಂಡಳು. ತರುವಾಯ ನಮ್ಮ ಹಂಬಲನ್ನೂ ಗೃಹಕೃತ್ಯದ ಸಮಾಚಾರವನ್ನೂ ಬಿಟ್ಟು ಗಂಡನ ಹಾಸಿಗೇ ಮಗ್ಗಲಲ್ಲಿ ಹೋಗಿ ಕೂತುಕೊಂಡು ಅವರಿಗೆ ಬೇಕಾದಾಗ ಹಾಲನ್ನೋ ನೀರನ್ನೋ ಹಾಕುತ್ತಾ ಇದ್ದಳು. ಆ ರಾತ್ರಿಯೇ ನಮ್ಮ ತಂದೆಗೆ ಪ್ರಾಣ ಹೋಯಿತು. ಅವರು ಬಹಳ ಯೋಗ್ಯರಾದ್ದರಿಂದ ಸನ್ಯಾಸವನ್ನು ಕೊಡಿಸಬಹುದೆಂದು ಬಂದು ಕಾದಿದ್ದ ಕೆಲವು ಬ್ರಾಹ್ಮಣರು ಹೇಳಿದರು. ಆಗ ನಮ್ಮ ತಾಯಿಯು - ಅವರಿಗೆ ಜ್ಞಾನಹೋಗಿದೆ. ನಾಲಿಗೆ ಬಿದ್ದು ಹೋಗಿದೆ. ಮಂತ್ರೋಚ್ಚಾರಣೆಗೆ ಮಾರ್ಗವಿಲ್ಲ ಆದ ಕಾರಣ ಆಪತ್ಸನ್ಯಾಸವನ್ನು ಕೊಡಿಸುವ ಕಾಲ ಮೀರಿತು, ಎಂದು ಹೇಳಿದರು. ಪತಿಗೆ ಪ್ರಾಣ ಹೋದಮೇಲೆ ಆತನ ಪಾದವನ್ನು ಸ್ವಲ್ಪವೂ ಬಿಡದೆ ಹಿಡಿದುಕೊಂಡೇ ಇದ್ದಳು. ಅರೆಗಳಿಗೆ ಹೋದಮೇಲೆ ಕಂಣಾಗಾಲದಿಂದ ಬಂದಿದ್ದ ಪುರೋಹಿತರನ್ನು ಕರೆದು - ಸ್ವಾಮಿ ನಾನು ನನ್ನ ಪತಿಯನ್ನು ಬಿಟ್ಟಿರಲಾರೆ; ನನ್ನ ಪತಿಯಸಂಗಡಲೇ ನಾನೂ ಅಗ್ನಿ ಪ್ರವೇಶವನ್ನು ಮಾಡಬೇಕೆಂದು ನಿಶ್ಚಿಸಿದ್ದೇನೆ. ಆ ಕರ್ಮಕ್ಕೆ ಬೇಕಾದ ಗ್ರಂಥಗಳನ್ನೆಲ್ಲಾ ಸಿದ್ಧಮಾಡಿಕೊಳ್ಳಿ, ಬೇಕಾದ

ಸಾಮಾನುಗಳನ್ನು ಜಾಗ್ರತೆಯಾಗಿ ತರಿಸಿ ಇರಿಸಿಕೊಳ್ಳಿ ಕಾಲ ಮೀರಿಹೋಗುವಂತೆ ಮಾಡಬೇಡಿ ಎಂದು ಹೇಳಿದಳು. ಆಗ ಈ ಮಾತನ್ನು ನಾನೂ ನನ್ನ ತಮ್ಮನೂ ಕೇಳಿ ನಮಗೆ ದುಃಖ ಉಬ್ಬಿ ಉಬ್ಬಿ ಬಂತು. ನಾವು ತಡೆಯಲಾರದೆ ಹೋದೆವು, - ಅಮ್ಮ ಯಜಮಾನರಂತೂ ಈ ಲೋಕವನ್ನು ಬಿಟ್ಟರು. ನೀನೂ ಹೋಗಿ ನಮ್ಮನ್ನು ಶುದ್ಧವಾಗಿ ತಬ್ಬಲಿಗಳನ್ನು ಮಾಡಬೇಡಮ್ಮ ಎಂದು ಎಳೇ ಮಕ್ಕಳಹಾಗೆ ಅತ್ತೆವು. ನಮ್ಮಮ್ಮನು ಪುನಃ ನಮ್ಮ ಸಂಗಡ ಇನ್ನೊಂದು ಮಾತನ್ನು ಕೂಡ ಆಡಲಿಲ್ಲ, ಗಂಡನ ಪಾದವನ್ನು ಬಿಟ್ಟು ಅಡ್ಡಾಡಲಿಲ್ಲ, ಪುರೋಹಿತರು ಬಂದು - ತಾಯಿ, ಸುಬೇದಾರರಿಗೆ ಮೊದಲೇ ಈ ಸಂಗತಿಯನ್ನು ತಿಳಿಸಬೇಕಂತೆ ಎಂದರು. ಆಗ ನಮ್ಮಮ್ಮನು - ಬೇಕಾದವರಿಗೆ ತಿಳಿಸಿ, ಎಂದಳು. ಹೀಗೆ ಸಹಗಮನ ಮಾಡಿದರೆ, ಸರ್ಕಾರದಿಂದ ಅರಿಶಿನ ಕುಂಕುಮ, ತಾಂಬೂಲ, ಹೂವು, ದೋತ್ರದ ಜೊತೆ, ಹಳದೀ ಪತ್ತಲ ಇವೇ ಮೊದಲಾದ್ದನ್ನು ಕೊಡಿಸುತ್ತಿದ್ದದ್ದೂ ಅಲ್ಲದೆ, ಗಂಡನ ಸಂಗಡಲೇ ಜೀವ ಸಹಿತ ಚಿತಿಯನ್ನು ಏರಿದ ಹೆಂಗಸು ಉರಿಯನ್ನು ತಡೆಯಲಾರದೆ ಈಚೆಗೆ ಎದ್ದು ಓಡಿಬಂದಲ್ಲಿ ರಾಜ್ಯಕ್ಕೆ ಹಾನಿ ತಟ್ಟುವುದೆಂದು ಅದಕ್ಕೆಲ್ಲಾ ಅಡ್ಡಿಯಾಗಿರುವ ಹಾಗೆ ಮದ್ದು ತುಂಬಿದ ಗಡಿಗೆಗಳು ಬಾಣಗಳು ಎಂಣೆತುಪ್ಪದ ಗಡಿಗೆಗಳು ಇವುಗಳೆಲ್ಲವನ್ನೂ ಚಿತಿಯ ಮಧ್ಯಭಾಗದಲ್ಲಿಯೂ ಪಕ್ಕಗಳಲ್ಲಿಯೂ ಇರಿಸುವುದಕ್ಕಾಗಿ ಬೇಕಾದ್ದನ್ನೆಲ್ಲಾ ಕೊಡಿಸುತ್ತಾ ಇದ್ದರು. ಆ ಸಾಮಾನುಗಳೆಲ್ಲವನ್ನೂ ತೆಗೆಯಿಸಿಕೊಂಡು ತಾಲ್ಲೂಕಿನ ವಿಶಿಷ್ಟ ಉದ್ಯೋಗಸ್ಥರೂ ಬಂದರು. ಬೆಳಿಗ್ಗೆ ಐದು ಗಳಿಗೆಯೊಳಗಾಗಿ ಸುತ್ತಮುತ್ತಿನ ಗ್ರಾಮದ ಜನರೆಲ್ಲಾ ಬಂದು ನೆರೆಯಿತು. ನನ್ನ ಕಂಣಿಗೆ ೧೦-೧೫ ಸಾವಿರದ ಮೇಲೆ ಜನ ಬಂದು ಸೇರಿದ್ದ ಹಾಗೆ ತೋರಿತು. ಮುಂದಿನ ಕರ್ಮ ನಡೆಯುವುದಕ್ಕೆ ಎಲ್ಲಾ ಸಿದ್ಧವಾಯಿತು.

ನಮ್ಮ ಅಮ್ಮನು ಲೇಶವೂ ಮನಸ್ಸಿನಲ್ಲಿ ಕಳವಳಗೊಳ್ಳದೆ ಸ್ನಾನವನ್ನು ಮಾಡಿ ತುಂಬಾ ಅರಿಶಿನವನ್ನು ತೊಡೆದುಕೊಂಡು ಹಳದೀಪತ್ತಲವನ್ನುಟ್ಟು ಎಂದೂ ಇಡುವಂತೆ ಎರಡು ಬೆಟ್ಟಗಲಕ್ಕೆ ಹಣೆಗೆ ಕುಂಕುಮವನ್ನು ಇಟ್ಟು ಅದರ ಕೆಳಗೆ ಚಂದ್ರವನ್ನು ಹತ್ತಿಸಿಕೊಂಡು ಹೂಮುಡಿದುಕೊಂಡು ಗಂಧವನ್ನು ತೊಡೆದುಕೊಂಡು ಬ್ರಾಹ್ಮಣರಿಗೆ ಬೇಕಾದ ದಾನಗಳನ್ನು ಕೊಟ್ಟು ಮುತ್ತೈದೆಯರಿಗೆ ಅರಿಶಿನ ಕುಂಕುಮ ಗಂಧ ಹುವ್ವ ಸೀರೆ ಕುಪ್ಪುಸ ಮರದಬಾಗಿನ ಫಲದಾನ ದಕ್ಷಿಣೆ ತಾಂಬೂಲ ಮೊದಲಾದ್ದೆಲ್ಲವನ್ನೂ ಕೊಟ್ಟು ಪುರೋಹಿತರು ಹೇಳಿದ ವಿಧಿಗಳನ್ನೆಲ್ಲಾ ಅನುಸರಿಸಿ ಮಾಡಬೇಕಾದ ಕರ್ಮಗಳನ್ನು ಮಾಡಿ ಚಿಕ್ಕವರನ್ನೆಲ್ಲಾ ಹರಸಿ ದೊಡ್ಡವರಿಗೆಲ್ಲಾ ನಮಸ್ಕಾರ ಮಾಡಿ ಅವರ ಅಪ್ಪಣೆಯನ್ನು ಪಡೆದು ಹೂನ್ನಿನ ಮಾಲೆಯನ್ನು ಹಾಕಿಕೊಂಡು ಕೈಯಲ್ಲಿ ನಿಂಬೇಹಂಣುಗಳನ್ನು ಹಿಡಿದು ಅಮ್ಮಾಲೇ ಚೆಂಡಾಡುತಾ ನಿಂತಳು. ನಮ್ಮ ತಂದೆಯನ್ನು ಚಿತಿಯ ಮೇಲೆ ಮಲಗಿಸಿ ಅದನ್ನು ಎತ್ತಿದರು. ಚಿತಿಯ ಮೇಲಿನಿಂದ ಒಂದು ವಾಸಸ್ಸನ್ನು ತಂದು ನಮ್ಮಮ್ಮನ ಕತ್ತಿಗೆ ಹಾಕಿದರು. ಒಂದು ಕೈಯಲ್ಲಿ ಗಂಡನ ಪಾದವನ್ನು ಹಿಡಿದು ಇನ್ನೊಂದು ಕೈಯಲ್ಲಿ ನಿಂಬೇಹಂಣಿನಿಂದ ಅಮ್ಮಾಲೇ ಚೆಂಡಾಡುತಾ ಅಮ್ಮ ತೆರಳಿದಳು. ಈ ಮಹತ್ತನ್ನು ನೋಡುವುದಕ್ಕೆ ಗ್ರಾಮಾಂತರಗಳಿಂದ ಮಂದಿ ಗುಂಪು ಗುಂಪಾಗಿ ಬರುತ್ತಲೇ ಇತ್ತು. ಚಿತಿ ಒಡ್ಡಿ ಸಿದ್ಧವಾಗಿತ್ತು. ಸ್ಮಶಾನದಲ್ಲಿ ಮಾಡಬೇಕಾದ ಕರ್ಮಗಳೆಲ್ಲವೂ ಮುಗಿದ ತರುವಾಯ ಶವವನ್ನು ಚಿತಿಯ ಮೇಲಿಟ್ಟರು. ಅದರಮೇಲೆ ಗೊತ್ತಾದ ಸ್ಥಾನದಲ್ಲಿ ನಮ್ಮಮ್ಮನನ್ನೂ ಮಲಗಿಸಿದರು. ಸಹಗಮನ ಮಾಡುವ ಸತಿಯು ಬೆಂಕಿಯನ್ನು

ತಡೆಯಲಾರದೆ ಚಿತ್ತ ಚಂಚಲವಾದಾಗ್ಯೂ ಅವಳು ಎದ್ದು ಈಚೆಗೆ ಬಾರದಂತೆ ಬೇಕಾದ ಕಟ್ಟುಗಳನ್ನು ಹಾಕಿ ಭಾರವನ್ನು ಹೇರಿದರು. ಅಗ್ನಿಯು ನಾಲ್ಕು ದಿಕ್ಕಿನಲ್ಲಿಯೂ ಹತ್ತಿಕೊಳ್ಳುವುದಕ್ಕೆ ಮೊದಲಾಯಿತು. ಆ ಚಿತಿಯ ಮೇಲೆ ದೂರದಿಂದ ಎಂಣೆಯನ್ನು ಆಗಾಗ್ಗೆ ಚೆಲ್ಲುತ್ತಾ ಬಂದರು. ಮಹಾಪತಿವ್ರತೆ ಎಂಬ ಕೂಗೂ ಜನರ ಹಾಹಾಕಾರವೂ ಹೆಚ್ಚಾಯಿತು. ದಾರಿಯುದ್ದಕ್ಕೂ ನಮ್ಮಮ್ಮ ಹೆಜ್ಜೆ ಇಟ್ಟುಕೊಂಡು ಬಂದ ಸ್ಥಳದ ದೂಳನ್ನು ಗೋರಿಗೋರಿ ತೆಗೆದು ಕಂಣಿಗೆ ಒತ್ತಿಕೊಳ್ಳುವವರು ಎಷ್ಟೋ, ಹಣೆಗೆ ಇಟ್ಟುಕೊಳ್ಳುವವರೆಷ್ಟೋ, ಜಯಜಯ ಮಹಾತಾಯಿ ಆದಿಲಕ್ಷ್ಮಿ ಜಯಜಯ, ಎಂದು ಕೂಗತಕ್ಕವರೆಷ್ಟೋ, ಇಂಥಾ ಮಹಾತ್ಮಳು ಹೋದಳಲ್ಲಾ ಎಂದು ಅಷ್ಟು ದುಃಖದಿಂದಲೂ ಅಷ್ಟು ಭಕ್ತಿಯಿಂದಲೂ ಕಂಣಿನಲ್ಲಿ ನೀರ ಹಾಕುತಾ ಗೊಳ್ ಎನ್ನುವವರೆಷ್ಟೋ, ಗೊತ್ತಿಲ್ಲದ ಹಾಗೆ ಕೋಲಾಹಲ ಹುಟ್ಟಿತು. ಅಲ್ಲಿದ್ದ ಎಲ್ಲರ ದೃಷ್ಟಿಯೂ ಚಿತೆಯಮೇಲೆ ನೆಟ್ಟು ಹೋಗಿತ್ತು. ಆದರೆ ಆಗ ಅದ್ಭುತವಾದ ಸಂಗತಿಯೊಂದು ನಡೆಯಿತು.

ಅಲ್ಲಿ ನೆರೆದಿದ್ದ ಜನವೆಲ್ಲಾ ನೋಡುತ್ತಿರುವಾಗಲೇ ಸ್ವಲ್ಪವಾಗಿ ಚಿತಿ ಅಲುಗಿತು. ಅದರಮೇಲೆ ಹೇರಿದ್ದ ಸೌದೆಯ ಭಾರವೂ ಕಲ್ಲುಗಳ ಭಾರವೂ ಯಾವುದೂ ನಿಲ್ಲಲಿಲ್ಲ ಅರುಂಧತಿಗೆ ಸಮಾನವಾದ ನಮ್ಮ ಅಮ್ಮನು ತಟ್ಟನೆ ಎದ್ದಳು. ಈಕೆ ಚಿತಿಯ ಮೇಲೆ ಎದ್ದ ಕೂಡಲೆ, ರಾಜ್ಯಕ್ಕೆ ದೊಡ್ಡ ವಿಪ್ಪತ್ತು ಬಂತೆಂದು ಯೋಚಿಸಿ ಚಿತಿಯ ಸಮೀಪದಲ್ಲಿ ಇದೇ ಕೆಲಸಕ್ಕಾಗಿ ಕಾದುಕೊಂಡಿದ್ದ ಜನರೆಲ್ಲಾ ಅವಳನ್ನು ಅಲ್ಲಿಯೇ ಬೆಂಕಿಯೊಳಕ್ಕೆ ತಳ್ಳಬೇಕೆಂದು ಯತ್ನಿಸಿದರು. ಅಲ್ಲಿದ್ದ ಮಾಮಲೇದಾರ ಮೊದಲಾದ ಉದ್ಯೋಗಸ್ಥರೂ ಪುರೋಹಿತ ಮೊದಲಾದ ವೈದಿಕರೂ ಇತರರೂ ಸಹಾ - ಅಯ್ಯೋ ಏನೋ ವಿಪರೀತವಾಯಿತು ಎಂದು ಕೂಗಿಕೊಂಡರು. ಅಲ್ಲಿ ನೆರೆದಿದ್ದ ಗುಂಪೆಲ್ಲಾ ಗಡಗಡನೆ ನಡುಗಿ ಹೋಯಿತು. ಆದರೆ ಆ ಅದ್ಭುತವನ್ನು ಏನ ಹೇಳಲಿ! ಕ್ಷಣಮಾತ್ರದಲ್ಲಿ ಆ ಕಡೆಯಿಂದ ಈ ಕಡೆಗೆ ತಿರುಗಿ ನೋಡುವಷ್ಟರಲ್ಲಿಯೇ ನಮ್ಮ ತಂದೆಯ ಕಾಲಮೇಲೆ ನಮ್ಮಮ್ಮನು ತಲೆಯನ್ನು ಇರಿಸಿ ಮಲಗಿಕೊಂಡಿದ್ದಳು. ಕೂಡಲೆ ಅವಳ ತಲೆ ಸಿಡಿದುಹೋಯಿತು. ಸ್ವಲ್ಪ ಹೊತ್ತಿನ ಮೇಲೆ ನಮ್ಮ ತಂದೆಯ ತಲೆ ಸಿಡಿಯಿತು. ಈ ಆಶ್ಚರ್ಯವನ್ನು ಕಂಡು ಅಲ್ಲಿದ್ದ ಜನರೆಲ್ಲರೂ ನಮ್ಮ ತಾಯಿಯ ಹೆಸರನ್ನು ಹೇಳಿ ನಮಸ್ಕಾರ ಮಾಡಿದರು. ಇವರಿಬ್ಬರನ್ನೂ ಸುಟ್ಟ ಕಡೆ ಜೋಡಾಗಿ ಬೃಂದಾವನವನ್ನು ಜನರು ತಾವು ತಾವೇ ಕಟ್ಟಿಸಿದರು. ಅದಕ್ಕೆ ಈಗಲೂ ಈ ಗ್ರಾಮದವರು ಪೂಜೆ ಮುಂತಾದ್ದನ್ನು ಮಾಡಿ ಹರಕೆ ಹೊತ್ತುಕೊಳ್ಳುವ ವಿಚಾರ ನಿಮ್ಮೆಲ್ಲರಿಗೂ ತಿಳಿದೇ ಇದೆ. ಅವರವರು ಹರಸಿಕೊಂಡ ಹಾಗೆಲ್ಲಾ ಅವರಿಗೆ ಕೆಲಸಗಳು ಕೈಗೂಡುವುವು. ನಮ್ಮ ಮನೆಯ ಹಿತ್ತಲ ಬಾಗಿಲಲ್ಲಿ ನಿಂತುಕೊಂಡರೆ ಒಂದು ಕಲ್ಲು ಎಸಗೇ ದೂರದಲ್ಲಿ ಜೋಡಾಗಿ ಎರಡು ಬೃಂದಾವನಗಳು ಕಾಣುವುವು-ಹೀಗೆಂದು ವೆಂಕಮ್ಮನು ತಮ್ಮ ತಾಯಿಯ ಚರಿತ್ರೆಯನ್ನು ಹೇಳಿದಳು. ಅಲ್ಲಿದ್ದವರು ಎಲ್ಲರೂ-ಮಹಾಪತಿವ್ರತೆ, ಆಕೆಯ ಪಾದವೇ ಗತಿ ಎಂದು ಕೊಂಡಾಡಿದರು. ಎಲ್ಲರ ಸಂಗಡ ತಾನೂ ಕೂತುಕೊಂಡು ಸೀತಮ್ಮನು ಎಲೆಯನ್ನು ಹತ್ತಿಸುತ್ತಿರುವಾಗ ಈ ಕಥೆಯನ್ನೆಲ್ಲಾ ಕಿವಿಗೊಟ್ಟು ಚೆನ್ನಾಗಿ ಕೇಳಿ ಆಗಾಗ್ಗೆ ಕಂಣಿನಲ್ಲಿ ನೀರನ್ನು ಹಾಕುತಾ ಮಾತನಾಡದೆ ಸುಮ್ಮನೇ ಇದ್ದಳು.

ಸೀತಮ್ಮನು ಮಾರನೇ ದಿವಸದಿಂದ ಬೆಳಗ್ಗೆ ಎದ್ದ ಕೂಡಲೆ ಗಂಡನ ಕಾಲಿಗೆ ನಮಸ್ಕಾರ ಮಾಡಿ ತರುವಾಯ ಮನೇ ಕೆಲಸವನ್ನು ಮುಗಿಸಿಕೊಂಡು ಮಡಿ ಉಟ್ಟು ನಿತ್ಯ ಗೌರೀ ಪೂಜೆಯನ್ನು ಮಾಡಿ ಅರುಂದನ ಬೃಂದಾವನದ ಬಳಿಗೆ ಅಣಿಮಾಡಿದ ತಟ್ಟೆ ಬಟ್ಟಲ ಸಮೇತ ಹೋಗಿ ಅಲ್ಲಿ ಪೂಜೆ ಮಾಡಿ ಪ್ರದಕ್ಷಿಣೆ ನಮಸ್ಕಾರವನ್ನು ಮಾಡಿ ಮನೆಗೆ ಬಂದು ಭೋಜನ ಮಾಡಿದಳು. ಆ ದಿನ ಮೊದಲ್ಗೊಂಡು ಕೇವಲ ಭಕ್ತಿಯಿಂದ ಈ ಆಚರಣೆಯನ್ನು ಮಾಡುತ್ತಾ ಇದ್ದಳು. ಇವಳು ಹೀಗೆ ಭಕ್ತಿಯಿಂದ ನಡೆದುಕೊಳ್ಳುವ ಸಂಗತಿ ಮನೆಯಲ್ಲಿ ಎಲ್ಲರಿಗೂ ತಿಳಿಯಿತು. ಒಳ್ಳೆ ಕೆಲಸವಾದ್ದರಿಂದ ಯಾರೂ ಆಕ್ಷೇಪಣೆ ಮಾಡಲಿಲ್ಲ ಅತ್ತೆಯಾದ ತಿಮ್ಮಮ್ಮನಿಗೆ ಸೀತಮ್ಮ ಯಾವ ಕೆಲಸ ಮಾಡಿದರೂ ಆಕ್ಷೇಪಣೆ ಮಾಡಿ ಮರ್ಮೋದ್ಘಾಟನೆ ಮಾಡುವ ಚಾಳಿ ಬರುತಬರುತಾ ಹುಟ್ಟು ಗುಣವಾಗುತ್ತಾ ಬಂತು. ಆ ಬೃಂದಾವನದ ಬಳಿಗೆ ಜೋಯಿಸರ ಮನೆಯಿಂದ ಹೊರಟರೆ ಬೀದಿಯ ಕಡೆ ಬಳಸಾಗಿತ್ತು. ಊರನ್ನು ಸುತ್ತು ಹಾಕಿಕೊಂಡು ಬೆಸ್ತರ ಕೇರಿಯ ಮೇಲೆ ಹಾಯ್ದು ಹೋಗಬೇಕಾಗಿತ್ತು. ಈ ಬಾರಿ ಬಹುದೂರವಾಗಿದ್ದರೂ ಅಲ್ಲದೆ, ಬೆಸ್ತರ ಮನೆಯ ಮುಂದುಗಡೆ ಒಣಗಹಾಕಿರುವ ಕರಿಮೀನು ಮೊದಲಾದ್ದು ಬೀದಿಯಲ್ಲೆಲ್ಲಾ ಹರಡಿ ಒಣಗಿಸುತ್ತಾ ಇರುವ ದೊಡ್ಡದೊಡ್ಡ ಬಲೆಗಳು, ಮೀನಿನ ವಾಸನೆ, ದಾರಿಯಲ್ಲಿ ಸಿಕ್ಕಿದಹಾಗೆ ಕೂತು ಮಾಡಿದ್ದ ಹೇಸಿಗೆ, ಬೀದಿಯಲ್ಲೆಲ್ಲಾ ಮನಸ್ಸು ಬಂದ ಹಾಗೆ ಚೆಲ್ಲಿರುವ ಕಸ, ಅಲ್ಲಲ್ಲಿ ಜನರು ತಂತಮ್ಮ ಮನೆ ಮುಂದೆ ಹಾಕಿರುವ ಗೊಬ್ಬರದ ಗುಡ್ಡೆಗಳು, ಒಂದೊಂದು ಮನೆಯಿಂದಲೂ ಉದ್ದಕ್ಕೂ ಬೀದಿಯಲ್ಲಿ ಹರಿಯುವ ಬಚ್ಚಲ ನೀರಿನ ಕೊಚ್ಚೆ ದನಗಳ ಸಗಣಿ, ಕಸದ ಹುಲ್ಲು ದನಗಳ ಹಳೇ ಗಂಜಳವನ್ನು ತಂದುತಂದು ಅಲ್ಲಲ್ಲಿ ಚೆಲ್ಲಿರುವ ದನದ ಹಳೇ ಗಂಜಳ: ಇದೇ ಮೊದಲಾದ ಕೊಳಚೆ ಬೀದಿಗೆ ಮುಖವನ್ನು ಹಾಕದ ಹಾಗೆ ಅಸಹ್ಯವಾಗಿತ್ತು. ಅದರಲ್ಲಿಯೂ ಮಡಿ ಉಟ್ಟುಕೊಂಡು ಹೋಗುವುದು ಸಾಧ್ಯವೇ ಇಲ್ಲ, ಸೀತಮ್ಮನ ಸ್ವಭಾವಕ್ಕೂ ನೇಮಕ್ಕೂ ಆ ಸ್ಥಿತಿ ಮತ್ತೂ ಹೇಸಿಗೆಯಾಗಿತ್ತು. ಇದೂ ಅಲ್ಲದೆ ಆ ದಾರಿ ದೂರವಾದ್ದು ಮತ್ತು ಕೊಲ್ಲಾಪುರದ ಮಹಾಲಕ್ಷ್ಮಿಯ ಗುಡಿಗೆ ಸಮೀಪದಲ್ಲಿ ಹೋಗುತಿತ್ತು. ಆ ಗುಡಿಯ ಕೈಸಾಲೆಯಲ್ಲಿ ಜೂಜುಗಾರರು, ಭಂಗಿ ಕುಡಕರು, ಹರಟೇ ಬಡಿಯುತ್ತಾ ಕಾಲಕ್ಷೇಪ ಮಾಡತಕ್ಕವರು, ಲಾವಣಿಗಳನ್ನೂ ಪುಂಡುಪದಗಳನ್ನೂ ಹೇಳಿ ಕಾಲ ಕಳೆಯತಕ್ಕವರು, ಹೆಂಗಸರನ್ನು ಕಂಡರೆ ಅವರ ಮುಖವನ್ನು ನೋಡಿ ನಗುತಾ ಹಾಸ್ಯಮಾಡುತಾ ಅವರ ಹಿಂದೆ ಸ್ವಲ್ಪ ದೂರ ಹೋಗುತ್ತಾ, ಕೆಟ್ಟ ಹೆಂಗಸರಾದರೆ ಅವರ ಮಾತಿನಲ್ಲಿ ಆನಂದಪಡುತಾ, ಒಳ್ಳೆ ಹೆಂಗಸರಾದರೆ ಅವರ ಕೈಯಲ್ಲಿ ಬೈಸಿಕೊಳ್ಳುತಾ ಮನಸ್ಸು ಬಂದಹಾಗೆ ಲಲ್ಲೆಯನ್ನು ಹಾಕಿ ಲೇವಡಿಯನ್ನು ಮಾಡತಕ್ಕವರು. ಇವರೇ ಮೊದಲಾದವರ ಗುಂಪು ಹೆಚ್ಚಾಗಿ ಸೇರುತ್ತಿತ್ತು. ಇದೇ ಆದಿಯಾದ ಕಾರಣಗಳಿಗಾಗಿ ಸೀತಮ್ಮನು ಆ ದಾರಿಯಲ್ಲಿ ಹೋಗುತ್ತಿರಲಿಲ್ಲ, ಜೋಯಿಸರ ಮನೆಯ ಹಿತ್ತಲ ಬಾಗಿಲನ್ನು ಬಿಟ್ಟರೆ ಒಂದು ಕವಣೇಕಲ್ಲಿನ ಎಸಗೆ ದೂರದಲ್ಲಿ ಆ ಬೃಂದಾವನವಿತ್ತು. ಹುಲ್ಲಹಸಳೆಯ ಮೇಲೆ ನಡೆದು ಹೋಗಬಹುದು. ಹೇಸಿಗೆ ಮೊದಲಾದ್ದು ಯಾವುದೂ ಇಲ್ಲದೆ ಚೊಕ್ಕಟವಾಗಿತ್ತು. ಆದಕಾರಣ ಪ್ರತಿನಿತ್ಯವೂ ಒಂದು ತಟ್ಟೆಯಲ್ಲಿ ಅರಿಶಿನ ಕುಂಕುಮ ಚಂದ್ರಗಂಧ ಮಂತ್ರಾಕ್ಷತೆ ಇವುಗಳನ್ನು ಹಾಕಿರುವ ಒಂದು ಪಂಚವಾಳ, ಸ್ವಲ್ಪ ಹೂವು, ನೈವೇದ್ಯಕ್ಕೆ ಏನಾದರೂ ಒಂದು ಪದಾರ್ಥ. ಇವುಗಳನ್ನು ಇರಿಸಿಕೊಂಡು ಸೀತೆಯು ಆ ಬೃಂದಾವನದ ಬಳಿಗೆ ಹೋಗಿ ಮಡಿಯಲ್ಲಿ ಪೂಜೆಯನ್ನು ಮಾಡಿಕೊಂಡು ಬರುತಿದ್ದಳು.

ಸೀತಮ್ಮನು ಈ ಮಧ್ಯೆ ಗರ್ಭಿಣಿಯಾದಳು. ಬಯಕೆ ಸಂಕಟ ಪ್ರಾಪ್ತವಾಯಿತು. ಆಗಾಗ್ಗೆ ಓಕರಿಕೆ ವಮನ ಸಹಾ ಆಗುತಿತ್ತು. ಹೀಗೆ ಅನ್ನ ಸೇರದ ಸಂಕಟ, ಹೊಟ್ಟೆ ಹಸಿವಿನ ಬಾಧೆ, ಮನೆ ಕೆಲಸದ ಆಯಾಸ, ಸಮಯ ಸಿಕ್ಕಿದಾಗ ಹಂಗಿಸಿ ಮೂದಲಿಸಿ ಕರುಳಿಗೆ ಇಷ್ಟಿಷ್ಟು ನೀರಬಿಡುವ ಅತ್ತೆಯ ಹುರಿಪತ, ಇದೆಲ್ಲಾ ಸೇರಿತು. ಈ ಹುಡುಗಿಯು ಸ್ವಲ್ಪ ಕಂಗೆಟ್ಟಳು. ಒಂದು ದಿನ ಪಾರ್ವತಮ್ಮನು - ಯಾಕಮ್ಮ ಊಟವನ್ನೇ ಮಾಡುವುದಿಲ್ಲವಲ್ಲಾ ಕೆಲಸ ಮಾಡುವುದಕ್ಕೆ ಕೈಕಾಲು ಹೇಗೆ ಬರಬೇಕು? ಸೇರಿಸಿಕೊಂಡು ಹೇಗಾದರೂ ಸ್ವಲ್ಪ ಊಟಾ ಮಾಡಮ್ಮಾ ಸೇರುವುದಿಲ್ಲವೆಂದು ಹಾಗೆ ಬಿಡಬಾರದು, ಎಂದಳು. ಈ ಮಾತನ್ನು ತಿಮ್ಮಮ್ಮನು ಎಲ್ಲಿ ಸಂಚು ಕೇಳಿಕೊಂಡಿದ್ದಳೋ ಏನೋ; ಅತ್ತೆ ಯಾದ ಪಾರ್ವತಮ್ಮ ಮಾತನಾಡಿ ಮುಗಿಸುವಷ್ಟರೊಳಗಾಗಿ ತಾನು ಬಂದು ನಿಂತು - ಅವಳನ್ನು ಯಾರು ಊಟ ಮಾಡಬೇಡವೆನ್ನುತ್ತಾರೆ? ಬೇಕೆಂದು ಈ ಆಟ ಆಡುತ್ತಾಳೆ, ಅತ್ತೆಮನೆಯಲ್ಲಿ ತಮ್ಮ ಮಗಳಿಗೆ ಅನ್ನವನ್ನು ಕೂಡ ಹಾಕುವುದಿಲ್ಲ ಹುರಕೊಂಡು ಮುಕ್ಕಿ ಅರಕೊಂಡು ಕುಡಿಯುತ್ತಾರೆ ಎಂದು ನೆರೆಹೊರೆಯವರಿಗೂ ತಮ್ಮ ತೌರು ಮನೆಯವರಿಗೂ ಹೇಳಿಕೊಂಡು ನಮ್ಮನ್ನು ಕೆಟ್ಟವರನ್ನ ಮಾಡಬೇಕಲ್ಲ, ನಾನಷ್ಟೆ ಕೆಟ್ಟವಳು, ಹಾಳಮೂಳಿ; ನಾನು ಹೋದರೆ ನಿಮಗೆಲ್ಲಾ ಸಂತೋಷವಾಗುತ್ತೆ. ಮುಖ್ಯವಾಗಿ ನನ್ನ ಮೇಲಿದೆ ಅವಳಿಗೆ ಕಣ್ಣು ಮಾರೀ ಕಂಣೆಲ್ಲಾ ಹೋತನ ಮೇಲೆ ಎನ್ನುವ ಹಾಗೆ, ಕಂಗೆಟ್ಟುಕೊಂಡಳು ಕಂಗೆಟ್ಟುಕೊಂಡಳು ಎಂದು ಅನ್ನುತ್ತೀರಿ. ಅದೇನು ಕಂಗೆಟ್ಟುಕೊಳ್ಳುವುದಕ್ಕೆ ಹೊಡೆದ ಮಾರಿ? ಎಲೆ ತುಂಬಾ ಬಡಿಸಿಕೊಂಡು ವಾಕವಾಗಿ ಒಂದಗುಳನ್ನೂ ಬಿಡದೆ ಚೆನ್ನಾಗಿ ಕುಮ್ಮರಿಸುತ್ತಾಳೆ ಹೊಟ್ಟೆಯೊಳಕ್ಕೆ, ಎಂದು ಮನಸ್ಸು ಬಂದ ಹಾಗೆ ಸೀತನನ್ನು ಹಳಿದಳು. ಅದಕ್ಕೆ ಪಾರ್ವತಮ್ಮನು - ಯಾಕೆ ಹಾಗೆಲ್ಲಾ ಹೊಡೆದಮಾರಿ ಗೀರಿ ಎನ್ನುತೀಯೆ ಬಸರೀನ? ಬಯಕೆ ಸಂಕಟ, ಅನ್ನ ಸೇರುವುದಿಲ್ಲ ನಿಜವೇ, ಎಂದಳು. ಅಷ್ಟುಮಾತ್ರಕ್ಕೆ ಸಹಿಸಲಾರದೆ ತಿಮ್ಮಮ್ಮನು - ಅದೇನು ಹೇಳಿಕೊಳ್ಳುತೀರಿ, ಅದೇನು ಕೊಚ್ಚಿಕೊಳ್ಳುತ್ತೀರಿ? ಬಸರಿಯಂತೆ ಬೆಸರಿ; ಆದರೆ ಆದಳು, ಏನು ಉದ್ದಾರ, ಅದನ್ನು ಎಷ್ಟು ಹಾಡಿ ಹೊಗಳಿಕೊಳ್ಳಬೇಕಂತೆ? ಆದರೆ ಆಗುತ್ತಾಳೆ. ಸಗಣಿ ಮೇಲೆ ಸಗಣಿ ಹಾಕಿದರೂ ಹುಳು ಬರುತ್ತೆ. ತಾನು ಬಸರಿ ಅಂತ ಎಲ್ಲರೂ ಉಪಚರಿಸಲಿ ಎಂದು ಅವಳ ಮನಸ್ಸಿನಲ್ಲಿ ಅನ್ನ ಬಡಿಸಿಕೊಳ್ಳುವುದು ಬೇಕು ಅಂತ ಚೆಲ್ಲುವುದು, ತಾನು ಬಸರಿ ಎಂತ ಎಲ್ಲರಿಗೂ ತಿಳಿಯಬೇಕಲ್ಲ, ನೀವು ಮಾತು ಮಾತಿಗೂ ವಹಿಸಿಕೊಂಡು ಬರುತೀರಿ. ಅವಳು ಎತ್ತಲಾಗಾದರೂ ಹಾಳಾಗಲಿ, ಅವಳ ಗಂಧಗಾಳಿಗೇ ನಾನು ಬರುವುದಿಲ್ಲ ಹೀಗೆಲ್ಲಾ ಮಾತನಾಡಿದಳು. ಪಾರ್ವತಮ್ಮನು ಇನ್ನು ಮಾತಿಗೆ ಮಾತು ಬೆಳೆಯುತ್ತೆ, ಯಾಕೆ ಬೇಕು ಎಂದು ಸುಮ್ಮನಾದಳು.

ಇನ್ನೊಂದು ದಿನ ಬೇರೊಂದು ರಗಳೆ ಜರುಗಿತು. ಸೀತಮ್ಮನು ಯೋಗ್ಯರಾಗಿಯೂ ನಿಷ್ಠರಾಗಿಯೂ ಇರತಕ್ಕವರ ಮನೆಯಲ್ಲಿ ಹುಟ್ಟಿದವಳು. ಇವಳಲ್ಲಿ ಅನೇಕವಾಗಿ ಒಳ್ಳೆ ಅಭ್ಯಾಸಗಳೇ ಇದ್ದವು. ಸೀತಮ್ಮನು ನಿತ್ಯವೂ ರಾತ್ರೆ ಮಲಗಿಕೊಳ್ಳುವಾಗ ದೇವರಿಗೆ ಪ್ರಾರ್ಥನೆ ಮಾಡಿ ಮಲಗುವ ಅಭ್ಯಾಸವು ಮೊದಲಿನಿಂದು ಇತ್ತು. ಒಂದು ದಿನ ಮಹಾದೇವ ಊರಲ್ಲಿರಲಿಲ್ಲ, ಯಾವುದೋ ಕೆಲಸಕ್ಕೆ ಹಳ್ಳಿಗೆ ಹೋಗಿದ್ದನು. ಹೆಂಗಸರೆಲ್ಲರೂ ಹಜಾರದಲ್ಲಿ ಮಲಗಿಕೊಳ್ಳುತಿದ್ದರು. ಸೀತಮ್ಮನು ತನ್ನ ಹಾಸಿಗೆಯನ್ನು ಹಾಸಿಕೊಳ್ಳಲು ಸ್ಥಳ ಸ್ವಲ್ಪವೇ ಬಿಟ್ಟಿತ್ತು. ಅಲ್ಲಿ ಮಲಗಿಕೊಂಡಳು. ತೊಲೇ ಕೆಳಗೆ ಸೀತನ ಹಾಸಿಗೆ ಬಂತು. ಇವಳ ಹಾಸಿಗೇ ಮಗ್ಗುಲಲ್ಲಿಯೇ ಸಾಕಮ್ಮನ ಹಾಸಿಗೆ

ಇತ್ತು. ಸೀತಮ್ಮನು ರಾತ್ರೆ ಮಾಡಬೇಕಾದ ಕಸಮುಸುರೆಯ ಕೆಲಸವನ್ನು ತೀರಿಸಿಕೊಂಡು ಮಲಗಿಕೊಳ್ಳುವಾಗ್ಗೆ ಬಹಳ ಹೊತ್ತಾಗಿತ್ತು. ಇವಳು ಬಂದು ಮಲಗಿಕೊಂಡಳು. ಕೂಡಲೆ ತೊಲೆಯ ಕೆಳಗೆ ತನ್ನ ಹಾಸಿಗೆ ಬಂದದನ್ನು ನೋಡಿ - ಅಯ್ಯೋ ತೋಲೇ ಕೆಳಗೆ ಹಾಸಿಗೆ ಬಂತು, 'ತೋಲೆಯೇ ತೊಲೆಯೇ ನಾನೇ ಮರ, ನೀನೇ ಮನುಷ್ಯ, ಹಾವಿಗೆ ಹರನ ಆಣೆ, ಚೇಳಿಗೆ ಭೈರವನ ಆಣೆ, ಇರುವೆ ಎಂಭತ್ತು ಕೋಟಿ ಜೀವರಾಶಿಗೂ ಬಿದ್ದ ಬಳಿ ಬಿಟ್ಟು ಇತ್ತಿತ್ತ ಬಂದರೆ ತಾಯಿಮುದ್ರವ್ವಯ ಪಾದದಾಣೆ; ಹರಾ ಎಂತ ಬಲದ ಮಗ್ಗಲ ಹೊಡಿದೆ. ಹರಿ ಎಂತ ಎಡದ ಮಗ್ಗಲ ಹೊಡಿದೆ, ಚಿತ್ತ ಹೋಗಿ ಅಚ್ಚುತನನ್ನು ಕೂಡಿತು, ಮನಹೋಗಿ ಮಾಧವನನ್ನು ಕೂಡಿತು, ನಾನು ಹೋಗಿ ಕಾಶೀ ವಿಶ್ವೇಶ್ವರನನ್ನು ಕೂಡಿದೆ. ಸ್ವಾಮಿ ನಂಜುಂಡೇಶ್ವರ, ತಾಯೆ ಚಾಮುಂಡೇಶ್ವರಿ, ಸಜ್ಜನ ಸಂಗ ಕೊಡು ದುರ್ಜನರ ದೂರ ಇಡು, ತಾಯೇ!" ಹೀಗೆಂದು ದೇವರ ಪ್ರಾರ್ಥನೆ ಮಾಡಿ ಕಂಣ ಮುಚ್ಚಿಕೊಂಡಳು. ನಿದ್ರೆ ಬಂತು, ಉಳಿದ ಎಲ್ಲರಿಗೂ ನಿದ್ರೆ ಬಂದಿತ್ತು. ಹತ್ತಿರ ಮಲಗಿದ್ದ ಸಾಕಿಗೆ ಮಾತ್ರ ಸ್ವಲ್ಪ ಎಚ್ಚರವಾಗಿತ್ತು. ಸೀತಮ್ಮ ಹೇಳುತ್ತಾ ಇದ್ದದನೆಲ್ಲಾ ಕೇಳಿ ಸಾಕಿಯು ಆಗ ಸುಮ್ಮನಾಗಿ ನಿದ್ರೆ ಮಾಡುತ್ತಾ ಮಲಗಿಕೊಂಡಳು. ಮಲಗಿಕೊಳ್ಳುವಾಗ ಭಗವಂತನ ನಾಮೋಚ್ಚಾರಣೆಯನ್ನು ಮಾಡಿ ಮಲಗುವುದು ಪೂರ್ವಾಚಾರವಾಗಿದೆ; ಈ ಅಭ್ಯಾಸ ಸೀತಮ್ಮನಿಗೆ ಬಾಲ್ಯದಿಂದಲೂ ಉಂಟು.

ಬೆಳಗ್ಗೆ ಉಷಃಕಾಲಕ್ಕೇ ಸೀತೆಯು ಎದ್ದು ಮನೆಕೆಲಸವನ್ನೆಲ್ಲಾ ಮುಗಿಸಿಕೊಂಡು ಜಾಗ್ರತೆಯಾಗಿ ಸ್ನಾನಕ್ಕೆ ನೀರನ್ನು ಕಾಸಿದಳು. ಕೂಡಲೆ ಮಡಿಯನ್ನುಟ್ಟು ನದಿಗೆ ಸೀನೀರ ತರಲು ಹೋಗಿ ಕಂಕುಳಲ್ಲಿ ಒಂದು ಕೊಡ ತಲೆಯಮೇಲೆ ಒಂದು ಕೊಡ, ತಲೆಯ ಮೇಲಿನ ಕೊಡದಮೇಲೆ ದೇವರ ಅಗೋದಕದ ಒಂದು ತಾಮ್ರದ ತಂಬಿಗೆ ಇದರಲ್ಲೆಲ್ಲಾ ನೀರನ್ನು ತುಂಬಿ ಹೊತ್ತುಕೊಂಡು ಮನೆಗೆ ಬರುತ್ತಾ ಇರುವಾಗ, ಸೀತಮ್ಮನು ಉದಯರಾಗವನ್ನು ಗಟ್ಟಿಯಾಗಿ ಹೇಳದೆ ಮೆಲ್ಲಗೆ ಪಿಟಿಪಿಟನೆ ಹೇಳುತಾ ಮನೆಯ ನಡುವೆಗೆ ಬಂದು ಒಳಬಾಗಿಲ ದ್ವಾರಬಂಧನಕ್ಕೆ ತಲೆ ಮೇಲಿನ ಬಿಂದಿಗೇ ಮೇಲಿರುವ ತಂಬಿಗೆ ತಗಲೀತೆಂದು ಬಗ್ಗಿ ಹೊಸಿಲನ್ನು ದಾಟಿ ಒಳಕ್ಕೆ ಬರುವ ಸಮಯದಲ್ಲಿ ಸಾಕಿಯು - ಅಮ್ಮ ಅತ್ತಿಗೆ ಅದೇನೋ ಮಂತ್ರ ಹೇಳುತ್ತಲೇ ಬರುತಾಳೆ, ರಾತ್ರೆಯೂ ಹೀಗೆಯೇ ಮಲಗಿಕೊಳ್ಳುವಾಗ ಹಾವಿಗೆ ಆಣೆ ಚೇಳಿಗೆ ಆಣೆ ಅಮ್ಮನ ಪಾದದಾಣೆ ಎಂದು ನನ್ನ ಹಾಸಿಗೇ ಬಳಿಯಲ್ಲಿ ಕೂತು ಹೇಳಿದಳು; ನನಗೆ ಏನೋ ಮಂತ್ರ ಹಾಕಿಬಿಟ್ಟಳು; ತಲೆನೋಯುತ್ತೆ, ಕಂಣು ಉರಿಯುತ್ತೆ, ಎಂದಳು. ಆಗ ಮಗಳು ಆಡಿದ ಮಾತನ್ನು ಕೇಳಿ ತಿಮ್ಮಮ್ಮನು ವಿಶೇಷವಾದ ರೋಷದಿಂದ ತಟ್ಟನೆ ಎದ್ದು ನಡುವೆಯ ಒಳಬಾಗಿಲಿಗೆ ಅಡ್ಡಲಾಗಿ ನಿಂತು ಸೊಸೆಯನ್ನು ಕುರಿತು - ಅದೇನೇ ನೀನು ಬಾಯಲ್ಲಿ ಪಿಟಗುಟ್ಟುವುದು? ಯಾವ ಮಾಯದ ಮಂತ್ರ ಯಾವ ಮಾಟದ ಮಂತ್ರ? ಬೊಗಳು, ಎಂದಳು. ಆಗ ಸೀತಮ್ಮನ - ಅಮ್ಮ ಉದಯರಾಗವನ್ನು ಹೇಳಿಕೊಂಡು ಬರುತಿದ್ದೆ ಎಂದಳು. ಅದಕ್ಕೆ ತಿಮ್ಮಮ್ಮನು - ಉದಯರಾಗವೆಂದರೇನು? ನೀನೇನು ಹೇಳುವುದು, ನಿನ್ನೆ ರಾತ್ರೆ ಸಾಕಿಯ ಹಾಸಿಗೇ ಬಳಿ ಕೂತು ಹೇಳಿದ ಮಂತ್ರವೇನು? ಎಂದಳು. ಅದಕ್ಕೆ ಸೀತೆಯು, ನೀರನ್ನು ಹೊತ್ತುಕೊಂಡವಳು ಭಯದಿಂದ ಅಲ್ಲಿಯೇ ನಿಂತು - ಅಮ್ಮ ನಾನು ಯಾವ ಮಂತ್ರವನ್ನೂ ಹೇಳಲಿಲ್ಲ ರಾತ್ರೆ ಹಾಸಿಗೆ ಮೇಲೆ ಮಲಗಿಕೊಳ್ಳುವಾಗ ಯಾವಾಗಲೂ ನಾನು ದೇವರನ್ನು ಪ್ರಾರ್ಥಿಸಿ ಒಳ್ಳೆ ಬೆಳಗುಕೊಡೆಂದು

ಹೇಳುವ ವಾಡಿಕೆಯಿದೆ; ಅದರಂತೆ ಹೇಳಿದೆನಮ್ಮ, ಎಂದಳು. ಅದಕ್ಕೆ ತಿಮ್ಮಮನು ಇನ್ನೂ ಆಗ್ರಹದಿಂದ ಹಾವಿಗೆ ಆಣೆ ಎಂದರೇನು, ಚೇಳಿಗೆ ಆಣೆ ಎಂದರೇನು, ನನ್ನ ಮಗುವಿನ ಹಾಸಿಗೆಯ ಬಳಿಯಲ್ಲಿ ಕೂತು ನೀನು ಹಾಗೆ ಆಡುವುದಕ್ಕೆ ಕಾರಣವೇನು? ರಾತ್ರಿಯಿಂದಲೂ ಸಾಕಿಗೆ ಚೆನ್ನಾಗಿಲ್ಲವಲ್ಲ, ತಲೆನೋವು, ಚಳಿಚಳಿ, ಎನ್ನುತ್ತಾಳೆ, ಅವಳ ತಲೆಕಂಡರೆ ನಿನಗೆ ಆಗದು, ನೀನು ಏನೋ ಮಾಡಿದೀಯೆ, ಅದೇನು ಮಾಡಿದೆ ಹೇಳು, ಇಲ್ಲದಿದ್ದರೆ ನಿನ್ನನ್ನು ಸುಮ್ಮನೇ ಬಿಡುವುದಿಲ್ಲ, ಹಿಡಿದಹಿಕಾಳಿಯನ್ನು ಬಿಡಿಸಿ ಬಿಡುತ್ತೇನೆ. ನನ್ನ ಮನೇ ಅನ್ನವುಂಡು ನನ್ನಮನೇ ಬಟ್ಟೆ ಉಟ್ಟು ನನ್ನ ಮಗಳ ಪ್ರಾಣಕ್ಕೆ ತಂದು ಇದ್ದೀಯಲ್ಲೆ ಒಳ್ಳೇ ಮಾತಿನಿಂದ ಏನ ಮಾಡಿದ್ದೀಯೆ ಬೊಗಳು, ನೀವು ಹಾಲುಂಡಮನೇ ಕರು ಸಾಯಲಿ ಎನ್ನುವ ತಟವಾಣೀರು; ಅದೇನು ಮಾಡಿ ಇದ್ದೀಯೆ ಹೇಳೆ ಗಯ್ಯಾಳಿ, ಅವಳೇನು ನಿನ್ನ ಗೋಜಿಗೆ ಬಂದಳೇ, ನಿನ್ನ ಸೊಲ್ಲಿಗೆ ಬಂದಳೆ, ನಿನ್ನ ಗಂದಗಾಳಿಗೆ ಬಂದಳೆ, ನಿನ್ನ ಕಂಣ ಚುಚ್ಚಿದಳೆ, ನಿನ್ನ ಹೊಟ್ಟೆ ಇರಿದಳೆ, ನಿನ್ನ ನಾಲಿಗೇ ಸೀಳಿ ಉಪ್ಪು ತುಂಬಿದಳೆ, ನಿಮ್ಮಪ್ಪನ ಮನೆಯಿಂದ ತಂದಿದ್ದ ಮಾಗಡಿ ಮಣಿಯನ್ನು ತೆಗೆದುಕೊಂಡಳೆ, ನಿಮ್ಮಪ್ಪನ ಮನೆಗೆ ಬೆಂಕಿಹಾಕಿದಳೆ, ನಿಮ್ಮಪ್ಪನ ಮುಖ ಸುಟ್ಟಳೆ, ನಿಮ್ಮ ಅವ್ವ ತಲೆಗೆ ಬೂದಿ ಸುರಿದಳೆ, ನಿನ್ನ ಮುಖಕ್ಕೆ ಮುಳ್ಳು ಬಡಿದಳೆ, ಎಂದು ಬಗೆ ಬಗೆಯಾಗಿ ಕೆಲೆಯುತ್ತಾ ಬಂದಳು. ಇವಳ ಆಟೋಪವನ್ನು ನೋಡಿ ಇನ್ನೇನು ಮಾಡಿ ಬಿಡುತಾಳೆಯೋ ಎಂಬ ಹೆದರಿಕೆಯಿಂದ ಸೀತೆಗೆ ಕೈಕಾಲು ನಡುಗುವುದಕ್ಕೆ ಮೊದಲಾಯಿತು. ಗಾಬರಿಗೆ ಕೊಡವನ್ನು ಎತ್ತಿಹಾಕಿಕೊಂಡು ಬಿದ್ದು ಬಿಟ್ಟಳು. ಕೊಡಗಳೆರಡೂ ಬಿದ್ದು ತಗ್ಗಿಹೋದವು, ಸೀತೆಯು ಕುಕ್ಕರಿಸಿಕೊಂಡಳು, ಹಾಗೇ ಸೊಕ್ಕಿದ ಹಾಗಾಯಿತು. ಕೂಡಲೆ ಮುದುಕಿಯಾದ ಪಾರ್ವತಮ್ಮ ಬಂದು ಆ ಹುಡುಗಿಯನ್ನು ಮೇಲಕ್ಕೆ ಎತ್ತಿದಳು; ಪಕ್ಕೆ ಸಿಕ್ಕಿಕೊಂಡಿತು. ತಲೆಮೇಲಿನ ಬಿಂದಿಗೇ ಮೇಲಿನ ಚೆಂಬು ಕೆಳಕ್ಕೆ ಬಿತ್ತು. ಅದರಮೇಲೆ ಇವಳೂ ಬಿದ್ದಳು. ಎದೆಗೆ ಏಟು ಬಡಿಯಿತು. ಸೊಂಟಕ್ಕೆ ಪೆಟ್ಟಾಯಿತು. ಆಗ ಪಾರ್ವತಮ್ಮನು - ತಿಮ್ಮು ಇದೇನು ಬೆಳಕು ಹರಿಯುವಾಗ್ಗೆ ಈ ರಂಪ? ಅವಳು ಮಾಡಿದ ತಪ್ಪೇನು? ಮಲಗಿಕೊಳ್ಳುವಾಗ ಏಳುವಾಗ ಯಾರೂ ದೇವರ ಸ್ಮರಣೆ ಮಾಡುವುದಿಲ್ಲವೆ? ಅದರಿಂದ ನಿನ್ನ ಮಗಳಿಗೆ ಏನಮಾಡಿದ ಹಾಗಾಯಿತು? ಆ ಎರಡು ಜೀವದ ಹುಡುಗಿಯನ್ನು ನೀನು ಹಾಗೆಲ್ಲಾ ಕೆಟ್ಟಮಾತುಗಳನ್ನು ಅನ್ನಬಾರದು. ನಾವು ಒಂದು ಹಸೀತಲೆ ಕಂಡೇವೆ ಎಂದು ಹಾರೈಸಿಕೊಂಡಿದೇವೆ. ಇಷ್ಟಕ್ಕೂ ಅವಳು ಮಾಡಿದ ತಪ್ಪೇನು? ಪ್ರಪಂಚದಲ್ಲಿ ಯಾರೂ ದೇವರ ಸ್ಮರಣೆ ಮಾಡುವುದಿಲ್ಲವೆ; ಯಾರೂ ಕಂಡಿಲ್ಲವೆ? ಇಷ್ಟು ಮಾತಿಗೆ ಅವರಪ್ಪನನ್ನು ಯಾಕೆ ಅನ್ನಬೇಕು, ಅವರ ಅಮ್ಮನ ತಲೆಗೆ ಯಾಕೆ ಬೂದೀ ಸುರಿಯಬೇಕು? ಬಹು ಚೆನ್ನಾಯಿತು. ನಮ್ಮ ಮನೆ ಮಾತು ನಮ್ಮ ಮನೆಯಲ್ಲಿಯೇ ಇರುತಾ ಕಿವಿಕಿವಿ ಅರಿಯದ ಹಾಗೇ ಇತ್ತು. ಈ ಹಾದಿರಂಪ ಬೀದಿರಂಪ ಉಂಟೇ? ಊರಜನರೆಲ್ಲಾ ಬಂದು ನೆರೆದು ನಿಂತಿದೆಯಲ್ಲಾ ಹೋಗಲಿ ಸುಮ್ಮನಿರಮ್ಮ ಎಂದು ಸೀತೆಯನ್ನು ಎತ್ತಿ ಒಳಕ್ಕೆ ಕರೆದುಕೊಂಡು ಹೋದಳು. ಆಗ ತಿಮ್ಮುವು ಈದ ಹುಲಿಯ ಹಾಗೆ ಪುನಃ ಕೆದರಿಕೊಂಡು ಬೀದೀಬಾಗಿಲಲ್ಲಿ ಕೂತು - ಈ ಹಾಳ ಮನೆಯಲ್ಲಿ ನಾನು ಒಂದು ಮಾತನ್ನೂ ಆಡುವುದಕಿಲ್ಲ ನನ್ನ ಬಾಯಿಯನ್ನೇ ಎಲ್ಲರೂ ಮುಚ್ಚಿಸುತ್ತಾರೆ. ಎಲ್ಲರೂ ಬಂದು ಸೇರಿಕೊಂಡು ನಮ್ಮಪ್ಪನ ಮನೆ ಎಲ್ಲಾ ಹೊರಗಿನವರ ಪಾಲಾಯಿತು. ನನ್ನ ಹೊಟ್ಟೆಯಲ್ಲಿ ಒಂದು ಗಂಡುಕೊನೆ ಹುಟ್ಟಿದ್ದರೆ ಹೀಗಾಗುತ್ತಿತ್ತೆ? ಈ ಹಾಳ ಹೊಟ್ಟೆ ಹಾಳಾಯಿತಲ್ಲಾ; ಈ

ಹಾಳಹೊಟ್ಟೆಗೆ ಬೆಂಕಿ ಬಿದ್ದು ಹೋಯಿತಲ್ಲಾ ನನ್ನ ತೌರುಮನೇ ಮೂಲಕ್ಕೆ ಮುಳ್ಳು ಬಡಿದು ಹೋಯಿತಲ್ಲಾ! ಕೈ ಕಾಲಿಗೆ ಸಾಲದೇ ಇರುವವರೆಲ್ಲಾ ಅನ್ನುವಹಾಗಾಯಿತು, ಆಡುವಹಾಗಾಯಿತು. ಇವತ್ತು ಅವರೇ ಬರಲಿ, ನಾನು ಇದ್ದದೊಂದು ಹೋದೊಂದು; ಇಂದಿಗೆ ಕಡ್ಡಿ ಎರಡು ತುಂಡಾಗಲಿ, ಹೀಗೆಂದು ದೊಡ್ಡದಾಗಿ ಹುಯಿಲು ಮಾಡಿದಳು. ಅಷ್ಟು ಹೊತ್ತಿಗೆ ಊರಿಂದ ಮಹಾದೇವನೂ ಮನೆಗೆ ಬಂದನು, ದೀಕ್ಷಿತನೂ ಬಾಳೆಯೆಲೆ ಮೇಲೋಗರ ಹೂತುಳಸಿ ಮೊದಲಾದ್ದನ್ನು ತೆಗೆದುಕೊಂಡು ಬಂದು ನಡೆದ ರಂಪವನ್ನೆಲ್ಲಾ ಕೇಳಿ ವ್ಯಸನಪಟ್ಟು ಎಲ್ಲರನ್ನೂ ಸಮಾಧಾನ ಮಾಡಿದನು. ಅಲ್ಲಿ ಈ ಜಗಳವನ್ನು ನೋಡುವುದಕ್ಕಾಗಿ ಬಂದು ನೆರೆದಿದ್ದ ಜನರೆಲ್ಲಾ ಒಬ್ಬೊಬ್ಬರಾಗಿ ಹೋಗುತಾ - ಛೀ! ಆ ಹುಡುಗಿ ಬಹುಮಾನಿಷ್ಟೆ ಅವಳನ್ನು ತಿಮ್ಮಮ್ಮ ಹೀಗೆ ಗೋಳು ಹುಯಿದುಕೊಳ್ಳಬಾರದು, ಅವರಾದರೂ ಬಂದು ಬಾಗಿಲ ತೆರೆದುಕೊಂಡು ಇರುವಹೊತ್ತಿಗೆ ಜೋಯಿಸರ ಮನೆ ಎಂತ ಇಷ್ಟರ ಮಟ್ಟಿಗಾದರೂ ಇದೆ. ಇಲ್ಲದಿದ್ದರೆ ಮನೆಯೆಲ್ಲಾ ಎಕ್ಕಾಗುಳ್ಳ ಹುಟ್ಟೆ ಹೋಗುತಿತ್ತು, ಹೀಗೆ ಆಡಿಕೊಳ್ಳುತ್ತಾ ಹೊರಟು ಹೋದರು.

ಮಗಳಿಗೆ ಉಂಟಾಗಿರುವ ಹಿಂಸೆಯನ್ನೆಲ್ಲಾ ಕೇಳಿ ಅವರ ತೌರು ಮನೆಯವರು ಬಂದು ಬಸಿರು ಹುಡುಗಿಯನ್ನು ಮೈಸೂರಿಗೆ ಹೆರಿಗೆಗಾಗಿ ಕರೆದುಕೊಂಡು ಹೋದರು. ಮಗಳ ಕಷ್ಟವನ್ನೆಲ್ಲಾ ಕೇಳಿ ಕೊಟ್ಟ ಹೆಣ್ಣು ಕುಲಕ್ಕೆ ಹೊರಗು, ಅವಳ ಹಣೆಯಲ್ಲಿ ಹೇಗೆ ಬರೆದಿದೆಯೋ ಹಾಗೆ ಅನುಭವಿಸಬೇಕು. ಹೇಗಾದರೂ ಹೆಂಣು ಜನಕ್ಕೆ ಕಷ್ಟವೇ ಹೊರತು ಸೌಖ್ಯವಿಲ್ಲ ಎಂದುಕೊಂಡು ತೌರುಮನೆಯವರು ಅಕ್ಷತೇ ಪ್ರಸ್ತ ಬಳೆ ತೊಡಿಸುವ ಪ್ರಸ್ತ ಸೀಮಂತ ಮೊದಲಾದ್ದನ್ನೆಲ್ಲಾ ಮಾಡಿದರು. ತರುವಾಯ ಸೀತಮ್ಮನು ದಿನತುಂಬಿ ಗಂಡುಮಗುವನ್ನು ಹೆತ್ತಳು. ಸುಖ ಪ್ರಸವವಾಯಿತು. ಮಗು ಬಹು ಲಕ್ಷಣವಾಗಿತ್ತು. ನಾಲ್ಕು ತಿಂಗಳವರೆಗೂ ಬಾಣಂತನವನ್ನೂ ಮಾಡಿ, ಐದನೆಯ ತಿಂಗಳಲ್ಲಿ ಗಂಡನಮನೆಗೆ ಸಂಜವಾಡಿಗೆ ಕರೆದುತಂದು ಬಿಟ್ಟರು. ಎಲ್ಲರಿಗೂ ಬಹು ಸಂತೋಷವಾಯಿತು. ಯಾವಾಗಲೂ ಬೆಂಕಿಯನ್ನು ಮುಖದಲ್ಲಿ ಕಟ್ಟಿಕೊಂಡು ಇರುತಿದ್ದ ತಿಮ್ಮಮ್ಮ ಮಾತ್ರ ದುಮದುಮಗುಟ್ಟುತಾ ಎಂದಿನಂತೆ ಇದ್ದಳು. ಆದರೆ ಮೊಮ್ಮಗನನ್ನು ಮಾತ್ರ ಕಂಡರೆ ಬಹು ಪ್ರೀತಿಯಾಗಿಯೇ ಇದ್ದಳು. ಮಗುವನ್ನು ಎತ್ತಿಕೊಳ್ಳುವವಳಲ್ಲ ಆಡಿಸುವವಳಲ್ಲ, ಮುದ್ದಾಡುವವಳ ತಲೆಯಮೇಲೆ ಕೂರಿಸಿ ಕೊಳ್ಳುವವಳಲ್ಲ ಭುಜಮೇಲೆ ಏರಿಸಿಕೊಳ್ಳುವವಳಲ್ಲ ಹೀಗೆಲ್ಲಾ ಮಾಡುತಿದ್ದಳು. ಯಾವಾಗಲೂ ಅದನ್ನು ಎತ್ತಿಕೊಂಡೇ ಇರುತಾ ಲಾಲಿಸುತಿದ್ದಳು. ಬೇಕಾದ ಬಾಲ ತೊಡಿಗೆಯನ್ನು ಮಾಡಿಸಿ ಇಟ್ಟರು. ಒಬ್ಬರು ತಾರಮ್ಮಯ್ಯ ರಘಕುಲ ರಾಮಚಂದ್ರನ ಎಂದು ಆಡಿಸುವರು. ಇನ್ನೊಬ್ಬರು ತಾತಾಗುಬ್ಬಿಯನ್ನು ಆಡಿಸುವರು, ಮತ್ತೊಬ್ಬರು ಮಗುವನ್ನು ಹಿಡಿದು ನಿಲ್ಲಿಸಿಕೊಂಡು ''ಆನೆ ಬಂತೊಂದಾನೆ, ಏರೀ ಹತ್ತಿತೊಂದಾನೆ, ಎಳೆಹುಲ್ಲ ತಿಂತೊಂದಾನೆ, ತಿಳಿನೀರ ಕುಡಿಯಿತೊಂದಾನೆ," ಎಂದು ಹೇಳುತಾ ಈ ಕಡೆಗೂ ಆ ಕಡೆಗೂ ವಾಲಾಡಿಸುವರು. ಇನ್ನೊಬ್ಬರು "ಚಂದಕ್ಕಿಮಾಮ ಚಕ್ಕುಲಿಮಾಮ, ಮುತ್ತಲುಕುಡಿಕೆ ತಾರ ಮಾಮ ತಾರ ಮಾಮ" ಎಂದು ಚಂದ್ರನನ್ನು ತೋರಿಸುತಿದ್ದರು. ಇನ್ನೊಬ್ಬರು "ನವಿಲೆ ನವಿಲೆ ಮಳೆಬಂದಾಗೆಲ್ಲಿರುವೆ? ತಿರುಮಲ ದೇವರ ಗುಡಿಯೊಳ ಗಾಡುವೆ, ಬಂಣಾ ಚಿತ್ರದ ನವಿಲೆ, ಸೋಗೆ ಗಂಣಿನ ನವಿಲೆ' ಹೀಗೆಲ್ಲಾ ಹೇಳಿಕೊಂಡು ಆಡಿಸುವರು. ಈ ಪ್ರಕಾರ ಆ ಕಂದಕ್ಕೆ ಲಾಲನೆಯಾಗುತಿತ್ತು. ಕಿಟ್ಟನು ಹೊರಕ್ಕೆ

ಹೊರಟಾಗಲೆಲ್ಲಾ ಮಗುವಿಗೆ ಬೇಕಾದ ಒಡವೆಯನ್ನಿಟ್ಟು "ಬಾರೋ ಕೃಷ್ಣಸ್ವಾಮಿ" ಎಂದು ಆ ಮಗುವಿನ ಹೆಸರನ್ನು ಹಿಡಿದು ಕೂಗುತ ಅದನ್ನು ಕರೆದು ಕೊಂಡುಹೋಗಿ ಸುತ್ತಿಸಿಕೊಂಡು ಬರುತ್ತಿದ್ದನು.

ಇಷ್ಟು ದಿವಸಕ್ಕೆ ಸಾಕಿಯು ಮೈನೆರೆದು ಪ್ರಸ್ತವಾಗಿ ಗಂಡನಮನೆಗೆ ಹೊರಟು ಹೋದಳು. ತಿಮ್ಮಮ್ಮನಿಗೆ ಕೃಷ್ಣಸ್ವಾಮಿಯ ಆಲೋಚನೆ ಹೆಚ್ಚಾಯಿತು. ದಿನೇದಿನೇ ಸೊಸೆಯ ಮೇಲಿನ ಆಕ್ಷೇಪಣೆ ಕಡಮೆಯಾಗುತ್ತಾ ಬಂತು. ಸೀತಮ್ಮನಾದರೋ ಎಂದಿನಂತೆ ಮನೆಕೆಲಸವನ್ನೆಲ್ಲಾ ಮಾಡಿಕೊಂಡು ತನ್ನ ನಿತ್ಯಗೌರೀಪೂಜೆ ಮೊದಲಾದ್ದನ್ನೆಲ್ಲಾ ಸಾಂಗವಾಗಿಯೂ ಭಕ್ತಿಯಾಗಿಯೂ ಮಾಡುತಾ ಯಾವ ಮಯ್ಯಾದೆಗೂ ಲೇಶವೂ ಲೋಪಬಾರದಂತೆ ಎಲ್ಲವನ್ನೂ ನಿರ್ವಹಿಸುತಿದ್ದಳು. ಇವಳ ಹೊಟ್ಟೆಯಲ್ಲಿ ಮಗುವಾದ ಕಾರಣ ಇವಳು ಮಾಡಿದ ಅಡಿಗೆಯನ್ನು ವೆಂಕಮ್ಮ ಪಾರ್ವತಮ್ಮ ಮೊದಲಾದ ನೇಮದವರೆಲ್ಲಾ ಊಟಮಾಡಲು ಆಕ್ಷೇಪಣೆ ಇರಲಿಲ್ಲ, ಆದಕಾರಣ ಹಗಲಹೊತ್ತಿನ ಅಡಿಗೆಯನ್ನೂ ಸೀತನೇ ಮಾಡುವುದಕ್ಕೆ ಆರಂಭಿಸಿದಳು. ಲಕ್ಷಣವಾಗಿರುವ ಮೊಮ್ಮಗನ ಲಾಲನೆ, ಅವನ ಬಾಲಲೀಲೆ, ಅವನ ಪೋಷಣೆ, ಅವನಿಗೆ ಮಾಡಬೇಕಾದ ಶೃಂಗಾರಗಳು ಇವೇ ಮೊದಲಾದ ಕಾರ್ಯಗಳಲ್ಲಿ ತಿಮ್ಮಮ್ಮನಿಗೆ ಹೆಚ್ಚಾದ ಕಾಲ ಕಳೆದು ಹೋಗುತಿದ್ದರಿಂದಲೂ ಹಳೇಗಾಯವನ್ನು ಆಗಾಗ್ಗೆ ಚುಚ್ಚಿ ಕೆದಕಿ ಹೊಸದಾಗಿ ದೊಡ್ಡ ಗಾಯವಾಗಿ ಮಾಡುತಿದ್ದ ಸೂಜಿಯು ಸಮೀಪದಲ್ಲಿಲ್ಲದೆ ಅತ್ತೆಮನೆಗೆ ಹೊರಟು ಹೋದ್ದರಿಂದಲೂ, ಸೊಸೆಗೆ ತಿಮ್ಮಮ್ಮನ ಆಕ್ಷೇಪಣೆ ಸ್ವಲ್ಪ ಕಡಮೆಯಾಯಿತು. ಆದರೂ ಆಗಾಗ್ಗೆ ಅತ್ತೆಯ ಕೋಪಶಿಖಿಯು ಅಲ್ಪಕಾರಣಕ್ಕೆಲ್ಲಾ ಹತ್ತಿಕೊಳ್ಳುತ್ತಲೂ ಇತ್ತು. ಮುಖ್ಯವಾಗಿ ಯಾರಾದರೂ ಸರಿಯೇ ತನ್ನ ಮಗಳನ್ನು ಹಳಿಯಕೂಡದು, ಸೊಸೆಯನ್ನು ಹೊಗಳಕೂಡದು. ಈ ಎರಡಲ್ಲಿ ಯಾವ ಅಪರಾಧವನ್ನು ಮಾಡಿದರೂ ಅದು ಪ್ರಮಾದವಾಗುತಿತ್ತು.

---

## ೧೧ನೆ ಅಧ್ಯಾಯ

ವೈಶಾಖ ಶುದ್ಧ ೧೫ ದಿವಸ ಪ್ರತಿವರುಷವೂ ತಪ್ಪದೆ ಜೋಯಿಸರ ಮನೆಯಲ್ಲಿ ಪಾನಕಪೂಜೆ ನಡೆಯುತಿತ್ತು. ಇದು ಬಹು ವಿಜೃಂಭಣೆಯಿಂದ ನಡೆಯುತಿತ್ತು. ಆ ಒಂದು ದಿವಸದ ಫಲಾಹಾರಪೂಜೆಗೆ ಸುತ್ತಲೂ ಇರುವ ೮-೧೦ ಗ್ರಾಮಗಳಿಂದಲೂ ಬ್ರಾಹ್ಮಣರು ಬರುತಿದ್ದರು. ಆ ಒಂದು ದಿವಸಕ್ಕೆ ನೂರಾರು ರೂಪಾಯಿನಮೇಲೆ ವೆಚ್ಚವಾಗುತಿತ್ತು. ನೂರಾರುರೂಪಾಯಿ ಎಂದರೆ ಈಗಿನವರಿಗೆ ಬಹಳ ಅಲ್ಪವಾಗಿ ಕಾಣಬಹುದು. ಮಳೆ ಚೆನ್ನಾಗಿ ನಡೆಸುತಿದ್ದ ಕಾರಣ ಬೆಳೆ ಪುಷ್ಕಳವಾಗಿ ಆಗುತಿತ್ತು. ಆಯಾ ದೇಶದಲ್ಲಿ ಬೆಳೆದದ್ದು ಅಲ್ಲಲ್ಲಿಯೇ ಕರಗುಪಡಿಯಾಗುತಿತ್ತು. ಬೇರೆ ದೊಡ್ಡ ಸಂತೆಗಳಿಗಾಗಲಿ ದೊಡ್ಡ ಪಟ್ಟಣಗಳಿಗಾಗಲಿ ಗಾಡಿಗಳ ಮೇಲೆ ಸಾಗಿಹೋಗಲು ರಾಜ ಭಾಟೆಗಳು ಇರಲಿಲ್ಲ. ಎಲ್ಲಾ ಎತ್ತುಗಳ ಮೇಲೆಯೂ ಕತ್ತೆಗಳ ಮೇಲೆಯೂ ಸಾಗುತಿತ್ತು. ಹೀಗೆ ಸರಕುಗಳನ್ನು ಬಹಳವಾಗಿ ಸಾಗಿಸುವುದಕ್ಕೆ ಆಗದ ಕಾರಣ ಅಲ್ಲಲ್ಲಿ ಆದ ದವಸಗಳು ಅಲ್ಲಲ್ಲಿಯೇ ನಿಲ್ಲುತ್ತಿತ್ತು. ಈಗ

ಪಲ್ಲ ೧ಕ್ಕೆ ೧೫ ರೂಪಾಯಿಗಿಂತಲೂ ಹೆಚ್ಚಾಗಿ ಮಾರುವ ಅಕ್ಕಿ ಆಗ ಪಲ್ಲ ೧ಕ್ಕೆ ೨ ಅಥವಾ ೨ ರೂಪಾಯಿನ ಹಾಗೆ ಮಾರುತಿತ್ತು. ಅದೂ ಕೊಳ್ಳುವವರಿಲ್ಲದೆ ಮಲಾಮೆಯಾಗಿತ್ತು. ಪದಾರ್ಥವೆಲ್ಲಾ ಬಹಳ ಅಗ್ಗವಾಗಿ ರೊಕ್ಕಮಾತ್ರ ಬಹು ಪ್ರಿಯವಾಗಿ ಇತ್ತು. ಇದೂ ಅಲ್ಲದೆ ಆಗಿದ್ದ ನಾಣ್ಯದ ಬೆಲೆಯು ಈಗಿನ ನಾಣ್ಯಕ್ಕಿಂತಲೂ ಮೂರರಷ್ಟು ಆಗಿತ್ತು. ಆದ್ದರಿಂದ ಆಗಿನ ನೂರಾರು ರೂಪಾಯಿನವೆಚ್ಚ ಈಗ ಸಾವಿರಾರು ರೂಪಾಯಿ ಬೆಲೆಯುಳ್ಳದ್ದಾಗುವುದು. ಬ್ರಾಹ್ಮಣರಿಗೂ ಮುತ್ತೈದೆಯರಿಗೂ ಸಂತುಷ್ಟಿಯಾಗಿ ಫಲಾಹಾರವಾಗಿ, ಊಟ ಹಾಗವಾದರೆ ಫಲಾಹಾರ ಮುಪ್ಪಾಗ ಎನ್ನುವಮಟ್ಟಿಗೆ ಆಯಿತು. ಬ್ರಾಹ್ಮಣರಿಗೆಲ್ಲಾ ದಕ್ಷಿಣೆ ತಾಂಬೂಲವನ್ನು ಕೊಟ್ಟು ಕಳುಹಿಸಿದ ತರುವಾಯ ಮುತ್ತೈದೆಯರೇ ಮೊದಲಾಗಿ ಹೆಂಗಸರೆಲ್ಲಾ ಸೇರಿದ್ದರು. ಇದಕ್ಕಾಗಿಯೇ ಸಾಕಿಯನ್ನೂ ಅತ್ತೆಮನೆಯಿಂದ ಕರಸಿದರು. ಫಲಾಹಾರವಾದ ಮೇಲೆ ಪಾನಕ ನೀರುಮಜ್ಜಿಗೆಯನ್ನು ತೆಗೆದುಕೊಂಡ ತರುವಾಯ ಹೆಂಗಸರು ತಾಂಬೂಲವನ್ನು ಹಾಕಿಕೊಳ್ಳುತ್ತಾ ಕೂತಿರುವಾಗ, ಮಾತಿಗೆಮಾತು ಬಂದು ನೆರೆಮನೇ ಸುಬ್ಬಕ್ಕನು - ತಿಮ್ಮ ನಿನ್ನ ಸಂಸಾರವೆಲ್ಲಾ ಅಚ್ಚಕಟ್ಟಾಗಿದೆ; ಹೆಂಣಿಗೆ ಹೆಂಣುಮಗಳು, ಗಂಡಿಗೆ ಗಂಡುಮಗ, ಮುತ್ತಿನ ಹಾಗಿರುವ ಮೊಮ್ಮಗು; ಮಗ ಬಲಮಗನಾದರೂ ಯಾವುದೊಂದಕ್ಕೂ ಚಿಕ್ಕಮ್ಮ ಚಿಕ್ಕಮ್ಮ ಎಂದುಕೊಂಡು, ಉಗುಳು ಮೀರದೆ ಇದಾನೆ. ಆ ಸೊಸೆಯೂ ಹಾಗೇ. ಅಂಥಾ ಸೊಸೆ ಎಷ್ಟುವರುಷ ತಪಸ್ಸು ಮಾಡಿದವರಿಗೂ ಇಲ್ಲ, ಆ ಜಾಣತನವೋ ಆ ರೂಪೋ, ನಾನು ಯಾವುದು ಎಂದು ಹೇಳಲಿ, ಈ ದಿವಸ ಬೆಳಗ್ಗೆ ಬೃಂದಾವನದ ಪೂಜೆ ಮಾಡಿಕೊಂಡು ಬರುತಿದ್ದಳು. ನಾನು ಹಿತ್ತಲಬಾಗಿಲಲ್ಲಿ ನಿಂತಿದ್ದೆ ನಾನು ಏನಹೇಳಲಿ? ಸಾಕ್ಷಾತ್ ಆದಿಲಕ್ಷ್ಮಿಯ ಹಾಗೆ ಇದ್ದಳು. ಆ ತಲೆ ಕೂದಲೋ, ಆ ಹಣೆ ಬೈತಲೆಯೋ, ಆ ಕಂಣು ಮೂಗೋ, ಆ ಹಲ್ಲು ಬಾಯಿದೆರೆಯೋ, ಆ ಕೆನ್ನೆ ಪನ್ನೆಗಳೋ, ಕುಂದಣದ ತಗಡಿನ ಹಾಗಿರುವ ಆ ಮೈಬಣ್ಣವೋ, ಪ್ರಮಾಣಕ್ಕೆ ಸರಿಯಾಗಿರುವ ಆ ಮೈಸಿರಿಯೋ, ಆ ಗಂಭೀರವಾದ ನಡಗೆಯೋ, ಆ ಹಸನ್ಮುಖವೋ, ಆ ಮೃದುವಾದ ಮಾತೋ, ಆ ಸುಗುಣಗಳೋ, ನಾನು ಯಾವುದು ಎಂದು ಹೇಳಲಿ! ಮಹಾರಾಯತಿ ಪೂರ್ವ ಜನ್ಮದಲ್ಲಿ ಏನು ಪುಣ್ಯ ಮಾಡಿದ್ದಳೋ, ಈಗ ಆ ರೂಪು ಆ ಲಕ್ಷಣಗಳೆಲ್ಲಾ ಪ್ರಾಪ್ತವಾಗಿವೆ : ಹೀಗೆಂದು ಆಕೆ ಕೊಂಡಾಡಿದಳು. ಅದಕ್ಕೆ ಹೊಟ್ಟೆಯಲ್ಲಿ ಮೆಣಸಿನ ಕಾಯಿ ಕಿವಿಚಿದಹಾಗೆ ಆದ ತಿಮ್ಮಮ್ಮನು - ಎಷ್ಟಾದರೂ ಪಟ್ಟಣವಾಸದವರ ಸಿಸ್ತು ಕೊಂಡಾಡಿಸಿಕೊಳ್ಳುತ್ತೆ. ಆದರೇನು, ತೆಗೆ ಸುಬ್ಬಕ್ಕ, ನೋಡಲಾರೆ. ಸೀತೆಯ ಕೂದಲು ಏನೋ ಒಂದುಬಗೆ ವಂಕಿವಂಕಿಯಾಗಿ ಗುಂಗುರುಗುಂಗುರಾಗಿದೆ. ಎಷ್ಟು ಬಾಚಿದರೂ ಎಷ್ಟು ಎಂಣೇ ತೊಡೆದರೂ ಸಾಲದು. ಹಾಗೆ ಮೆಟ್ಟಲಮೆಟ್ಟಲಾಗಿದ್ದರೂ ಕೂಡ ಉದ್ದವಾಗಿ ಕೂತರೆ ನೆಲದಮೇಲೆ ಸಿಂಬೀ ಸುತ್ತಿಕೊಂಡು ಕೆಳಗೆ ಬೀಳುವಹಾಗೆ ಇದೆ. ಅತಿಯಾಗಿ ಹಾಗೆ ಇದ್ದರೆ ಏನು ಚೆನ್ನ? ಅವಳಿಗೆ ಜಡೆ ಹಣಿಯುವುದು ಬಹು ಕಷ್ಟ ನಮ್ಮವ್ವ, ಕೂದಲು ಸರಳುಹೊಡೆದ ಹಾಗೆ ನೆಟ್ಟಗೆ ಇದ್ದು ಅಡಕನಾದ ಜಡೆಯಾಗುವ ಹಾಗೆ ಇದ್ದರೆ ಲಕ್ಷಣ. ನಮ್ಮ ಸಾಕಿಗೆ ಹಾಗಿದೆ, ಹಣೆ ಸ್ವಲ್ಪ ಎರಡುಬೆರಳು ಅಗಲ ಸಾಕೀಹಣೆ ಹಾಗೆ ಇದ್ದರೆ ಚೆನ್ನ. ಅದಕ್ಕಿಂತಲೂ ಅಗಲವಾಗಿ ಚಪ್ಪಟೆಯಾಗಿದ್ದರೆ ಬಂದ ಭಾಗ್ಯವೇನು? ನಮ್ಮ ಹೆಂಣಿಗೆ ಹುಬ್ಬಿನಮೇಲೆ ಸಂಣಗೆ ಅಲ್ಲೊಂದು ಇಲ್ಲೊಂದು ಕೂದಲು ಕಂಡೂ ಕಾಣದ ಹಾಗೆ ಇದೆ. ಹೆಂಗಸಿಗೆ ಇನ್ನೆಷ್ಟಿರಬೇಕು? ಅದಬಿಟ್ಟು ಸೀತನಿಗೆ ಹುಬ್ಬು ಮೂಗಿನ ಮೇಲುಗಡೆ ದಪ್ಪನಾಗಿದೆ. ಕಿವೀ ಕಡೆಗೆ ಸಂಣವಾಗುತಾ ಹೋಗುತ್ತೆ, ಒಂದುಬಗೆ ಬೇವಿನೆಲೆಯಹಾಗೆ.

ಅವಳ ಹುಬ್ಬನ್ನು ನಾನು ನೋಡಿದಾಗಲೆಲ್ಲಾ ಬೇವಿನೆಲೆ ತಿಂದರೆ ಹೇಗೆ ಅಸಹ್ಯವಾಗುತ್ತೋ ಹಾಗೆ ಆಗುತ್ತೆ. ಅದೇನು ಸುಬ್ಬಲ ಕಾಟಿಯೋ, ಕಂಣುತಾನೆ ಆಗಲಿ, ಸೀತನಿಗೆ ಅದೇನೊ ಒಂದು ಬಗೆ. ಸಾಧಾರಣವಾಗಿ ಅರ್ಧ ಮುಚ್ಚಿದ ಹಾಗೆಯೇ ಇರುತ್ತೆ; ತೆರೆದರೆ ಅಗಲವಾಗಿ ಮಕ್ಕಳನ್ನು ಹೆದರಿಸುತಾಳೋ ಎನ್ನುವಹಾಗೆ ತೆರೆಯುತ್ತಾಳೆ. ಆ ಕಂಣು ತಿರುಗಿಸುವುದು. ಯಾರಿಗೆ ಬರಬೇಕು; ಒಂದು ಕಡೆಯಿಂದ ಇನ್ನೊಂದುಕಡೆಗೆ ತಿರುಗಿದರೆ ತಳಾರ್‌ಪಳಾರ್ ಎನ್ನಿಸುವುದು ಯಾರಿಗೆ ಬರುತ್ತೆ? ಕಂಣು ನಮ್ಮ ಸಾಕಮ್ಮನ ಕಂಣಿನಹಾಗೆ ಪುಟ್ಟಪುಟ್ಟದಾಗಿದ್ದರೆ ನೋಡುವುದಕ್ಕೆ ಅಂದವಾಗಿರುತ್ತೆ. ಆ ಮೈಸೂರವರ ಮನೇ ಮೂಗೆಲ್ಲ ಒಂದು ತೆರವಾಗಿದೆ, ಹುಬ್ಬಿನ ನಡುವಿನಿಂದ ಸಂಣವಾಗಿ ಆಮೇಲೆ ಸ್ವಲ್ಪ ಬಗ್ಗಿದ ಹಾಗೇ ಬರುತಾ ದೊಡ್ಡದಾಗಿ ಕೊನೆಯಲ್ಲಿ ಸ್ವಲ್ಪ ಬಗ್ಗಿದ ಹಾಗೆ ಇರುತ್ತೆ. ಮೂಗು ಆ ರೀತಿಯಾಗಿದ್ದರೆ ಉಸಿರು ಬಿಡುವುದೂ ಎಳೆಯುವುದೂ ಕಷ್ಟವಲ್ಲವೆ? ಸಾಧಾರಣವಾಗಿ ನಮ್ಮ ಕಿಟ್ಟಿ ನಮ್ಮ ಸಾಕು ಇವರಿಗೆ ಇರುವ ತೆರದಲ್ಲಿ ಕೆಳಗಡೆ ದಪ್ಪವಾಗಿ ತುದಿ ಕೊಂಚ ಎತ್ತಿಕೊಂಡಿದ್ದರೆ ಉಸಿರು ಬಿಡುವುದಕ್ಕೆ ಸರಾಗ ಬಾಯಿ ನಮ್ಮ ಸೊಸೆಯ ಬಾಯಿನ ಹಾಗೆ ಅಷ್ಟು ಪುಟ್ಟದಾಗಿದ್ದರೆ ಉಂಡೆ ಕಬ್ಬು ಮೊದಲಾದ್ದನ್ನು ತಿನ್ನುವುದು ಹೇಗೆ? ಬಾಯಿ ನಮ್ಮ ಹೆಣ್ಣಿನ ಬಾಯಿನ ಹಾಗೆ ಅಗಲವಾಗಿಯೇ ಇರಬೇಕು. ನೆಗಡಿ ಬಂದು ಮೂಗು ಕಟ್ಟಿಕೊಂಡರೆ ಬಾಯಿಯಲ್ಲಿಯಾದರೂ ಉಸಿರನ್ನು ಬಿಡಬಹುದು. ತುಟಿಯೂ ಅಷ್ಟೆ ನಮ್ಮ ಸಾಕಮ್ಮನ ತುಟಿ ದಪ್ಪ ಸೀತನ ತುಟಿ ಸಂಣ. ತುಟಿ ದಪ್ಪವಾಗಿದ್ದರೆ ತಿನ್ನುವ ಪದಾರ್ಥ ಬಿದ್ದು ಹೋಗದ ಹಾಗೆ ಅಡ್ಡಿಯಾಗಿರುವುದು. ಸೀತನಿಗೆ ಮೇಲಿನ ತುಟಿ ಅತಿ ಅಗಲವಾಗಿ ಕೆಳಕೊತ್ತಿ ಇದೆ. ಸಾಕಿಗೆ ಮೇಲಿನ ತುಟಿ ಸ್ವಲ್ಪ ಎತ್ತಿದ ಹಾಗೆ ಯಾವ ರೀತಿಯಲ್ಲಿರಬೇಕೋ ಹಾಗೆ ಇದೆ. ನೀನು ಸಾವಿರ ಹೇಳು ಸೀತೆಗೆ ಹಲ್ಲು ಚೆನ್ನಿಲ್ಲ ಅವಳು ನಕ್ಕರೆ ಹಲ್ಲು ಚೆನ್ನಾಗಿ ಕಾಣಬೇಡವೆ? ಕಂಡರೆ ಕಂಡಿತು ಇಲ್ಲದಿದ್ದರೆ ಇಲ್ಲ ಎನ್ನುವ ಹಾಗೆ ಇದೆ. ಸೀತೆಗೇನೋ ಕೆಂಪು ತೊಗಲು, ನಿಜ. ಅದೇನು ಚೆನ್ನೋ ನಾನು ಕಾಣೆ ನಮ್ಮವ್ವ, ಒಂದು ಬಗೆ ತೊನ್ನು ಬಡಕರ ಹಾಗೆ, ನಮ್ಮ ಸಾಕಿ ಹುಟ್ಟಿದಾಗ ಸುಮ್ಮನೆ, ಹೇಗೆ ಇರೋದು, ಮಗು! ನೋಡುವುದಕ್ಕೆ ಹತ್ತು ಕಂಣು ಸಾಲದ ಹಾಗೆ ಇತ್ತು. ಈಚೆಗೆ ಸಿಡುಬು ಎದ್ದು ಹಾಗಾಯಿತು. ಮುಖವೆಲ್ಲಾ ಗುಣಿಯಾಗಿ ಬೂದು ಕಪ್ಪು ಕವಿಚಿಕೊಂಡಿತು. ಹೀಗಿತ್ತೇ? ಏನೋ ಹೇಗಾದರೂ ಇದ್ದು ಬದುಕಿಕೊಳ್ಳಿ. ಇದೂ ಅಲ್ಲದೆ, ಆ ಮೈಸೂರಿನವರ ಒಲಪು ಆ ಶೃಂಗಾರ ಆ ಬಿನ್ನಾಣ ಯಾರಿಗೆ ಬರುತ್ತೆ? ಆ ನಡಗೆ ಯಾರಿಗೆ ಬರುತ್ತೆ? ಇಷ್ಟೂ ಆಯಿತು, ಆ ಸಿಸ್ತನ್ನೆಲ್ಲಾ ಕಟ್ಟಿಕೊಂಡು ನಮ್ಮ ಸಾಕಿ ಏನಮಾಡೀತು? ಗರತಿ ಲಕ್ಷಣಕ್ಕೆ ಇದ್ದು ಗಂಡನಿಗೆ ಹೆಂಡತಿಯಾಗಿ ಮಕ್ಕಳಿಗೆ ತಾಯಾಗಿ ಹೊಟ್ಟೆ ತೆರೆದು ಎರಡು ಮಕ್ಕಳಾದರೆ ಸಾಕು.

ಈ ಪ್ರಕಾರದಲ್ಲಿ ಅಲ್ಲಿದ್ದ ಹೆಂಗಸರ ಸಭೆಯ ಮುಂದೆ ತಿಮ್ಮಮ್ಮ ಹೇಳಿದಳು. ಇವಳ ಮಾತ ಎಲ್ಲವನ್ನೂ ಕೇಳಿ ಅಲ್ಲಿದ್ದ ಮುತ್ತೈದೆಯರು ಒಬ್ಬರಿಗೊಬ್ಬರು ಮುಖಾ ನೋಡಿಕೊಂಡು ಹುಸಿನಗೆ ನಗುತಾ ಸುಮ್ಮನಾದರು. ಈ ಗರತಿಯರೆಲ್ಲಾ ಎಲೆ ಅಡಕೆ ತೆಗೆದುಕೊಂಡು ಮನೆಗೆ ಹೋಗುತಾ ದಾರಿಯಲ್ಲಿ ತಂತಮ್ಮೊಳಗೆ - ತಿಮ್ಮಮ್ಮನ ಮಾತ ಕಟ್ಟಿಕೊಂಡೇನು, ಹೊಟ್ಟೆಕಿಚ್ಚಿನ ಮಾತ? ಅವಳು ಹೇಳುವುದನ್ನೆಲ್ಲಾ ಹೇಳಲಿ ಎಂದು ಸುಮ್ಮನೆ ಕೂತು ತಡೆದುತಡೆದೂ ಸಾಕಾಯಿತು. ಒಂದು ಬಗೆ ಪಿಶಾಚಿಯ ಹಾಗೆ ಇದೆ, ಆ ಹಾಳಸಾಕಿ ಎನ್ನುವ ಹೆಂಣು, ಆ ಮೂದೇವಿಯ ಚೇಷ್ಟೆಯೋ ಅದರ ಬುದ್ದಿಯೋ ಅದರ ರೂಪಿಗೆತಕ್ಕ ಹಾಗೆಯೇ ಇದೆ, "ಕುರೂಪೀ ಬಹು ಚೇಷ್ಟಿತಾ"

ಎಂದ ಹಾಗೆ, ನೋಡಿದರೆ ಓಕರಿಕೆ ಬರುತ್ತೆ. ಆ ಹೆಂಣನ್ನು ಹೊಗಳಿ ಸೊಸೆಯನ್ನು ಹಳಿದಳಲ್ಲಾ ನಮಗೇನು ಕಂಣಿಲ್ಲವೆ? ಪಾಪ ಆ ಹುಡುಗಿ ಸೀತಮ್ಮನೂ ಸೀತಮ್ಮನೇ, ಅವಳ ಹೆಸರು ಒಂದಲ್ಲ ಅವಳ ಇರಿಕೆ ಒಂದಲ್ಲ; ಹೀಗೆಂದು ತಮ್ಮೊಳಗೆ ಮಾತನಾಡಿಕೊಂಡು ಹೋಗುತಿದ್ದರು.

ಇದು ಹೀಗಿರಲಾಗಿ, ಅತ್ತ ಅಮ್ಮನ ಗುಡಿಯ ಅಪ್ಪಾಜಿಯು ಹೆಚ್ಚಾಗಿ ಪ್ರಬಲಿಸುತಾ ಬಂದನು. ಇವನ ಕಡೇ ಗುಂಪೂ ದಿನೇದಿನೇ ಬಲವಾಗುತ್ತಾ ಬಂತು. ಅಲ್ಲಿ ಸೇರುತ್ತಾ ಇದ್ದ ತುಂಟರ ಹಾವಳಿಯನ್ನು ಸಹಿಸುವುದು ದುಸ್ತರವಾಗಿತ್ತು. ಅಮ್ಮನಿಗೆ ಬರುತ್ತಾ ಇದ್ದ ಕಾಣಿಕೇ ಮುಡುಪೆಲ್ಲಾ ಸಿದ್ದಪ್ಪಾಜಿಗೆ ಗಂಟನ್ನು ದಿನೇದಿನೇ ದಪ್ಪವಾಗಿ ಮಾಡುತ್ತಾ ಬಂತು. ಹಣ ಹೆಚ್ಚಿದರೆ ಅಲ್ಪರಿಗೆ ಬುದ್ಧಿವಿಕಾರಗಳು ಹುಟ್ಟುವುದು ವಾಡಿಕೆಯಾಗಿದೆ. ಇವನಿಗೆ ಕಿವಿಗೆ ಹತ್ತಕಡಕಾಯಿತು. ಕೈಗೆ ಚಿನ್ನದ ಕಪ್ಪವಾಯಿತು. ತೋಳಿಗೆ ಚಿನ್ನದ ಮುಡೀಬಳೆಯಾಯಿತು, ಬೆರಳಿಗೆ ಉಂಗುರ ವಾಯಿತು, ಕಾಲಿಗೆ ದಪ್ಪನಾದ ಕಪ್ಪವಾಯಿತು, ಪಟ್ಟೆ ಅಂಚಿನ ಧೋತ್ರವಾಯಿತು, ನಿರಾಜಿ ಬಟ್ಟೆಯಾಯಿತು, ಗದ್ದಿಗೆಯ ಮೇಲೆ ಕೂತುಕೊಳ್ಳುವಾಗ ತಲೆಯ ಜತೆ ಗಂಟಿಗೆ ಸುತ್ತುವುದಕ್ಕೆ ಬರೀ ನಿರಾಜಿಯಾಯಿತು, ಗದ್ದಿಗೇ ಮೇಲೆ ಕೂತುಕೊಳ್ಳುವಾಗ ಧರಿಸಿಕೊಳ್ಳುವುದಕ್ಕೆ ನಿರಾಜಿ ಅಂಚುಸೆರಗು ಉಳ್ಳ ಹಳದೀಮಗುಟ ಕೆಂಪಿನ ಮಗುಟಗಳಾದವು; ಹೀಗೆ ಡಂಭಕ್ಕೂ ಸೊಗಸಿಗೂ ಬೇಕಬೇಕಾದ ಸಲಕರಣಗಳು ದಿನೇದಿನೇ ಒಂದೊಂದಾಗಿ ಹೆಚ್ಚುತ್ತಾ ಬಂದವು. ಇವನು ಎಲ್ಲಿ ಹೋದರೂ ಪೂರ್ವ ವಯಸ್ಸಿನ ಲಟ್ಟರು ಹಿಂದೂ ಮುಂದೂ ಓಡಾಡಿಕೊಂಡು ಹೊರಡುತಿದ್ದರು. ಕೊನೆಗೆ ಇಂಥಾ ತುಂಡಾಂಡಿಗಳು ಗುಡಿಯ ಕೈಸಾಲೆಯಲ್ಲಿ ಕೂತು ಜೂಜು ಮುಂತಾದ್ದನ್ನು ಆಡುತಾ ಇದ್ದದೂ ಅಲ್ಲದೆ ಪುಂಡುಪದಗಳನ್ನು ಕೆಲವರು ಹೇಳುತಿದ್ದರು. ಜಾವಡಿಗಳನ್ನು ಕೆಲವರು ಹಾಡುತಿದ್ದರು. ಪೂರ್ವವಯಸ್ಸಿನ ಹೆಂಗಸರನ್ನು ಕಂಡಾಗ ಈ ವಿಧವಾದ ರಸಿಕತೆ ಈ ಗುಂಪಿನವರಲ್ಲಿ ಹೆಚ್ಚಾಗುತ್ತಾ ಇತ್ತು. ಇದರ ಜೊತೆಗೆ ಲಲ್ಲೆಯೂ ಕ್ಯಾಕೆಯೂ ಗೊತ್ತಿಲ್ಲದ ಹಾಗೆ ಆಗುತಿದ್ದವು. ಈ ಹಾವಳಿಯಲ್ಲಿ ಹೆಂಗಸರು ಆ ದಾರಿಯಲ್ಲಿ ತಿರುಗಾಡಲು ಹೆದರಿಕೊಳ್ಳುವ ಹಾಗೆ ಆಯಿತು. ಊರಿನ ಜನರು ಅನೇಕರು ಆ ದಾರಿಯಲ್ಲಿಯೇ ನೀರತರಲು ಹೊಳೆಗೆ ಹೋಗಿ ಬರಬೇಕಾಗಿತ್ತು. ಹೀಗೆ ಕಟ್ಟು ಹರಿದ ಪಂಜಾಗಿ ನಡೆಯುತ್ತಾ ಇದ್ದ ಜನರ ಹಾವಳಿಯಲ್ಲಿ ಯಾವ ಕೆಟ್ಟತನ ನಡೆಯಬಹುದು ಯಾವುದು ನಡೆಯುವುದಿಲ್ಲ ಎಂದು ಹೇಳಬಹುದು?

ಅತ್ತ ಜೋಯಿಸರ ಮನೆಯಿಂದ ಸೀತಮ್ಮನು ಪ್ರತಿನಿತ್ಯವೂ ಬೃಂದಾವನದ ಪೂಜೆಗೆ ಹೋಗಿಬರುತಾ ಇದ್ದ ಸಂಗತಿ ಗೊತ್ತಾಗಿಯೇ ಇದೆ. ಆ ಬೃಂದಾವನವು ಹೊಳೆಗೆ ಸ್ವಲ್ಪ ಸಮೀಪವಾಗಿತ್ತು. ಆದರೆ ಅಲ್ಲಿಂದಾ ಹೊಳೆಗೆ ಹೋಗಲು ಪೂರ್ವದಲ್ಲಿ ಅಡ್ಡಿ ಏನೂ ಇರಲಿಲ್ಲ ಈಚೆಗೆ ಹೊಳೇ ತಡಿಯಲ್ಲಿದ್ದ ಹೊಲವನ್ನು ಯಾರೋ ಮಾಡಿಕೊಂಡು ಬೇಲಿ ಹಾಕಿಕೊಂಡಿದ್ದರು. ಈ ಬೃಂದಾವನವು ಆ ಹೊಲದ ಮಧ್ಯಭಾಗಕ್ಕೆ ಸೇರಿತ್ತು. ಆದರೆ ಅದರ ಪೂಜೆಗೆ ಬರಲು ಯಾರಿಗೂ ಅಡ್ಡಿ ಇರಲಿಲ್ಲ, ಈ ಬೃಂದಾವನವು ಅಮ್ಮನ ಗುಡಿಯ ಕೈಸಾಲೆಗೆ ಎದುರಾಗಿತ್ತು. ಅಲ್ಲಿಗೂ ಅಲ್ಲಿಗೂ ಸುಮಾರು ೧೦೦-೧೫೦ ದೂರವಿತ್ತು. ದಿನಚರಿಯಲ್ಲಿಯೂ ಸೀತಮ್ಮನು ಬೃಂದಾವನದ ಪೂಜೆಗೆ ಹೋಗಿಬರುವುದು ಗುಡಿಯ ಕೈಸಾಲೆಗೆ ಚೆನ್ನಾಗಿ ಕಾಣಿಸುತಿತ್ತು. ಸೀತಮ್ಮನು ಪೂಜೆಗೆ ಹೋಗಿಬರುವ ಹೊತ್ತು

ಗೊತ್ತಾಗಿತ್ತು. ಆ ಕಾಲದಲ್ಲಿ ಈ ಪಡ್ಡೆ ಹುಡುಗರ ಹಾವಳಿಯು ಅಮ್ಮನ ಗುಡಿಯ ಬಳಿಯಲ್ಲಿ ದಿನೇದಿನೇ ವೃದ್ಧಿಯಾಗುತ್ತಲೇ ಬಂತು. ಬುದ್ಧಿವಿಕಾರಕ್ಕೆ ನೋಟವೇ ಅಂಕದ ಬಾಗಿಲಾಗಿದೆ. ಸೀತಮ್ಮ ಹೋಗಿ ಅಲ್ಲಿ ಪೂಜೆಯನ್ನು ತೀರಿಸಿಕೊಂಡು ಬರುವಷ್ಟರಲ್ಲಿ ಗುಡಿಯಲ್ಲಿರತಕ್ಕೆ ಎಲ್ಲರ ಕಂಡೂ ಆ ಕಡೆಗೆ ತಿರುಗುತ್ತಿತ್ತು. ಒಂದು ದಿವಸ ಅಪ್ಪಾಜಿಯು ಗುಡಿಯ ಕೈಸಾಲೆಯಿಂದಲೇ ದೃಷ್ಟಿಸಿ ನೋಡಿದನು. ಕಂಣಿಗೆ ತೃಪ್ತಿಯಾಗಲಿಲ್ಲ ದೃಷ್ಟಿ ಅಲ್ಲಿಯೇ ನೆಟ್ಟು ಹೋಯಿತು. ಸ್ವಲ್ಪ ಹೊತ್ತಿನ ಮೇಲೆ - ಈಕೆ ದೀಕ್ಷಿತರ ಸೊಸೆಯಲ್ಲವೆ? ಎಂದನು. ಅಲ್ಲಿದ್ದವರು - ಹವುದು ಎಂದು ಹೇಳಿದರು. ಆಗ ಅಪ್ಪಾಜಿಯು-ಒಳ್ಳೇ ಚೆಲುವೆ, ಬಹು ಸುಂದರಿಯಾಗಿದಾಳೆ. ನಾನು ಚೆನ್ನಾಗಿ ನೋಡಿಯೇ ಇರಲಿಲ್ಲ ಈ ಸೌಂದರ್ಯದ ವೈಖರಿಯನ್ನು ನಾನು ಎಲ್ಲಿಯೂ ಕಾಣಲಿಲ್ಲ ಎಂದನು. ಅಲ್ಲಿ ಇದ್ದವರಲ್ಲಿ ಒಬ್ಬನು - ಅವಳ ತಲೆಕೂದಲು ಎಷ್ಟು ಸೊಗಸಾಗಿದೆ ಎಂದನು. ಇನ್ನೊಬ್ಬನು - ಬರೀ ಕೂದಲೇ ಅಷ್ಟು ಹೇಳತಕ್ಕದ್ದಲ್ಲ ಆ ಕೂದಲು ಆ ಮುಂದಲೇ ಕುರುಳು ಬೆಳ್ಳಗಿರುವ ಮುಖದ ಮೇಲುಗಡೆ ಮೂಲೆಮೂಲೆಯಾಗಿ ಕಮಾನು ಕಟ್ಟಿ ಬಿಟ್ಟಹಾಗೆ ಇದೆ, ಎಂದನು. ಇನ್ನೊಬ್ಬನು - ಆ ಕಂಣು ಆ ಹುಬ್ಬು ಆ ನೋಟ ಇದನ್ನು ಹೋಲುವುದು ಯಾವುದೂ ಇಲ್ಲ ತೆಗೆ, ಎಂದನು. ಮತ್ತೊಬ್ಬನು - ಒಂದು ಸಾರಿ ಅವಳು ನಕ್ಕಿದ್ದನ್ನು ನೋಡುವುದಕ್ಕೆ ಏನಬೇಕಾದರೂ ಕೊಡಬಹುದು ಎಂದನು. ಮತ್ತೊಬ್ಬನು - ಅವಳ ತುಟಿ ಭಲೆ ಜೋಕಾಗಿ ಅದೆ ಕಣೆಲೋ, ಎಂದು ನುಡಿದನು. ಇನ್ನೊಬ್ಬನು - ಬೇಕೆಂತ ಕಡೆದು ಮಾಡಿದ ಜಂತದ ಬೊಂಬೆ ಹಂಗವಳೆ, ಅವಳ ಮೈ ಅಷ್ಟು ಚೆನ್ನಾಗೈತೆ ಎಂದನು. ಇನ್ನೊಬ್ಬನು - ಐ ಮೈ ಹೇಳತವನೆ ಮೈಯ; ಇನ್ನ್ಯಾವುದು ಕೆಟ್ಟೆದ್ದಾತು? ಎಂದನು. ಇನ್ನೊಬ್ಬನು - ಅಯ್, ತೆಗೆಯೊ ನೀ ಏನ ಬಲ್ಲೆ ಮೈಸೂರಲ್ಲಿ ಪಟ್ಟದಾನೆ ಡುಲಾಯಿಸಿಕೊಂಡು ನಡೆಯಾಕಿಲ್ಲವ? ಹಂಗೆ ನಡೀತವಳೆ ಕಣೆಲೊ, ಎಂದನು. ಇನ್ನೊಬ್ಬನು - ಅದೇನ ಹೇಳಿಯಲೆ, ಬೊಡ್ಡಿ ಈ ಕಡೆಯಿಂದ ಆ ಕಡೆ ಕಂಣ ತಿರಗಸತವಳೆ, ಅದ ಕಂಡರೆ ಎಂತೀವನಗಾದರೂ ಜೀವಾ ಮಿಳ್ಮಿಳ್ ಅನ್ನಾಕಿಲ್ಲವ? ಎಂದನು. ಇನ್ನೊಬ್ಬನು - ನೀ ಬಲೆ ಕಂಡವ ಸುಮ್ಮನಿರೆಲೆ, ಒಂದು ಹೇಳತವನೆ ಒಂದ, ಇನ್ನ್ಯಾವದು ಕೆಟ್ಟೆದ್ದಾತು? ಆ ಎದೆಬಾವಕ್ಕೆ ಏನತಾನೆ ಹೋಲಿಸೀಯಲೆ? ಎಂದು ಒದರಿದನು. ಇನ್ನೊಬ್ಬನು - ಅವಳು ನಡೆಯೋವಾಗ ಮೈ ಬಳಕತಾ ನಡೀತವಳೆ, ಅದನೋಡಾಕೆ ಶಿವ ಇನ್ನ ಹತ್ತಕಂಣ ಕೊಟ್ಟರೂ ಸಾಲದು ಕಣೆಲೊ, ಎಂದನು. ಇನ್ನೊಬ್ಬನು - ಮೊನ್ನೆ ಸುಕ್ಕರವಾರ ದೋಸರ ಕಿಟ್ಟಪ್ಪ ಓಟು ಗುಲಾಬದ ಹೂ ಮನೆಗೆ ಕೊಟ್ಟು ಬಾ ಅಂತ ಕಳಗಸದ, ನಾನು ಅವರ ಮನೆಗೆ ಹೋದವ ಹೂ ತಗಳ್ಳಿ ಅಂದಿ; ಅವ ಬಂದಿ ಕೈ ಒಡ್ಡಿದ, ಆಹಾ ಅದೇನ ಕೈ! ಆ ಹುವ್ವನ ಬಂಣ ಅವಳ ಅಂಗೈ ಬಂಣ ಒಂದೇ, ವಸಿನೂ ತಿಳಿಯಾಕಿಲ್ಲ ಹಂಗಿತ್ತು; ಆ ಬೊಡ್ಡಿ ಕೈ ಉಗುರು ಕಾಲ ಉಗುರು ಏನಂತೀಯೋ ಕೆಂಗಣಗಲೇ ಬಂಣದ ಕನಡಿ ಹಂಗೆ ತಣಕ್‌ತಣಕ್‌ನೆ ಹೊಳೀತಿರಾದು ಕಣೆಲೆ, ಎಂದು ವರ್ಣಿಸಿದನು. ಇನ್ನೊಬ್ಬನು - ಅವಳ ಮಕ ವಸಿ ಮುಳ್ಳು ಮಕವಲ್ಲವ? ಎಂದು ಕೇಳಿದನು. ಅದಕ್ಕೆ ಮತ್ತೊಬ್ಬನು - ತೆಗೆಯೊ ಏನ ಮಾತಾಡೀಯ, ಇವ ಬಲೇ ಕಂಡವ, ಅವಳ ಮಕ ಎಷ್ಟೋ ನುಂಣಗೈತೆ, ಒಂದು ಬೊಟ್ಟು ಒಂದು ಚುಕ್ಕಿ, ತೋರೀಯ ನೀನು? ಮಾತಾಡತವನೆ ಮಾತ, ಮನಸ ಕಂಡರೆ ಮಾತಾಡಬೇಕು ಕಣೆಲೆ, ಕಾಣದಿದ್ದರೆ ಸತ್ತ ನಾಯಿನ ಹಂಗೆ ಬಿದ್ದಿರಬೇಕು, ಎಂದು ನುಡಿದನು. ಅದಕ್ಕೆ ಮತ್ತೊಬ್ಬ ಹುಡುಗನು - ಅವಳು ವಸಿ ದಪ್ಪನಾಗವಳೆ ಅಲ್ಲವೇನೆಲೆ ತಿಮ್ಮ ಎಂದನು. ಆಗ ತಮ್ಮನು -

ಎತ್ತೆಲೆ ನಿನ್ನ ಕಡಾಸಾನ, ನೀ ಬಲೆ ಹೆಂಣಗಳ ನೋಡಿದವ; ನೀ ಏನಬಲ್ಲೆ ಕಣಾ, ಹುಡುಗಬೊಡ್ಡಿ ಹೈದ, ದಪ್ಪನಾಗವಳಾ ಅವಳು? ಮೂಲೇಮನೆ ದಡಾಲಿ ಕಂಡು ಹೇಳೀಯೋ ಕಾಣೆ. ಎಳನೇತ್ರವಾಗಿ ಬಳುಕುತಾ ಬಳುಕುತಾ ನಡೀತವಳೆ; ನಾವು ಎಷ್ಟೋ ನೋಡಿವಿ, ಮೈಸೂರ ಬುಟ್ಟರೆ ಇನ್ನಿಲ್ಲ, ಅಲ್ಲಿ ಮುಕ್ಸ ಆರಿಸಿ ತೆಗೆದರೂ ಇಂತವಳು ಸಿಕ್ಕಾಕಿಲ್ಲ ಎಂದನು. ಅದಕ್ಕೆ ಇನ್ನೊಬ್ಬನು - ನೀ ನೋಡಿಲ್ಲ ಕಣೆಲೆ, ಇವಳ ನೀ ಏನಬಲ್ಲೆ? ಒಂದು ಪದಾ ಹೇಳತವಳೆ ಹೇಳತವಳೆ, ಅದನ ಕೇಳಿದವ, ಮನಸಾ ಅಲ್ಲೇ ಮೈಮರೇಬೇಕು ಕಣೆಲೋ, ಹಂಗೆ ಹೇಳತವಳೆ, ಎಂದನು. ಇನ್ನೊಬ್ಬನು - ಪದ ಹಂಗಿರಲಿ ಕೈಲೊ, ಇವ ಬಲೆ ಪದಾ ಕಂಡವನ ಮೊಮ್ಮಗ, ಮೈಸೂರಲ್ಲಿ ಇವಳ ತಾತನಂತವರೆಲ್ಲಾ ಪದಾ ಹೇಳತವರೆ, ಮೊನ್ನೆ ಕಿವಡ ನಂಜನ ಮದವೆಗೆ ಬಂದಿರ್ಲಿಲ್ಲವಾ? ಅವಳ ಮುಂದಿನ ಪದಾ ಹೇಳಾಳ? ಅದಲ್ಲ ಕಣ, ತೆಗೆಯಲೆ; ಇವಳಲ್ಲಿ ಇನ್ಯಾವತ್ತಾನೇ ಕಮ್ಮಿಯಾಗ್ಯೆತೆ? ಎಂದನು. ಇನ್ನೊಬ್ಬನು - ಇಂತೇವ ನನಗಿದ್ದರೆ ನಾ ಹೆಂಗೆ ಬಾಳಿಸಿಯೇನೊ! ಎಂದು ನಿಟ್ಟುಸಿರಬಿಟ್ಟನು. ಇವರ ಸಂಗಡ ಕೂತಿದ್ದ ಮುದುಕನೊಬ್ಬನು - ಅದೇನರಲೆ ಹಲ್ಬೆ ಹೊಡದೀರಿ, ಕೈಲಿ ಕಾಸಿಲ್ಲ ಮೈಲಿ ಬೋಸಿಲ್ಲ (ಬೋಸ-ಭೂಷಣ) ಹೋಗೊ ಸೂಳೆ ಕಂಡು ಹಮ್ಮೈಸಿ ಬಿದ್ದನಂತೆ, ಎಂದು ಹೇಳಿದನು. ಅವರಲ್ಲಿ ಇನ್ನೊಬ್ಬ ಮುದುಕನು - ನಡೀರೋ, ಏನ ಹಂಗಾಡೀರಿ, ಅವ ಎಂತ ಮಾತಾಯೋ? ನಿಮಗೆ ಅಕ್ಕತಂಗೀರಿಲ್ಲವ? ಎಂದನು.

ಆಗ ಅಪ್ಪಾಜಿಯು - ಚಿತ್ರದಲ್ಲಿ ಬರೆದರೆ ಕೈ ತಪ್ಪಿ ಹೋದೀತು ಎನ್ನುವ ಹಾಗೆ ಇದಾಳೆ. ರೂಪಿಗೆ ತಕ್ಕಹಾಗೆ ಮೈಸೂರ ಬೆಡಗು ಬೇರೆ ಇದೆ. ಅದೇ ಗಂಡಸಿನ ಮನಸ್ಸನ್ನು ಕುಯ್ಯುವುದು ಎಂದನು. ಅದಕ್ಕೆ ಸಮೀಪದಲ್ಲಿದ್ದ ಒಬ್ಬನು ಇವಳು ಬಲೇ ಗರತಿಯಂತೆ, ಮನೇಲಿ ಬದುಕು ಬಾಳು ಮಾಡಿಕೊಂಡು ದೇವರು ದಿಂಡರು ಅಂತಾ ಅವಳಂತೆ, ಎಂದನು. ಆಗ ಅಪ್ಪಾಜಿಯ ಬಲಗಡೆ ಕೂತಿದ್ದ ಉಪಾಧ್ರಿ ನಾರಪ್ಪಯ್ಯನು - ಏನೋ ಇದೆ ನಮಗೆ ಯಾಕೆ? ಎನಲು, ಅಪ್ಪಾಜಿಯು ಈ ಮಾತಿನಲ್ಲಿ ಏನೋ ಸ್ವಾರಸ್ಯವಿದೆ ಎಂದು ಮನಸ್ಸಿನಲ್ಲಿ ಆಶೆಯ ಅಂಕುರಕ್ಕೆ ಆರಯ್ಕೆಯನ್ನು ಮಾಡುತಾ - ಉಪಾಧ್ರು ಯಾಕೋ ಒಂದು ಬಗೆಯಾಗಿ ಮಾತನಾಡುತಾರ ಬಹುದಿವಸ ಅವರ ಮನೆಯಲ್ಲಿಯೇ ಇದ್ದವರಲ್ಲವೆ. ಅವರು ಕಾಣದ್ದು ಯಾವುದು? ಎಂದು ಹುಸಿನಗು ನಗುತಾ ಎಂದನು. ಅದಕ್ಕೆ ಉಪಾಧ್ರಿಯು - ನಾನು ಕಾಣದ್ದು ಯಾವುದಿದೆ? ಮೊನ್ನೆ ಹುಡುಗ ಇವಳ ಗಂಡ, ನನ್ನಲ್ಲಿ ಓದಿ ಬುದ್ಧಿವಂತನಾದ, ನಾನೇ ತಯಾರುಮಾಡಿದೆ. ಅವನಿಗೆ ಇಂಥಾ ಹೆಂಣನ್ನು ತಂದು ಗಂಟಹಾಕಿದರೆ ಏನಾದೀತು? ಬೆಳಗೆದ್ದರೆ ಅತ್ತೆಗೂ ಸೊಸೆಗೂ ಹಣಾಹಣಿ ಜಗಳ; ನಾನು ಕೇಳಿನೋಡ್ಡಿ ಅನುಭವಿಸಿ ಸಾಕಾಗಿದೆ. ಆ ಅತ್ತೆಯಾಗುವ ಹೊತ್ತಿಗೆ ಅಡಗು ಮೆಟ್ಟಿಕೊಂಡು ಇದಾಳೆ ಎಂದನು. ಆಗ ಅಪ್ಪಾಜಿಯು - ಯಾಕೆ ಅತ್ತೆಗೂ ಸೊಸೆಗೂ ಅಷ್ಟು ಜಗಳ?

ಉಪಾಧ್ರಿ - ಯಾಕೆ ಜಗಳವೋ ನಾನು ಏನೆಂದು ಹೇಳಲಿ? ನಾವು ಕಂಡಹಾಗೆ ತಿಮ್ಮಮ್ಮ ಎಂಥಾ ಒಳ್ಳೇ ತಾಯಿ ಹೆತ್ತಮಗಳು. ಅವಳಿಗೆ ಕೆಟ್ಟ ವಿದ್ಯಗಳು ಸೇರದು. ಅದಕ್ಕೇ ಜಗಳ.

ಅಪ್ಪಾಜಿ - ಸೊಸೆಯಲ್ಲಿಯೇನು ಕೆಟ್ಟವಿದ್ಯವಿದೆ?

ಉಪಾಧ್ರಿ - ಮಾಡಿದವರ ಪಾಪ ಆಡಿದವರ ಬಾಯಲ್ಲಿ ನಮಗೆ ಯಾಕೆ ಬೇಕು?

ಅಪ್ಪಾಜಿ - ಹಾಗಾದರೆ ಮತ್ತೆ ಏನಾದರೂ ಹೆಚ್ಚುಗಟ್ಟಲೆ ಉಂಟೋ?

ಉಪಾದ್ರಿ - ನಾವು ಕಂಡದ್ದಲ್ಲ ಕೇಳಿದ್ದಲ್ಲ, ಹೇಗೆ ಹೇಳುವುದು? ಏನೂ ಇಲ್ಲದಿದ್ದರೆ, ಪಾಪ ಆ ಅತ್ತೆ ಯಾಕೆ ಸೊಸೆ ಗೋಜಿಗೆ ಹೋದಾಳು?

ಅಪ್ಪಾಜಿ - ನೋಡಿ ಉಪಾದ್ರ್ಯೆ, ನಾನು ಎಷ್ಟೋ ನೋಡಿದೇನೆ. ರೂಪು ಇದ್ದ ಕಡೆ ದೋಷವಿಲ್ಲದೆ ಇರುವುದೇ ಇಲ್ಲವಲ್ಲ?

ಉಪಾದ್ರಿ - ತಾರಾಶಶಾಂಕದಲ್ಲಿ ಮೊನ್ನೆ ನಾನು ಓದಲಿಲ್ಲವೆ? ಚಂದ್ರ ಅಷ್ಟು ಸುಂದರನಾದ್ದರಿಂದಲೇ ಅವನಲ್ಲಿ ದೋಷ ಉಂಟಾಯಿತು. ಅದೇ ಕಳಂಕವಾಗಿ ನಿಂತು ಬಿಟ್ಟಿತು.

ಅಪ್ಪಾಜಿ - ನನಗೆ ಇದು ಒಂದು ಸಂಶಯ ನೋಡಿ ಉಪಾದ್ರ್ಯೆ, ರೂಪು ಇದ್ದ ಕಡೆ ದೋಷ ಯಾಕೆ ಇರಬೇಕು? ದೇವರ ಮುಖವನ್ನು ನಾವು ಲಕ್ಷಣವಾಗಿ ತಿದ್ದುವುದಿಲ್ಲವೆ? ಹಾಗಾದರೆ ದೇವರಲ್ಲಿ ನಾವು ದೋಷವನ್ನು ಆರೋಪಿಸಿದಂತೆಯೇ ಆಯಿತು? ದೋಷವನ್ನು ನಾವು ಆರೋಪಿಸಿದ ಮೇಲೆ ನಾವು ಅದನ್ನು ಪೂಜಿಸಬಹುದೆ?

ಉಪಾದ್ರಿ - ಕೆಟ್ಟತನವಿಲ್ಲದ ರೂಪು ದೇವರಲ್ಲಿದೆ. ಮನುಷ್ಯರಲ್ಲಿ ರೂಪಿನ ಸಂಗಡ ಕೆಟ್ಟತನ ಸೇರಿಕೊಂಡೇ ಇರುತ್ತೆ.

ಅಪ್ಪಾಜಿ - ರೂಪು ಇಲ್ಲದ ಕಡೆ ಕೆಟ್ಟತನ ಹುಟ್ಟುವುದು ಅಪೂರ್ವ, ರೂಪು ಇದ್ದ ಕಡೆಯೆಲ್ಲಾ ಕೆಟ್ಟತನವಿರುತ್ತೆಯೆ? ಹೇಗೂ ಹೇಳುವುದಕ್ಕಾಗದು.

ಅಪ್ಪಾಜಿ - ರೂಪು ಜನರ ಮನಸ್ಸನ್ನು ಸೆಳೆಯುವುದು.

ಸಭಾಪತ್ಯೆಯ್ಯ - ಬರೀ ರೂಪು ಮನಸ್ಸನ್ನು ಕೆಡಿಸುವುದಿಲ್ಲ ಉತ್ತಮವಾದ ರೂಪನ್ನು ಕೊಟ್ಟು ಚಿತ್ರದಲ್ಲಿ ಹೆಂಗಸನ್ನು ಬರೆದರೆ ಮನಸ್ಸು ಕೆಟ್ಟೀತೆ?

ಅಪ್ಪಾಜಿ ಹಾಗೂ ಹೇಳುವುದಕ್ಕೆ ಇಲ್ಲ ಜೀವ ಇಲ್ಲದ ಬೊಂಬೆಯನ್ನೂ ಪಟವನ್ನೂ ಮನುಷ್ಯರಿಗೆ ಹೋಲಿಸುವುದಕ್ಕೂ ಆಗದು, ಜೀವವುಳ್ಳವರ ರೂಪು ಮನಸ್ಸನ್ನು ಸೆಳೆಯುವುದೇನೋ ನಿಜ.

ಸಭಾಪತ್ಯೆಯ್ಯ - ನಾನು ಹೇಳಿದ್ದು ಅಪ್ಪಾಜಿ, ನಿನಗೆ ಗೊತ್ತಾಗಲಿಲ್ಲ ಜೀವವಿಲ್ಲದ ಬೊಂಬೆಗಳಲ್ಲಿ ಸೌಂದರ್ಯವಿದ್ದರೆ ಅದನ್ನು ನಾವು ನೋಡಿ ಆನಂದ ಪಡುತೇವೆ. ಹಾಗೆಯೇ ಒಂದು ಹುವ್ವನ್ನು ನೋಡಲಿ, ಚೆನ್ನಾಗಿ ಕಟ್ಟಿದ ಮನೆಯನ್ನು ನೋಡಲಿ, ನಮಗೆ ಏನೋ ಆನಂದವಾಗುತ್ತೆ. ಜನರ ರೂಪನ್ನು ನೋಡಿ ಹುಟ್ಟುವ ಆನಂದವೂ ಇಂಥಾದ್ದೇ. ಹೆಂಗಸು ಗಂಡಸಿನ ರೂಪನ್ನೂ ಗಂಡಸು ಹೆಂಗಸಿನ ರೂಪನ್ನೂ ನೋಡಿದಾಗಲೂ ಮೊದಲು ಇಂಥಾ

ಆನಂದವೇ ಹುಟ್ಟತಕ್ಕದ್ದು. ಆದರೆ ನಮಗೆ ಬುದ್ಧಿಯನ್ನು ವಿಕಾರ ಮಾಡಿ ಮನ್ಮಥಬಾಧೆಯನ್ನು ಹುಟ್ಟಿಸತಕ್ಕದ್ದು ಬೇರೆ ಇದೆ.

ಉಪಾದ್ರಿ - ಯಾವುದೊ ಹೊಸದಾಗಿ ಹೇಳುತೀರಿ, ಯಾರೂ ಕಾಣದ್ದನ್ನು ಹಾಗಾದರೆ ಅದು ಯಾವದಪ್ಪ?

ಸಭಾಪತ್ಯೈಯ್ಯ - ಜನರ ಮನಸ್ಸನ್ನು ಕರಗಿಸುವುದು ಬರೀ ರೂಪಲ್ಲ ಹೀಗೆಂದರೆ ಸೌಂದರ್ಯವಲ್ಲ ಅದು ಪ್ರತಿಮೆಗಳಲ್ಲಿಯೂ ಇರುತ್ತೆಂದು ಆಗಲೆ ನಾನು ಹೇಳಿದೇನೆ. ಮುಖ್ಯವಾಗಿ ಹೊರಗಿನ ಚಲ್ಯಗಳು ಕಲ್ಲಿನಂಥಾ ಮನಸ್ಸನ್ನೂ ಕರಗಿಸುವವು. ಹೆಂಗಸು ಗಂಡಸನ್ನು ಕಂಡಕೂಡಲೆ, ತಲೆಯನ್ನು ಬಗ್ಗಿಸಿದ ಹಾಗೆ ಇರುವುದು, ಕಡೆಗಂಣಿನಲ್ಲಿ ಅವನ ಕಡೆ ನೋಡುತ್ತಿರುವುದು, ಮುಂಗುರಳನ್ನು ಸರಿಮಾಡಿ ಕೊಳ್ಳುವುದು, ಸೆರಗನ್ನು ಸ್ವಲ್ಪ ಜಾರಿಸಿಬೇಕೆಂದು ಅದನ್ನು ಜಗ್ಗಿಸಿಜಗ್ಗಿಸಿ ತುಯಿದು ಹೊದಿಯುವುದು, ಯಾರ ಸಂಗಡಲಾದರೂ ಮಾತನಾಡುತಿರುವಾಗ ಇಲ್ಲದ ನೆವವನ್ನು ಕಲ್ಪಿಸಿಕೊಂಡು ನಗುವುದು, ಗಂಡಸನ್ನು ಕಂಡರೆ ಅಸಹ್ಯವನ್ನು ತೋರಿಸುವಳಂತೆ ಹುಬ್ಬನ್ನು ಗಂಟುಹಾಕಿಕೊಂಡು ಸರಕ್ಕನೆ ಬೇರೆ ಕಡೆಗೆ ತಿರುಗಿಕೊಳ್ಳುವುದು, ಅಷ್ಟರಲ್ಲಿಯೇ ಸ್ವಲ್ಪ ನಗುವುದು, ಸ್ವಲ್ಪ ಹೊತ್ತಿನ ಮೇಲೆ ಇನಯನನ್ನು ಹಿಂತಿರುಗಿ ನೋಡಿ ಕಂಣಗುಡ್ಡೆಯನ್ನು ತೇಲಾಡಿಸುತ್ತಾ ಹೊರಟುಹೋಗುವುದು, ನೆಪ ತೆಗೆದುಕೊಂಡು ಯಾರನ್ನೋ ಕರೆಯುವಂತೆ ಕರೆಯುವುದು, ಇನಯನ ಮನಸ್ಸು ಕರಗುವ ಹಾಗೆ ಭಾವಗರ್ಭಿತವಾಗಿ ಮಾತನಾಡುವುದು, ಆಗಾಗ್ಗೆ ಸೀರೆಯ ಸೊಗಸನ್ನೂ ಒಡವೆಯ ಬೆಡಗನ್ನೂ ಈಕಡೆ ಆಕಡೆ ಬೇಕೆಂದು ತಿರುಗಿ ನೋಡಿಕೊಳ್ಳುವುದು, ಅತಿಯಾದ ನಾಚಿಕೆಯನ್ನು ತೋರಿಸುವುದು, ಆಗಾಗ್ಗೆ ಮುಖವನ್ನು ಒರೆಸಿಕೊಳ್ಳುತಾ, ಕನ್ನಡಿಯನ್ನು ನೋಡಿಕೊಳ್ಳುತಾ, ಮೈಯನ್ನು ಬಳುಕಿಸುತಾ, ಪುರುಷ ತನ್ನನ್ನು ನೋಡಿದಾಗ ಅವನ ಕಡೆ ತಿರುಗಿಯೇ ನೋಡದವಳಂತೆ ಇರುತಾ, ಬೆಡಗನು ಬೀರುವುದು, ಮಕ್ಕಳನ್ನು ಎತ್ತಿ ಅತಿಯಾಗಿ ಮುದ್ದಾಡುವುದು, ಗಹಗಹಿಸಿ ಹಾಡುವದು. ನಗುನಗುತಾ ಅತಿ ವಿನಯವಾಗಿ ಮಾತನಾಡುವುದು, ಪರಪುರುಷರೆದುರಿಗೆ ಅತಿಯಾಗಿ, ಸುಳಿದಾಡಿ ಓಡಿಯಾಡುವುದು, ಇವೇ ಮೊದಲಾದ ಹಲವು ಚರಗಳು ಪುರುಷನ ಮೃಗಕ್ಕೆ ಬಲಿಯಾಗುವವು. ಪುರುಷನನ್ನು ಕಂಡಾಗ ಚಲಿಸದ ಕಂಣು ಎಷ್ಟು ಸುಂದರವಾದರೂ ಕೇಡಿಲ್ಲ ಮಾತಾಡದ ಬಾಯಿ ಎಷ್ಟು ಲಕ್ಷಣವಾಗಿದ್ದರೂ ಬಾಧೆ ಇಲ್ಲ: ಚಲನ ಇಲ್ಲದ ಕೈ ಕಾಲುಗಳು ಎಷ್ಟು ಚೆನ್ನಾಗಿದ್ದರೂ ಭಯವಿಲ, ಚೆನ್ನಾಗಿ ಯೋಚಿಸಿ, ಅಂಥಾ ಚಲ್ಯಗಳೇನಾದರೂ ಇವೆಯ ಹೇಳಿ, ಬರೀ ಸೌಂದರ್ಯವೇ ಕಾರ್ಯಕಾರಿಯಲ್ಲ.

ಉಪಾದ್ರಿ - ನಾನು ಇಷ್ಟೊಂದು ನೋಡಿ ಅರಿಯೆ ಸ್ವಾಮಿ, ಹೀಗೆ ಹುಡುಕಾಡಿಕೊಂಡು ಹೋಗುವುದಕ್ಕೆ ನನ್ನ ಕೈಲಾಗದು.

ಅಪ್ಪಾಜಿ - ಸಭಾಪತ್ಯೈಯ್ಯನವರು ಹೇಳುವುದೇನೋ ಪುಸ್ತಕದಲ್ಲಿ ಬರೆದಿರುವ ಪ್ರಷಂಷೆಯಾಗಿ ಕಾಣುತ್ತೆ. ಲೋಕದಲ್ಲಿ ನಡೆಯೋ ಸಂಗತಿಗೋಳು ಹೇಳಿದು, ಎಷೋ ದಿವಸ ಜೋಯಿಸರ ಮನೇಲೇ ಇದ್ದು ನೋಡಿದವರು, ಅವರಿಗೆ ತಿಳಿಯದೆ?

ಹೀಗೆ ಸಭಾಪತ್ಯೈಯ್ಯನ ಮಾತಿನಲ್ಲಿ ತಿರಸ್ಕಾರವೂ, ಉಪಾದ್ರಿಯು ಮೇಲು ಮೇಲೆ ರುಚಿರುಚಿಯಾಗಿ ಆಡಿದ ಮಾತಿನಲ್ಲಿ ಅಭಿರುಚಿಯೂ ಅಪ್ಪಾಜಿಗೆ ಹುಟಿತು. ಈ ಮಾತೆಲ್ಲಾ ನಡೆಯುತ್ತಿರುವಾಗಲೇ ಇವನಿಗೆ ಚಿತ್ತ ವಿಕಲವಾಯಿತು, ಅಂದಕಾರ ಕವಿದುಕೊಂಡಿತು. ಬುದ್ದಿಗೆ ಮತ್ತೇನೂ ತೋರದೇ ಹೋಯಿತು. ಅಪ್ಪಾಜಿಯು ಯಾವ ಮಾತನ್ನೂ ಆಡದೆ ಸುಮ್ಮನೆ ಕೂತುಕೊಂಡನು. ಅಲ್ಲಿದ್ದವರೆಲ್ಲರೂ ಎದ್ದು ಮನೆಗಳಿಗೆ ಹೊರಟರು. ಯಾರೂ ಇಲ್ಲದ್ದನ್ನು ನೋಡಿ ಅಪ್ಪಾಜಿಯು ಉಪಾದ್ರಿಯನ್ನು ಕೂಗಿ ಹಿಂದಕ್ಕೆ ಕರೆದನು; ಅತ್ತ ಇತ್ತ ನೋಡಿ ಮತ್ತೆ ಯಾರೂ ಇಲ್ಲದ್ದನ್ನು ಕಂಡು - ಉಪಾದ್ರಿ ಹಾಗಾದರೆ ದೀಕ್ಷಿತರ ಸೊಸೆ ವಿಚಾರದಲ್ಲಿ ಜನವೇನೋ ಹೊಗಳಿಕೊಂಡಾಗೂ ಒಳಗಿನಸ್ಥಿತಿ ಬೇರೆ ಇದೆ ಅನ್ನಿ? ನಾನೇನೋ ಜನ ಹೊಗಳುವುದನ್ನು ನಂಬಿಕೊಂಡಿದ್ದೆ ಎಂದನು. ಅದಕ್ಕೆ ಉಪಾದ್ರಿಯು - ನಾನೇನೋ ಅವರ ಮನೆಯಲ್ಲಿಯೇ ಇದ್ದು ಮೂರು ಹೊತ್ತೂ ನೋಡಿದವನಷ್ಟೆ, ಆ ಹೆಂಣಿಗೂ ಆ ಗಂಡಿಗೂ ಈಡೇ ಇಲ್ಲ ಆ ಮಹಾದೇವ ನನ್ನಲ್ಲಿ ಓದಿ ಬುದ್ಧಿವಂತನಾದ ಹೈದ, ಈಗ ನನ್ನ ಕಂಡರೆ ಲಕ್ಷ್ಯವೇ ಇಲ್ಲ, ಈ ಹುಚ್ಚುಮುರವನ ಆಳಿಕೆಗೆ ಬರತಕ್ಕ ಹೆಂಗಸಲ್ಲ ಅವಳು. ನಾನೇನೋ ಮುದುಕನಾದೆ, ಇದ್ದಮಾತ ಹೇಳುತ್ತೇನೆ. ಆ ಹೆಂಣಿಗೆ ಎಲ್ಲಿಯಾದರೂ ಅವರಂಥ ಇವರಂಥ ನಿನ್ನಂಥ ಅಗಡುಬೊಮ್ಮನ ಹಾಗೆ ಇರತಕ್ಕವರು ಇದ್ದರೆ ಸಗ್ಗಿಯಾಳು. ಅವಳು ಎಂದಿದ್ದರೂ - ಹೋಗಲಿ ಬಿಡಪ್ಪ ನನಗೆ ಯಾಕೆ ಬೇಕು, ಮೊದಲೇ ಆ ಸದಾಶಿವದೀಕ್ಷಿತನಿಗೆ ನನ್ನ ಮೇಲೆ ಕತ್ತಿನತನಕ ಇದೆ. ಹುಡುಗರನ್ನು ಹೊಡೆಯದೇ ಇದ್ದರೆ ಓದು ಬರುತ್ತೆಯೆ? ಹಿಂದಕ್ಕೆ ಇದೇ ಮಹಾದೇವನಿಗೆ ಒಂದು ಪೆಟ್ಟಹಾಕಿದ್ದಕ್ಕೆ ಅಷ್ಟು ರಂಪವಾಯಿತು. ನನ್ನ ಪ್ರಾಣ ಉಳಿಯುವುದೇ ಕಷ್ಟವಾಯಿತು. ನಿನಗೆ ಅದೆಲ್ಲಾ ತಿಳಿಯದು. ಹೇಳಿದರೆ ಮೂರುದಿವಸದ ಪುರಾಣವಾಗುತ್ತೆ. ಕೊನೆಗೆ ಹುಡುಗರನ್ನು ಓದಿಸುವದಕ್ಕೇ ನನಗೆ ಬಾರದು ಎಂದುಬಿಟ್ಟ ಆ ದೀಕ್ಷಿತ. ಈ ವೂರಲ್ಲಿ ಯಾರು ನನ್ನ ಕೈಲಿ ತಯಾರಾಗದೆ ಇದ್ದವ? ಒಬ್ಬನ್ನ ಬೆಟ್ಟ ಮಡಿಸಿ ಹೇಳಲಿ ನೋಡೋಣ. ಅವ ಆಡಿದಮಾತು ಇನ್ನೂ ನನ್ನ ಹೊಟ್ಟೆಯಲ್ಲಿ ಕುದಿಯುತಾ ಇದೆ. ಜೋಯಿಸರ ಮನೆಗೆ ಇವರೆಲ್ಲಾ ಬಂದು ಸೇರಿಕೊಂಡರು. ಇಲ್ಲದಿದ್ದರೆ ಇವರಿಗೇನು ಗತಿ ಇತ್ತು. ದೊರೇ ಹತ್ತರೇನೋ ಸ್ವಲ್ಪ ಓಡಿಯಾಟವಿದೆ, ಆದರೇನು ಇಂಥವರು ಎಷ್ಟು ಜನವೋ ಆ ಸನ್ನಿಧಾನದಲ್ಲಿ ಆಸ್ತಿ ಪಾಸ್ತಿ ಎಲ್ಲಾ ಹ್ಯಾಪ ಕಿಟ್ಟಂದು. ಆ ತಿಮ್ಮಮ್ಮನ ತಂದೆ ಸಂಪಾದಿಸಿದ್ದು ಆ ತಿಮ್ಮಮ್ಮ ಈ ಮಹಾದೇವನ ಹೆಂಡತಿಯನ್ನು ಪೂರಾ ಬಂದೋಬಸ್ತಿನಲ್ಲಿಟ್ಟಿದಾಳೆ, ಎಂದು ಹೇಳಿದನು. ತರುವಾಯ ಅಪ್ಪಾಜಿಯು ಉಪಾದ್ರಿಯನ್ನು ಮನೆಗೆ ಕಳುಹಿಸಿ ತಾನು ಒಂಟಿಯಾಗಿ ಮನೆಗೆ ಹೋಗುತ್ತಾ ತನ್ನ ಮನಸ್ಸಿನಲ್ಲಿಯೇ ಅವ ಆಡಿದ ಮಾತುಗಳನ್ನು ಗುಣಿಸಿಕೊಳ್ಳುತ್ತಾ ಹೆಜ್ಜೆ ಇಡುತ್ತಿದ್ದನು. "ನಿನ್ನಂಥಾ ಅಗಡುಬೊಮ್ಮ" ಎಂದು ಹೇಳಿದ ಒಂದು ಮಾತಿನಿಂದ ತಾನು ಸರಿಯಾದ ವರನೆಂದು ಊಹಿಸಿಕೊಂಡನು. ಉಪಾದ್ರಿಯು ಲೋಕಾಭಿರಾಮವಾಗಿ ಆಡಿದನೋ ಅಥವಾ ಬೇಕೆಂದು ಅಪ್ಪಾಜಿಯ ಹುಚ್ಚಿಗೆ ಧೂಪಹಾಕುವುದಕ್ಕೆ ಹೇಳಿದನೋ ಗೊತ್ತಾಗಲಿಲ್ಲ ಏವಂಚ ಅಪ್ಪಾಜಿಯು ಅದನ್ನು ತನ್ನ ಸ್ತೋತ್ರವೆಂದು ಅನ್ವಯಿಸಿಕೊಳ್ಳುವುದಕ್ಕೆ ಸಂದರ್ಭ ಸಾಕಾಗಿತ್ತು. ಮನ್ಮಥನ ಮಾಯವೆಂಬ ಬಲೆಯು ಒಳಗಿನ ಕಂಣಿಗೆ ಪರೆಯಾಯಿತು. ಈ ಬಯಕೆ ಕೈಗೂಡುವುದು ಹೇಗೆ? ಯೋಚಿಸಿಕೊಂಡು ಹೋಗುತಾ - ತಿಮ್ಮಮ್ಮನು ಮನೆಗೆ

ಯಜಮಾನಿ, ಇವಳು ಸೊಸೆಯನ್ನು ತನ್ನ ಕೈಹಿಡಿಯಲ್ಲಿ ಹಿಡಿದಿದಾಳೆ, ಇದೇ ಮಾರ್ಗವೆಂದು ನಿರ್ಧರಿಸಿಕೊಂಡನು. ಇವನಿಗೆ ಹುಟ್ಟಿದ ಈ ವಿಪರೀತ ಬುದ್ಧಿಯ ಗೀಳು ಬಲವಾಯಿತು.

ದಿನಚರಿಯಲ್ಲಿಯೂ ರಾತ್ರೆಕಾಲದಲ್ಲಿ ಅಮ್ಮನಗುಡಿಯ ದೊಡ್ಡ ಮಂಗಳಾರತಿಯೂ ದೇವರಿಗೆ ಮಾಡತಕ್ಕ ಅಲಂಕಾರವೂ ನೈವೇದ್ಯಕ್ಕೆ ಮಾಡಿಸಿ, ಬಂದ ಭಕ್ತಾದಿಗಳಿಗೆ ಪ್ರಸಾದವಾಗಿ ಕೊಡತಕ್ಕ ಪಣಿವಾರದ ತರತೀಪೂ ಒಂದುದಿವಸಕ್ಕೆ ಒಂದುದಿವಸ ಅಧಿಕವಾಗುತ್ತಾ ಬಂತು. ಅಮ್ಮನವರಿಗೆ ಅಲಂಕಾರಮಾಡಲು ಮೈಸೂರಿನಿಂದ ಜನರು ಬಂದರು. ಮಹಿಷಾಸುರ ಮರ್ದಿನಿ, ಮಹಾಕಾಳಿ, ಸೀತಾಪಾಶ್ವತಿ, ಸಾವಿತ್ರಿ, ಗಾಯತ್ರಿ, ಸತಿ, ಪಾರ್ವತಿ, ರಾಜರಾಜೇಶ್ವರಿ, ತ್ರಿಪುರಸುಂದರಿ, ಗಂಗ, ಇವೇ ಮೊದಲಾಗಿ ಬಗೆಬಗೆಯಾದ ಅಲಂಕಾರವಾಗುತ್ತಾ ಬಂತು. ಆಗಾಗ್ಗೆ ಉತ್ಸವಗಳ ಮೆರವಣಿಗೆಗಳೂ ನಡೆಯುತ್ತಾ ಬಂದವು. ವಿಶೇಷವಾದ ಅಟ್ಟಹಾಸದಿಂದ ದೇವರಸೇವೆ ನಡೆಯುವುದೆಂದೂ ಎಲ್ಲರೂ ಅದನ್ನು ಬಂದು ಅಗತ್ಯವಾಗಿ ನೋಡತಕ್ಕದ್ದೆಂದೂ ಆಶೆಹುಟ್ಟುವ ರೀತಿಯಲ್ಲಿ ಎಲ್ಲಾ ಕಾರ್ಯಗಳೂ ಜರುಗುತಿದ್ದವು. ಇದನ್ನು ನೋಡುವುದಕ್ಕೆ ದೂರದ ಗ್ರಾಮದವರೆಲ್ಲಾ ಬರುತಿದ್ದರು. ಶತಕಂಠರಾವಣನ ಸಂಹಾರದ ಅಲಂಕಾರವನ್ನೂ ಮೋಹಿನೀ ಅಲಂಕಾರವನ್ನೂ ಮಾಡುವ ದಿವಸಗಳ ವಿಜೃಂಭಣೆಯು ಇನ್ನೊಂದು ಸಾರಿ ನೋಡಬೇಕೆಂದು ಜನರಿಗೆ ನಿಜವಾಗಿಯೂ ಆಶೆ ಹುಟ್ಟುವಹಾಗೆಯೇ ಇರುತಿತ್ತು. ಮಂಗಳಾರತಿ ಕಾಲಕ್ಕೆ ಅಧಿಕಾರಿಗಳನ್ನೂ ಖ್ಯಾತಿವಂತರಾದ ಪುರುಷರನ್ನೂ ಔತಣಕೊಟ್ಟು ಕರಸುತಿದ್ದರು. ಶುಕ್ರವಾರದ ದಿವಸ ಗುಡಿಗೆ ಬರೀಹೆಂಗಸರೇ ಬರಬೇಕೆಂದು ಏರ್ಪಾಡಾಯಿತು. ಜೋಯಿಸರ ಮನೇಹೆಂಗಸರನ್ನು ವಿಶೇಷವಾದ ಮಯ್ಯಾದೆಯಿಂದ ಕರೆದುಕೊಂಡು ಹೋಗುವುದು ಕರೆದುತಂದು ಬಿಡುವುದು, ಅವರಿಗೆ ಇತರರಿಗಿಂತಲೂ ಹೆಚ್ಚಾಗಿ ತಟ್ಟೆತಟ್ಟೆ ತುಂಬಿ ಹೂವನ್ನೂ ಪಣಿವಾರವನ್ನೂ ಪ್ರಸಾದವೆಂದು ಕೊಡುತಾ ಬರುವುದು, ಹೀಗೆ ಜರುಗಿತು. ನವರಾತ್ರೆಯಲ್ಲಿಯೂ ವರಮಹಾಲಕ್ಷ್ಮಿ ಹಬ್ಬದಲ್ಲಿಯೂ ಸುವಾಸಿನಿಯರ ಪೂಜೆ ಎಂಬ ನೆವದಿಂದ ಒಳ್ಳೆಸೀರೆಗಳನ್ನೂ ಕುಪ್ಪಸಗಳನ್ನೂ ದೀಕ್ಷಿತರ ಕುಟುಂಬಕ್ಕೆ ಕೊಡಲು ಆರಂಭವಾಯಿತು. ಮನೆಮನೆ ಗಡಿಯ ಊರೂರು ಗಡಿಯ ಅಪ್ಪಾಜಿಯನ್ನು ಸ್ತೋತ್ರಮಾಡಲು ಆರಂಭವಾಯಿತು.

ಇಷ್ಟೇ ಅಲ್ಲ, ಕ್ಲುಪ್ತವಾಗಿ ಒಂದುದಿವಸವೂ ಬಿಡದೆ ಸೀತಮ್ಮನು ತುಳಸೀ ಪೂಜೆಗೆ ಹೋಗಿಬರುತಾ ಇದ್ದದು ಸರಿಯಷ್ಟೆ ಹೀಗೆಯೇ ತಪ್ಪದೆ ಪ್ರತಿದಿನವೂ ಹೊಳೆಗೆ ಹೋಗಿ ಸೀನೀರನ್ನು ತೆಗೆದುಕೊಂಡು ಬರುತ್ತಾ ಇದ್ದಳು. ಈ ಎರಡು ಕೆಲಸಕ್ಕೆ ವಿನಾ ಮತ್ತೆ ಯಾತಕ್ಕೂ ಸೀತೆಯು ಹೊರಕ್ಕೆ ಹೋಗುತ್ತಿರಲಿಲ್ಲ ಹೀಗಿರಲಾಗಿ, ತುಳಸೀ ಕಟ್ಟೆಗೆ ಇವಳು ಪ್ರದಕ್ಷಿಣೆ ನಮಸ್ಕಾರ ಮಾಡವಕಡೆ ಹರಳೆಲೆಯಲ್ಲಿ ಕಟ್ಟಿದ ಹುಬ್ಬಿನ ಪಟ್ಟಣಗಳು, ಗಂಧದಬಿಲ್ಲೆ ಹಾಕಿತುಂಬಿದ ಡಬ್ಬಿಗಳು, ಪುಣುಗು, ಜವಾಬಿ, ಕುಂಕುಮ ಕೇಸರಿ, ಪಚ್ಚಕರ್ಪೂರ ಮೊದಲಾದ ವಾಸನಾದ್ರವ್ಯಗಳನ್ನು ಹಾಕಿದ ಭರಣಿಗಳು, ಮಲ್ಲಿಗೆ ಸಂಪಗೆ ಇರವಂತಿಗೆ ಪಾದ್ರಿ ಈ ಹೂವುಗಳನ್ನು ಹಾಕಿ ಮಧ್ಯೆ ಮಧ್ಯೆ ಪಚೇತನೆಯನ್ನು ಸೇರಿಸಿ ಕಟ್ಟಿದ್ದ ಹುಬ್ಬಿನ ಕುಚ್ಚುಗಳು, ರಾಜಾ ರೂಪಾಯಿಗಳು, ಕಂಠಿರಾಯ ವರಹಾಗಳೂ ಇವೆಲ್ಲಾ ಬಂದು ಬೀಳುವುದಕ್ಕೆ ಆರಂಭವಾಯಿತು. ಅವುಗಳೆಲ್ಲವನ್ನೂ ಸೀತಮ್ಮನು ವಿಷದಂತೆ ಕಾಣುತಿದ್ದಳು.

ಇವಳ ಚಿತ್ತ ಚಂಚಲವಾಗಲಿಲ್ಲ ಒಂದುದಿವಸಕ್ಕೆ ಒಂದುದಿವಸ ಹೆಚ್ಚುತ್ತಾ ಇದ್ದ ಅಮ್ಮನಗುಡಿಯ ಅಣ್ಣಾವಟ್ಟೆಗಾರರ ಅಟೋಪಗಳನ್ನೂ ಬೇಕೆಂದು ಅವರು ಗಟ್ಟಿಯಾಗಿ ತನ್ನ ಕಿವಿಗೆ ಕೇಳಲೆಂದು ಆಡಿಕೊಳ್ಳುತಿದ್ದ ಮಾತಿನ ಭಾವವನ್ನೂ ಕಂಡು ಊಹಿಸಿ ಅದರ ಅರ್ಥವನ್ನೆಲ್ಲಾ ತಿಳಿದುಕೊಳ್ಳುತ್ತಾ ಇದ್ದ ಸೀತಮ್ಮನ ಮನಸ್ಸು ಕೇವಲ ದೃಢವಾಗಿತ್ತು.

ಇನ್ನೊಂದು ಹೆಜ್ಜೆ ಮುಂದಕ್ಕೆ ಹೋಯಿತು. ಅರುಂದಮ್ಮನ ಬೃಂದಾವನಕ್ಕೆ ೪-೫ ಮಾರು ದೂರದಲ್ಲಿ ಒಂದು ಅಶ್ವತ್ಥಕಟ್ಟೆ ಇತ್ತು. ದಿನವೂ ಆ ಅರಳೀಮರಕ್ಕೆ ತಾನು ಪೂಜೆಯನ್ನು ಮಾಡಿ ಪ್ರದಕ್ಷಿಣೆ ಮಾಡುವ ಏರ್ಪಾಡನ್ನು ಅಪ್ಪಾಜಿ ಹೂಡಿದನು. ಈ ಅಶ್ವತ್ಥಪ್ರದಕ್ಷಿಣೇ ಕಾಲದಲ್ಲಿ ಬೇಕಾದ ತನ್ನ ಡಂಭವನ್ನೆಲ್ಲಾ ತೋರಿಸುತ್ತಾ ಬಂದನು. ಸೀತಮ್ಮ ತುಳಸೀ ಪೂಜೆಗೆ ಹೋಗುವ ಹೊತ್ತನ್ನು ನೋಡಿಕೊಂಡಿದ್ದು ಆಗ ತಾನೂ ಅರಳೀ ಕಟ್ಟೆಗೆ ಹೋಗುತಾ ವಿಶೇಷವಾದ ಪರುಠವಣೆಯಿಂದ ತಾನೂ ಒಬ್ಬನೇ ಇದ್ದು ಮರಕ್ಕೆ ಪೂಜೆಮಾಡುತಾ ಅವಳು ಬೃಂದಾವನದ ಬಳಿ ಬರುವತನಕ ತಾನೂ ಇರುತಾ ಬಂದನು. ಆ ಕಾಲದಲ್ಲಿ ಈ ಅಪ್ಪಾಜಿ ಎನ್ನಿಸಿಕೊಂಡಿದ್ದ ಸಿದ್ದನು ಸೀತನಕಡೆ ನೋಡಿ ನೋಡಿ ಬೇಕೆಂದು ನಗುತ ಬಂದನು. ಇದನ್ನು ಸೀತೆ ಲಕ್ಷ್ಯ ಮಾಡಲಿಲ್ಲ, ಪೂಜೆಗೆ ಹುವ್ವನ್ನು ಹಿಡಿಯಿರಿ, ದೇವರ ನಿವೇದನಕ್ಕೆ ಹಂಣನ್ನು ಹಿಡಿಯಿರಿ ಎಂದು ನೆವ ನೆವದಲ್ಲಿ ಮಾತನಾಡಿಸಿಕೊಂಡು ಬರುತಾ ಸಮೀಪವಾಗಿ ಬರುವುದಕ್ಕೆ ಆರಂಭಿಸಿದನು. ಸೀತೆಯು ಆ ಕಡೆಯೇ ತಿರುಗಿನೋಡದೆ ತನ್ನ ಪೂಜೆಯನ್ನು ಜಾಗ್ರತೆಯಾಗಿ ತೀರಿಸಿಕೊಂಡು ಮುಖವನ್ನು ಗಂಟುಹಾಕಿಕೊಳ್ಳುತಾ ಜಾಗ್ರತೆಯಿಂದ ಹೊರಟು ಹೋಗುತಿದ್ದಳು. ಹೀಗೆ ಈ ನೀಚನ ಬಾಧೆ ಬಲವಾಗುತ್ತಾ ಬಂತು. ಇದನ್ನು ಇತರರಲ್ಲಿ ಹೇಳಿದರೂ ಕಷ್ಟ ಹೇಳದಿದ್ದರೂ ಕಷ್ಟ ಪ್ರತಿದಿನವೂ ಅನುಭವಿಸುವುದು ಮತ್ತೂ ಕಷ್ಟ ಹೀಗೆ ಆಗುತಾಬಂತು. ಸೀತಮ್ಮನ ಮನಸ್ಸು ಬಹು ಖಚಿತವಾಗಿಯೇ ಇತ್ತು. ಸಾಯಂಕಾಲದ ಹೊತ್ತಿನಲ್ಲಿ ಮೈಸೂರಿಂದ ತರಿಸಿದ ಉತ್ತಮವಾದ ಹೂವು ಎಲೇಪಟ್ಟಣದಲ್ಲಿ ಕಟ್ಟಿ ಅಮ್ಮನಗುಡಿಯ ಪ್ರಸಾದವೆಂದು ಜೋಯಿಸರ ಮನೆಗೆ ಬರಲು ಆರಂಭವಾಯಿತು. ಪ್ರತಿನಿತ್ಯವೂ ದೇವಸ್ಥಾನಕ್ಕೆ ತಿಮ್ಮಮ್ಮ ಹೋಗುವುದೂ ಅಥವಾ ಎಂದಾದರೂ ತಪ್ಪಿದರೆ ಈಕೆ ಹೋಗುವ ತನಕ ಆಳಮೇಲೆ ಆಳುಬಂದು ಕುಕ್ಕಿ ಕರೆದುಕೊಂಡು ಹೋಗುವುದೂ ವಾಡಿಕೆಗೆ ಬಂತು. ಈಕೆಗೆ ಗುಡಿಯಲ್ಲಿ ಹೆಚ್ಚಿನ ಮರ್ಯ್ಯಾದೆ ನಡೆಯುತ್ತಿದ್ದುದೂ ಅಲ್ಲದೆ ಬಾಳೇಹಂಣಿನ ರಸಾಯನವೇನು ಬಗೆಬಗೇ ಹಂಣುಗಳು ತುಂಬಿದ ತಟ್ಟೆಗಳೇನು, ಬಾದಾಮಿ ಕಲ್ಲುಸಕ್ಕರೆ ದ್ರಾಕ್ಷಿ ಖರ್ಜೂರ ಇವುಗಳನ್ನು ತುಂಬಿದ ತಟ್ಟೆಗಳೇನು, ಶುಕ್ರವಾರದ ದಿವಸ ಒಳ್ಳೆ ಕಲಾಬತ್ತು ಕುಪ್ಪಸವೇನು ಇವುಗಳನ್ನೆಲ್ಲಾ ಆಳುಗಳ ತಲೆಯಮೇಲೆ ಹೊರಸಿ ಆಕೇ ಸಂಗಡ ಕಳುಹಿಸುತಿದ್ದರು. ಬರಗೆಟ್ಟ ಮುತ್ತೈದೆ ಚೌಲಪಂಕ್ತಿಗೆ ಕೂತಹಾಗೆ ಇದೆಲ್ಲವನ್ನೂ ಕಂಡು ತಿಮ್ಮಮ್ಮನಿಗೆ ಒಮ್ಮೈ ಇಮ್ಮೈ ಆಗುತ್ತಾ ಬಂತು. ಒಂದು ದಿನ ರಾತ್ರೆ ಗುಡಿಯಿಂದ ಮಂಗಳಾರತಿಯನ್ನು ತೀರಿಸಿಕೊಂಡು ಮನೆಗೆ ಹೊರಟು ಬರುವಾಗ್ಗೆ ತಿಮ್ಮಮ್ಮನು - ಅಪ್ಪಾಜಿ, ನೀನು ಮಹಾರಾಯ; ದೇವತೆ ನಿನಗೆ ಒಲಿದಿರುವಹಾಗೆ ಯಾರಿಗೂ ಒಲಿದಿಲ್ಲ, ಪೂಜಾರಿಗಳು ಎಷ್ಟೋ ಜನ ಬಂದರು. ಹೀಗೆ ಸೇವೆ ನಡೆದದ್ದು ಎಂದಿಗೂ ಇಲ್ಲ ದೊರೆಮಾರರುಗಳಿಗೂ ಹೀಗೆ ನಡೆಯಲಾರದು. ಹಿಂದಿನ ಜನ್ಮದಲ್ಲಿ ಪೂಜೆ ಮಾಡಿದ್ದೆ ಈಗ ಅನುಭವಿಸುತೀಯೆ, ಈ ಜನ್ಮದಲ್ಲಿ ಬೇಕಾದ ಹಾಗೆ ಪೂಜೆ ಮಾಡುತೀಯ ಮಹಾರಾಯ, ಮುಂದಿನ ಜನ್ಮಕ್ಕೂ ಒಳ್ಳೇ ಪದವಿ ಅನುಭವಿಸುತೀಯೆ, ಎಂದು ಹೊಗಳಿದಳು. ಆಗ ಅಪ್ಪಾಜಿಯು -

ತಾಯಿ, ತಮ್ಮ ಆಶೀರ್ವಾದದಿಂದ ಎಲ್ಲಾ ಸೇವೆಯನ್ನೂ ನಾನು ಮಾಡುವ ಶಕ್ತಿ ಉಂಟಾಗಿದೆ. ಅದು ಸರಿ ತಾಯಿ - ಈ ಊರವರೇ ಅಲ್ಲದೆ ಇನ್ನೂ ಸೀಮೆ ಸೀಮೆಯವರೆಲ್ಲಾ ಗುಡಿಗೆ ಬಂದು ದೇವರದರ್ಶನ ಮಾಡಿ ಪ್ರಸಾದವನ್ನು ತೆಗೆದುಕೊಂಡು ಹೋಗುತ್ತಾರೆ. ನಮ್ಮ ಚಿಕ್ಕ ಶಾಸ್ತ್ರಿಗಳ ಕುಟುಂಬ ಮಾತ್ರ ಯಾವತ್ತೂ ಗುಡಿಗೆ ಬರಲಿಲ್ಲವಲ್ಲಾ ದೇವರದರ್ಶನಕ್ಕೆ ಒಂದು ದಿವಸ ಅವರನ್ನೂ ಕಳುಹಿಸಬೇಕು ಅಮ್ಮಯ್ಯ, ಮೈಸೂರಲ್ಲಿ ಅವರು ಎಷ್ಟೋ ನೋಡಿದವರು, ಇದೇನು ಲಕ್ಷ್ಯವಿಲ್ಲ ಎಂದು ನಿಂತುಕೊಂಡು ಕೈಮುಗಿದನು. ಆಗ ತಿಮ್ಮಮ್ಮನು - ಒಳ್ಳೇದಪ್ಪ ಅವಳನ್ನೂ ಕಳುಹಿಸುತ್ತೇನೆ; ನೀನು ಕರೆಯುವುದು ಹೆಚ್ಚೇ ಅವಳು ಬರುವುದು ಹೆಚ್ಚೋ! ಏನೋ ಈಗಿನ ಕಾಲದವರು, ನಾನು ಏನ ಹೇಳಲಿ, ನನ್ನ ಮಾತು ಯಾವುದು ನಡೆಯುತ್ತೆ ಅಪ್ಪಾಜಿ? ಚಿಂತೆ ಇಲ್ಲ ಅವಳನ್ನೂ ಕಳುಹಿಸುತೇನಪ್ಪ ಎಂದು ಹೊರಟುಹೋದಳು. ತಿಮ್ಮಮ್ಮನು ಸೊಸೆಯನ್ನು ಈಗಿನ ಕಾಲದವರು' ಎಂದು ಹೇಳಿದ ಮಾತಿಗೆ ಅಪಾರ್ಥವನ್ನು ಕಲ್ಪಿಸಿಕೊಂಡು ವಿಶೇಷವಾಗಿ ಕಳವಳವನ್ನು ಹೊಂದಿ ತನ್ನ ಬಯಕೆ ಕೈಗೂಡುವದಿವಸ ಸಮೀಪಿಸಿತೆಂದು ಅಪ್ಪಾಜಿಯು ಯೋಚಿಸಿಕೊಂಡನು. ಅತ್ತ ತಿಮ್ಮಮ್ಮನು ಮನೆಗೆಹೋದ ತರುವಾಯ - ಎಲೆ ಸೀತೆ, ನೀನು ಯಾಕೇ ಅಮ್ಮನ ಗುಡಿಗೆ ಯಾವೊತ್ತೂ ಹೋಗುವುದೇ ಇಲ್ಲ? ಅಪ್ಪಾಜಿ ಎಷ್ಟೋ ಪೇಚಾಡಿಕೊಂಡ; ಮುತ್ತಿನ ಹಾಗೆ ಎಲ್ಲರಹಾಗೆ ತಾನೂಹೋಗಿ, ಬರುವವರಿಲ್ಲವೆ? ಎಷ್ಟೋ ಚೆನ್ನಾಗಿ ಅಮ್ಮನಿಗೆ ಅಲಂಕಾರ ಮಾಡುತ್ತಾರೆ, ನೋಡಿದರೆ ಈ ಕಂಣ ಪಾಪವೆಲ್ಲಾ ಪರಿಹಾರವಾಗುತ್ತೆ; ಹೋಗಿ ದೇವರ ನೋಡಿಕೊಂಡು ಬೇಕಬೇಕಾದ ಹಾಗೆ ಅವರು ಕೊಡುವ ಪ್ರಸಾದವನ್ನೆಲ್ಲಾ ತೆಗೆದುಕೊಂಡು ಮನೆಗೆ ಬಂದರೆ ನಿನಗೇನು ಪಾಪಬರುತ್ತೆಯೇ? ಎಲ್ಲರೂ ಹೋಗುವಾಗ ನಿನ್ನದೇನು ಶ್ರೇಷ್ಠ? ಅಮ್ಮಮ್ಮ ಮಹಾ ಚಿತ್ತರಿಬಿತ್ತರಿ, ಅವಳೇನು ಸಾಮಾನ್ಯಳೆ? ಹೋಗು ನಡೆ, ಕರೆಯುವುದಕ್ಕೆ ಬಂದು ಕಾದಿದಾರೆ, ಎರಡುಪಂಜು ತಂದಿದಾರೆ ಹೊರಡು, ಮಹಾರಾಯ ಅಪ್ಪಾಜಿಯಂಥಾ ಮನುಷ್ಯ ಉಂಟೆ? ಹೀಗೆಂದಳು. ಆಗ ಸೀತಮ್ಮನು - ಎಷ್ಟು ಬಲವಂತ ಮಾಡಿದರೂ ನಾನು ಆ ಗುಡಿಗೆ ಹೋಗುವುದಿಲ್ಲ ಎಂದು ಖಂಡಿತವಾಗಿ ಹೇಳಿದಳು. ಇದು ಅಪ್ಪಾಜಿಗೆ ತಿಳಿದ ಕೂಡಲೆ ತಾನು ಇಷ್ಟು ವೆಚ್ಚಮಾಡಿ ನಡೆಸಿದ ಪ್ರಯತ್ನ ಸಾಗಲಿಲ್ಲವಲ್ಲಾ ಎಂದು ಅವನು ಅರೆವಾಸಿ ಕುಗ್ಗಿ ಹೋದನು.

ತರುವಾಯ ಒಂದಾನೊಂದು ದ್ವಾದಶಿಯದಿವಸ ಅಡಿಗೆ ಮೊದಲಾದ ಕೆಲಸವೆಲ್ಲಾ ತೀರಿತು. ಸೂರ್ಯೋದಯದ ಸಮಯಕ್ಕೆ ಸರಿಯಾಗಿ ಗಂಡಸರಿಗೆಲ್ಲಾ ಪಾರಣೆಯಾಯಿತು. ಅರಳೀಕಟ್ಟೆಗೆ ಆ ನೀಚ ಬರುವುದಕ್ಕೆ ಮುಂಚೆಯೇ ತುಳಸೀ ಪೂಜೆಯನ್ನು ಜಾಗ್ರತೆಯಿಂದ ತೀರಿಸಿಕೊಂಡು ಬಂದು ಪಾರಣೆ ಮಾಡೋಣವೆಂದು ಸೀತಮ್ಮನು ವೃಂದಾವನದ ಬಳಿಗೆ ಹೋಗಿ ಪೂಜೆಯನ್ನು ಮಾಡುತಿದ್ದಳು. ಇದನ್ನು ತಿಳಿದುಕೊಂಡು ಅಪ್ಪಾಜಿಯು ಅತಿವೇಗವಾಗಿ ಅರಳೀಮರದ ಪೂಜೆಗೆ ಬಂದು ಒಂದು ಹಿಡಿ ಹೂವನ್ನು ಮರಕ್ಕೆ ಎರಚಿ, ತುಳಸೀಕಟ್ಟೆಯಲ್ಲಿದ್ದ ಸೊಡರಿನ ದೀಪದಿಂದ ಮಂಗಳಾರತಿಗೆ ಕರ್ಪೂರ ಹತ್ತಿಸಿಕೊಂಡು ಹೋಗುತ್ತೇನೆಂಬ ನೆವದಿಂದ ಅಲ್ಲಿಗೆ ಬಂದನು. ಸುತ್ತಲೂ ಆಳಮೇಲೆ ಎತ್ತುಕೈವರೆಗೆ ಕಬ್ಬಿಬೇಲಿ ಇತ್ತು. ಗುಡೀಕೈಸಾಲೆ ಕಡೆಗೆ ಮಾತ್ರ ಕಾಣುತಿದ್ದಾಗ್ಯೂ ಆಗ ಗುಡಿಯಲ್ಲಿ ಯಾರೂ ಇಲ್ಲದಹಾಗೆ ಮೊದಲೇ ಏರ್ಪಾಡಾಗಿತ್ತು. ಜನರು ಯಾರೂ ಈಚೆಗೆ ಬರುವಮಟ್ಟಿಗೆ ಹೊತ್ತು ಆಗಿರಲಿಲ್ಲ ಮತ್ತು ಆ ದಿವಸ ಮಂಜು ವಿಶೇಷವಾಗಿ ಕವಿದುಕೊಂಡಿತ್ತು. ಅದು ಕಾಮಾಂಧರ

ಕಂಣಿನ ಮಂಜೋ, ನೀಚನ ಸಿರಿ ಹತ್ತಿ ಉರಿಯುವುದಕ್ಕೆ ಮುಂಚೆ ಆಡುವ ಹೊಗೆಯ ಮಂಜೋ, ದುಷ್ಕಾರದ ಕಪ್ಪಿನ ಮಂಜೋ, ಮಹಾಪತಿವ್ರತೆಯ ಆಗ್ರಹ ಶಿಖಿಯಿಂದ ಹೊರಡುವ ಹೊಗೆಯ ಮಂಜೋ, ದೇವಬ್ರಾಹ್ಮಣರ ಸೇವೆಯಲ್ಲಿ ಮಾಡಿದ ಸತ್ಕಾರವೆಲ್ಲಾ ಹತ್ತಿ ಉರಿದು ಬೂದಿಯಾಗಲು ಸಜ್ಜನರ ನಿಟ್ಟುಸಿರ ಗಾಳಿಯಿಂದ ಮೇಲಕ್ಕೆ ಎದ್ದು ಕವಿಚಿಕೊಂಡು ಬೂದಿಯ ಮಂಜೋ ಹೇಳಲು ಸಾಧ್ಯವಿಲ್ಲವಾಗಿತ್ತು. ಮುಂದಿನ ಕಥೆಯನ್ನು ಏನೆಂದು ಹೇಳಲಿ? ಬಾಯಲ್ಲಿ ಹೇಳುವರೆ ನಾಲಗೆ ತೊದಲಿ ಹೋಗುತ್ತೆ; ಕೈಯಲ್ಲಿ ಬರೆಯುವರೆ ಲೇಕಣಿ ಜಾರಿ ಬಿದ್ದುಹೋಗುತ್ತೆ. ಆ ಕಾಲದಲ್ಲಿ ದೇವರ ಮಂಗಳಾರತಿಗೆ ಕರ್ಪೂರವನ್ನು ಹತ್ತಿಸಿಕೊಂಡು ಹೋಗಬೇಕೆಂಬ ನೆವದಿಂದ ತುಳಸೀಕಟ್ಟೆಯ ಬಳಿಗೆ ಆತುರನಾಗಿ ಬಂದ ಆ ಸಿದ್ದನು ನವೀನ ರಾವಣನೋ ಕಲಿಯುಗದ ಕಾಲ ನೇಮಿಯೋ ಎನ್ನುವಹಾಗೆ ಕಾಣಿಸುತಾ, ತುಳಸಿಗೆ ನಮಸ್ಕಾರ ಮಾಡಿ ಜಾಗ್ರತೆಯಾಗಿ ಮೇಲಕ್ಕೆ ಏಳುತಾ ಇದ್ದ ಸೀತಮ್ಮನ ಸಮೀಪದಲ್ಲಿ ನಿಂತು ಅವಳು ಮೇಲಕ್ಕೆ ಏಳುವ ಸಮಯದಲ್ಲಿ ಅವಳ ಸೀರೆಯ ನೆರಿಯನ್ನೂ ಸೆರಗನ್ನೂ ಹಿಡಿದು ಎಳೆಯುತಾ ಸೀತಮ್ಮನ ಮುಖವನ್ನು ನೋಡುತಾ - ನೀನು ನನ್ನಭಾಗದ ಲಕ್ಷ್ಮಿಯಾಗಿದ್ದೀಯೆ, ಬಹು ದಿವಸದಿಂದ ನಿನ್ನ ದಯಕ್ಕೆ ಪಾತ್ರನಾಗಬೇಕೆಂದು ಬಹಳವಾಗಿ ಶ್ರಮಪಟ್ಟೆ ನಿನ್ನರೂಪಿಗೆ ಆ ಬಡಹೈದನೆ? ನಿನ್ನನ್ನು ನೋಡಿ ದೊರೇ ಹೆಂಡಿರುಕೂಡ ಅಸೂಯಪಡುವ ಸ್ಥಿತಿಯಲ್ಲಿ ನಿನ್ನನ್ನು ಇರಿಸುತ್ತೇನೆ ಎಂದು ಆ ಮಹಾಪತಿವ್ರತೆಯನ್ನು ತಬ್ಬಿಕೊಳ್ಳುವುದಕ್ಕೆ ಕೈಯನ್ನು ಚಾಚಿದನು. ಸೀತಮ್ಮನು ಬಿಗಿಯಾಗಿ ಡಾಬನ್ನು ಹಾಕಿದ್ದ ಕಾರಣ ಸೀರೆ ಬಿಚ್ಚಿಹೋಗಲಿಲ್ಲ. ಆಗ ಸೀತಮ್ಮನು ವಿಶೇಷವಾಗಿ ರೌದ್ರಾಕಾರವನ್ನು ತಾಳಿ ಅತ್ಯಾಗ್ರಹದಿಂದ - ಎಲಾಖಳ, ನೀಚ, ಚಂಡಾಲ, ನನ್ನ ಮೈಯನ್ನು ಮುಟ್ಟೀಯೆ, ಇಲ್ಲಿಯೇ ನಿನ್ನನ್ನು ಕೊಂದು ಹೆಣವನ್ನು ನಾಯಿಗೆ ಹಾಕಿ ಮನೆಗೆ ಹೋಗುವಶಕ್ತಿ ನನಗೆ ಇದೆ. ಜೋಕೆ ದೂರದಲ್ಲಿರು, ಇಂದಿಗೆ ನಿನ್ನ ಹಣೇಬರಹ ತೊಡೆದುಹೋಯಿತು; ನಿನ್ನ ಭಾಗಕ್ಕೆ ನಾನೇ ಮೃತ್ಯುದೇವತೆ ಎಂದು ತಿಳಿ, ಎಂದು ಗಟ್ಟಿಯಾಗಿ ಕೂಗುತ್ತಾ ತನ್ನ ಕೈಲಿದ್ದ ತಂಬಿಗೆ ನೀರನ್ನು ಅವನ ಮೇಲೆ ಸುರಿದು ತನ್ನ ತಟ್ಟೆಯನ್ನು ಕೆಳಗೆ ಇರಿಸಿ ಸಮೀಪದಲ್ಲಿ ಬಿದ್ದಿದ್ದ ತೆಂಗಿನಕಾಯಿ ತೋರದ ಕಲ್ಲನ್ನು ತೆಗೆದುಕೊಂಡು ಉಳ್ಳಂಬಿಸಿರಿಗೂ ಅವನ ಎದೆಯ ಮೇಲೆ ಎಸೆದಳು, ಆ ಕಲ್ಲು ಆ ಖಳನ ಎದೆಗೆ ತಗಲಿತು. ಅವನು ಅಲ್ಲಿಯೇ ಸೊಕ್ಕಿ ಕೆಳಕ್ಕೆ ಬಿದ್ದನು; ಮೇಲಕ್ಕೆ ಏಳಲಾರದೆ, ಹಾ! ಅಯ್ಯೋ! ಸತ್ತೆ' ಎಂದು ಅರಚಿಕೊಳ್ಳುತಾ - ಎಲೇ ಇರಲಿ, ನನ್ನನ್ನು ಹೊಡೆಯುತೀಯ? ಎಂದಿಗಾದರೂ ನಿನ್ನನ್ನು ವಶಮಾಡಿಕೊಳ್ಳುತ್ತೇನೆ. ನೀನು ಹೆಣವಾದ ಮೇಲಾದರೂ ನಿನ್ನ ಸಂಗವನ್ನು ಮಾಡುತ್ತೇನೆ, ಈಗ ನಿನ್ನನ್ನು ಹಿಡಿದು ಜೈಸುವುದೇನೂ ಕಷ್ಟವಲ್ಲ, ಆದರೆ ನನ್ನ ಸಾಮರ್ಥ್ಯವನ್ನು ಮುಂದಕ್ಕೆ ನಿನಗೆ ತೋರಿಸಿ ನನ್ನ ಹಠ ಗೆದ್ದುಕೋತೇನೆ, ಎಂದು ಅರಚಿಕೊಳ್ಳುತಿರುವಾಗ, ಸೀತಮ್ಮನು ತನ್ನ ತಟ್ಟೆ ಬಟ್ಟಲುಗಳನ್ನು ತೆಗೆದುಕೊಂಡು ಹೊರಟಳು. ಪುನಃ ಚೇತರಿಸಿಕೊಂಡು ಸಿದ್ದ ಏಳುವಷ್ಟರಲ್ಲಿ ಮಗ್ಗಲಮನೇ ಸುಬಕ್ಕ ಪಾರಣೆಮಾಡಿ ಎಂಜಲೆಲೆಯನ್ನು ಆಚೆಗೆ ಬಿಸಾಡಲು ತಮ್ಮ ಮನೆಯ ಹಿತ್ತಲಬಾಗಿಲನ್ನು ತೆಗೆದಳು. ಅದು ತಿರುಗುಣಿ ಕದವಾದ್ದರಿಂದ ಕಿತ್ರನೆ ಸದ್ದಾಯಿತು. ಅದನ್ನು ಕೇಳಿದಕೂಡಲೆ ಸಿದ್ದನು ತಬ್ಬರಿ ಸಾಡಿಕೊಂಡು ಮೇಲಕ್ಕೆ ಎದ್ದು ಓಡಿ ಹೋದನು. ಸುಬ್ಬಕ್ಕನ ಕಂಣಿಗೆ ನರಕಭಾಜನನಾದ ಈ ನೀಚನು ಕಾಣಿಸಲಿಲ್ಲ ಸೀತಮ್ಮನಿಗೆ ಅತ್ಯಾಗ್ರಹದಿಂದುಂಟಾದ ವೀರಾವೇಶ ಇಳಿಯಲಿಲ್ಲ. ಹತ್ತಾಳಿಗೆ ಇರುವಶಕ್ತಿ

ಆಗ ಅವಳಿಗೆ ಬಂದಹಾಗೆ ಕಾಣಿಸಿತು. ತಲೆ ಕೂದಲೆಲ್ಲಾ ಕೆದರಿ ಹೋಯಿತು, ಮುಖವೂ ಕಂಡೂ ಕೆಂಡದಹಾಗೆ ಕೆಂಪಾದವು. ಯಾವಾಗಲೂ ಮೆಲ್ಲಗೆ ನಡೆಯುವ ಈ ಹೆಂಗಸು ಕಾಲಿಟ್ಟರೆ ಭೂಮಿ ನಡುಗಿ ಹೋಗುತ್ತೋ ಎನ್ನುವಹಾಗೆ ಹೆಜ್ಜೆಯನ್ನು ಹಾಕುತಾ ಬಿರ್ರನೆ ಮನೆಕಡೆಗೆ ಹೊರಟಳು. ಆಗ ಸುಬ್ಬಕ್ಕನು ಇವಳನ್ನು ನೋಡಿ ಇದೇನು ಹೀಗಿದಾಳೆಂದು ಯೋಚಿಸಿ ಪಾರಣೆಯಾಯಿತೆ ಸೀತಮ್ಮ ಎಂದು ಕೇಳಿದ್ದಕ್ಕೆ ಸೀತಮ್ಮನು ಏನೋ ಉತ್ತರ ಹೇಳಿದಳು. ಕೈಕಾಲು ನಡುಗುತ್ತಾ ತುಟಿ ಬಾಯಿಗಳು ಅದುರುತಾ ಅವಳು ಆಡಿದ ಮಾತು ಬಾಯಿಯಿಂದ ಈಚೆಗೆ ಹೊರಡಲೇ ಇಲ್ಲ, ಸೀತೆಯು ಮನೆಗೆ ಹೋಗಿ ಸುಮ್ಮನೆ ಅಡಿಗೆ ಮನೆಯಲ್ಲಿ ಕೂತುಕೊಂಡಳು. ಊಟವನ್ನು ಮಾಡು, ಯಾಕೋ ಮುಖ ಈ ದಿವಸ ಕೆದರಿಕೊಂಡಿದೆ ಎಂದು ಅಜ್ಜಮ್ಮ ಹೇಳಿದರೂ ಅವಳೊಡನೆ ಮಾತನಾಡದೆ ಕೊನೆಗೆ ಎಂಜಲುಪವಾಸ ಮಾಡಿ ಎದ್ದಳು. ತರುವಾಯ ಯಾವ ಕೆಲಸಾ ಮಾಡುವುದಕ್ಕೂ ಮನಸ್ಸು ಬಾರದು; ನಡೆದ ವಿಪತ್ಯಾಸವನ್ನು ಯಾರ ಸಂಗಡ ಹೇಳಬೇಕು? ಅಜ್ಜಿಗೆ ಹೇಳಿಕೊಂಡರೆ ಅವಳ ಕೈಯಲ್ಲಿ ಏನಾದೀತು? ಏನೂ ಇಲ್ಲದೆ ಉರಿದುರಿದು ಬೀಳುವ ಅತ್ತೆಗೆ ಹೇಳಿಕೊಂಡರೆ ಕೊಳ್ಳಿ ತೆಗೆದುಕೊಂಡು ತಲೇತುರಿಸಿಕೊಂಡಹಾಗೆ ಆಗಲಾರದೆ? ಮಾವನಲ್ಲಿ ಹೇಳಿದರೆ ಮಯ್ಯಾದೆ ಮೀರುವುದಿಲ್ಲವೆ? ಗಂಡನಲ್ಲಿ ಹೇಳಿದರೆ ಮತ್ತೆ ಯಾವ ಪ್ರಮಾದವೂ ಉಂಟಾಗಲಾರದೆ? ಯಾರಸಂಗಡ ತಾನೇ ಆಯಿತು, ಈ ಸಂಗತಿಯನ್ನು ಹೇಳಿಕೊಳ್ಳುವುದು ಹೇಗೆ? ಏನೆಂದು ಹೇಳಿಕೊಳ್ಳುವುದು? ನೀಚನಾದ ಪರಪುರುಷ ತಾನು ಉಟ್ಟ ಬಟ್ಟೆಯನ್ನು ಹಿಡಿದು ಸೆಳೆದಮೇಲೆ ತನ್ನ ಪಾತಿವ್ರತ್ಯಕ್ಕೆ ಭಂಗಬಂತೆ ಇಲ್ಲವೆ? ಇನ್ನು ತಾನು ಪ್ರಾಣವನ್ನು ಇರಿಸಿಕೊಂಡಿರಬೇಕೆ? ಆತ್ಮಹತ್ಯೆ ಮಾಡಿಕೊಳ್ಳು ವುದು ಉತ್ತಮವಲ್ಲವೆ? ಆತ್ಮಹತ್ಯೆ ಮಹಾಪಾತಕವಲ್ಲವೆ? ದುರ್ಮಾರ್ಗನಾದ ದುಶ್ಯಾಸನನು ದ್ರೌಪದಿಯ ಸೀರೆಯನ್ನು ಎಳೆದು ಬಿಚ್ಚಿಹಾಕಿದನಷ್ಟೇ? ಅವಳ ಪಾತಿವ್ರತ್ಯಕ್ಕೆ ಭಂಗ ಬರಲಿಲ್ಲವಷ್ಟೇ? ಆತ್ಮಹತ್ಯೆವನ್ನು ಮಾಡಿಕೊಳ್ಳಬೇಕೆಂದು ನಿಶ್ಚಯ ಮಾಡಿದರೆ ಇಷ್ಟು ಸುಂದರನಾಗಿರುವ ಗಂಡು ಮಗುವನ್ನು ಹೇಗೆ ಬಿಟ್ಟು ಹೋಗುವುದು? ತಾನು ಪ್ರಾಣವನ್ನು ಕಳೆದುಕೊಂಡರೆ "ಏನೋ ಕೆಟ್ಟಕೆಲಸವನ್ನು ಮಾಡಿದಳು, ಅದು ಹೊರಕ್ಕೆ ಬಂತು, ಪ್ರಾಣಾ ಕಳೆದುಕೊಂಡಳು ಎಂದು ಜನರು ಆಡಿಕೊಂಡಾಗ್ಯೂ ಮಾನ ಹೋಯಿತಲ್ಲವೆ? ಅಷ್ಟುದೂರ ತಾನು ದುರಾಲೋಚನೆ ಮಾಡತಕ್ಕದ್ದೂ ಪಾಪವಲ್ಲವೆ? ಸೀತಾಮ್ಮನವರನ್ನು ರಾವಣ ಕೈಯಾರ ಮುಟ್ಟಿ ಎತ್ತಿ ರಥದಮೇಲೆ ಕೂರಿಸಿಕೊಂಡು ಹೋದನಲ್ಲ? ಆದಾಗ್ಯೂ ಅವಳ ಪಾತಿವ್ರತ್ಯಕ್ಕೆ ಭಂಗ ಬರಲಿಲ್ಲವಲ್ಲ? ತುಳಸೀ ಕಟ್ಟೆಯಲ್ಲಿ ಆ ನೀಚನು ಮಾಡಿದ ಮಾನಭಂಗವನ್ನು ಯಾರು ಯಾರು ನೋಡಿದರೋ? ಅದನ್ನು ಕಂಡವರಿಗೆಲ್ಲಾ ತಾನು ಮುಖವನ್ನು ತೋರಿಸುವುದು ಹೇಗೆ?' ಈ ಪ್ರಕಾರದಲ್ಲಿ ಸೀತಮ್ಮನ ಮನಸ್ಸಿಗೆ ಬಗೆ ಬಗೆಯಾಗಿ ತೋರುತ್ತಾ ಬಂತು. ಎಂಜಲೆತ್ತಿ ಗೋಮಯವನ್ನು ಹತ್ತಿಸಿ ಪಾತ್ರೆಯನ್ನು ತೊಳೆದು ಇರಿಸುವಷ್ಟರೊಳಗಾಗಿ ಇವಳ ಮೈಗೆ ಇರಸು ಮುರಸಾಯಿತು. ವಿಶೇಷವಾಗಿ ಕೋಪವಾಗಲಿ ಭೀತಿಯಾಗಲಿ ಆನಂದವಾಗಲಿ ಹುಟ್ಟಿದರೆ ದೇಹದ ಸಹಜವಾದ ವೃತ್ತಿ ಬದಲಾಯಿಸಿ ವಿಗಡವಾಗುವುದು. ಯಾವುದು ಏನಾದರೂ ಆಗಲಿ, ಸೀತಮ್ಮನಿಗೆ ಬಂದ ಕೋಪವೇನೋ ಆ ದಿವಸವೆಲ್ಲಾ ಇಳಿಯಲೇ ಇಲ್ಲ, ಮರುದಿವಸವೂ ಮೂರನೇ ದಿವಸವೂ ಹಾಗೂ ಹೀಗೂ ಇತ್ತು. ಸೀತಮ್ಮ ಏನೋ ಒಂದು ವಿಧವಾಗಿದಾಳೆಂದು ಮನೆಯವರೆಲ್ಲರೂ ಅಂದುಕೊಳ್ಳುತ್ತಾ ಬಂದರು. ಏನಾದರೂ

ಆಗಲಿ, ತುಳಸೀ ಪೂಜೆಯನ್ನು ಮಾತ್ರ ಬಿಡಲಿಲ್ಲ. ಪುನಃ ಆ ನೀಚ ಸಮಯವನ್ನು ಸಾಧಿಸಿಕೊಂಡಿದ್ದು ಬಂದಾನೋ ಮಾನಭಂಗ ಮಾಡಿಯಾನೋ ಪ್ರಾಣವನ್ನು ತೆಗೆದಾನೋ ಎಂಬ ಭಯ ಚೆನ್ನಾಗಿ ಹುಟ್ಟಿತ್ತು. ಆದಕಾರಣ ಬೃಂದಾವನದ ಬಳಿಗೆ ಪೂಜೆಗೆ ಹೋಗುವಾಗ್ಗೆ ಸೀತೆಯು ಪಾರ್ವತಮ್ಮನನ್ನೂ ಸಂಗಡ ಕರೆದುಕೊಂಡು ಹೋಗುತಿದ್ದಳು. ಆ ಸ್ಥಳಕ್ಕೆ ಹೋದ ಕೂಡಲೆ ದ್ವಾದಶಿಯ ದಿನ ಬೆಳಗ್ಗೆ ಬಂದಿದ್ದ ರೌದ್ರಾಕಾರವು ಪುನಃ ಬಂದಂತೆ ಆಗುತಿತ್ತು. ಹೀಗೆ ತ್ರಯೋದಶಿ ಚತುರ್ದಶಿ ಕಳೆಯಿತು. ಅಮಾವಾಸ್ಯೆ ದಿನದ ಪೂಜೆಯೂ ಜರುಗಿತು. ಆಮೇಲೆ ನಡೆದ ವಿಪರೀತವನ್ನು ಏನೆಂದು ಹೇಳಲಿ?

---

## ೧೨ನೆ ಅಧ್ಯಾಯ

ಅಮಾವಾಸ್ಯೆ ದಿನ ಹಗಲು ನಿತ್ಯಗೌರಿಪೂಜೆ ತುಳಸೀಪೂಜೆ ಮೊದಲಾದದ್ದೆಲ್ಲಾ ಮುಗಿಯಿತು. ಸೀತಮನು ಅಡಿಗೆಮಾಡಿ ಬಡಿಸಿದಳು, ಗಂಡಸರು ಊಟಮಾಡುತಾ ಇದ್ದರು. ಸೀತಮ್ಮನು ನೀರಸೇದಿಕೊಂಡು ಬರಲು ಹಿತ್ತಲ ಕಡೆಗೆ ಹೋದಳು. ಅಲ್ಲಿ ಸ್ನಾನ ಮಾಡುತಾ ಇದ್ದ ವೆಂಕಮ್ಮ - ಸೀತ, ಯಾಕಮ್ಮ ಈಗ ಮೂರುದಿವಸದಿಂದ ನಿನ್ನ ಮುಖ ಕೆದರಿಕೊಂಡು ಏನೋ ಒಂದು ಬಗೆಯಾಗಿ ಕಾಣುತ್ತೆ? ಯಾರ ಸಂಗಡಲೂ ಚೆನ್ನಾಗಿ ಮಾತಕೂಡ ಆಡುವುದಿಲ್ಲ; ನೀನು ಸ್ವಸ್ಥವಾಗಿದ್ದೀಯ, ನಿನಗೆ ಏನಾಗುತ್ತೆ ಹೇಳು. ಎಷ್ಟೋ ಗೆಲುವಾಗಿತ್ತಲ್ಲ ಮುಖ. ಈಗ ಏನಾಗಿದೆಯಮ್ಮ ಎಂದು ಕೇಳಿದಳು. ಆಗ ಸೀತಮ್ಮನು ತಂಬಿಗೆಯಲ್ಲಿ ನೀರನ್ನು ಸೇದಿಕೊಂಡು ಬರುತಾ ಹಿತ್ತಲ ಬಾಗಿಲ ಹೊಸಿಲನ್ನು ದಾಟಿ ಒಳಕ್ಕೆ ಕಾಲಿಟ್ಟ ಕೂಡಲೆ ಒಳಬಾಗಿಲಲ್ಲಿ ಆ ಚೆಂಬನ್ನು ಎತ್ತಿ ಹಾಕಿಕೊಂಡು ಓ! ಎಂದು ಕೆಟ್ಟಸ್ವರದಲ್ಲಿ ಅರಚಿಕೊಳ್ಳುತಾ ತಟ್ಟನೆ ಬಿದ್ದಳು. ಆಗ ಒಳ್ಳೇ ಮಟ್ಟ ಮಧಾಹ್ನವಾಗಿತ್ತು. ಚೆಂಬೂ ಇವಳೂ ಒಟ್ಟಿಗೆ ಬಿದ್ದ ಕಾರಣ ಧಢನ ಸದ್ದಾಯಿತು. ಊಟ ಮಾಡುತ ಇದ್ದ ಗಂಡಸರು ಮೊದಲು ಎದ್ದು ಬಂದು ನೋಡಿದರು. ಸೀತಮ್ಮ. ಮುಖ ಅಡಿಯಾಗಿ ಬಿದ್ದಿದ್ದಳು. ಗಂಡ, ಮಾವ ಯಾರು ಬಂದರೂ ಏಳಲಿಲ್ಲ, ಇವರುಗಳೆದುರಿಗೆ ಮಯ್ಯಾದೆಯನ್ನು ಮೀರಿ ಅವಳು ಹಾಗೆ ಇದ್ದುದು ಅಪೂರ್ವವಾದ ಕಾರಣ, ದೀಕ್ಷಿತನು - ಅಯ್ಯೋ ಸೀತಮ್ಮ ಬಿದ್ದು ಬಿಟ್ಟಿದ್ದಾಳೆ, ಯಾರಾದರೂ ಬನ್ನಿ ಎಂದು ಗಟ್ಟಿಯಾಗಿ ಕೂಗಿದನು. ಮನೇ ಹೆಂಗಸರೆಲ್ಲಾ ಓಡಿಬಂದರು. ತಿಮ್ಮಮ್ಮನು ತನ್ನ . ವಾಡಿಕೆಯಾದ ರೀತಿಯಲ್ಲಿ - ಬೀಳುವುದಕ್ಕೆ ಇವಳಿಗೇನಂತೆ ಹೊಡೆದಮಾರಿ, ದೊಣ್ಣೆಯ ಹಾಗೆ ಇದಾಳೆ, ಏಳೇ ಸಾಕು ನಿನ್ನ ಬಿತ್ತರಿತನ, ಮನೆಯವರೆಲ್ಲಾ ಬಂದು ಉಪಚಾರ ಹೇಳಲಿ ಅಂತ; ಕಂಣ ಬಿಟ್ಟುಕೊಂಡು ಎಲ್ಲಾ ನೋಡುತಾ ಸುಮ್ಮನೇ ಬಿದ್ದಿದಾಳೆ, ಎಂದು ಮನಸ್ಸಿ ಅನ್ನಲು ಆರಂಭಿಸಿದಳು. ವೆಂಕಮ್ಮನು ಹಿಡಿದು ಮೇಲಕ್ಕೆ ಎಬ್ಬಿಸುವುದಕ್ಕೆ ಹೋದಳು; - ನಾನು ಎತ್ತಲಾರೆ ಯಾರಾದರೂ ಗಂಡಸರು ಹಿಡಿದು ಮೇಲಕ್ಕೆ ಎತ್ತಿ ಎಂದಳು. ಮಹಾದೇವನೇ ಮೇಲಕ್ಕೆ ಹಿಡಿದು ಎತ್ತಿದ; ನಿಲ್ಲಿಸುವುದಕ್ಕೂ ಆಗಲಿಲ್ಲ ಕೂರಿಸುವುದಕ್ಕೂ ಆಗಲಿಲ್ಲ,

ಜ್ಞಾನವೇ ಇರಲಿಲ್ಲ ಹಾಸಿಗೆಯನ್ನು ಹಾಸಿ ಅದರಮೇಲೆ ಮಲಗಿಸಿದರು. ಗಲಗಾಯಿತು. ರಾವು ಬಡಿದಿರಬಹುದೆಂದು ಕೆಂಪನೀರ ತೆಗೆದುಹಾಕಿದರು. ತಲೆಗೆ ನೀರ ತಟ್ಟಿದರು. ಕಿವಿಯಲ್ಲಿ ಊದಿದರು, ಬೀಸಿದರು. ಪಿತ್ತವಾಗಿರಬಹುದೆಂದು ಬೆಲ್ಲಹುಣಿಸೇಗೊಜ್ಜು ಮೊದಲಾದ್ದೆಲ್ಲವನ್ನೂ ಕೊಟ್ಟರು. ಸದಾಶಿವದೀಕ್ಷಿತನಿಗೂ ಅವರ ತಾಯಿ ಪಾರ್ವತಮ್ಮನಿಗೂ ಗೊತ್ತಾಗಿದ್ದ ಚಿಕಿತ್ಸೆಯನ್ನೆಲ್ಲಾ ಮಾಡಿದರು. ನೆರೆಹೊರೆಯವರೆಲ್ಲಾ ಬಂದು ನೋಡಿ ಒಬ್ಬೊಬ್ಬರು ಒಂದೊಂದು ಚಿಕಿತ್ಸೆಯನ್ನು ಮಾಡಿಸಿದರು. ಮಂತ್ರ ಹಾಕಿದರು. ಇಂದ್ರಾಕ್ಷಿ ಶಿವಕವಚವನ್ನು ಹೇಳಿ ವಿಭೂತಿ ಇಟ್ಟರು. ವಿಷ್ಣು ಸಹಸ್ರನಾಮ ಪಾರಾಯಣಮಾಡಿ ಮಂತ್ರಾಕ್ಷತೆ ಹಾಕಿದರು. ಲಲಿತಾಸಹಸ್ರನಾಮವನ್ನು ಮಾಡಿ ಕುಂಕುಮವನ್ನು ಇಟ್ಟರು. ಏನೇನ ಮಾಡಿದರೂ ಜ್ಞಾನ ಬರಲಿಲ್ಲ. ಬಾಯಿಗೆ ಹಾಲನ್ನು ಹಾಕಿದರು, ಕಟವಾಯಲ್ಲಿ ಸೋರಿಹೋಯಿತು. ಬಾಯನ್ನು ಬಿಡಿಸಿ ನೋಡುವಾಗ ಹಲ್ಲು ಗಿಟ್ಟಗಿರಿದು ಹೋಗಿತ್ತು. ತಿಮ್ಮಮ್ಮನು - ಅವಳಿಗೇನು ಉಪಚಾರ, ಎಲ್ಲರೂ ತನ್ನ ಸೇವೆ ಮಾಡುತಾರೆಯ ಬಿಡುತಾರೆಯೆ ನೋಡಬೇಕೆಂದು ಹಾಗೆ ಬಿದ್ದಿದಾಳೆ. ಚೆನ್ನಾಗಿ ಸವಟ ಕಾಸಿ ಬರೇ ಹಾಕಿದರೆ ತಾನೇ ಏಳುತಾಳೆ ಎಂದಳು! ಮೂಗು ಕಟ್ಟರೆಯಾಗಿರಬಹುದೆಂದು ಯೋಚಿಸಿ ಅಂಗಾಲಿಗೆ ಮಂಜೀ ಹುರಿಯನ್ನು ಬಿಟ್ಟು ಬರೆಯನ್ನು ಹಾಕಿದರು. ಬಲೇ ಚೂರಿನಲ್ಲಿ ಚಿಟಗಿ ಹಾಕಿದರು. ಯಾವುದು ಮಾಡಿದರೂ ಹಾ ಎಂದು ಕೂಡ ಅನ್ನಲಿಲ್ಲ. ಆಗ ಕೂಡ ಅತ್ತೆಯು - ಅಗ್ನಿಸ್ತಂಭ ಜಲಸ್ತಂಭವನ್ನು ಕಲಿತವಳು, ಅವಳಿಗೆ ಇದೆಲ್ಲಾ ಯಾವ ಮೂಲೆಗೋ ಎಂದು ಆಡಿದಳು. ಮಗುವಾದ ಕೃಷ್ಣಸ್ವಾಮಿಗೆ ತಾಯನ್ನು ಕಾಣದೆ, ತಾಯಿ ಸಂಗಡ ಮಾತಾಡದೆ ಹುಚ್ಚು ಹಿಡಿದಹಾಗೆ ಆಗಿತ್ತು. ಎದೆಹಾಲನ್ನು ಕುಡಿದು ಬಹಳ ಹೊತ್ತಾಗಿತ್ತು. ಆ ಮಗುವಿಗೆ ಅಮ್ಮ ಪಾಚಿ, ಬಾ, ಇವೇ ಮೊದಲಾದ ಮೂರುನಾಲ್ಕು ಮಾತುಗಳು ಬರುತಿದ್ದವು. ಮಗು ತಾಯ ಬಳಿಗೆ ಹೋಗಿ ಸ್ತನ್ಯಪಾನಮಾಡಬೇಕೆಂದು ಅಳುವುದಕ್ಕೆ ಆರಂಭಿಸಿತು. ಎಷ್ಟು ಸಮಾಧಾನಮಾಡಿದರೂ ಸುಮ್ಮನಾಗಲಿಲ್ಲ. ತಾಯಿಯ ಬಳಿಗೆ ಹೋಯಿತು. ಅವಳ ಮೇಲೆ ಬೀಳುವುದು ಮುಖವನ್ನು ತೆರೆಯುವುದು, ಸೆರಗನ್ನು ಎಳೆಯುವುದು ಹೀಗೆಲ್ಲಾ ಮಾಡಿತು. ಯಾರು ಏನ ಮಾಡಿದಾಗ್ಯೂ ಬಾಹ್ಯ ಪ್ರಪಂಚದ ಜ್ಞಾನವೇ ಸೀತಮ್ಮನಿಗೆ ಇರಲಿಲ್ಲ. ಮನೆಯಲ್ಲಿ ಯಾರಿಗೂ ಆ ರಾತ್ರಿ ನಿದ್ರೆ ಬರಲಿಲ್ಲ, ನೆರೆಮನೇ ಸುಬ್ಬಕ್ಕ ನೋಡಿ - ಏಕಾದಶಿವರೆಗೆ ಸೌಖ್ಯನಾಗಿದ್ದಳು. ದ್ವಾದಶಿ ದಿವಸ ಬೃಂದಾವನದ ಪೂಜೆ ಮಾಡಿಕೊಂಡು ಬರುತ್ತಾ ಇದ್ದಳು. ನಾನು ಹಿತ್ತಲಕಡೆ ನೋಡಿದೆ. ಮುಖವೆಲ್ಲಾ ಕೆದರಿ ಕೊಂಡಿತ್ತು. ಮಾತನಾಡಿಸಿದೆ, ತುಟಿ ಬಾಯಿ ಎಲ್ಲಾ ನಡುಗುತಾ ಏನೋ ಉತ್ತರಹೇಳಿ ಗಜಬಜಗುಟ್ಟಿದಳು. ನನಗೆ ಗೊತ್ತಾಗಲಿಲ್ಲ ಇವಳಿಗೆ ಏನೋ ಅಲಸಿಕೆಯಾಗಿದೆ ಎಂದು ಆಗಲೇ ನನಗೆ ಅನುಮಾನವಾಯಿತು. ಏನಹೇಳಲಿ ಹೀಗೆ ಮಲಗಿದಾಳಲ್ಲ ಯಾರು ನೋಡಿ ಹೊಟ್ಟೆ ಹಿಡಿಯಬಹುದು?-ಎಂದು ಪೇಚಾಡಿದಳು. ಊರಲ್ಲಿ ಎಲ್ಲರೂ ಬಂದು ಬಂದು ನೋಡಿಕೊಂಡು ಹೋದರು. ಎರಡು ದಿನವಾಯಿತು. ಮೂರು ದಿನವಾಯಿತು. ಹೀಗೆಯೇ ಹದಿನೈದು ದಿನವಾಯಿತು. ತಿಂಗಳಾಯಿತು. ಏನಾದರೂ ಮೇಲಕ್ಕೆ ಏಳಲಿಲ್ಲ ಅರೆಗಂಣು ತೆರೆದು ಮುಸುಗುಟ್ಟುತ್ತಾ ಸುಮ್ಮನೇ ಮಲಗಿದ್ದಳು. ಈ ಮಧ್ಯೆ ಆ ಮಗುವಿನ ರೋದನವನ್ನು ನೋಡಿದರೆ ಎಂಥವರಿಗೂ ಕಂಣಿನಲ್ಲಿ ನೀರು ಬರುವ ಹಾಗೆ ಇತ್ತು. ತಿಮ್ಮಮ್ಮನಿಗೆ ಸೊಸೆಯಮೇಲೆ ಅಭಿಮಾನವಿಲ್ಲದಿದ್ದರೂ ಮೊಮ್ಮಗನ ಮೇಲಿನ ಪ್ರೀತಿಯಿಂದ ಅವಳು ವ್ಯಸನ ಪಡುವುದಕ್ಕೂ ಅವರು ಇವರು ಹೇಳಿದ ಚಿಕಿತ್ಸೆಗಳನ್ನು ಆಗಾಗ್ಗೆ ಮಾಡುವುದಕ್ಕೂ ಆರಂಭಿಸಿದಳು. ಆದರೆ

ಪ್ರಯೋಜನವೇನು? ಇವಳ ಕೆಲಸವೆಲ್ಲಾ ಕೊಳ್ಳಿ ತೆಗೆದುಕೊಂಡು ತಲೆ ತುರಿಸಿಕೊಳ್ಳುವ ಕೆಲಸವೇ ಆಗಿತ್ತು. ಆಗ ತಿಮ್ಮಮ್ಮನು-ಸಾವಿರ ಔಷಧಿ ಮಾಡಿ ಪ್ರಯೋಜನವೇನು? ಅಮ್ಮನ ಗುಡಿಗೆ ಹೋಗಿ ಅಪ್ಪಾಜಿಯ ಬಾಯಲ್ಲಿ ಕಣಿ ಕೇಳಿದರೆ ಎಲ್ಲಾ ಗೊತ್ತಾಗುತ್ತೆ, ಎಂದುಕೊಂಡು ಎಲೇ ಅಡಕೆ ಕರ್ಪೂರ ಸಾಂಬ್ರಾಣಿ ತೆಂಗಿನಕಾಯಿ ಬಾಳೇಹಂಣು ಎರಡು ದುಡ್ಡು ದಕ್ಷಿಣೆ ಇದೆಲ್ಲವನ್ನೂ ತಟ್ಟೆಯಲ್ಲಿರಿಸಿ ಕೊಂಡು ಗುಡಿಗೆ ಹೋಗಿ ಸಿದ್ದನ ಮುಂದೆ ಆ ತಟ್ಟೆಯನ್ನು ಇರಿಸಿ-ಅಪ್ಪಾಜಿ, ನಮ್ಮ ಸೀತಮ್ಮ ಜ್ಞಾನಮಾನವಿಲ್ಲದೆ ಬಿದ್ದಿದಾಳಲ್ಲಾ, ಇದೇನು ಪೀಡೆಯೇ, ಪಿಶಾಚಿಯೆ, ಜನ್ಮಾಂತರದ ಕಾಟವೆ, ದೇವರ ಕಡೇದೆ, ಮನುಷ್ಯರ ಕಡೇದೆ? ಇದು ಗುಣವಾಗುತ್ತೆಯೇ ಇಲ್ಲವೆ? ಕಣೀ ಹೇಳು ಅಂದಳು. ಆಂಜನೇಯನು ಕಾಲನೇಮಿಯನ್ನು ಕುರಿತು ಸಂಜೀವನ ಪಕ್ವತಕ್ಕೆ ದಾರಿಯನ್ನು ಕೇಳಿದ ಹಾಗಾಯಿತು. ಆ ದುರ್ಮಾರ್ಗನು ಬಯಸಿದಂತೆಯೇ ಆಯಿತು. ಅವನು ಚಚ್ಚಕನಾಗಿ ಕೂತುಕೊಂಡು ಬಲಗೈಯಲ್ಲಿ ಬೆಳ್ಳಿಕಟ್ಟು ಹಾಕಿದ ತುಂಡುಬೆತ್ತವನ್ನು ಹಿಡಿದು ಅದನ್ನು ನೆಲದಮೇಲೆ ಬಡಿಯುತಾ ಎಡಗೈಯಲ್ಲಿದ್ದ ಕಬ್ಬಿಣದ ಉಂಗುರಗಳ ಹಿಡಿಯನ್ನು ಅಳ್ಳಾಡಿಸುತಾ ಮೊದಲು ದೇವರುಗಳನ್ನೂ ದೇವತೆಗಳನ್ನೂ ಆಮೇಲೆ ಮಾರಿ ಮಸಣಿಯರನ್ನೂ ಆವಾಹನೆ ಮಾಡಿ ರಾಗವಾಗಿ ಕಣಿ ಹೇಳುತಾ ನೀವು ಜೀವಚಿಂತೆಗಾಗಿ ಪ್ರಶ್ನೆ ಮಾಡಿದೀರಿ, ಇದು ರೋಗವಲ್ಲ ದೇವರ ಕಡೆಯದಲ್ಲ ಮನುಷ್ಯರ ಕಡೇದಲ್ಲ ಆಲಸಿಗೆ ಏನೂ ಇಲ್ಲ ಮನುಷ್ಯರ ಮನಸ್ಸಿನ ಅಡಿಯಾಳವನ್ನು ನೋಡುವುದಕ್ಕೆ ತನ್ನ ಕೈಯಾರ ಮಾಡಿಕೊಂಡದ್ದಾಗಿದೆ; ಇದು ಕಪಟವೇಷವೆಂದು ತಿಳಿಯಿರಿ ಎಂಬುದಾಗಿ ಹೇಳಿದನು. ಅವನ ಮಾತು ನಿಜವೆಂದು ನಂಬಿ ತಿಮ್ಮಮ್ಮನು -ಮನೆಗೆ ಬಂದು ಸೊಸೆಯನ್ನು ಮತ್ತೂ ಬಯ್ಯುವುದಕ್ಕೆ ಮೊದಲು ಮಾಡಿದಳು- ಆಗ ನೆರೆಮನೆ ಸುಬ್ಬಕ್ಕ ಬಂದು, ಸುಬ್ಬಕ್ಕ - ಯಾಕೆ ಹಾಗೆಲ್ಲಾ ಹೇಳುತೀಯ, ಪಾಪ, ಬಾಯಿಗೆ ಹೋಗುವ ನೊಣಾ ಕಾಣದೆ ಬಿದ್ದಿದಾಳೆ, ಒಂದು ದಿವಸ ಎರಡು ದಿವಸ ಸರಿ. ಹೀಗೆ ತಿಂಗಳುಗಟ್ಟಲೆ ಅನ್ನನೀರಿಲ್ಲದೆ ಬಿದ್ದಿರುವಾಗ ನಿಜವಾದ ಸ್ಥಿತಿಯನ್ನು ಅರಿಯದೆ, ಮನಸ್ಸು ಬಂದಹಾಗೆ ಆ ಹಾಳ ಅಪ್ಪಾಜಿ ಬೊಗಳಿಯಾನು, ಅವನ ನಡತೆಗೂ ಅವನ ಚಾಳೀಗೂ ಕೊಳ್ಳಿ ಬಡಿದರು.

ತಿಮ್ಮಮ್ಮ - ಹಾಗಾದರೆ ಅಪ್ಪಾಜಿಗೆ ಸುಳ್ಳಹೇಳಿ ನಮಗೆ ಮೋಸಾ ಮಾಡಬೇಕಾದ್ದೇನು?

ಸುಬಕ್ಕ - ಅವನ ಮಾತನ್ನು ನೀನು ನಂಬಬೇಡ, ಮೈಸೂರಿಗಾದರೂ ಕರೆದು ಕೊಂಡು ಹೋಗಿ ಅಲ್ಲಿ ಯಂತ್ರವೋ ಮಂತ್ರಿ ಮಾಡಿಸಿ ಔಷಧಿಯನ್ನು ಕೊಡಿಸುವುದು ಮೇಲು; ಹುತ್ತದೊಳಗೆ ಹಾವನ್ನು ಇರಿಸಿಕೊಂಡು, ದೊಂಣೆಯಿಂದ ಹುತ್ತವನ್ನು ಬಡಿದರೆ ಹಾವು ಸತ್ತೀತೆ?

ಇದರಂತೆ ಮೈಸೂರಿಗೆ ಕರೆದುಕೊಂಡು ಹೋಗಬೇಕೆಂದು ಗೊತ್ತು ಮಾಡಿದರು. ಗಾಡಿ ಬಂದು ಸಿದ್ಧವಾಯಿತು. ಗಾಡಿಯಮೇಲೆ ಮಲಗಿಸುವುದಕ್ಕಾಗಿ ಸೀತಮ್ಮನನ್ನು ಎತ್ತಿದರು. ಅವಳು ಕಿರನೆ ಕಿರುಚಿಕೊಂಡು ಎಷ್ಟು ಜನ ಹಿಡಿದರೂ ದಕ್ಕದೆ ಬಿಡಿಸಿಕೊಂಡು ತಾನು ಮೊದಲು ಮಲಗಿದ್ದ ಸ್ಥಳದಲ್ಲಿಯೇ ಪುನಃ ಬಿದ್ದು ಬಿಟ್ಟಳು. ಆ ಭೂಗ್ರಹಚೇಷ್ಟೆ ಇರಬಹುದೆಂದು ಪೂಜೆಯನ್ನು ಮೂರುಸಾರಿ ಹಾಕಿಸಿದರು. ಏನೇನೊ ಮಾಡಿದರು. ಉಪಯೋಗವಾಗಲಿಲ್ಲ. ಇದೆಲ್ಲವನ್ನೂ ನೋಡಿ ಮಹಾದೇವನಿಗೆ ಬಹಳ ಚಿಂತೆಯಾಯಿತು. ಇತರರಲ್ಲಿ

ಹೇಳಿಕೊಳ್ಳುವುದಕ್ಕೆ ನಾಚಿಕೆ, ಸುಮ್ಮನೆ ಇರುವುದಕ್ಕೆ ಮನಸ್ಸು ಸಮಾಧಾನವಿಲ್ಲ. ಹೀಗೆ ಇವನಿಗೆ ಹಗಲು ಅನ್ನಸೇರದು ರಾತ್ರಿ ನಿದ್ರೆಬಾರದು. ಹೆಂಡತಿಯ ಚಿಂತೆಯ ಕುಟ್ಟೆ ಹುಳುವಿನ ಹಾಗೆ ಕೊರೆಯುತಾ ಇತ್ತು; ಇವನು ಬಹಳ ಕಂಗೆಟ್ಟುಕೊಂಡನು, ಇದರ ಮೇಲೆ ಮಗುವಿನ ರೋದನದ ಚಿಂತೆಯಂತೂ ಯಾರಿಗೂ ಕೊನೆಮಿತಿ ಇಲ್ಲದ ಸಂಕಟವನ್ನು ಉಂಟುಮಾಡುತ್ತಿತ್ತು. ಈ ವಿಷಯವನ್ನು ಕುರಿತು ಮೈಸೂರಲ್ಲಿ ವಿಚಾರ ಮಾಡಬೇಕೆಂದು ಸದಾಶಿವದೀಕ್ಷಿತನು ಹೊರಟನು. ಮಗಳ ಸ್ಥಿತಿಯನ್ನು ಕೇಳಿ ವ್ಯಸನಪಟ್ಟು ಅವಳನ್ನು ನೋಡುವುದಕ್ಕೆ ಬಂದಿದ್ದ ಅವಳ ತಂದೆತಾಯಿಗಳೂ ಅವಳ ತಾತನಾದ ಪಶುಪತಿ ಸಾಂಬಶಾಸಿಯೂ ಸಹಾ ದೀಕ್ಷಿತನ ಸಂಗಡಲೇ ಪ್ರಯಾಣಮಾಡಿದರು.

---

## ೧೩ನೆ ಅಧ್ಯಾಯ

ಅತ್ತ ಅಪ್ಪಾಜಿಯಾದರೋ - ಉಪಾಧ್ರಿಯ ಸಂಧಾನದಿಂದ ಆಗಬೇಕೆಂದು ಇದ್ದ ಕಾರ್ಯ ಕೈಗೂಡಲಿಲ್ಲ. ತಿಮ್ಮಮ್ಮನಿಗೆ ಕೊಡುವ ಉಲುಪೆಯ ದೆಸೆಯಿಂದ ಆಗಬಹುದೆಂದು ಹುಟ್ಟಿದ್ದ ಆಶೆಯು ಭಗ್ನವಾಯಿತು. ಆದಕಾರಣ ಇದುವರೆಗೆ ಮಾಡಿದ ಸಾಹಸಗಳೂ ಅಲ್ಲದೆ ಇನ್ನೂ ಕೆಲವು ಕಾರ್ಯಗಳನ್ನು ನಿರ್ವಹಿಸುವುದಕ್ಕೆ ಹೊಸ ದಾರಿಗಳನ್ನು ಯೋಚಿಸಬೇಕಾಯಿತು. ಅದಕ್ಕೆ ಪೆದ್ದನಾದ ಕಿಟ್ಟಜೋಯಿಸನೇ ಸರಿಯಾದ ದರ್ವಿಯಾಗಿದ್ದಾನೆಂದು ಯೋಚಿಸಿದರು. ಅಪ್ಪಾಜಿ, ಉಪಾಧ್ರಿ ಮೊದಲಾದ ಆ ಗುಂಪಿನ ಜನರು ಕೃತಸಂಕೇತವಾಗಿ ಉದ್ದಿಷ್ಟವಾದ ಕಾರ್ಯಸಾಧನೆಗೋಸ್ಕರ ಕಿಟ್ಟ ಜೋಯಿಸನನ್ನು ಅನುಸರಿಸಲು ಆರಂಭಿಸಿದರು.

ಒಳಗೊಳಗೆ ನಡೆಯತಕ್ಕ ಮರ್ಮವನ್ನು ಲೇಶವೂ ಅರಿಯದ ಕಿಟ್ಟ ಜೋಯಿಸನು ಮೊದಲಿನಿಂದಲೂ ವಿಶೇಷವಾಗಿ ಅಮ್ಮನಗುಡಿಗೆ ಹೋಗುವುದು ಅಲ್ಲಿಯೇ ಹೆಚ್ಚಾದ ಕಾಲವನ್ನು ಕಳೆಯುವುದು ಅಲ್ಲಿಗೆ ಬಂದ ಭಕ್ತಾದಿಗಳು ಕೊಡುವ ದಾನಧರ್ಮಗಳಿಂದ ಬರತಕ್ಕ ಪುಡಿಕಾಸುಗಳನ್ನು ದಿನವಹಿ ಸೊಂಟಕ್ಕೆ ಸಿಕ್ಕಿಸುವುದು ಅಲ್ಲಿ ನಡೆಯತಕ್ಕ ಕುಚೋದ್ಯಗಳಿಗೆಲ್ಲಾ ವಿಷಯನಾಗಿ ಎಲ್ಲರನ್ನೂ ನಗಿಸುತಾ ತಾನೂ ಕಾಲವನ್ನು ಕಳೆಯುತ್ತಿದ್ದನು. ಒಂದು ದಿನ ಗುಡಿಯಲ್ಲಿ ಮೂರನೇ ಜಾವದ ಮೇಲೆ ಎಲ್ಲರೂ ಸೇರಿದರು. ಎಲ್ಲಾ ವಿನೋದಗಳ ಜೊತೆಗೆ ಕಿಟ್ಟ ಜೋಯಿಸನ ಸಂಗಡ ಮಾತನಾಡಿ ಅವನನ್ನು ರೇಗಿಸಿ ನಡೆಯುವ ಕುಚೋದ್ಯದ ಹಾಸ್ಯರಸದಿಂದುಂಟಾಗುವ ಆನಂದವನ್ನು ಎಲ್ಲರೂ ಅನುಭವಿಸುತ್ತಿದ್ದರು. .

ಉಪಾಧ್ರಿ - ಜೋಯಿಸ, ಪಂಚಾಗ ತಂದು ಇದ್ದೀಯ? ಈವತ್ತಿನ ದಿನಶುದ್ಧಿ ಹೇಳಯ್ಯ.

ಕಿಟ್ಟ - ಓ ಬೇಕಾದಹಾಗೆ ಹೇಳುತ್ತೇನೆ. ನನಗೇನೂ ಬಾರದು ಎಂತ ಹೇಳುತೀರೋ ಉಪಾದ್ರೆ? ಪಂಚಾಂಗ ಓದುತೇನೆ ಕೇಳಿ : ಪ್ರಮಾದ ಸಂವತ್ಸರದ ಮಾರ್ಗಶಿರ ಬಹುಳ ಪಂಚಮಿ ಶನಿವಾರ ೧೦ ಗಳಿಗೆ ೨೦ ವಿಗಳಿಗೆ ಚಿತ್ತಾ ನಕ್ಷತ್ರ ೪-೫, ಅತಿಗಂಡ ನಾಮಯೋಗ ೧-೨, ಶಕುನಿ ನಾಮಕರಣ ೫೭-೫೪, ರಾತ್ರಿ ಎಲ್ಲಾ ಕತ್ತಲೆಯಾಗಿರುವಂಥಾದ್ದು ಕೆಲವರಿಗೆ ಅನುಕೂಲ ಕೆಲವರಿಗೆ ಪ್ರತಿಕೂಲ, ತೇದಿ ೩೫.

ಉಪಾದ್ರಿ - ದಿನಶುದ್ಧಿಯ ಫಲವೇನಯ್ಯ?

ಕಿಟ್ಟ - ಓಹೋ ಹೇಳುತೇನೆ. "ಪ್ರಮಾದಸಂವತ್ಸರವಾದ್ದರಿಂದ ಪ್ರಮಾದಗಳು ನಡೆಯುವಂಥಾದ್ದು ಮಾರ್ಗಶಿರ ಬಹುಳ ಪಂಚಮಿಯಾದ್ದರಿಂದ ಮಾರ್ಗಶಿರ - ದಾರಿಯಲ್ಲಿ ಹೋಗತಕ್ಕವರ ತಲೆಯು - ಬಹುಳ ಎಂದರೆ ವಿಶೇಷವಾಗಿ, ಪಂಚಮಿ ಎಂದರೆ ಪಂಚತ್ವ ಅಥವಾ ಮರಣವನ್ನು ಹೊಂದುವುದು - ಹೀಗೆಂದರೆ, ದಾರಿಯಲ್ಲಿ ಹೋಗತಕ್ಕವರ ತಲೆಯನ್ನು ಕಳ್ಳರು ಒಡೆಯುವರು ಎಂದು ಅರ್ಥ. ಇದೂ ಅಲ್ಲದೆ ಪಂಚಮಿ ಶನಿವಾರ ಎಂದರೆ ಪಂಚಮ ಶನಿಕಾಟವಾಗುವಂಥಾದ್ದು, ಚಿತ್ತಾ ನಕ್ಷತ್ರಕ್ಕೆ ಚಿತ್ತಕ್ಕೆ ತೋರಿದ ಹಾಗೆ ಜನರು ನಡಿಸತಕ್ಕದ್ದೇ ಫಲ. ಅತಿಗಂಡ ಯೋಗಕ್ಕೆ ಗಂಡಾಂತರಗಳು ಅತಿಯಾಗಿ ಉಂಟಾಗುವವು, ಶಕುನಿಕರಣದ ಫಲವು, ಈ ದಿನ ಹುಟ್ಟುವವರೆಲ್ಲಾ ಶಕುನಿಯ ಹಾಗೆ ಯುಕ್ತಿಗಾರರು." ಏನಪ್ಪ ಅರ್ಥವಾಯಿತೆ ನಾನು ಹೇಳಿದ್ದು?

ಅಪ್ಪಾಜಿ - ಪಂಚಾಂಗದ ಫಲವನ್ನು ಹೇಳು ಕಿಟ್ಟಪ್ಪ

ಕಿಟ್ಟ - ನಾನೇನು ಹೇಳಲಾರೆ ಎಂತ ತಿಳಿದುಕೊಂಡೆಯಾ? ಏನು ನೀನು ಕಣೀ ಹೇಳುತೀಯಲ್ಲ ಹಾಗೊ? ಹೇಳುತೇನೆ ತಕೊ. "ತಿಥೇ ಚ ಶ್ರೀಮಾಪ್ನೋತಿ' ಪಂಚಾಗ ಕೇಳಿ ತಂದೆತಾಯಿಗಳ ತಿಥಿ ಮಾಡುತಾರೆ; ಅದರಿಂದ ಊಟ ಸಿಕ್ಕಿ ದಕ್ಷಿಣೆ ಬರುತ್ತೆ, ಇದರಿಂದ ಶ್ರೀ ಎಂದರೆ ಸಂಪತ್ತು ಬರುತ್ತೆ. 'ವಾರಾದಾಯುಷ್ಯ ವರ್ಧನಂ" ಎಂದರೆ ವಾರ ತಿಳಿದರೆ ಇಂಥಾ ವಾರ ಇಂಥವರ ಮನೆ ಊಟವೆಂದು ಗೊತ್ತಾಗುತ್ತೆ, ಹೀಗೆ ಮನೆಮನೇ ವಾರದ ಊಟದಿಂದ ಹೊಟ್ಟೆ ತುಂಬಾ ತಿಂದು ಆಯಸ್ಸು ವೃದ್ಧಿಯಾಗುತ್ತೆ. "ನಕ್ಷತ್ರಾದ್ಧರತೇ ಪಾಪಂ' ನಕ್ಷತ್ರ ತಿಳಿಯುವುದರಿಂದ ಪಾಪ - ಮಕ್ಕಳನ್ನು ಎತ್ತಿ ಕೊಳ್ಳುತ್ತಾರೆ. "ಯೋಗಾದರೋಗ ನಿವಾರಣಂ' ಯೋಗಾ - ನಮ್ಮ ಜಾತಕದ ಯೋಗಗಳನ್ನು ತಿಳಿದು ಕೆಲಸ ಮಾಡಿದರೆ ಸುಂಕದ ದರೋಗ ಸಾಬರ ಕಾಟ ನಿವಾರಣೆಯಾಗುತ್ತೆ. "ಕರಣಾತು ಕಾರ್ಯಸಿದ್ಧಿಂಚ' ಕರಣ ಎಂದರೆ ಮನೆಯಲ್ಲಿ ಉಪಕರಣ ಮೊದಲಾದ ಕಾವ್ಯಗಳು ನಡೆಯುವವು - ಹೀಗೆಂದು ಅರ್ಥ ಉಪಾದ್ರೆ. ನನಗೆ ಬರುವುದಿಲ್ಲ ಅಂದು ಪರೀಕ್ಷೆ ಮಾಡುತೀರೊ?

ಉಪಾದ್ರಿ - ನಿಮ್ಮ ಮನೆಯಲ್ಲಿ ನೀನು ಎಲ್ಲಿ ಮಲಗಿಕೊಳ್ಳುತೀಯಪ್ಪ?

ಕಿಟ್ಟ - ನಾನು ಯಾವಾಗಲೂ ನಡುವೇ ಜಗುಲಿ ಮೇಲೆ ಹಾಸೀಗೇ ಹಾಕಿ ಬಿಡುವುದೇ, ಜಪ್ಪಯ್ಯ ಎಂದರೂ ಏಳುವುದಿಲ್ಲ ಆನೆ ಆಡಿ ಕುದುರೆ ಕುಣಿಯಲಿ, ಬೆಳಗಾದಮೇಲೆಯೇ ಏಳುವುದು; ಹೋಗಲಿ, ಒಂದು ಚಿಟಿಗೆ ನೆಶ್ಯ ಕೊಡಿ.

ಸಭಾಪತ್ಯೈಯ್ಯ - ಕಿಟ್ಟ ವೆಂಕಟೈಯ್ಯನ ಛತ್ರದ ಅಪ್ಪಳೈಯ್ಯಂಗಾರ್ರು ಬಂದಿದಾರೆ, ನೋಡಿದೆಯ?

ಕಿಟ್ಟ - ಏನೊ ಅಪ್ಪಯ್ಯಂಗಾರಿ, ಸಂಡಿಗೆ ಅಯ್ಯಂಗಾರಿ, ಯಾವಾಗ ಬಂದೆ?

ಅಪ್ಪಳೈಯ್ಯಂಗಾರಿ - ನಿನ್ನೆ ರಾತ್ರೆ ಬಂದೆ ಕಿಟ್ಟ ಕಿಟ್ಟ - ಎಲ್ಲಿ ಇಳಿದಿದೀಯೆ? ಅಥವಾ ಎಡದ ಮಗ್ಗಲಾಗಿ ಮಲಗಿಕೊಂಡೆಯ?

ಸಭಾ - ಏನು ಹೀಗೆ ಕೇಳುತೀಯೆ? ಅಡಿಗೆ ಮಾಡಿಕೊಂಡರೆ ಹೊಟ್ಟೆ ತುಂಬುತ್ತೆ. ನಾಮದ ಪೆಟ್ಟಿಗೇ ತಂದರೆ ಹೊಟ್ಟೆ ತುಂಬುತ್ತೆಯೇನೈಯ್ಯ?

ಕಿಟ್ಟ - ಚೆನ್ನಾಗೂ ತುಂಬುತ್ತೆ, ಅಯ್ಯಂಗಾರ್‍ರಿಗೆ ಇರುವುದೇ ನಾಮದ ಪೆಟ್ಟಿಗೇ ಜೀವಾಳ.

ಅಪ್ಪಾಜಿ - ನಾಮದ ಪೆಟ್ಟಿಗೆಯಲ್ಲಿ ನಾಮ ಇರುತ್ತೆ, ಹೊಟ್ಟೆ ತುಂಬೋದು ಹೇಗೆ?

ಕಿಟ್ಟ - ಆ ರಹಸ್ಯ ನಿನಗೇನು ಗೊತ್ತು? ಆ ಪೆಟ್ಟಿಗೆಯಲ್ಲಿ ಚೊಂಬು, ಕಂಬಳಿ, ಪಾಥೇಯ ಎಂದರೆ ಅನ್ನದ ಬುತ್ತಿ, ಪಾದರಕ್ಷೆ ಪೂಜೆಗೆ ಯಂಬರಮನ್ನಾರು ಎಂಬ ವಿಗ್ರಹ ಈ ಐದೂ ಆ ಪೆಟ್ಟಿಗೆಯಲ್ಲಿ ಇರುತ್ತೆ. ಆ ಒಂದು ಪೆಟ್ಟಿಗೆಯನ್ನು ಹೆಗಲಿಗೆ ತಗಲ ಹಾಕಿಕೊಂಡು ಹೋದರೆ ಲೋಕವನ್ನೆಲ್ಲಾ ಸುತ್ತಿಕೊಂಡು ಬರಬಹುದು. ಈ ಐದೂ ಯಾವಾಗಲೂ ಅವರಲ್ಲಿರಲೇಬೇಕು. ಆದ್ದರಿಂದಲೇ ಇವರಿಗೆ ಐಯ್ಯಂಗಾರ್ ಎಂದು ಹೆಸರು ಬಂತು.

ಅಪ್ಪಳೈ - ಎಲಾ, ಛಿ, ಛಿ, ಅನ್ನದ ಬುತ್ತಿ, ಯಕ್ಕಡ, ದೇವರು ಇದೆಲ್ಲವನ್ನೂ ನಾಮದ ಪೆಟ್ಟಿಗೆಯಲ್ಲಿ ಯಾರಾದರೂ ಇರಿಸುತ್ತಾರೆಯೆ? ಹುಚ್ಚನ ಹಾಗೆ ಬೊಗಳ ಬೇಡ ಕಣೋ.

ಕಿಟ್ಟ - ಹಾಗಾದರೆ ನಾಮದ ಪೆಟ್ಟಿಗೆ ಅಷ್ಟು ಗಾತ್ರವಾಗಿ ಓಲೆಗರಿಯಲ್ಲಿ ಹಣೆದಿರಲು ಕಾರಣವೇನು? ನಿಮ್ಮ ಜನ ಮೈಸೂರಿಂದ ಗೆಜ್ಜಲ ಹಟ್ಟಿ ಕಣವೇ ಮಾರ್ಗವಾಗಿ ಶ್ರೀರಂಗಕ್ಕೆ ತಲಪುವುದಕ್ಕೆ ಹತ್ತು ದಿನವೂ ಮಧ್ಯಾಹ್ನವಾಗುತ್ತೆಯಲ್ಲಾ ನೀವು ದಾರಿಯಲ್ಲಿ ಎಲ್ಲಿ ಅಡಿಗೆ ಮಾಡುತೀರಿ ಹೇಳು. ನೀರಕಂಡ ಕಡೆ ಮುಖ ತೊಳೆದುಕೊಂಡು, ನಾಮಾ ಇಟ್ಟುಕೊಂಡು ಜುಟ್ಟ ಬಿಚ್ಚಿ ಕೊಡವಿಕೊಳ್ಳುತ್ತಾ ಅಂಗವಸ್ತವನ್ನು ಮರೇಕಟ್ಟಿ ಬೆರಣಿಸುಂಡೆ ಆದು ಬೆಂಕಿ ಹತ್ತಿಸಿ ಬಿಸಿನೀರ ಕಾಸಿ ನಾಮದ ಪೆಟ್ಟಿಗೆಯಲ್ಲಿರುವ ೧೦ ಹುಳಿಯನ್ನದ ಪೊಟ್ಟಣದಲ್ಲಿ ಒಂದು ಪೊಟ್ಟಣವನ್ನು ಬಿಚ್ಚಿ ಊಟಮಾಡಿ ತರುವಾಯ ಬಿಸಿನೀರ ಕುಡಿದು ಶ್ರೀ ವೈಷ್ಣವರು ಮುಂದಕ್ಕೆ ಪ್ರಯಾಣಮಾಡುವುದು ಉಂಟೆ ಇಲ್ಲವೆ?

ಅಪ್ಪಳೈ - ಯಾರೋ ಒಬ್ಬ ಕುಲಗೆಟ್ಟವ ಮಾಡಿದರೆ ಎಲ್ಲರೂ ಮಾಡುತಾರೆಯೇನೊ?

ಕಿಟ್ಟ - ಹಾಗೆ ಮಾಡಿದವರಿಗೆ ಬಹಿಷ್ಕಾರ ಹಾಕಿಬಿಟ್ಟಿದ್ದೀರ? ಇಲ್ಲಃ ನಂಟರ ಮನೆಗೆ ನಾಯಿ ಹೊಕ್ಕರೆ ಎಂಟೂರಿಗೂ ಬೆರೆಯಿತು.

ಸಭಾ - ಮುಸರೆ ಬುತ್ತಿಯನ್ನು ಹಾಗೆ ತೆಗೆದುಕೊಂಡು ಹೋದಾರೇನೈಯ್ಯ? ಹೇಳುವರು ಹೆಡ್ಡರಾದರೆ ಕೇಳುವರು ಕಿವಡರಾಗಬೇಕು.

ಕಿಟ್ಟ - ನೀವೇನು ಬಲ್ಲಿರಿ, ಆ ರಹಸ್ಯಗಳೆಲ್ಲಾ ಬೇರೆ. ರಾಮಾನುಜ ರಹಸ್ಯ, ಚಿದಂಬರ ರಹಸ್ಯ, ರತಿ ರಹಸ್ಯ, ಯೋಗ ರಹಸ್ಯ ಎಂದು ರಹಸ್ಯ ಚತುಷ್ಟಯಗಳಿವೆ. ಶ್ರೀ ವೈಷ್ಣವರಲ್ಲಿ ಮುಸುರೆ ದೋಷವಿಲ್ಲ "ಅಲ್ಲಾಂಡ ಪಲ್ಲಾಂಡೋ ಕಾಸಿಗೆ ಮೂಣ ಅಪ್ಪನ ಕೊಂಡೋ, ಮುರಚಿ ಮುರಚಿವಾಯಿಗೆ ಪೋಟಿಕೊಂಡೊ ಕಬ್ಬಚ್ಚಿ ಮೇಲೆ ಕೈತೇಚಿಕೊಂಡೋ' ಎಂದು ಹೇಳಿದರೆ ಮುಸರೇ ದೋಷ ಹೋಯಿತು.

ಅಪ್ಪಳೈ - ಎಲಾ, ಏನು ಬೊಗಳುತೀಯೋ ನಾಯಿ ಬೊಗುಳಿದ ಹಾಗೆ? ಎಲ್ಲಕ್ಕೂ ಮುಸುರೆ ಇಲ್ಲವೆಂದು ಯಾರು ಹೇಳಿದರೊ? ದೇವರ ಸನ್ನಿಧಿಯಲ್ಲಿ ನೈವೇದ್ಯವಾದ ಪ್ರಸಾದಕ್ಕೆ ಮುಸರೇ ದೋಷವಿಲ್ಲ ಎಂದು ಶಾಸ್ತ್ರವಿದೆ. ಅದರಲ್ಲಿ ಯಾವುದಾದರೂ ದೋಷವನ್ನು ಕಲ್ಪಿಸಿದರೆ ಅನೇಕ ಪಾಪ ಮಾಡಿದಂತೆ ಆಗುತ್ತೆ. ಅದಕ್ಕೆ ಪ್ರಾಯಶ್ಚಿತ್ತವನ್ನು ಕೂಡ ಹೇಳಿದಾರೆ.

ಕಿಟ್ಟ - ಅದೇನೋ ಸರಿ, ನೀನು ಹೇಳುವುದು ನಿಶ್ಚಯ. ಇದಕ್ಕೆ ಬೀಜಮಂತ್ರ ಬೇರೆ ಇದೆ : “ರಂಗನೇ ಪೆರುಮಾಳು, ಪೊಂಗಲೇ ಪ್ರಸಾದಂ ಕಂಬವೇ ತಣ್ಣಿ' ಈ ಮಂತ್ರವನ್ನು ಹೇಳಿಬಿಟ್ಟರೆ ಮುಸರೆ ದೋಷವೆಲ್ಲಾ ಹೋಯಿತು ಎಂದು ಶಾಸ್ತ್ರವಿದೆ. ಮಡಿಯ ವಿಚಾರವಂತೂ ಕೇಳಲೇ ಬೇಡಿ.

ಅಪ್ಪಳೈ- ಈ ಹುಚ್ಚನ ಮಾತೇನು? ಸುಮ್ಮನೆ ತಲೆ ಹುಳಿತ ನಾಯಿನ ಹಾಗೆ

ಅಪ್ಪಾಜಿ - ಮಡಿಯ ಸಂಗತಿಯೇನು?

ಕಿಟ್ಟ - ಇವರ ಜನರಲ್ಲಿ ಯುಗಾದಿ ದೀವಳಿಗೆಗೆ ಸ್ನಾನ ಮಾಡುವುದು. ಹಾಗಿಲ್ಲದೆ ದಿನಚರಿಯಲ್ಲಿಯೂ ಇವರು ಸ್ನಾನ ಮಾಡಿದರೆ ಇವರಿಗೆ ಜುಟ್ಟು ಇಷ್ಟು ಗಾತ್ರ ಇದ್ದೀತೆ? ಒಂದು ಮಡೀ ಉಟ್ಟ ಮೇಲೆ ಏನನ್ನು ಮುಟ್ಟಿದರೂ ಅದು ಮಡಿಯಂತಲೇ; ಮೈಲಿಗೆಯಾಗುವುದೇ ಇಲ್ಲವಂತೆ.

ಅಪ್ಪಳೈ - ಹವುದು ನಮ್ಮಲ್ಲಿ ಹಾಗೆಯೇ (ಉಪಸ್ಪರ್ಶೋ ನ ಸ್ಪರ್ಶಃ) ಎಂದು ಹೇಳಿದೆ.

ಕಿಟ್ಟ - ಮಡೀ ಉಟ್ಟು ಗಾಡಿಯಮೇಲೆ ಹಾಸಿಗೆ ಹಾಕಿ ಅದರ ಮೇಲೆ ಕೂತುಕೊಂಡರೆ ಮೈಲಿಗೆಯಾಗಲಿಲ್ಲವಂತೆ.

ಅಪ್ಪಳೈ - ಹವುದು ಹಾಗೇ ಸರಿ, ಗಾಡೀಮೇಲೆ ನಾವು ಕೂತುಕೊಳ್ಳುತ್ತೇವೆ ಹಾಸಿಗೆ ಮೇಲಲ್ಲ ಗಾಡಿ ನಮಗೆ ಮುಖ್ಯಾಧಾರವಾದ್ದು ಅದರ ಮೇಲೆ ಹಾಸಿಗೆ ಇದೆ, ಅದಕ್ಕೂ ಗಾಡಿಯೇ ಆಧಾರ. ಗಾಡೀ ಸಂಬಂಧದಿಂದ ನಾವು ಹಾಸಿಗೆ ಮುಟ್ಟಿದ ಹಾಗಾಯಿತು. ಪ್ರತ್ಯಕ್ಷವಾಗಿ ನಾವು ಹಾಸಿಗೆ ಮುಟ್ಟಿದ ಹಾಗಾಗಲಿಲ್ಲ.

ಕಿಟ್ಟ - ಭೂಮಿಯ ಮೇಲೆ ಹಾಸಿಗೆ ಹಾಕಿ ಅದನ್ನು ನಾವು ಮುಟ್ಟಿದರೆ?

ಅಪ್ಪಳ್ಳೈ - ಆಗ ಮೈಲಿಗೆಯಾಯಿತು.

ಕಿಟ್ಟ - ಆಗಲೂ ಆಗಲಿಲ್ಲವೆಂತಲೇ ಹೇಳಬೇಕು. ಯಾಕೆ ಅನ್ನುತೀಯೋ? ಭೂಮೀಮೇಲೆ ಹಾಸಿಗೆ ಇದ್ದು ಅದರ ಮೇಲೆ ನಾವು ಕೂತಾಗ್ಯೂ ಭೂಮಿಯೇ ನಮಗೆ ಮುಖ್ಯಾಧಾರವಾಗಿ ಹಾಸಿಗೆ ಅದಕ್ಕೆ ಸಂಬಂಧಿಸಿರುವ ಕಾರಣ ಹಾಸಿಗೆ ನಮಗೆ ಉಪಸ್ಪರ್ಶವೇ ಆದಂತಾಯಿತು. ಈ ತರ್ಕಕ್ಕೆ ಒಪ್ಪಿಕೊಳ್ಳುತೀಯ?

ಅಪ್ಪಳ್ಳೈ - ಭೂಸಂಬಂಧಕ್ಕೆ ಮಾತ್ರ ಅದು ಉಪಸಂಬಂಧವಾಗುವುದಿಲ್ಲ ಆಗ ಮೈಲಿಗೆಯಾಯಿತೆಂದು ಹೇಳಬೇಕು.

ಕಿಟ್ಟ - ಮಡಿಯುಟ್ಟು ಜಮಖಾನ ತುಳಿಯುತ್ತೀರಿ, ಆದರೂ ಮಡಿ ಎನ್ನುತ್ತೀರಿ. ಇದಕ್ಕೇನು ಹೇಳುತೀಯ?

ಅಪ್ಪಳ್ಳೈ - ಏನೋ ದೇಶಾಚಾರ ಕುಲಾಚಾರ ರೀತ್ಯಾ ನಡೆಯುತ್ತೆ.

ಉಪಾದ್ರಿ - ನಿಮ್ಮ ಸೀತಮ್ಮನಿಗೆ ಹೇಗೆ ಇದೆಯೋ ಕಿಟ್ಟ ಜೋಯಿಸ? ಬಿದ್ದ ಕಡೆಯಲ್ಲಿಯೇ ಬಿದ್ದಿದಾಳಂತಲ್ಲ ಪಾಪ? :

ಕಿಟ್ಟ - ಮೊದಲು ಹಾಗೆ ಇತ್ತು. ಈಚೆಗೆ ಮಂತ್ರಾ ಹಾಕಿಸಿದೆವು. ಬೀದೀಚೋರಿಯಿರುವ ಮಹಾದೇವನ ಕೊಠಡಿಯಲ್ಲಿ ಮಲಗಿಸಿದಾರೆ, ನಮ್ಮ ಭಾವ ಮೈಸೂರಿಗೆ ಹೋಗಿದಾರೆ, ಅಲ್ಲಿಂದ ಮಂತ್ರವಾದಿಗಳನ್ನು ಕರೆದು ತರುತ್ತಾರೆ. ಅವರು ಬರುವತನಕ ಮಹಾದೇವನ ಕಿರುಮನೆಯಲ್ಲಿ ಎಲ್ಲವನ್ನೂ ಇರಿಸಿ ಹೋಗಿದಾರೆ.

ಅಪ್ಪಳ್ಳಿ - ಹಾಗಾದರೆ ವೈಷ್ಣವರ ಮಡಿ ನಿನಗೆ ಸಮಾಧಾನವೇನೊ ಅಲ್ಲವೇ ಕಿಟ್ಟ?

ಕಿಟ್ಟ - ಬಿಡಪ್ಪ ಅದೇನು ಹೇಳೀಯ? ಅದೊಂದು ವಿಪರೀತ. ಅವರಿಗೆ ಎಲ್ಲಾ ಮಡಿಯಲ್ಲಿಯೇ ಆಗಬೇಕು. ಅವರಿಗೆ ಆಚಾರು ಇದ್ದರೆ ಸಾಕು ಎಲ್ಲಾ ಅವರು ಹೇಳಿದ ಹಾಗೆ.

ಸಭಾಪತಿ - ಯಾವ ಆಚಾರೋ ಕಿಟ್ಟ?

ಕಿಟ್ಟ - ಆಚಾರ ಹಾಗೆ ವೇಷಾ ಹಾಕಿಕೊಂಡು ಬಂದವರೆಲ್ಲಾ ದೊಡ್ಡಾಚಾರ, ಪೂರಿ ರಾಮಾಚಾರ, ವಗ್ಗರಣೇ ಭೀಮಾಚಾರು, ಎಂಟುಮಣಾಚಾರು, ಗೋವಾಟ್ಟಚಾರು, ಅಪ್ಯ, ಟೊಪ್ಯ, ಟೊಣ್ಯ, ಟೊಶ್ಯ ಎಂತ ಇವರ ಶಿಷ್ಯರು. ಇವರಿಗೆ ಒರಳಗಲ ಮುದ್ರೆ, ವನಕೆ ಗಾತ್ರ ಅಂಗಾರ, ಇವರೆಲ್ಲರನ್ನೂ ಬಲ್ಲೆ ಕಣೋ, ಇವರಲ್ಲೀಗ ಮಡಿ ಹೆಚ್ಚು ನಾನು ಒಪ್ಪಿದೆ, ಕೂತರೆ ಮಡಿ, ನಿಂತರೆ ಮಡಿ, ಕಾಲುಮಡಿ, ಕೈಮಡಿ, ಸ್ನಾನಕ್ಕೆ ಮಡಿ, ಉಳ್ಳಿಕ್ಕೆ ಮಡಿ, ತಿಲ್ಲಿಕ್ಕೆ ಮಡಿ, ಹೆಂಡತಿಗೆ ಮಡಿ, ಗಂಡನಿಗೆ ಮಡಿ, ಎಲ್ಲಾ ಕೆಲಸಕ್ಕೂ ಮಡಿಯಪ್ಪ ಮಡಿ.

ಸಭಾಪತಿ - ಕಿಟ್ಟ ಆಚಾರ್ರು ರಾಯರ ಮನೆಗೆ ಹೊರಟದ್ದ ಹೇಳೋ.

ಕಿಟ್ಟ - ರಾಯರ ಮನಿ ಮದ್ವಿಗೆ ಆಚಾರ್ರು ತಮ್ಮೂರಿಂದ ಹೊರಟರು. ಇವರ ಸಂಗಾತ್ಲಿ ಅವರ ಸಂಸಾರ ಹೊರಡಬೇಡೇನು? ಆಚಾರ್ರ ಕುದರಿ ಸಿದ್ಧವಾಯಿತು. ಆಗೋಣ, ರೋಣ್ಯ ಅಂಬೊ ಶಿಷ್ಯ - ಅಶ್ವದಮೇಲೆ ಕೂಡಲಿಕ್ಕೆ ಧಾರುಧಾರು ಇದ್ದಾರೆ, ಎಂದು ಕೂಗಿದ. ಆಗ ಆಚಾರ್ರು - ಅಶ್ವದ ಮೇಲ ಕೂಡ್ಲಿಕ್ಕೇ? ಕೂಸು, ಕೂಸಿನ ತಾಯಿ. ಮೀಶೇರಾಯ ಯಂಕಣ್ಣ, ರೊಟ್ಟೇ ಕೃಷ್ಣಾಚಾರ್ರು, ಬಾಳೇಗೆಡ್ಡೆ ರಾಮಾಚಾರ್ರು, ಆರುಮಣ ಅರಳಿಟ್ಟು ಮೂರುಮಣ ಕೋಡಬೇಳಿ, ಇಷ್ಟೇ. ಮತ್ತೆ ದಾರಿದ್ದಾರೆ? ಎಂದರು. ಆಚಾರು ಸವಾರಿ ಹೊರಟರು. ದಾರ್‍ಯಾಗ ಕಾವೇರಿ ನದಿ ಸಿಕ್ಕಿತು. ಸಾನಾ ಮಾಡದ ಹಣಿಗೆ ಶ್ರೀಮುದ್ರಿ ಗೋಪೀಚಂದನ ಹಚ್ಚಿಕೊಳ್ಳದ ಹಾಂಗೆ ಗ್ರಹಸ್ಥರ ಮನೀಗೆ ಹೋಗಬಹುಂದ? ಆಚಾರ್‍ರಿಗೆ ಸಾನಾಯಿತು. ನಾಸಾದಿ ಕೇಶಪರ್‍ಯಂತಂ ಗೋಪೀಚಂದನ ಧಾರಣಿ ಆಯಿತು, ದ್ವಾದಶನಾಮ ಪೂರೈಸಿತು. ದೇವರ ಪೂಜೆ ಮಾಡಬೇಡೇ? ಆಚಾರ ತೀರ್ಥ ತಕ್ಕೊಳ್ಳಿಕ್ಕೆ ಗ್ರಹಸ್ಥರು ಕಾದಿದ್ದಾರೆ. ದೀಪ ಹಚ್ಚಬೇಡ? ಪ್ರಣತಿ ತೆಗೆದಿಟ್ಟರು. ಎಂಣಿ ಎಲ್ಲದ? ಆಚಾರು ಮಡಿ ಚೀಲದಾಗ ಹುಡಕಲಿಕ್ಕೆ ಹತ್ತಿದರು. ಎಂಣಿ ಇಲ್ಲ, ಆಗ ಆಚಾರಾಕಿಯು - ಏನು ಏಸೂಬಾಯಿ, ಹೀಂಗೆ ಉಂಟಾ? ಕಾಸಿನ ಚಿಟ್ಯಾಗ ಒಂದು ಚಿಟ್ಟ ಎಂಣಿತಂದು ಕೂಸಿಗೆ ಎರೆದು ಶೇಶಿಗರೆದು ನರಾರಿಗೆರೆದು ಪತ್ತೂಗೆರೆದು ಸಿಂಗೂಗಿಕ್ಕಿ ಮಂಗೂಗಿಕ್ಕಿ ಮಗಮಾಧವಗ ದೊಗದೊಗದಿಕ್ಕಿ ನೆರಮನೀದೀಪಾ ಹೊರಮನೀ ದೀಪಾ ನಂದಾದೀಪಾ ವಗ್ಗರಣಿ ಸೌಟು, ಎಲ್ಲಾ ಕಳೆದುಕೊಂಡು ಕಾಸಿನ ಚಿಟ್ಯಾಗ ಒಂದು ಚಿಟ್ಟ ಎಂಣಿ ಇಟ್ಟಿದ್ದೆ ಸಿಂಗು ಮಂಗು ಕೂಡಿಕೊಂಡು ಮಂಗಳಮಾಯ ಮಾಡಿದ್ದಾರಲ್ಲ? ಎಂದಳು. ಆಗ ಆಚಾರ್ರು - ಸಾಕ್ಷಾತು ಸೂರ್‍ಯದೇವರು ದೀಪಕ್ಕೆ ದೀಪವಾಗಿದ್ದಾರೆ. ಮತ್ತೆ ಬೇರೆ ದೀಪ ಅವಶ್ಯಕಿಲ್ಲ ಎಂದು ಶಾಸ್ತ್ರಅದ, ಎಂದು ಹೇಳಿ ದೇವರ ಪೆಟ್ಟಿಗಿ ಬಿಚ್ಚಲಿಕ್ಕೆ ಹಚ್ಚಿದರು. ಆಗ ಗ್ರಹಸ್ತರ ಮನಿಯಿಂದ ಆಚಾರನ್ನು ಕರೀಲಿಕ್ಕೆ ಬಂದರು. "ಶುಕ್ಲಾಂಬರಧರಂ ವಿಷ್ಣುಂ'' ಎಂದು ಹೇಳುತಾ ಪೂಜಿಗೆ ಆರಂಭ ಮಾಡೋವೇಳೆಗೆ ಕರೀಲಿಕ್ಕೆ ಬಂದರೆಂದು ತಿಳಿಯಿತು. ಆ ಕೂಡಲೆ "ಸ್ವಸ್ತಿ ಪ್ರಜಾಭ್ಯಃ ಪರಿಪಾಲಯಂತಾಂ' ಎಂತ ಪೂಜಿ ಕೊನೀಮಂತ್ರ ಹೇಳಿ ಪೆಟ್ಟಿಗಿ ಹುರಿಯನ್ನ ಮೊದಲು ಬಿಚ್ಚುವ ಹಾಗೇ ಬಿಚ್ಚುತ್ತಾ ಕೊನೀಗೆ ಹಾಂಗೆಯೇ ಸುತ್ತಿ ಪೆಟ್ಟಿಗಿ ಕಟ್ಟಿಬಿಟ್ಟರು. ಆಗ ಆಚಾರ ಕೂಸು - ಅಮ್ಮ ತಿಲ್ಲಿಕ್ಕೆ ಕೊಡು ಎಂದು ಕೇಳಿತು. ಅದಕ್ಕೆ ಆಕಿ - ಹಲಸಿನಕಾಯಿ ತಿಲ್ಲಿಕ್ಕೆ... ನಾವು ಅರಸುಮಕ್ಕಳ, ಬಾಳಿಕಾಯಿ ತಿಲ್ಲಿಕ್ಕೆ ನಾವು ಭಾಗ್ಯವಂತರ, ದೊನ್ನಿ ದೊನ್ನಿ ತುಪ್ಪಾತಿಲ್ಲಿಕೆ ಪೂರ್ಣಯ್ಯನ ಮನಿಶಾರ್ದವ? ಎಂದು ಸಮಾಧಾನ ಹೇಳಿದಳು.

ಸಭಾ - ಕಿಟ್ಟ ನೀನು ಹುಚ್ಚ ಎಂತ ಯಾರೊ, ಅಂದರಲೋ?

ಕಿಟ್ಟ - ನಾನು ಹುಚ್ಚನೂ ಹವುದು, ನೀನು ಬೆಪ್ಪನೂ ಹವುದು.

ಉಪಾಧ್ರಿ - ಹಾಗಾದರೆ ಪೆಟ್ಟಿಗೆ ಪೇಳಿಗೆ ಎಲ್ಲಾ ಮಹಾದೇವನ ಕೊಠಡಿಗೆ ಸೇರಿಬಿಟ್ಟಿತು?

ಕಿಟ್ಟ - ಸೇರಿದರೆ ಭಯವೇನು? ನಮ್ಮ ಸೀತ ಅಲ್ಲಿಯೇ ಮಲಗಿ ಕೊಂಡಿದಾಳಲ್ಲ?

ಅಪ್ಪಳ್ಳೈ - ಎಲ್ಲರನ್ನೂ ಅನ್ನುತೀಯೆ. ನೀವು ಅಡ್ಡಗಂಧದವರು ಮಾತ್ರ ಸರಿಯೋ?

ಕಿಟ್ಟ - ನಾವು ಎಲ್ಲಾದರಲ್ಲಿಯೂ ಸರಿಯೇ. ಹರವಿದ ಮಡಿಯನ್ನು ಕೋಲಿನಲ್ಲಿ ತರುತ್ತಾರೆ. ಆದರೂ ಅದು ನಮಗೆ ಮಡಿಯಾಯಿತು. ಆ ಮಡಿಯಲ್ಲಿ ಶ್ರಾದ್ಧ ಕೂಡ ಆಗುತ್ತೆ. ಅನ್ನದ ಬುತ್ತಿ ಕಟ್ಟಿಕೊಂಡು ಹೋಗುತ್ತೇವೆ. ಅದು ದಾರಿಯಲ್ಲಿ ಮುಸರೆ ಅಲ್ಲವಂತೆ. ನಮ್ಮಲ್ಲಿ ಉಪ್ಪ ಹಾಕಿದ್ದು ಮುಸರೆ ಅನ್ನುತ್ತಾರೆ. ಉಪ್ಪು ಹಾಕಿದ ಹೆಸರುಬೇಳೆ ಕಡಲೇಬೇಳೆ ಮುಸರೆಯಲ್ಲವಂತೆ, ಬೆಂದರೆ ಮುಸರೆ ಎನ್ನುತ್ತಾರೆ. ಗೋಧಿ ರವೆ ಬೆಂದರೂ ಮುಸರೆಯಲ್ಲವಂತೆ. ನಮ್ಮಲ್ಲಿ ಯಾವುದೂ ಗೊತ್ತಿಲ್ಲ ವಸಿ ಮಡಿ ವಸಿ ಮೈಲಿಗೆ, ಹೊದ್ದರೆ ಮಡಿ ಉಟ್ಟರೆ ಮೈಲಿಗೆ, ಊಟಾಮಾಡದೆ ಬಿಚ್ಚಿರಿಸಿದರೆ ಉಟ್ಟದ್ದು ಮಡಿಯೇ, ಶ್ರಾದ್ಧದ ಕಜ್ಜಾಯ ಪಿತೃಶೇಷ. ನಾವೇನೋ ದೈತ್ಯಶೇಷ. ನಮ್ಮಲ್ಲಿ ಎಲ್ಲಾ ದೇವರ ಒಕ್ಕಲವರೂ ಇದಾರೆ. ಹೇಳುವುದು ವಿಭೂತಿಯವರು ಎಂತ, ಬೇಟೆರಾಯ ಸ್ವಾಮಿ ಒಕ್ಕಲಾದರೆ ಮೂರುನಾಮ ಹಾಕುತ್ತೇವೆ. ಹುಚ್ಚರಾಯಸ್ವಾಮಿ ಒಕ್ಕಲಾದರೆ ಮುದ್ರೆ ಹಾಕುತ್ತೇವೆ. ಚಾಮುಂಡಿ ಒಕ್ಕಲಾದರೆ ಕುಂಕುಮ ಇಟ್ಟುಕೊಳ್ಳುತೇವೆ. ಬಾಬೈಯ್ಯನ ಒಕ್ಕಲಾದರೆ ಲಾಡಿ ಹಾಕಿಕೊಳ್ಳುತ್ತೇವೆ. ಕಿಸಿಮಿಸಿ ಒಕ್ಕಲಾದರೆ ಸರ್ವೇಶ್ವರನ ಗುಡಿಗೂ ಹೋಗುತ್ತೇವೆ. ಹೊಗೆಸೊಪ್ಪಿನ ಒಕ್ಕಲಾದರೆ ಗುಡಿಗುಡೀಗೂ ಹೋಗುತ್ತೇವೆ.

ಸಭಾ - ಹುಲಿಗೆ ತನ್ನ ಕಾಡೇನು ಪರರ ಕಾಡೇನು, ಕಿಟ್ಟ?

ಕಿಟ್ಟ - ಅಷ್ಟಲ್ಲದೇ ಏನು? ನೀನೇನು ಹೇಳುವುದು? ಎಲ್ಲರೂ ಇಷ್ಟು ಹರಟೆ ಹೊಡೆದರಲ್ಲ, ಯಾರಾದರೂ ಒಂದು ಚಿಟಿಗಿ ನೆಸ್ಯ ಕೊಟ್ಟರೆ? ನಾನು ಏನಾದರೂ ಒಂದು ಮಾತನಾಡಿದರೆ ಎಲ್ಲರೂ ಗೊಳ್ ಎಂದು ನಕ್ಕು ಲೇವಡಿ ಹತ್ತಿಸುವುದು ಮಾತ್ರ ನಿಮಗೆಲ್ಲಾ ತಿಳಿಯುತ್ತೆ. ಒಂದು ಚಿಟಿಗಿ ನೆಸ್ಯಕ್ಕೆ ಮಾತ್ರ ಯಾರೂ ಬದುಕಿಲ್ಲ.

ಈ ಪ್ರಕಾರದಲ್ಲಿ ಇವರೆಲ್ಲಾ ಮಾತನಾಡುತ್ತಾ ಇರುವುದು ಕೇಳುವವರಿಗೆ ವಿನೋದವಾಗಿ ಕಾಣಿಸಿದಾಗ್ಯೂ ಉಪಾದ್ರಿ ಕೇಳುವ ಪ್ರಶ್ನೆಯೇ ಬೇರೆ ಅವನ ಮನಸೇ ಬೇರೆ ಇತ್ತು. ಆಗಾಗ್ಗೆ ಅವನು ಕೇಳುವ ಮಾತೇ ಬೇರೇ ತೆರವಾಗಿತ್ತು. ಎಲ್ಲರೂ ಎದ್ದು ಗುಡಿಯಿಂದ ತಂತಮ್ಮ ಮನೆಗಳಿಗೆ ಹೋದ ಮೇಲೆ,

ಉಪಾದ್ರಿ - ಕೊಠಡಿ ಬೀದೀಬಾಗಿಲಕಡೆಗೇ ಇದೆ ಎನ್ನುವುದು ಗೊತ್ತಾಯಿತಷ್ಟೆ ಮೊದಲು ಮಾತನಾಡಿದ್ದ ಪ್ರಕಾರ ಎರಡು ಕೆಲಸವೂ ಸಾಗುವುದಕ್ಕೆ ಇದೇ ಸಮಯ.

ಅಪ್ಪಾಜಿ - ತಮ್ಮ ದಯದಿಂದ ಆಗಬೇಕು.

ಉಪಾದ್ರಿ - ನನಗೆ ಒಳಗುಟ್ಟು ತಿಳಿಯದೆ? ಕೆಲಸದ ರೀತಿಯನ್ನೆಲ್ಲ ನಾನು ಹೇಳುತೇನೆ.

ಅಪ್ಪಾಜಿ - ತಮ್ಮ ಅಪ್ಪಣೆಯಂತೆ ಮಾಡೋಣ. ಈ ಪ್ರಕಾರ ಮಾತನಾಡಿಕೊಂಡು ಹೊರಟುಹೋದರು.

---

# ೧೪ನೆ ಅಧ್ಯಾಯ

ಅತ್ತ ಮೈಸೂರಿಗೆ ಹೋದ ಸದಾಶಿವದೀಕ್ಷಿತನು ಸೊಸೆಗೆ ಪ್ರಾಪ್ತವಾಗಿರುವ ಸ್ಥಿತಿ ಇಂಥಾದ್ದೆಂದು ಗೊತ್ತಿಲ್ಲದೆ ಸಿಕ್ಕಿದ ಕಡೆ ವಿಚಾರ ಮಾಡುತ್ತಾ ಬಂದನು. ಎಂಥಾ ಜೋಯಿಸರಲ್ಲಿ ಪ್ರಶ್ನೆಮಾಡಿದರೂ ಯಾರೂ ಗೊತ್ತಾಗಿ ಹೇಳುತಾ ಇರಲಿಲ್ಲ. ಕೆಲವರು ಪ್ರಾಣಭೀತಿಯುಂಟು ಎನ್ನುತಿದ್ದರು. ಕೆಲವರು ದೊಡ್ಡ ಜೀವಕ್ಕೆ ಭಯವಿಲ್ಲ ಎನ್ನುತಿದ್ದರು. ಇನ್ನು ಕೆಲವರು ಯಾವುದೂ ಖಂಡಿತವಾಗಿ ತೋರದೆ ಹೀಗೂ ಹಾಗೂ ಸಂಶಯ ಪಡುತಿದ್ದರು. ಒಬ್ಬಿಬ್ಬರು ಮಾತ್ರ ಇದು ಅಭಿಚಾರಿಕ, ಶಾಬರ ಪ್ರಯೋಗವಾಗಬೇಕೆಂದು ಕಾಣುತ್ತೆ ಎಂದರು. ಪಶುಪತಿ ಸಾಂಬಶಾಸ್ತ್ರಿಯು ಹೀಗೆಯೇ ವಿಚಾರ ಮಾಡುತ್ತಾ ಬಂದನು. ಕೊನೆಗೆ ಮಂತ್ರಮೂರ್ತಿ ತಲಚೇರಿ ಶೇಷಯ್ಯನವರು ಎಂದು ಇದಾರೆ ಅವರಿಗೆ ವೈದ್ಯಶಾಸ್ತ್ರ ಮಂತ್ರಶಾಸ್ತ್ರ ಮಾಟ ಮಾಡುವುದು ಅದಕ್ಕೆ ತಡೆ ಕಟ್ಟುವುದು, ಇದೆಲ್ಲಾ ಗೊತ್ತಿದೆ. ಅವರು ಕೊಲ್ಲಾಪುರದ ಮಹಾಲಕ್ಷ್ಮೀ ಉಪಾಸಕರು, ಅವರಲ್ಲಿ ವಿಚಾರಿಸಿದರೆ ಅನುಕೂಲಿಸಬಹುದೆಂದು ಗೊತ್ತಾಯಿತು.

ಈ ಶೇಷಯ್ಯನು ಒಳ್ಳೆ ಆಸ್ತಿವಂತನಾಗಿದ್ದನು. ಯಾವ ವಿಧದಲ್ಲಿಯೂ ಮತ್ತೊಬ್ಬರ ಸಹಾಯವನ್ನು ಅಪೇಕ್ಷಿಸುತ್ತಿರಲಿಲ್ಲ ಅರಮನೆಯಿಂದ ಸಂಬಳವೂ ನಡೆಯುತ್ತಿತ್ತು. ಈತನು ಹಣೆತುಂಬ ಕುಂಕುಮವನ್ನು ಇಟ್ಟುಕೊಳ್ಳುತಿದ್ದನು. ಈತನ ಆಹಿಕವೆಲ್ಲಾ ತೀರುವಾಗ್ಗೆ ಹಗಲು ಜಾವ ಹೊತ್ತು ಆಗುತಿತ್ತು. ತರುವಾಯ ಹೊರಗಿನ ಹಜಾರದಲ್ಲಿ ಬಂದು ಕೂತುಕೊಂಡು ಬೇಕಾದವರಿಗೆ ಔಷಧಿ ಕೊಡುವುದು ಬೇಕಾದವರಿಗೆ ಮಂತ್ರ ಹಾಕುವುದು ಈ ಪ್ರಕಾರ ಮಾಡುತಿದ್ದನು. ಯಾರ ಮನೆಗೂ ಹೋಗುತ್ತಿರಲಿಲ್ಲ ಯಾರಿಂದಲೂ ಹಣ ತೆಗೆದುಕೊಳ್ಳುತಿರಲಿಲ್ಲ, ಸಾಯಂಕಾಲದ ಪೂಜೆ ಬಹಳ ಅಟ್ಟಹಾಸವಾಗಿ ಜರುಗುತಿತ್ತು. ಆ ಕಾಲದಲ್ಲಿ ದೇವರ ನಿವೇದನಕ್ಕಾಗಿಯೂ ಕಾಣಿಕೆಗಾಗಿಯೂ ಯಾರು ಏನತಂದು ಇರಿಸಿದರೂ ಅದನ್ನು ಮಾತ್ರ ತೆಗೆದುಕೊಳ್ಳುವುದುಂಟು, ಆದರೆ ಪ್ರತಿ ಶುಕ್ರವಾರದ ಪೂಜೆ, ವರಮಹಾಲಕ್ಷ್ಮಿ ಹಬ್ಬದ ಪೂಜೆ, ನವರಾತ್ರಿ ಪೂಜೆ, ಅದರಲ್ಲಿಯೂ ಕಾಳಿ ರಾತ್ರೆಪೂಜೆ, ಇದಕ್ಕೆ ಸಂಬಂಧವಾದ ಸುವಾಸಿನಿಪೂಜೆ, ಬ್ರಾಹಣಸಂತರ್ಪಣೆ, ಇದೇ ಮೊದಲಾದ ವೆಚ್ಚ ಬಹುಬಲವಾಗಿ ನಡೆಯುತಿತ್ತು. ಈತನು ಸ್ವಭಾವದಲ್ಲಿ ಬಹು ಸರಸಿ, ಜನರಲ್ಲಿ ಹೊಂದುವುದು ಬಲ; ಮೂರನೇ ಜಾವದಲ್ಲಿ ಚದುರಂಗ, ಗಂಜೀಫ್, ಇದನ್ನು ಆಡುವ ಅಭ್ಯಾಸ, ಉಂಟು. ಆಗಾಗ್ಗೆ ಭಾರತ ಭಾಗವತ ರಾಮಾಯಣ ಮೊದಲಾದ ಪುರಾಣಗಳನ್ನು ಹೇಳಿಸುವುದು, ಕನ್ನಡ ಕಾವ್ಯಗಳನ್ನು ರಾಗವಾಗಿ ಓದಿಸುವುದು, ಇದರಲ್ಲಿ ಕಾಲವನ್ನು ಕಳೆಯುತಿದ್ದನು. ಇದೂ ಅಲ್ಲದೆ ಲೌಕಿಕವ್ಯವಹಾರ ಜ್ಞಾನ ಈತನಿಗೆ ಚೆನ್ನಾಗಿತ್ತು. ಆ ವಿಷಯವಾಗಿ ಅಭಿಪ್ರಾಯ ಕೇಳುವುದಕ್ಕೂ ಅರ್ಜಿ ಮೊದಲಾದ್ದನ್ನು ಬರೆಸುವುದಕ್ಕೂ ಈತನಲ್ಲಿ ವಿಶೇಷವಾಗಿ ಜನರು ಬರುತಿದ್ದರು. ಈತನಿಗೆ ದೇಶಾಭಿಮಾನ ಭಾಷಾಭಿಮಾನ ಬಹು ಹೆಚ್ಚಾಗಿತ್ತು. ಅದರ ಜೊತೆಗೆ ಇನ್ನೊಂದು ಭ್ರಮೆಯೂ ಈತನನ್ನು ಬಾಧಿಸುತ್ತಿತ್ತು. ಕುಂಪಣಿಯವರು ಈ ದೇಶವನ್ನು ಬಿಟ್ಟು ಹೊರಟು ಹೋಗುತ್ತಾರೆ, ಅವರು ವ್ಯಾಪಾರಗಾರರು, ರಾಜ್ಯ ಕಟ್ಟಿ ಅವರಿಗೆ ಏನಾಗಬೇಕು? ತುರುಕರನ್ನು ತಾನು ಮಂತ್ರ ಹಾಕಿ ಈ ರಾಜ್ಯದಿಂದಲೇ ಓಡಿಸಬಲ್ಲೆ ಎಂದು ತಳ್ಳಿ ಮಾತುಗಳನ್ನು

ಆಗಾಗ್ಯೆ ಆಡಿಕೊಳ್ಳುತಿದ್ದನು. ಯಾರು ಯಾವ ಮಾತನಾಡುತಿದ್ದಾಗ್ಯೂ ನಮ್ಮ ದೇಶದ ಶಬ್ದಗಳನ್ನೇ ಉಪಯೋಗಿಸಿ ಮಾತನಾಡಿ ಎನ್ನುತಿದ್ದನು. 'ಅರ್ಜಿ' ಎನ್ನುವುದಕ್ಕೆ ಬದಲಾಗಿ ಮನುವೆ ಎಂತಲೇ ಬರೆಯಬೇಕು. 'ಶಾಯಿ'ಗೆ ಬದಲಾಗಿ ಮಸಿ ಎಂತಲೇ ಹೇಳಬೇಕು. 'ಛಾಪಾಕಾಗದ'ಕ್ಕೆ ಬದಲಾಗಿ ಮುದ್ರೆ ಕಾಗದ ಎಂತಲೇ ಹೇಳಬೇಕು. 'ಮುಲಕಿಬಾಬು' ಎನ್ನುವುದಕ್ಕೆ ಅಟ್ಟವಣೆ ಎಂತಲೇ ಹೇಳಬೇಕು. 'ಪೇನಾಗರಿ' ಎಂದು ಹೇಳಿದರೆ ಬಹು ಕೋಪ, ಲೇಕಣಿ ಎಂತಲೇ ಕರೆಯಬೇಕು. "ಹುದ್ದೆದಾರ್' ಎನ್ನಲಾಗದು, ಅಧಿಕಾರಿ ಎಂದು ಹೇಳಬೇಕು. 'ತೇರೀಜ್' ಎಂದರೆ ಬಹು ಕೋಪ ಬರುತಿತ್ತು. ಟವಣೆ ಎಂತ ಕರೆಯಬೇಕು. 'ತರಿ ಖುಷ್ಕಿ' ಎನ್ನಕೂಡದು, ಗದ್ದೆ ಬೆದ್ದಲು ಎನ್ನಬೇಕು. ಅಥವಾ ನೀರಾರಂಬ ಕಾಡಾರಂಬ ಎಂದು ಹೇಳಿದರೂ ಸರಿಯೆ. 'ಹಣದ ವಸೂಲಿ' ಎನ್ನಲಾಗದು, ಹಣ ಎತ್ತುವುದು ಎನ್ನಬೇಕು. ಒಂದೊಂದು ವೇಳೆ ಈ ಅಭಿಪ್ರಾಯ ಸ್ವಲ್ಪ ಪಲ್ಲಟವೂ ಆಗುತಿತ್ತು. ಮಾತನಾಡುತ್ತಾ ಮಾತನಾಡುತ್ತಾ ಇರುವಾಗ ಯಾರೋ ಅರಮನೆಯಲ್ಲಿ ರಾತ್ರೆ 'ಒಡೋಲಗದಲ್ಲಿ' ಎಂದು ಹೇಳಿದರು. ಆಗ ಶೇಷಯ್ಯನು - 'ಒಡ್ಡೋಲಗ ಎಂದರೇನು ಮಾತು? ಚೆನ್ನಾಗಿ 'ದರ್ಬಾರು' ಎನ್ನಿ ಎಂದನು. ಈತನ ಸಂಗಡ ಬಹುಸಲಿಗೆಯಾಗಿ ಮಾತನಾಡುತಾ ಚದುರಂಗ ಆಡುತಿದ್ದ ಒಬ್ಬ ಮನುಷ್ಯನು - ದರ್ಬಾರು ಎನ್ನುವುದು ದೇಶಭಾಷೆಯಲ್ಲವಲ್ಲ ಅದನ್ನು ಹೇಗೆ ಹೇಳುವುದು? ಎಂದನು. ಅದಕ್ಕೆ ಶೇಷಯ್ಯನು-ದರ್ಬಾರು ಎನ್ನುವುದು ಮೊಗಲಾಯಿ, ಹೇಳುವಾಗ ಜರಬಾಗಿರುತ್ತೆ, ಎಂದನು.

ಈ ಮನುಷ್ಯನನ್ನು ಪಶುಪತಿ ಸಾಂಬಶಾಸ್ತ್ರಿಯೂ ಸದಾಶಿವದೀಕ್ಷಿತನೂ ಹೋಗಿ ಆತನ ಮನೆಯಲ್ಲಿ ಕಂಡರು. ಜನ ವಿಶೇಷವಾಗಿ ಇಲ್ಲದ ಸಮಯವನ್ನು ನೋಡಿ, ಸೀತಮ್ಮನ ಸ್ಥಿತಿ ಕುರಿತು ವಿಸ್ತಾರವಾಗಿ ಹೇಳಿದರು. ಏನೋ ಕೆಲವು ಗಣಿತವನ್ನು ಹಾಕಿ ನೋಡಿ ಮಂತ್ರಶಾಸ್ತ್ರದ ಪುಸ್ತಕಗಳನ್ನು ಶೋಧಿಸಿದ ತರುವಾಯ ಶೇಷಯ್ಯನು ಈ ದಿವಸ ಶುಕ್ರವಾರ, ನನಗೆ ವ್ಯವಧಾನ ಕಡಮೆ ಮತ್ತು ಯಾವ ಸಂಗತಿಯನ್ನೂ ಖಂಡಿತವಾಗಿ ಮಾತನಾಡತಕ್ಕದ್ದೂ ಅಲ್ಲ ನಾಳೆ ಶನಿವಾರ ಯಾವ ಮಾತೂ ಬೇಡ. ನಾಡಿದ್ದು ಆದಿತ್ಯವಾರ ಹೋಗಿ ಕಾಣಲಾಗಿ ಶೇಷಯ್ಯನು - ನನ್ನ ಲೆಕ್ಕಾಚಾರದಲ್ಲಿ ಹೊರಟದ್ದನ್ನು ನಾನು ಹೇಳುತ್ತೇನೆ, ನಿಮ್ಮ ಅನುಭವವನ್ನು ನೀವು ನೋಡಿಕೊಳ್ಳಿ. ನಿಮ್ಮ ಸ್ವಸ್ಥಳಕ್ಕೆ ಕೇವಲ ಸಮೀಪವಾಗಿ ಒಬ್ಬ ಶೂದ್ರ ಇದಾನೆ, ಅವನು ದುಷ್ಟ ಸ್ತ್ರೈಣ್ಯನಾಗಿ ಮಾಡಿದ ಪ್ರಯತ್ನ ಸಾಗದೇ ಹೋದ್ದರಿಂದ ಒಂದು ದೇವತೆಯನ್ನು ಆವಾಹನೆಮಾಡಿ ಶೂನ್ಯಮಾಡಿ, ರೋಗಿಯು ಯಾವಾಗಲೂ ತುಳಿಯತಕ್ಕ ಒಂದು ಸ್ಥಳದಲ್ಲಿ ಒಂದು ಬೊಂಬೆಯನ್ನು ಹೂಳಿದಾನೆ. ಇವನಿಗೆ ಒಬ್ಬ ಬ್ರಾಹ್ಮಣನ ಸಹಾಯವಿದೆ. ಈ ಬ್ರಾಹ್ಮಣನು ಮೊದಲಿನಿಂದಲೂ ನಿಮಗೆ ಮಿತ್ರನಾಗಿಯೇ ಇದ್ದು ಶತ್ರುವಾಗಿದಾನೆ. ಇದು ಚೆನ್ನಾಗಿ ನೋಡಿದರೆ ಗುಣವಾದೀತೆ ಆಗಲಾರದೆ ಎಂದು ಜೀವಚಿಂತೆ ನಿಮಗೆ ಹುಟ್ಟಿದೆ. ನನ್ನ ಜನ್ಮದಲ್ಲಿ ಇಂಥಾ ಸಂದರ್ಭ ನನಗೆ ದೊರೆತಿರಲಿಲ್ಲ, ಗ್ರಂಥದಲ್ಲಿ ಯೇನೋ ವಿಷಯ ಹೇಳಿದಾನೆ. ಪ್ರಾಣಭಯ ಚೆನ್ನಾಗಿ ತೋರುತ್ತೆ, ಇದು ಹಿಂತಿರುಗುವುದು ಕಷ್ಟ ಇನ್ನೊಂದು ಪ್ರಕ್ರಿಯೆ ರೀತ್ಯಾ ನೋಡಿದರೆ ಕೊನೆಗೆ ಪ್ರಾಣಭೀತಿ ಇಲ್ಲವೆಂತಲೂ ತೋರುತ್ತೆ. ಹೇಗೆ ಹೇಳುವುದಕ್ಕೂ ನನಗೆ ಬುದ್ದಿ ಓಡುವುದಿಲ್ಲ, ಹಗಲು ವೇಷದ ಕೃಷ್ಣಯ್ಯ ಇಲ್ಲಿಗೆ ಬರುತ್ತಾನೆ. ಆತನಲ್ಲಿ ಈ ವಿಷಯವನ್ನು ಪ್ರಸ್ತಾಪಿಸಿ ಇಬ್ಬರೂ ಸೇರಿ ಯೋಚಿಸಿ ಆ ಮಹಾತಾಯಿಯ ಮೇಲೆ ಭಾರಹಾಕಿ ನಿಷ್ಕರ್ಷೆ

ಮಾಡೋಣ. ಈ ವಿಜಾತೀಯವಾದ ಸ್ಥಿತಿಯನ್ನು ವಿಚಾರ ಮಾಡಿ ಒಂದು ಸಿದ್ಧಾಂತ ಮಾಡುವುದರಲ್ಲಿ ನನಗೆ ಕುತೂಹಲ ನಿಮಗಿಂತಲೂ ಹೆಚ್ಚಾಗಿದೆ. ನಾಳೆ ಸೋಮವಾರ ಮಧ್ಯಾಹ್ನ ಬನ್ನಿ ಎಂದು ಹೇಳಿದನು.

ಹಗಲುವೇಷದ ಕೃಷ್ಣಯ್ಯನು ಇಂಥ ವಿಷಯಗಳನ್ನು ಬಹಳವಾಗಿ ತಿಳಿದವನು. ಇವನು ಹುಟ್ಟುತಾ ತೆನಗು ರಾಜ್ಯದವನಂತೆ, ಬಾಲ್ಯದಿಂದಲೂ ಮಲೆಯಾಳದಲ್ಲಿದ್ದನು. ಅಲ್ಲಿ ಅನೇಕ ಸಂಗತಿಗಳನ್ನು ವ್ಯಾಸಂಗಮಾಡಿ ತಿಳಿದು ಕೊಂಡಿದ್ದನು. ಈತನಿಗೆ ಯಂತ್ರ, ಮಂತ್ರ, ಶುಕ್ರನಾಡಿ ಪ್ರಕಾರ ಜೋತಿಷ, ಚರಕ ಪ್ರಯೋಗದ ವೈದ್ಯ, ಗಣೇಶಪ್ರಶ್ನೆ ಶೂನ್ಯ ಮಾಡುವುದು, ಮಾಡಿದ್ದನ್ನು ತಿರುಗಿಸುವುದು, ಅಗ್ನಿಸ್ತಂಭ ಜಲಸ್ತಂಭಾದಿ ಕಂಣು ಕಟ್ಟು ಮಾಯದ ವಿದ್ಯೆಗಳು ಚೆನ್ನಾಗಿ ತಿಳಿದಿದ್ದುವಲ್ಲದೆ ಹಗಲವೇಷವನ್ನು ಹಾಕುವುದರಲ್ಲಿ ಇವ ನಿಪುಣನಾಗಿದ್ದನು. ಈತನು ಮೈಸೂರು ಸಂಸ್ಥಾನಕ್ಕೆ ಬಂದು ಪ್ರಭುಗಳ ಭೇಟಿಯನ್ನು ಮಾಡಿಕೊಂಡು ಆಗಾಗ್ಗೆ ಅರಮನೆಗೆ ಹೋಗಿ ಬರುತ್ತಾ ಇದ್ದನು. ಇವನು ಆವಾಗ ಹೇಗೆ ಬಂದಾಗ್ಯೂ ಯಾರೂ ತಡೆಯಕೂಡದೆಂದು ಅಪ್ಪಣೆಯಾಗಿತ್ತು.

ಒಂದು ದಿವಸ ಈ ಕೃಷ್ಣೈಯ್ಯನು ಮೈಗೆಲ್ಲಾ ವಿಭೂತಿಯನ್ನು ಬಳಿದುಕೊಂಡು ತಲೆಯನ್ನು ಜಟೆಯಾಗಿ ಬಿರೀಹುಯಿದುಕೊಂಡು ಬಲಗೈಯಲ್ಲಿ ಒಂದು ಚಿಮಟವನ್ನೂ ಎಡಗೈಯಲ್ಲಿ ಒಂದು ತಲೆಬುರುಡೇ ಹೋಳನ್ನೂ ಹಿಡಿದು ತನ್ನ ಗಂಡುಮಕ್ಕಳಲ್ಲಿ ಒಬ್ಬ ಚಿಕ್ಕವನಿಗೆ ಲಂಗೋಟೆಯನ್ನು ಕಟ್ಟಿ ಅವನಿಗೂ ಮೈಗೆಲ್ಲಾ ವಿಭೂತಿಯನ್ನು ಬಳಿದು ಅವನನ್ನು ಶಿಷ್ಯನನ್ನಾಗಿ ಮಾಡಿಕೊಂಡು ತಾನು ನಿರ್ವಾಣದಲ್ಲಿ ಹೊರಟನು. ಹಗಲು ವೇಷದವನಾದ್ದರಿಂದ ಇವನು ಯಾವಾಗ ಅರಮನೆಗೆ ಯಾವ ವೇಷದಲ್ಲಿ ಬಂದರೂ ಯಾರೂ ತಡೆಯಕೂಡದೆಂದು ಒಟ್ಟು ಅಪ್ಪಣೆಯಾಗಿತ್ತು. ಈ ವೇಷದಲ್ಲಿ ವಿಶೇಷವಾದ ಸಂಗತಿಯೊಂದಿತ್ತು. ಕೃಷ್ಣಯ್ಯನು ಪುರುಷ ಚಿಹ್ನೆಯೇ ಕಾಣದಹಾಗೆ ಸೇದಿಕೊಂಡಿದ್ದನು. ಜಲವಿಸರ್ಜನೆಗೆ ಮಾತ್ರ ಒಂದು ರಂಧ್ರವಿರುವಂತೆ ಕಾಣುತಿತ್ತು. ಈ ಸ್ಥಿತಿಯಲ್ಲಿ ಅಂಬಾವಿಳಾಸದೊಳಕ್ಕೆ ಹೋದನು. ಅಲ್ಲಿದ್ದ ಸಭೆಯೆಲ್ಲಾ ನೋಡಿ ಆಶ್ಚಯ್ಯಪಟ್ಟಿತು. ಇವನನ್ನು ಕೊನೆಯವರೆಗೂ ಪರೀಕ್ಷಿಸಬೇಕೆಂದು ಯೋಚಿಸಿ ನಿರ್ವಾಣವಾಗಿದ್ದ ಆ ಪುರುಷನೆದುರಿಗೆ ಸುಂದರಿಯಾದ ಹಲವು ಜನ ಸೂಳೆಯರನ್ನು ಕರೆಯಿಸಿ ನಿಲ್ಲಿಸಿದರು. ಆ ಸ್ತ್ರೀಯರು ಇವನೊಡನೆ ಇನ್ನು ಇಲ್ಲದಹಾಗೆ ಗೇಲಿ ಮಾಡುತಾ ಚಕ್ಕಂದವಾಡುತ್ತಾ ಬಂದರು. ಅವನು ಸ್ಥಿತಿ ವ್ಯತ್ಯಾಸವಾಗಲಿಲ್ಲ, ಆಗ ದೊರೆಯು ಬಹಳ ಆಶ್ಚರ್ಯಪಟ್ಟು ಬೇಕಾದಷ್ಟು ಇನಾಮನ್ನು ಕೊಟ್ಟು ಕಳುಹಿಸಿದನು.

ಇನ್ನೊಂದು ದಿವಸ ಮತ್ತೊಂದು ವಿಶೇಷವಾದ ಸಂಗತಿ ನಡೆಯಿತು. ಮೈಸೂರಿಗೆ ಆಗ ಒಬ್ಬ ಫಕೀರ ಬಂದಿದ್ದನು. ಇವನು ಬತ್ತಲಗಾಡಿಯ ಮೇಲೆ ತುಂಬಾ ಗೊಬ್ಬಳೀ ಮುಳ್ಳನ್ನು ಹಾಕಿಸಿ ಅದರಮೇಲೆ ಬರೀ ಮೈಯಲ್ಲಿ ಅಂಗತಂಗನಾಗಿ ಮಲಗಿಕೊಂಡು ಗಾಡಿಯನ್ನು ಹೊಡೆಯಿಸಿಕೊಂಡು ಕುಂದಣಮಟ್ಟಿಗೆ ಬಂದನು. ದೊರೆಯು ಇದನ್ನು ನೋಡಿ ಈ ಫಕೀರನಿಗೆ ಇನಾಮುಕೊಟ್ಟು ಕಳುಹಿಸಿದರು. ಈ ಸಂಗತಿ ಕೃಷ್ಣೈಯ್ಯನಿಗೆ ತಿಳಿಯಿತು. ಮಾರನೇದಿವಸ ಕೃಷ್ಣೈಯ್ಯನು ಹಾಗೆಯೇ ಗೊಬ್ಬಳೀಮುಳ್ಳನ್ನು ತುಂಬಾ ಹಾಕಿಸಿ ಬತ್ತಲೆಯಾಗಿ ತಾನು ಅದರಮೇಲೆ ಮಲಗಿಕೊಂಡು ದೊಡ್ಡದಾದ ಎರಡು ಚಪ್ಪಡಿಯನ್ನು ತನ್ನ ಮೈಮೇಲೆ ಹಾಕಿಸಿಕೊಂಡು ಅದೇ ಕುಂದಣ

ಮಟ್ಟಿ ಬೈಲಿನಲ್ಲಿ ಬೆಳಗ್ಗೆ ಪ್ರಭುಗಳ ಶಿವಪೂಜೆ ಹೊತ್ತಿಗೆ ಸರಿಯಾಗಿ ಬಂದನು. ಶಿವಪೂಜೆಯಾಗಿ ಆ ತೊಟ್ಟಿಯಿಂದ ಬರುವ ಸಮಯದಲ್ಲಿ ಈ ಸಂಗತಿ ತಿಳಿಯಿತು. ಕಿಟಕಿಯಿಂದ ಪರಾಂಬರಿಕೆಯಾಯಿತು. ರಾಣಿವಾಸದವರೆಲ್ಲಾ ಮೇಲೆ ಜಾಲದ ಕಿಟಕಿಯಲ್ಲಿ ಬಂದು ನಿಂತು ನೋಡಿದರು. ಈ ಗಾಡಿಯು ಅರಮನೇ ಎದುರಿನ ಬೈಲಿನಲ್ಲಿ ಮೂರು ಸುತ್ತು ಸುತ್ತಿತು. ಕೃಷ್ಣಯ್ಯನ ಸಾಹಸಕ್ಕೆ ಮೆಚ್ಚಿದರು. ಪುನಃ ಬಹುಮಾನ ದೊರೆಯಿತು.

ಮತ್ತೂ ಒಂದು ಅದ್ಭುತವಾದ ಕಾರ್ಯ ನಡೆಯಿತು. ಆ ಕಾಲದಲ್ಲಿ ಮೈಸೂರಿಗೆ ಒಬ್ಬ ಬೈರಾಗಿ ಬಂದಿದ್ದನು. ಕುಪ್ಪಣ್ಣನ ತೋಟಕ್ಕೆ ಪಶ್ಚಿಮದಲ್ಲಿ ಪೂರ್ಣಯ್ಯನ ಕಂದಕದಲ್ಲಿ ಅವಧೂತ ಸೂರ್ಯನಾರಾಯಣನ ಮಂಟಪವೆಂದಿತ್ತು. ಅದರಲ್ಲಿ ಆ ಬೈರಾಗಿ ಬಂದು ಇಳಿದುಕೊಂಡನು. ಇವನು ಪ್ರತಿನಿತ್ಯವೂ ಒಂದು ಸೇರು ಹಸೀ ಜಾಪಾಳದ ಬೀಜವನ್ನು ತಿನ್ನುತಾ ಇದ್ದನು. ಅರಮನೇ ಇಲಾಖೆಯ ಜಿನಸಿ ಕಚೇರಿಯಿಂದ ಜಾಪಾಳವನ್ನು ಕೊಡಿಸಬೇಕೆಂದು ದೊರೆಗಳ ಅಪ್ಪಣೆಯಾಗಿತ್ತು. ಅದನ್ನು ಕೊಡಿಸತಕ್ಕ ಕೆಲಸವು ಚಿತ್ರಗಾರ ತಿಪ್ಪಣ್ಣನಿಗೆ ನೇಮಕವಾಗಿತ್ತು. ಈ ಚಿತ್ರಗಾರ ತಿಪ್ಪಣ್ಣನಲ್ಲಿ ದೊರೆಗೆ ವಿಶೇಷವಾದ ಅಭಿಮಾನವಿತ್ತು. ರಾತ್ರೆ ಸ್ವಲ್ಪ ಹೊತ್ತು ಹೊರತು ಉಳಿದ ಎಲ್ಲಾ ಕಾಲದಲ್ಲಿಯೂ ತಿಪ್ಪಣ್ಣನು ದೊರೆಯ ಸಮೀಪದಲ್ಲಿಯೇ ಇರುತಾ ಚದುರಂಗ ಗಂಜೀಪು ಮೊದಲಾದ ಆಟಗಳನ್ನು ಅವರ ಸಂಗಡ ಆಡುತಾ ವಿನೋದವಾಗಿ ಕಾಲವನ್ನು ಕಳೆಯುತ್ತಿದ್ದನು. ಪ್ರಭುಸನ್ನಿಧಿಯಲ್ಲಿ ಈ ತಿಪ್ಪಣ್ಣನಿಗೆ ವಿಶೇಷವಾದ ಗೌರವವಿದ್ದರೂ, ಈತನು ಯಾರಿಗೂ ಕೇಡನ್ನು ಮಾಡುತ್ತಿರಲಿಲ್ಲ, ಸಾಧ್ಯವಾದ ಮಟ್ಟಿಗೆ ಅನೇಕರಿಗೆ ಉಪಕಾರವನ್ನು ಮಾಡಿದನು. ಇತರರಿಂದ ಆಗದ ಕೆಲಸ ಈತನಿಂದ ಆಗುತಿತ್ತು. ಜೀವನ್ಮುಕ್ತಿ ಪಠದ ಆಟ ಮೊದಲಾದ ಆಟಗಳನ್ನು ಹೊಸದಾಗಿ ಏರ್ಪಡಿಸಿದನು ಈತನೇ. ಅನೇಕರು ಈತನನ್ನು ಮನೆಯಲ್ಲಿ ಅನುಸರಿಸುತಿದ್ದರು. ಒಂದುದಿವಸ ಬೆಳಗ್ಗೆ ೮ ಗಂಟೆ ಸಮಯದಲ್ಲಿ ತಿಪ್ಪಣ್ಣನ ಮನೆಯ ಮಹಡೀ ಮೇಲೆ ಅನೇಕರು ಸೇರಿದ್ದರು. ಹಗಲವೇಷದ ಕೃಷ್ಣಯ್ಯನೂ ಅಲ್ಲಿಗೆ ಬಂದು ಕೂತಿದ್ದನು. ಬೈರಾಗಿಗೆ ಜಾಪಾಳದ ಬೀಜವನ್ನು ತೆಗೆದುಕೊಂಡು ಹೋಗಲು ಅವನ ಕಡೆಯವರು ಬಂದು ತಗಾದೇ ಮಾಡಿದರು. ಕೃಷ್ಣಯ್ಯನು ಈ ಸಂಗತಿಯನ್ನು ವಿಚಾರಿಸಿ ತಿಳಿದುಕೊಂಡು - ತಿಪ್ಪಣ್ಣನವರ, ಸವೀರ, ವತ್ಸನಾಭಿ, ಇಲೀ ಪಾಷಾಣ ಮೊದಲಾಗಿ ನವಪಾಷಾಣಗಳನ್ನು ತರಿಸಿ ಒರಳಲ್ಲಿ ಹಾಕಿಸಿ ಕುಟ್ಟಿ ಪುಡಿಮಾಡಿಸಿ ತರಿಸಿ; ಅದರಲ್ಲಿ ಒಂದು ಚಮತ್ಕಾರವಾದ ಸಂಗತಿಯನ್ನು ತೋರಿಸುತ್ತೇನೆ ಎಂದನು. ಹಗಲು ವೇಷದವನಾದಕಾರಣ ಯಾವ ತಂತ್ರವನ್ನು ಮಾಡುತ್ತಾನೋ ನೋಡಬೇಕೆಂದು ತಿಪ್ಪಣ್ಣನು ಜಿನಸೀ ಕಚೇರಿಯಿಂದ ನವಪಾಷಾಣಗಳನ್ನು ತರಿಸಿ ಹುಡಿಮಾಡಿಸಿದನು. ಆ ಹುಡಿಯನ್ನು ಬೆಳ್ಳಿತಟ್ಟೆಯಲ್ಲಿ ಹಾಕಿತಂದು ಕೃಷ್ಣಯ್ಯನ ಮುಂದೆ ಇರಿಸಿದರು. ಕೃಷ್ಣಯ್ಯನು ಆ ಪುಡಿಯನ್ನೆಲ್ಲಾ ಹುರಿಟ್ಟು ಮುಕ್ಕಿದಂತೆ ಮುಕ್ಕಿ ಪೂರೈಸಿದನು. ಅಷ್ಟರಲ್ಲಿಯೇ ಅರಮನೆಯಿಂದ ಕರೆಯುವುದಕ್ಕೆ ಬಂದರು. ತಿಪ್ಪಂಣ ಹೊರಟುಹೋದನು. ಅಲ್ಲಿದ್ದವರೆಲ್ಲರಿಗೂ ಈ ಕೃಷ್ಣಯ್ಯನ ಕೃತ್ಯವನ್ನು ಕಂಡು ವಿಶೇಷವಾಗಿ ಭಯವಾಯಿತು. ಒಬ್ಬೊಬ್ಬರಾಗಿ ಎದ್ದು ಮನೆಗೆ ಹೊರಟುಹೋದರು. ಕೃಷ್ಣಯ್ಯ ಒಬ್ಬನೇ ನಿಂತನು. ಎಷ್ಟು ಹೊತ್ತು ನೋಡಿದರೂ ಯಾರೂ ಬರಲಿಲ್ಲ ಕೃಷ್ಣಯ್ಯನು ತಾನೂ ಎದ್ದು ಮನೆಗೆ ಹೊರಟುಹೋಗಿ ಆಕವನ್ನು ತೀರಿಸಿಕೊಂಡು ಊಟಮಾಡಿ ಸುಖವಾಗಿ ಮಲಗಿಕೊಂಡು ನಾಲ್ಕು ಗಂಟೆಗೆ ಎದ್ದು ಎಲೆಅಡಕೆಯನ್ನು ಹಾಕಿಕೊಳ್ಳುತ್ತಾ ಕೂತುಕೊಂಡನು.

ಅರಮನೆಯಲ್ಲಿದ್ದ ತಿಪ್ಪಂಣನಿಗೂ ಬಹು ಭಯವುಂಟಾಯಿತು. ಅದುವರೆಗೆ ಕೃಷ್ಣಯ್ಯ ಸತ್ತು ಹೋಗಿರಬಹುದೆಂದು ಆತನೂ ಅವರ ಮನೆಯಲ್ಲಿ ಬೆಳಗ್ಗೆ ಕೂತಿದ್ದ ಜನರೆಲ್ಲರೂ ಊಹಿಸಿಕೊಂಡಿದ್ದರು. ತಿಪ್ಪಂಣನು ಪದೇ ಪದೇ ಜವಾನರನ್ನು ಕಳುಹಿಸಿ ಕೃಷ್ಣಯ್ಯನ ಸ್ಥಿತಿಯನ್ನು ಕುರಿತು ವರ್ತಮಾನವನ್ನು ತರಿಸಿಕೊಳ್ಳುತ್ತಾ ಇದ್ದನು. ಸುಖವಾಗಿ ಆ ಮನುಷ್ಯನು ಮನೆಯಲ್ಲಿ ತಾಂಬೂಲವನ್ನು ಹಾಕಿಕೊಳ್ಳುತಾ ಇದಾನೆಂದು ಕೇಳಿ ತಿಪ್ಪಂಣನು ನಡೆದ ಸಂಗತಿಯನ್ನು ದೊರೆಗಳಲ್ಲಿ ಅರಿಕೆಮಾಡಿದನು. ರಾಜಸಭೆಗೆ ಸಭೆಯೇ ಆಶ್ಚರ್ಯದಲ್ಲಿ ಮುಳುಗಿ ಹೋಯಿತು. ಕೃಷ್ಣಯ್ಯನನ್ನು ಅರಮನೆಗೆ ಕರೆಸಿ ನೋಡುವಾಗ ಅವನು ಸುಖವಾಗಿದ್ದನು. ಅವನಿಗೆ ದೊರೆಗಳು ವಿಶೇಷವಾದ ಬಹುಮಾನವನ್ನು ಮಾಡಿದರು.

ಇಂಥಾ ಅಮಾನುಷ ಕೃತ್ಯಗಳನ್ನು ಯಾವ ಮಂತ್ರ ಶಕ್ತಿಯಿಂದ ಯಾವ ಉಪಾಸನಾಶಕ್ತಿಯಿಂದ ಆತನ ಮಾಡುತಿದ್ದನೋ ತಿಳಿಯದು. ಇಂಥಾ ಮನುಷ್ಯನನ್ನು ಕಂಡು ಮಂತ್ರಮೂರ್ತಿ ಶೇಷಯ್ಯನು ಮಾತನಾಡಿ ಸದಾಶಿವದೀಕ್ಷಿತನ ಸೊಸೆಯ ಸ್ಥಿತಿಯನ್ನು ವಿವರಿಸಿ ಹೇಳಿದನು. ಇಂಥಾ ವಿಷಯಗಳಲ್ಲಿ ರತ್ನಾಕರ ಮಹೋದಧಿಯ ಹಾಗೆ ಇದ್ದ ಇವರಿಬ್ಬರಿಗೂ ಸೀತಮ್ಮನ ವ್ಯಾಧಿಯ ಗುಟ್ಟೇ ಗೊತ್ತಾಗಲಿಲ್ಲ. ಇದಕ್ಕೆ ನಿವಾರಣೆ ಏನೆಂಬುವುದು ಇನ್ನೂ ಅರಿಯುವುದಕ್ಕೆ ಸಾಧ್ಯವಾಗಿ ತೋರುತ್ತಿರಲಿಲ್ಲ, ಕೊನೆಗೆ ರೋಗಿಯ ಸ್ಥಿತಿಯನ್ನು ಮುಖತಃ ನೋಡಿ ಅನುಭವ ಮಾಡಿಕೊಂಡ ಹೊರತು ಯಾವ ಯೋಚನೆಯನ್ನೂ ಮಾಡುವುದಕ್ಕೆ ಆಗುವುದಿಲ್ಲವೆಂದು ಸಿದ್ದಾಂತ ಮಾಡಿ, ಈ ಸಂಗತಿಯನ್ನು ಪಶುಪತಿ ಸಾಂಬಶಾಸ್ತ್ರಿಗೂ ಸದಾಶಿವದೀಕ್ಷಿತನಿಗೂ ತಿಳಿಸಿದರು. ಶೇಷಯ್ಯನು ಎಲ್ಲಿಗೂ ಊರಬಿಟ್ಟು ಹೊರಡತಕ್ಕವನಲ್ಲ, ಕೃಷ್ಣಯ್ಯನು ಸ್ಥಳಕ್ಕೆ ಹೋಗಿ ತಾನು ಸೀತಮ್ಮನ ಸ್ಥಿತಿಯನ್ನು ನೋಡಿಕೊಂಡು ಬರಲು ಒಪ್ಪಿದನು. ಆದರೆ ತಾನು ಹೊರಡುವುದಕ್ಕೆ ರಾಜರ ಅಪ್ಪಣೆಯಾಗಬೇಕೆಂದು ಹೇಳಿದನು.

ಅಂಥಾ ಅಪ್ಪಣೆ ಪಡೆಯುವುದಕ್ಕಾಗಿ ಪಶುಪತಿ ಸಾಂಬಶಾಸ್ತ್ರಿಯೂ ಸದಾಶಿವ ದೀಕ್ಷಿತನೂ ಅರಮನೆಗೆ ಹೋದರು; ಶಿವಪೂಜೆ ಮುಗಿದಮೇಲೆ ವಿದ್ವದ್ಗೋಷ್ಠಿಯಲ್ಲಿ ಮಡಿಯಾಗಿಯೇ ಸ್ವಲ್ಪಹೊತ್ತು ಕೂತುಕೊಳ್ಳುವ ವಾಡಿಕೆ ಪ್ರಕಾರ ನಾಮತೀರ್ಥದ ತೊಟ್ಟಿಯಲ್ಲಿ ದೊರೆಯು ಬಿಜಮಾಡಿ ಪಂಡಿತರುಗಳ ಸಂಗಡ ಮಾತನಾಡುತ್ತಾ ಕೂತಿರುವಾಗ ಸಮಯವನ್ನು ನೋಡಿ ಪಶುಪತಿ ಸಾಂಬಶಾಸ್ತ್ರಿಯು - ಮಹಾಸ್ವಾಮಿ ಹಗಲುವೇಷದ ಕೃಷ್ಣಯ್ಯನವರನ್ನು ಸಂಜವಾಡಿಗೆ ಎಂಟು ದಿವಸದವರೆಗೆ ಕರೆದುಕೊಂಡು ಹೋಗಲು ಅಪ್ಪಣೆಯಾಗಬೇಕು ಎಂದು ಸೀತಮ್ಮನ ಸ್ಥಿತಿಯನ್ನೆಲ್ಲಾ ಅರಿಕೆ ಮಾಡಿದನು. ಆಗ ದೊರೆಯು - ಸೀತಮ್ಮನೆಂಬ ಹುಡುಗಿ ನಮ್ಮ ಸಿಡಿಲು ಮರಿಯ ಸೊಸೆಯಲ್ಲವೆ? ಮದುವೆಗೆ ನಾನೂ ಬಂದಿದ್ದೆ ಇನ್ನೂ ಮೊನ್ನೆ ಮೊನ್ನೆ ಎನ್ನುವ ಹಾಗಿದೆ, ನೀವು ಹೇಳುವುದನ್ನು ಕೇಳಿದರೆ ವಿಲಕ್ಷಣವಾದ ಸ್ಥಿತಿಯಾಗಿದೆ. ಇದು ಏನೋ ಕೃತ್ರಿಮದಿಂದ ನಡೆದಿರಬೇಕು. ನಮ್ಮ ಸಿಡಿಲಮರಿಯ ಹೆಂಡತಿಯೇನೋ ಆ ಹುಡುಗಿಗೆ ವಿಪರೀತವಾಗಿ ಹಿಂಸೆಯನ್ನು ಮಾಡುತಿದ್ದಳೆಂದು ಎಲ್ಲಿಯೋ ಗಾಳೀ ಸಮಾಚಾರ ಕೇಳಿದ್ದೆ ಈಗಲೂ ಹಾಗೆಯೇ ಇದೆಯೆ? ಎಂದು ಅಪ್ಪಣೆಯಾಯಿತು. ಈ ಮಾತಿಗೆ ಪಶುಪತಿ ಸಾಂಬಶಾಸ್ತ್ರಿಯು ಯಾವ ಮಾತನ್ನೂ ಆಡದೆ ಸುಮ್ಮನೇ ನಿಂತುಕೊಂಡನು. ಸದಾಶಿವದೀಕ್ಷಿತನು -

ರಾಜಸಭೆಯಲ್ಲಿಯೂ ಸಹಿತ ಹೆಂಡತಿಯ ಅವಿವೇಕವು ಬಂಣ ಬರೆದು ಹೋದಮೇಲೆ, ಇನ್ನು ತಾನು ಬದುಕಿ ಫಲವೇನೆಂದು ಮುಖವನ್ನು ಚಿಕ್ಕದು ಮಾಡಿಕೊಂಡು ತಲೆಬಾಗಿ ಮೌನವಾಗಿ ನಿಂತುಕೊಂಡನು. ಅದಕ್ಕೆ ಕೃಷ್ಣರಾಜ ಪ್ರಭುವು - ಸಿಡಿಲಮರಿ, ನೀನು ಯಾಕೆ ಅಷ್ಟರಲ್ಲಿಯೇ ಖಿನ್ನನಾಗುತೀಯೆ? ಈ ಗ್ರಹಛಿದ್ರ ಎಲ್ಲಿಯೂ ಇದೆ. ದೇವತೆಗಳಿಗೆ ತಪ್ಪಲಿಲ್ಲ, ಪಾಂಡವಾದಿಗಳಿಗೆ ತಪ್ಪಲಿಲ್ಲ. ಆ ವಿಷಯವಾಗಿ ಸಂಕೋಚಬೇಡ, ಹಗಲುವೇಷದ ಕೃಷ್ಣೈಯ್ಯನನ್ನು ಅಗತ್ಯವಾಗಿ ಕರೆದುಕೊಂಡು ಹೋಗು ಎಂದು ಇಂಗಿತಜ್ಞರಾದ ಪ್ರಭುವು ಅಪ್ಪಣೆ ಕೊಡಿಸಿದರು. ಇನ್ನು ೫-೬ ದಿವಸಕ್ಕೆ ತಮ್ಮ ತಂದೆಯ ವೈದಿಕ ಬರುವುದು, ಅದನ್ನು ಮಾಡಿಕೊಂಡು ಹೊರಡುತ್ತೇನೆಂದು ಕೃಷ್ಣಯ್ಯನು ಹೇಳಿದನು.

ಅಲ್ಲಿಂದ ಪಶುಪತಿ ಸಾಂಬಶಾಸ್ತ್ರಿಯೂ ಸದಾಶಿವದೀಕ್ಷಿತನೂ ಮನೆಗೆ ಬಂದು ಭೋಜನಮಾಡಿ ಕೂತುಕೊಂಡರು. ಅಷ್ಟರೊಳಗಾಗಿ ಮಹಾದೇವನು ತಂದೆಗೆ ಒಂದು ಕಾಗದವನ್ನು ಬರೆದು ಒಬ್ಬ ಆಳಿನ ಕೈಯಲ್ಲಿ ಕಳುಹಿಸಿದ್ದು ಬಂದು ತಲಪಿತು. ಅದರಲ್ಲಿ ಬರೆದಿದ್ದ ಒಕ್ಕಣೆ ಏನೆಂದರೆ :- ತೀರ್ಥರೂಪರವರ ಪಾದಪದ್ಮಂಗಳಲ್ಲಿ,

ಬಾಲಕ ಮಹಾದೇವ ಮಾಡುವ ಶಿರಸಾಷ್ಟಾಂಗ ನಮಸ್ಕಾರ. ಈ ವೈಶಾಖ ಶು॥ ೨ ಭಾನುವಾರದಲ್ಲು ಇಲ್ಲಿ ಸರ್ವರೂ ಕ್ಷೇಮವಾಗಿದೇವೆ. ಅಲ್ಲಿನ ಕುಶಲಾತಿಶಯಂಗಳಿಗೆ ಬರಿಸಿ ಬುದ್ಧಿಪತ್ರಿಕೆ ಅಪ್ಪಣೆಯಾಗಬೇಕು. ಸೌಭಾಗ್ಯವತಿಯನ್ನು ಬೀದೀಬಾಗಿಲ ಕಡೆ ಚಿಕ್ಕಮನೆಯಲ್ಲಿ ಮಲಗಿಸಿದ್ದುದು ಸರಿಯಷ್ಟೇ. ಮೊನ್ನೆ ಸಾಯಂಕಾಲ ಅಕಸ್ಮಾತ್ತಾಗಿ ಹಾಹಾ ಎಂದು ಕೈಕಾಲುಗಳನ್ನು ಬಡಿಯುತ್ತಾ ಕೂಗುವುದಕ್ಕೆ ಮೊದಲು ಮಾಡಿದಳು. ಕೂಡಲೆ ಹಜಾರಕ್ಕೆ ತಂದು ಮಲಗಿಸಿದೆವು. ಚಿರಂಜೀವಿ ಕೃಷ್ಣನು ದಿವಸಕ್ಕೆ ಹತ್ತು ಸಾರಿಯಾದರೂ ತಾಯಿಯ ಮೇಲೆ ಬಿದ್ದು ಹೊರಳಾಡಿ ಅಳುತ್ತಾನೆ. ಅವನ ದುಃಖವನ್ನು ಮನುಷ್ಯಮಾತ್ರದವರು ನೋಡಿ ಸಹಿಸುವುದು ಕಷ್ಟವಾಗಿದೆ.

ಈ ಮಧ್ಯೆ ಇನ್ನೊಂದು ವಿಪತ್ತು ಸಂಭವಿಸಿದೆ. ಈ ಕೊಠಡಿಯಿಂದ ಸಾಯಂಕಾಲ ಸೌಭಾಗ್ಯವತಿಯನ್ನು ಹಜಾರಕ್ಕೆ ಕರೆದುತಂದು ಮಲಗಿಸುವಾಗ್ಗೆ ಎಲ್ಲಾ ಸರಿಯಾಗಿಯೇ ಇತ್ತು. ಒಳಗಡೆ ಕದ ಹಾಕಿಕೊಂಡು ನಾವೆಲ್ಲರೂ ಮಲಗಿಕೊಂಡೆವು. ನಿನ್ನೆ ಬೆಳಗಾದಮೇಲೆ ನೋಡುವಾಗ ಆ ಕೊಠಡಿಗೆ ಬೀದೀಕಡೆಯಿಂದ ದೊಡ್ಡದಾಗಿ ಕನ್ನ ಬಿದ್ದಿತ್ತು. ಕನ್ನದಲ್ಲಿ ಎರಡಾಳು ನುಸಿಯಬಹುದು. ಅಷ್ಟು ದೊಡ್ಡದಾಗಿದೆ. ಅಲ್ಲಿರಿಸಿದ್ದ ಸಾಮಾನುಗಳೆಲ್ಲಾ ಗೂರಾಡಿದೆ. ಒಂದು ಕೈಪೆಟ್ಟಿಗೆ ಒಡೆದು ಅಲ್ಲಿಯೇ ಹಾಕಿದೆ. ಸೌಭಾಗ್ಯವತಿಯು ದಿನಚರಿಯಲ್ಲಿ ಇಟ್ಟುಕೊಳ್ಳುತ್ತಾ ಇದ್ದ ಅಡಿಕೆ ಜಡೇಹುವ್ವು ಚೌರೀಕೊಟ್ಟು ದೊಡ್ಡಗುಂಡು ಬುಗಡಿ ಇವುಗಳನ್ನು ಆ ಕೊಠಡಿಯ ಕದ ಬಾಗಿಲಗೂಡಿನಲ್ಲಿ ಹೆಂಗಸರೇ ಇರಿಸಿದ್ದ ಹಾಗೆ ಇತ್ತು. ನಾನು ನೋಡಿದ್ದೆ ಅವುಗಳು ಇಲ್ಲ, ಇನ್ನೇನು ಹೋಗಿದೆಯೋ ನನಗೆ ಗೊತ್ತಿಲ್ಲ. ಈ ಕಾಗದ ಕಂಡ ಕ್ಷಣವೇ ತಾವು ಯಾವ ಕೆಲಸವಿದ್ದರೂ ಬಿಟ್ಟು ಹೊರಟು ಬರಬೇಕು. ಮನೆಯಲ್ಲಿ ಹೆಂಗಸರೆಲ್ಲರೂ ಬಹಳವಾಗಿ ಭೀತರಾಗಿದಾರೆ; ತಮ್ಮ ದಾರಿಯನ್ನೇ ಎದುರು ನೋಡುತಾ ಇದಾರೆ. ಈ ವಿವರವನ್ನು ಚಿತ್ರಕ್ಕೆ ಸರಿತರುವಂತೆ ಮಾಡಿಸಬೇಕು. ಅಲ್ಲಿ ಎಲ್ಲರಿಗೂ ನನ್ನ ಸಾಷ್ಟಾಂಗ ನಮಸ್ಕಾರವನ್ನು ತಿಳಿಸಬೇಕು.

ಇಂತಿ ಸಾ॥ ನಮಸ್ಕಾರ.

ಹೀಗೆಂದು ಆ ಕಾಗದದಲ್ಲಿ ಬರೆದಿತ್ತು. ಸದಾಶಿವದೀಕ್ಷಿತನು ಅದನ್ನು ಓದಿಕೊಂಡು - ಏನೋ ನಮಗೆ ಗ್ರಹಚಾರಕಾಲ. ಒಂದಲ್ಲದೆ ಅನೇಕ ಭಾಗದಲ್ಲಿ ಕಷ್ಟ ಬಂದಿದೆ. ದೇವರು ಕಾಪಾಡಬೇಕು. ಮಾವೈಯ್ಯ, ನಾನು ಈಗಲೇ ಹೊರಡುತೇನೆ. ಅಲ್ಲಿನ ಸ್ಥಿತಿಗೆ ಕಾಗದ ಬರೆಯುತ್ತೇನೆ. ತರುವಾಯ ಕೃಷ್ಣಯ್ಯನನ್ನು ನೀನು ಕರೆದುಕೊಂಡು ಬಾ ಹೀಗೆಂದು ಹೇಳಿ ಊರಿಗೆ ಹೋದನು. ಹೋಗುತಾ ದಾರಿಯಲ್ಲಿ ನಗರದ ಆಮೀಲರಲ್ಲಿ ಈ ಕಳವಾದ ಸಂಗತಿಯನ್ನು ತಿಳಿಸಿದನು. ಕಿಲ್ಲೇದಾರರು ಆಮೀಲರು ಸಹಾ ಇವರ ಮನೆಯಲ್ಲಿ ಕಳವಾದ ಆಶ್ಚರ್ಯಪಟ್ಟವರಂತೆ ನಟಿಸಿದರು. ಕಿಲ್ಲೇದಾರರು ಸ್ಥಳಕ್ಕೆ ಬಂದು ನೋಡಿದರು. ಕಳ್ಳರನ್ನು ಪತ್ತೆಮಾಡಿ ಅವರಿಗೆ ಶಿಕ್ಷೆ ಮಾಡಿಸುವುದಾಗಿ ಹೇಳಿ ಹೊರಟುಹೋದರು.

---

## ೧೫ನೆ ಅಧ್ಯಾಯ

### ಅಮಾಸೆಯ ಕಥೆ

ಅಕಸ್ಮಾತ್ತಾಗಿ ಕುಂಪಣೀ ಸತ್ಕಾರದ ಕೆಲವು ಜವಾನರು ೮ ಜನರನ್ನು ಕರೆದುಕೊಂಡು ಮೈಸೂರಿಗೆ ಬಂದು ಸರರ್ಮಿಚಾವಡಿಗೆ ಹೋಗಿ ಒಂದು ಕಾಗದವನ್ನು ಕೊಟ್ಟರು. ಅದನ್ನು ನೋಡಿಕೊಂಡು ಸರಾಮೀನನು ಮೇಲ್ಪಟ್ಟ ಅಧಿಕಾರಿಗಳ ಅಪ್ಪಣೆ ಪಡೆದು ಆ ಜವಾನರು ಕರೆದುಕೊಂಡು ಬಂದ ೮ ಜನರನ್ನೂ ಶ್ರೀರಂಗಪಟ್ಟಣದ ಗಂಜಾಮದಲ್ಲಿದ್ದ ಬಂದೀಖಾನೀ ದರೋಗರಿಗೆ ಕಳುಹಿಸಿದನು. ಆ ೮ ಜನರಲ್ಲಿ ಒಬ್ಬೊಬ್ಬನನ್ನು ಒಂದೊಂದು ಕೊಠಡಿಗೆ ಕೂಡಿ ಕಂದಾಚಾರದವರನ್ನು ಪಹರೆ ಇಟ್ಟರು. ಈ ಕೊಠಡಿಯೊಳಕ್ಕೆ ಚಾಕರರ ವೇಷದಲ್ಲಿ ಕಳ್ಳಬಂಟರು ಮಾತ್ರ ಹೋಗಿ ಒಂಟಿ ಒಂಟಿಯಾಗಿದ್ದ ಆ ಜನರಲ್ಲಿ ಮಾತನಾಡುತಿದ್ದರೇ ಹೊರತು ಮತ್ತೆ ಯಾರನ್ನೂ ಒಳಕ್ಕೆ ಬಿಡುತ್ತಿರಲಿಲ್ಲ, ಈ ಕಳ್ಳಬಂಟರು ಮಾತ್ರ ಆ ಜನರಿಗೆ ಸಂತೋಷಕರವಾದ ಮಾತುಗಳನ್ನೇ ಆಡುತಾ ಅವರಿಗೆ ಬೇಕಾದ ತಿಂಡಿಗಳನ್ನು ಮಾಡಿ ಕೊಡುತಾ ಕೇವಲ ಹಿತಚಿಂತಕರಂತೆ ನಟಿಸಿಕೊಂಡು ಅವರಲ್ಲಿ ತಮ್ಮ ಸುಖದುಃಖಗಳೆಲ್ಲವನ್ನೂ ಉಂಟಾದ್ದರ ಜೊತೆಗೆ ಇಲ್ಲವಾದ್ದನ್ನೂ ಸ್ವಲ್ಪ ಸೇರಿಸಿ ಹೇಳಿಕೊಳ್ಳುತ್ತಾ ಬಂದು, ಅವರ ನಂಬಿಕೆಗೆ ಪಾತ್ರರಾಗಿ ಆ ಜನರ ಗುಟ್ಟನ್ನು ಒಂದೊಂದಾಗಿ ಸೆಳೆಯುತ್ತಾ ಬಂದರು. ಒಟ್ಟಾಗಿ ಬಂದ ಆ ಎಂಟುಜನರು ಬೇರೆಬೇರೇ ಒಂಟಿಯಾಗಿರುತಾ ತಮ್ಮ ಜೊತೆಗಾರರಲ್ಲಿ ಒಬ್ಬನ ಯೋಗಕ್ಷೇಮ ಇನ್ನೊಬ್ಬನಿಗೆ ತಿಳಿಯದಂತೆ ಇದ್ದಕಾರಣ ಕಳ್ಳಬಂಟರು ಚತುರೋಪಾಯಮಾಡಿ ಕೆಲವು ಸಂಗತಿಗಳನ್ನು ತಿಳಿದುಕೊಳ್ಳಲು ಯತ್ನ ಮಾಡಿದರು. ಆದರೆ ಅವರು ಮಾಡಿದ ಯಾವ ಯತ್ನವೂ ಸಾಗಲಿಲ್ಲ, ಆ ಜನರಲ್ಲಿ ಒಬ್ಬ ವಿನಾ ಉಳಿದ ಏಳುಮಂದಿಯೂ ಎಷ್ಟೋ ಸಾರಿ ಅನೇಕ ಬಂದೀಖಾನೆಗಳಲ್ಲಿದ್ದು ಅನೇಕ ಜನ ಕಳ್ಳಬಂಟರ ಪುಸುಲಾವಣೆಗೂ ಅನೇಕ ಜನ ಕಂದಾಚಾರದ ಕಟುಕರ ಚಿಟುಕುಮುಳ್ಳಿಗೂ ಸಿಕ್ಕಿ ಅನುಭವಿಸಿ ತೀರಿದ ಕೈಗಳಾಗಿದ್ದ ಕಾರಣ, ನಾಕಾಣೆ

ನಾನರಿಯೆ, ಎಂಬ ಸಸೇಮಿರವನ್ನು ನುಡಿಯುತ್ತಲೇ ಬಂದರು. ಆದರೆ ಅವರಲ್ಲಿ ಒಬ್ಬ ಮಾತ್ರ ಕಾರಾಗೃಹಕ್ಕೆ ಹೊಸಬನಾಗಿದ್ದನು; ಆ ಗುಂಪಿನವರೆಲ್ಲರಿಗಿಂತಲೂ ಪೂರ್ವ ವಯಸ್ಸಿನವನಾಗಿದ್ದನು. ಇವನ ಹತ್ತಿರ ಸೇರಿಕೊಂಡು ಇವನಿಗೆ ಆಪ್ತನಂತೆ ನಟಿಸುತ್ತಿದ್ದ ಕಳ್ಳಬಂಟನು ಕೇವಲ ಚಾತುರ್ಯ ಉಳ್ಳವನಾದಕಾರಣ ದಿನಕ್ರಮೇಣ ಆ ಯೌವನಸ್ಥನನ್ನು ಮಾರ್ಗಕ್ಕೆ ತಂದನು. ಕಳ್ಳಬಂಟನು ಆಡುತ್ತಾ ಬಂದ ನೀತಿಗೂ ಹೇಳುತ್ತಾ ಬಂದ ಕಥೆಗಳಿಗೂ ಮರುಗಿ ಆ ಹುಡುಗನು ತನ್ನ ಕಥೆಯನ್ನು ಹೇಳುತ್ತಾ ಬಂದದ್ದು ಹೇಗೆಂದರೆ:

ಹಿಮವದ್ಗೋಪಾಲನ ಬೆಟ್ಟದ ತಪ್ಪಲಲ್ಲಿರುವ ಒಂದು ಊರಿನಲ್ಲಿ ನಾನು ಹುಟ್ಟಿದೆ. ಆ ಊರ ಹೆಸರನ್ನು ನಾನರಿಯೆ. ನಮ್ಮ ತಂದೆ ಕೇವಲ ಬಡವ. ನಮ್ಮ ತಾಯಿಗೆ ಒಂದು ಕಾಲು ಕುಂಟು. ಯಾವ ಕೆಲಸವನ್ನೂ ಮಾಡಲಾರಳು. ಇವಳ ಹೊಟ್ಟೆಯಲ್ಲಿ ಒಂದು ಹೆಂಣು ಒಂದು ಗಂಡು ಹೀಗೆ ಎರಡು ಮಕ್ಕಳಾದವು, ನಮ್ಮ ತಂದೆಯು ಕೂಲಿ ಕಂಬಳಮಾಡಿ ಜೀವಿಸುತ್ತಿದ್ದನಂತೆ. ನಾನು ಆದಿತ್ಯವಾರ ಅಮಾವಾಸ್ಯೆ ಚಿತ್ತಾ ನಕ್ಷತ್ರದಲ್ಲಿ ಹುಟ್ಟಿದೆನಂತೆ. ನಾನು ಹುಟ್ಟಿದ ತಿಥಿ ವಾರ ನಕ್ಷತ್ರಗಳು ಕೆಟ್ಟದೆಂದು ನಮ್ಮ ತಂದೆಗೆ ಆ ಊರ ಜೋಯಿಸರು ಹೇಳಿದರಂತೆ. ಅದರಿಂದ ಏನು ಕೇಡಾಗುತ್ತೋ ಎಂದು ಭೀತಿಪಡುತಾ ಇದ್ದ ನಮ್ಮಪ್ಪನು ನನಗೆ ವರುಷ ತುಂಬುವುದರೊಳಗಾಗಿ ಸತ್ತು ಹೋದನಂತೆ. ತರುವಾಯ ಆರು ತಿಂಗಳೊಳಗಾಗಿ ನಮ್ಮ ತಾಯಿ ಸತ್ತುಹೋದಳಂತೆ. ಆಗ ನನಗೆ ವರಷೂವರೆ. ನಮ್ಮ ಅಕ್ಕನಿಗೆ ಐದು ವರುಷ ವಯಸ್ತಂತೆ. ಅದುವರೆಗೂ ನಮ್ಮಪ್ಪನ ಸಂಗಡ ಜಗಳವಾಡುತಿದ್ದ ನಮ್ಮ ಚಿಕ್ಕಪ್ಪನು ನನ್ನನ್ನೂ ನಮ್ಮಕ್ಕನನ್ನೂ ತನ್ನ ಮನೆಗೆ ಕರೆದುಕೊಂಡು ಹೋಗಿ ಇರಿಸಿಕೊಂಡು ನಮ್ಮಪ್ಪನ ಮನೆಯನ್ನೂ ಹೊಲವನ್ನೂ ತಾನೇ ಸೇರಿಸಿಕೊಂಡನಂತೆ. ನಮ್ಮ ಚಿಕ್ಕಮ್ಮನು ದಿಕ್ಕಿಲ್ಲದ ಪರದೇಶಿಗಳಾಗಿದ್ದ ನಮ್ಮನ್ನು ಮನಸ್ಸು ಬಂದಹಾಗೆ ಹೊಡೆಯುವುದು ಬಯ್ಯುವುದು, ದಿವಸಕ್ಕೆ ಒಂದು ಸಾರಿಯೂ ನಮಗೆ ಹಿಟ್ಟನ್ನು ಹಾಕಬಾರದು, ಗಂಡನಲ್ಲಿ ಇಲ್ಲದ ಚಾಡಿಯನ್ನು ಹೇಳಿ ನನ್ನನ್ನು ಹೊಡಿಸುವುದು, ನಮ್ಮ ಕೈಲಾಗದ ಕೆಲಸವನ್ನು ನಮ್ಮಿಂದ ಮಾಡಿಸುವುದು, ಹೀಗೆಲ್ಲಾ ಮಾಡುತಿದ್ದಳು. ನಾವು ಇದ್ದದು ಶುದ್ಧವಾಗಿ ಮಲೆಸೀಮೆ. ಆಲ್ಲಿ ಚಳಿ ಹೆಚ್ಚಾಗಿತ್ತು. ಹೊದ್ದುಕೊಳ್ಳುವುದಕ್ಕೆ ಅಂಗೈ ಅಗಲ ಬಟ್ಟೆಗೂ ಗತಿ ಇರಲಿಲ್ಲ ಬರೀ ಮೈಯಲ್ಲಿ ನಾವು ಓಡಿಯಾಡುತಿದ್ದೆವು. ಒಂದು ಹರಕು ಕಂಬಳಿ ಇತ್ತು. ಅದು ನಮ್ಮ ಅಪ್ಪನದಂತೆ. ಅದನ್ನು ನಾನೂ ನಮ್ಮಕ್ಕನೂ ಹೊದ್ದುಕೊಂಡು ಸುರುಟಿಕೊಳ್ಳುತಿದ್ದೆವು. ನನ್ನ ಮೂರನೇ ವರುಷ ವಯಸ್ಸಿನಿಂದ ನಡೆದ ಸಂಗತಿಗಳೆಲ್ಲಾ ನನಗೆ ಚೆನ್ನಾಗಿ ಜ್ಞಾಪಕವಿದೆ. ಹಗಲುಹೊತ್ತು ಅಲ್ಲಿ ಇಲ್ಲಿ ಸಿಕ್ಕಿದ ಒಣಹುಲ್ಲನ್ನು ಆ ಕಂಬಳಿಯೊಳಗೆ ಹಾಕಿ ಬೇರೇ ಸುತ್ತಿರಿಸುತಿದ್ದೆವು. ಈ ಹುಲ್ಲನ್ನು ರಾತ್ರೆ ಹಾಸಿಕೊಂಡು ದನದ ರಂಜಳಿಗೆಯೊಳಗೆ ಬಿದ್ದುಕೊಳ್ಳುತಿದ್ದೆವು. ಕೊಟ್ಟಿಗೆ ಸುತ್ತಲೂ ಮುಳ್ಳುಬೇಲೀ ಹಾಕಿರುತಿತ್ತು. ಅಲ್ಲಿಗೆ ಕದವಿಲ್ಲ ಬಾಗಿಲಿಲ್ಲ ನನಗೆ ಐದು ವರುಷ ನಮ್ಮಕ್ಕನಿಗೆ ಒಂಭತ್ತು ವರುಷ ತುಂಬಿತು. ನಾವು ರಾಗೀ ಬೀಸುತಿದ್ದೆವು. ಸಂಣ ಮೊಗೆಯಲ್ಲಿ ಒಂದು ಕೊಂಬಿನ ಕೂಗು ದೂರದಿಂದ ನಾನೂ ನಮ್ಮಕ್ಕನೂ ನೀರನ್ನು ತಂದು ದನಗಳು ಕುಡಿಯುವುದಕ್ಕೂ ಮನೇ ಬಳಕೆಗೂ ಬಾನಿಗೆ ಹಾಕುತಿದ್ದೆವು. ದೊಡ್ಡ ಮಡಕೆಯಲ್ಲಿ ನೀರ ಹೊತ್ತುಕೊಂಡು ಬನ್ನಿ ಎಂದು ನಮ್ಮ ಚಿಕ್ಕವ್ವ ಹೇಳಿದಳು. ಮೊಗೆಯಲ್ಲಿ ಅಲ್ಲಿನ ಆಳವಾದ ಕೊಳದಿಂದ ನೀರನ್ನು ತಂದು ಆ ದೊಡ್ಡ ಮಡಕೆಯನ್ನು ತುಂಬಿದೆವು. ಆ

ಮಡಕೆಯನ್ನು ಎತ್ತುವುದು ಹೇಗೆ? ನಮ್ಮಿಬ್ಬರ ಕೈಯಲ್ಲಿಯೂ ಆಗದು. ಏನಮಾಡಬೇಕು? ಅಲ್ಲಿ ಬಿದ್ದಿದ್ದ ಒಂದು ಕಟ್ಟಿಗೆಯನ್ನೂ ಬೇಲಿಗೆ ಹಬ್ಬಿದ್ದ ಹಂಬನ್ನೂ ತೆಗೆದುಕೊಂಡು ಹರವಿಗೆ ಉಗ್ಗದ ಹಾಗೆ ಕಟ್ಟಿ ಕಟ್ಟಿಗೆಯ ಮಧ್ಯಕ್ಕೆ ಅದನ್ನು ನಮ್ಮಕ್ಕ ಬಿಗಿದಳು. ಆ ಕಟ್ಟಿಗೆಯನ್ನು ನಾನೊಂದು ಕಡೆ ಅವಳೊಂದು ಕಡೆ ಎತ್ತಿ ತೋಳಮೇಲೆ ಇರಿಸಿಕೊಂಡು ನಾಲ್ಕು ಹೆಜ್ಜೆ ಹೋಗುವುದು ಒಂದುಕಡೆ ಇರಿಸುವುದು, ಹೀಗೆಯೇ ಮಾಡಿ ನಮ್ಮ ಹಟ್ಟಿ ತನಕ ಕೊಂಡುಹೋದೆವು. ನಮ್ಮಿಬ್ಬರಿಗೂ ಬಹುಕಷ್ಟವಾಯಿತು, ಏರುಬ್ಬಸಬಂತು. ಕೊನೆಗೂ ತಂದೆವಲ್ಲಾ ಎಂಬ ಸಂತೋಷದಿಂದ, ಒಳಕ್ಕೆ ಜಾಗ್ರತೆಯಾಗಿ ತೆಗೆದುಕೊಂಡು ಹೋಗಿ ಇರಿಸಿದರೆ ನಮ್ಮ ಚಿಕ್ಕವ್ವನಿಗೆ ಸಂತೋಷವಾಗಬಹುದೆಂದು ಯೋಚಿಸಿ ಆತುರಪಟ್ಟೆವು. ನಮ್ಮ ಹಾಳ ಗ್ರಹಚಾರವನ್ನು ಏನ ಹೇಳಲಿ? ಹೊಸಲಿನಿಂದ ಮೇಲಕ್ಕೆ ಎತ್ತಲು ನಮ್ಮ ಕೈಲಾಗಲಿಲ್ಲ ಹೊಸಲು ಮಡಕೆಗೆ ತಗಲಿ ಅದು ಒಡೆದು ಹೋಯಿತು. ಮನೆ ಎಲ್ಲಾ ನೀರಾಯಿತು. ನಮ್ಮ ಚಿಕ್ಕವ್ವ ಬಂದು ನೋಡಿದ್ದೇ ನಮ್ಮಿಬ್ಬರನ್ನೂ ಕೈಯಿಂದ ಚೆನ್ನಾಗಿ ಹೊಡೆದಳು. ನನ್ನ ಮೇಲೆ ಏಟು ಬೀಳುತಿರುವಾಗ ನಮ್ಮಕ್ಕ ಹೆಚ್ಚಾಗಿ ಅಳುತಾ - ಚಿಕ್ಕವ್ವ, ತಮ್ಮನನ್ನು ಹೊಡೆಯಬೇಡ, ಬೇಕಾದರೆ ನನ್ನನ್ನು ಹೊಡೆ ಎಂದು ಕೈಯನ್ನು ಅಡ್ಡಕಟ್ಟಿಕೊಂಡಳು. ನಮ್ಮ ಚಿಕ್ಕವ್ವನಿಗೆ ಇನ್ನೂ ಕೋಪ ಬಂತು. ತಮ್ಮನಿಗೆ ವಹಿಸಿಕೊಂಡು ಬರುತೀಯ ಲೌಡಿ, ಎಂದು ಚಿಕ್ಕವ್ವ ನನ್ನನ್ನೂ ನಮ್ಮಕ್ಕನನ್ನೂ ಇನ್ನೂ ಹೆಚ್ಚಾಗಿ ಹೊಡೆದಳು. ಸ್ವಲ್ಪ ಹೊತ್ತಿಗೆ ನಮ್ಮ ಚಿಕ್ಕಪ್ಪ ಬಂದ. ಅವನ ಸಂಗಡ ನಮ್ಮ ಚಿಕ್ಕವ್ವನು ಇಲ್ಲದ ಚಾಡಿಯನ್ನೆಲ್ಲಾ ಸುಳ್ಳು ಸುಳ್ಳಾಗಿ ಹೇಳಿದಳು. ಅವನಿಗೂ ನಮ್ಮ ಮೇಲೆ ಕೋಪಬಂತು. ಅಲ್ಲಿ ಬಿದ್ದಿದ್ದ ಹಂಬನ್ನು ತೆಗೆದುಕೊಂಡು ಅವನೂ ಚೆನ್ನಾಗಿ ಹೊಡೆದನು. ನಮ್ಮಿಬ್ಬರಿಗೂ ಮೈ ಎಲ್ಲಾ ಬಾಸುಂಡೆಯಾಯಿತು. ಅದರಿಂದ ರಕ್ತ ಅಲ್ಲಲ್ಲಿ ಉಮ್ಮುತಾ ಇತ್ತು. ಅವತ್ತೆಲ್ಲಾ ಹೊಟ್ಟೆಗೆ ಹಿಟ್ಟಿಲ್ಲ. ರಾತ್ರೆಯಾಯಿತು. ಬಾಗಿಲಹಾಕಿಕೊಂಡು ನಮ್ಮ ಚಿಕ್ಕವ್ವನೂ ಚಿಕ್ಕಪ್ಪನೂ ಮಲಗಿಕೊಂಡರು. ನಮ್ಮ ಕಂಬಳಿ ಒಳಗೆ ಸಿಕ್ಕಿಹೋಯಿತು. ಬರೀಮೈಯಲ್ಲಿ ಎಂದಿನ ರಂಜಳಿಗೆಯಲ್ಲಿ ಕೂತುಕೊಂಡೆವು. ಏಟು ಬಿದ್ದದು ಬೇರೆ, ಚಳಿ ಬೇರೆ, ಹೊಟ್ಟೆಗೆ ಹಿಟ್ಟಿಲ್ಲದ್ದು ಬೇರೆ ಹೀಗೆ ಇತ್ತು. ನಿದ್ರೆ ಬರಲೇ ಇಲ್ಲ ಅಲ್ಲೆಲ್ಲಾ ಹುಲಿ ಕಿರಬ ಇವುಗಳ ಕಾಟ ಬಲ. ಸರಿಹೊತ್ತು ಮೀರಿತ್ತು. ಒಂದು ಹುಲಿ ಕೂಗುತಾ ನಮ್ಮ ಗುಡಲಿನ ಹತ್ತಹತ್ತರಕ್ಕೆ ಬಂತು. ನಮಗೆ ಬಹು ಹೆದರಿಕೆಯಾಯಿತು. ನಾವಿಬ್ಬರೂ ಗಡಗಡನೆ ನಡುಗುತ್ತಾ ಕೂತಿದ್ದ ಕಡೆಯಲ್ಲಿಯೇ ಕಾಲಮಡಿ ಮಾಡಿಕೊಂಡೆವು. ಹುಲಿ ಹಾಗೆಯೇ ಹೊರಟು ಹೋಯಿತು. ಕೊಳಕ್ಕೆ ಹೋಗಿ ಬಿದ್ದು ಸಾಯೋಣ ಬರುತೀಯ? ಎಂದು ನಮ್ಮಕ್ಕ ಕೇಳಿದಳು. ಸಾಯುವುದು ಎಂದರೆ ನನಗೆ ತಿಳಿಯದು. ಹಾಗೆ ಸತ್ತರೆ ನಮ್ಮ ಚಿಕ್ಕವ್ವ ಹೊಡೆಯುತಾಳೋ ಏನೋ, ನಾನು ಏಟ ತಡೆಯಲಾರೆ ಕಣಕ್ಕಯ್ಯ ಎಂದೆ. ನಾನು ಆಡಿದ ಮಾತಿಗೆ ನಮ್ಮ ಅಕ್ಕನಿಗೆ ಬಹಳ ದುಃಖಬಂತು. ಅಯ್ಯೋ ನನ್ನ ಕಂದ ಎಂದು ಅವಳು ನನ್ನ ಕತ್ತನ್ನು ಕಟ್ಟಿಕೊಂಡು ಅತ್ತಳು. ಅಷ್ಟರಲ್ಲಿ ಬೆಳಗಾಯಿತು. ಮೇಲಕ್ಕೆ ಏಳುವುದಕ್ಕೆ ನಮ್ಮ ಕೈಲಾಗದು. ಮೆಲ್ಲಗೆ ಎದ್ದು ಈಚೆಗೆ ಬಂದು ನಿಂತುಕೊಂಡೆವು. ಬಾಗಿಲ ತೆಗೆದುಕೊಂಡು ನಮ್ಮ ಚಿಕ್ಕಪ್ಪ ಈಚೆಗೆ ಬಂದು ನಮ್ಮನ್ನು ನೋಡಿದ. ರಾತ್ರೆ ಯಾಕೆ ಹಿಟ್ಟತಿನ್ನಲಿಲ್ಲ ಎಂದು ಕೇಳಿದ. ನಾನು ಗಡಗಡನೆ ನಡುಗುತಾ ಕೆಳಕ್ಕೆ ಬಿದ್ದೆ. ಆಗ ಅವನು ಒಣಕಲ ರೊಟ್ಟಿಯನ್ನು ತಂದು ನಮ್ಮಿಬ್ಬರಿಗೂ ಕೊಟ್ಟನು. ಅದನ್ನು ತಿಂದು ನೀರ ಕುಡಿದಮೇಲೆ ಸ್ವಲ್ಪ ಉಸಿರು ಬಂತು. ಹೀಗೆಯೇ

ಕಷ್ಟಪಟ್ಟು ಕಾಲ ಕಳೆಯುತ್ತಾ ಬಂದೆವು. ನಮ್ಮಕ್ಕ ಅಡಿಗೆ ಮಾಡುವ ಹಾಗಾದಳು. ನಮ್ಮ ಚಿಕ್ಕವ್ವ ಅಡಿಗೆಯನ್ನು ಅವಳ ಕೈಲಿ ಮಾಡಿಸುತ್ತಾ ಬಂದಳು. ಆಗಿನಿಂದ ನಮ್ಮಿಬ್ಬರಿಗೂ ಹೊಟ್ಟೆತುಂಬ ಹಿಟ್ಟು ಸಿಕ್ಕುವ ಹಾಗಾಯಿತು.

ನಾವು ಜಾತಿಯಲ್ಲಿ ಮರಾಟೆಯವರಂತೆ, ನಮ್ಮಲ್ಲಿ ನೆರೆಯುವುದಕ್ಕೆ ಮುಂಚೆಯೇ ಮದುವೆಯಾಗಬೇಕಂತ. ನಮ್ಮಕ್ಕ ನೋಡುವುದಕ್ಕೆ ಬಹಳ ಲಕ್ಷಣವಾಗಿದ್ದಳು. ಅವಳಿಗೆ ೧೨-೧೩ ವರುಷವಾಗುತಾಬಂತು. ಅವಳನ್ನು ಮದುವೇ ಮಾಡಿಕೊಡಿ ಎಂದು ಅನೇಕರು ಕೇಳುವುದಕ್ಕೆ ಬಂದರು. ಆ ಹೆಣ್ಣಿಗೆ ೫೦ ವರಹ ಕೊಟ್ಟವರಿಗೆ ಮದುವೆ ಮಾಡಿಕೊಡುವುದಾಗಿ ನಮ್ಮ ಚಿಕ್ಕಪ್ಪ ಹಠಮಾಡಿಕೊಂಡಿದ್ದನು. ಮದುವೆಗೆ ಮುಂಚೆ ತಾನು ದೊಡ್ಡವಳಾದರೆ ಜಾತಿಯಿಂದ ಹೊರಗೆ ಹಾಕುತ್ತಾರೆ, ಹೇಗಾದರೂ ಆಗಲಿ ಯಾರಾದರೂ ಮದುವೆ ಮಾಡಿಕೊಂಡರೆ ಸಾಕು ಎಂದು ನಮ್ಮ ಅಕ್ಕ ದೇವರಿಗೆ ಹರಕೆ ಹೊರುತಿದ್ದಳು. ಕಣವೇ ಕೆಳಗಿನಿಂದ ಹೆಂಣ ಹುಡುಕಿಕೊಂಡು ಒಬ್ಬ ಮನುಷ್ಯ ಬಂದನು. ಯಥಾ ಪ್ರಕಾರವಾಗಿ ೫೦ ವರಹಕ್ಕೆ ಒಂದು ಕಾಸು ಕಡಮೆಯಾದರೂ ಹೆಂಣ ಕೊಡುವುದಿಲ್ಲವೆಂದು ನಮ್ಮ ಚಿಕ್ಕಪ್ಪ ಹೇಳಿದನು. ಕೊನೆಗೆ ಐವತ್ತು ವರಹವನ್ನು ಎಣಿಸಿಕೊಟ್ಟು ಹುಡುಗಿಯನ್ನು ನಮ್ಮ ಸಂಗಡ ಈಗಲೇ ಕಳುಹಿಸಬೇಕೆಂದು ಆತ ಹೇಳಿದನು. ಅದಕ್ಕೆ ನಮ್ಮ ಚಿಕ್ಕವ್ವನು - ನಮ್ಮ ಮನೆಯಲ್ಲಿ ಹಿಟ್ಟ ಹಾಕುವುದೇ ಮಿಕ್ಕಿತು, ಈಗಲೇ ಕರೆದುಕೊಂಡುಹೋಗಯ್ಯ ಎಂದಳು. ನಮ್ಮಕ್ಕನು ಹೋಗುವುದಕ್ಕೆ ಒಪ್ಪಿದಳು. ಆಗ ನಮ್ಮ ಚಿಕ್ಕವ್ವನು - ನಮ್ಮ ಮನೆ ಸೀರೆಯನ್ನು ಬಿಚ್ಚಿಹಾಕಿ ನಿನ್ನ ಗಂಡನಮನೇ ಸೀರೆಯನ್ನು ಉಟ್ಟುಕೊಂಡು ಹೋಗು ಎಂದಳು. ಕನ್ಯಾರ್ಥಿಯು - ಬಹು ಚೆನ್ನಾಗಿದೆ, ಐವತ್ತು ವರಹ ಕೊಟ್ಟಿದ್ದೇನೆ, ನಿಮ್ಮ ಮನೆಯಿಂದ ಒಂದು ಹಣದ ತುಂಡನ್ನಾದರೂ ಉಡಿಸಿ ಕಳುಹಿಸುವುದಿಲ್ಲವೆಂದು ಹೇಳಿದಮೇಲೆ ನಿಮ್ಮ ಹೆಂಣೇ ಬೇಡವೆಂದು ಸುಮ್ಮನೇ ಹೊರಟನು. ಆಗ ನಮ್ಮಕ್ಕನು ಸುಮ್ಮನಿರದೆ ಆತನನ್ನು ಕುರಿತು - ಸ್ವಾಮಿ, ನನಗೋಸ್ಕರ ೫೦ ವರಹ ಕೊಟ್ಟವರು ಇನ್ನೊಂದು ಹರಕು ಪಂಚೆಯನ್ನು ಕೊಡಲಾರಿರ? ದಯಮಾಡಿ ಒಂದು ಬಟ್ಟೆಯನ್ನು ನನಗೆ ಕೊಟ್ಟು ನನ್ನ ಕಷ್ಟವನ್ನು ಬಿಡಿಸಿ ಎಂದು ಅಳುವುದಕ್ಕೆ ಮೊದಲುಮಾಡಿದಳು.' ಆ ಪುರುಷನು ಬಹಳ ಕನಿಕರದಿಂದ ತನ್ನ ಒಂದು ಪಂಚೆಯನ್ನು ನಮ್ಮಕ್ಕನ ಕೈಗೆ ಕೊಟ್ಟನು. ಅದನ್ನು ಉಟ್ಟುಕೊಂಡು ಮೊದಲು ಉಟ್ಟಿದ್ದ ಹರಕುತುಂಡನ್ನು ಬಿಚ್ಚಿ ಇರಿಸಿ, ನನ್ನನ್ನು ತಬ್ಬಿಕೊಂಡು ಅತ್ತಳು. ಅಕ್ಕ, ನನ್ನನ್ನು ಬಿಟ್ಟು ಹೋಗಬೇಡ, ನಾನು ಏಟ ತಡೆಯಲಾರೆ, ಎಂದು ಗಟ್ಟಿಯಾಗಿ ನಾನು ಅತ್ತೆ. ನಮ್ಮಿಬ್ಬರ ದುಃಖವನ್ನು ನೋಡಿ ನಮ್ಮ ಭಾವನ ಮನಸ್ಸು ಕರಗಿತು. ಕಳುಹಿಸಿಕೊಟ್ಟರೆ ನನ್ನನ್ನೂ ಸಂಗಡ ಕರೆದುಕೊಂಡುಹೋಗಿ ಕಾಪಾಡುವುದಾಗಿ ಹೇಳಿದನು. ನಮ್ಮ ಚಿಕ್ಕಪ್ಪ ಕಳುಹಿಸುವುದಿಲ್ಲವೆಂದು ಹೇಳಿಬಿಟ್ಟನು. ಆಗ ನಮ್ಮಕ್ಕನು ನನ್ನ ತಲೇ ತಡವರಿಸಿ - ಎಲ್ಲಿಯಾದರೂ ತಂಣಗೆ ಬದುಕು ಕಂದ ಎಂದು ಹೇಳಿ ಅಳುತಾ ಹೊರಟುಹೋದಳು.

ನಮ್ಮಕ್ಕನ ಹಂಬಲು ನನಗೆ ಮರೆಯಲಿಲ್ಲ, ಅವಳನ್ನು ನೆನಿಸಿಕೊಂಡು ಆಗಾಗ್ಗೆ ಅಳುತ್ತಲೇ ಇದ್ದೆ ನಮ್ಮಕ್ಕನನ್ನು ಮಾರಿ ಬಂದ ೫೦ ವರಹವನ್ನು ನಮ್ಮ ಚಿಕ್ಕಪ್ಪನು ಒಂದು ಗಳಗೆಯೊಳಗೆ ಇರಿಸಿದ್ದನು. ನಮ್ಮ ಚಿಕ್ಕವ್ವನು ಅದನ್ನು ಯಾರೂ ಕಾಣದ ಹಾಗೆ ತೆಗೆದುಕೊಂಡು ಯಾವನೋ ಒಬ್ಬನ ಸಂಗಡ ಎಲ್ಲಿಯೋ

ಓಡಿಹೋದಳು. ಹಿಟ್ಟ ಬೇಸುವುದಕ್ಕೂ ಯಾರೂ ಇಲ್ಲದಹಾಗಾಯಿತು. ಕಡೆಗೆ ನಮ್ಮ ಚಿಕ್ಕಪ್ಪನು ಆ ಊರನ್ನು ಬಿಟ್ಟು ನನ್ನನ್ನೂ ಕರೆದುಕೊಂಡು ಊರೂರು ಗಡಿಯ ಹೊರಟನು. ದಾರಿಯಲ್ಲಿ ಕಂಡವರ ಸಂಗಡಲೆಲ್ಲಾ - ಈ ಹುಡುಗನಿಗೆ ಯಾರಾದರೂ ೧೦ ವರಹ ಕೊಟ್ಟರೆ ಸಾಕಕೊಟ್ಟು ಬಿಡುತ್ತೇನೆ ಎಂದು ಹೇಳಿಕೊಳ್ಳುತ್ತಲೇ ಬಂದನು. ಈ ಸಂಗತಿಯನ್ನು ಹೇಳುವಾಗಲೆಲ್ಲಾ ನಾನು ಹುಟ್ಟಿದ ತಿಥಿ ವಾರ ನಕ್ಷತ್ರಗಳನ್ನು ಹೇಳುತಾ - ಈ ಹುಡುಗನನ್ನು ತೆಗೆದುಕೊಳ್ಳತಕ್ಕವರಿಗೆ ಬಹಳ ಹಣ ದೊರೆಯುವುದು, ಇವನು ಬಹಳ ಪುಣ್ಯವಂತನಾಗುತ್ತಾನೆಂದು ಜೋಯಿಸರು ಹೇಳಿದಾರೆಂಬದಾಗಿ ಎಲ್ಲರಲ್ಲಿಯೂ ಹೇಳುತ್ತಾ ಬಂದನು. ಕಡೆಗೆ ಅರಿಕುಟಾರದಕಡೆ ಇರುವ ಸಂಜವಾಡಿಗೆ ಬಂದೆವು. ಸಾಯಂಕಾಲವಾಗಿತ್ತು. ನಾವು ತಂದಿದ್ದ ರೊಟ್ಟಿಯೆಲ್ಲಾ ಮುಗಿದುಹೋಗಿ ನನಗೆ ಒಂದು ದಿವಸದ ಉಪವಾಸವೂ ನಮ್ಮ ಚಿಕ್ಕಪ್ಪನಿಗೆ ಎರುಡ ದಿವಸದ ಉಪವಾಸವೂ ಆಗಿತ್ತು. ನಮ್ಮ ಚಿಕ್ಕಪ್ಪನ ದೊಡ್ಡ ಗಂಟನ್ನು ಹೊತ್ತುಕೊಂಡು ಅವನ ಸಂಗಡ ಓಡಿಓಡಿ ನನಗೆ ಸಾಕಾಗಿತ್ತು. ಆವೂರ ಅಮ್ಮನ ಗುಡಿಯ ಕೈಸಾಲೆಯಲ್ಲಿ ಹೋಗಿ ಮಲಗಿ ಕೊಂಡೆವು. ಅಲ್ಲಿ ಯಾರು ಯಾರೋ ಜನರು ಬಂದು ಕೂತುಕೊಂಡಿದ್ದರು. ಅವರು ನಮ್ಮ ಕ್ಷೇಮಲಾಭವನ್ನು ವಿಚಾರಿಸಿದರು. ನಮ್ಮ ಕಥೆಯನ್ನು ಚಿಕ್ಕಪ್ಪ ಹೇಳಿದನು. ಅವರಲ್ಲಿ ೫೦ ವರುಷಕ್ಕೆ ಮೇಲ್ಪಟ್ಟ ಒಬ್ಬ ಮನುಷ್ಯನು ಪಶ್ಚಾತ್ತಾಪದಿಂದ ನಮ್ಮಿಬ್ಬರನ್ನೂ ಕರೆದುಕೊಂಡು ಹೋಗಿ ತನ್ನ ಮನೆಯಲ್ಲಿ ಹಿಟ್ಟನ್ನೂ ಅನ್ನವನ್ನೂ ಹಾಕಿ ಉಪಚರಿಸಿದನು. ನಮಗೆ ಹಸಿವು ಬಹಳವಾಗಿತ್ತು. ಆ ಮನುಷ್ಯ ಯಾವ ಜಾತಿಯವನೆಂದೂ ಕೂಡ ಕೇಳದೆ ಊಟಾ ಮಾಡಿದೆವು. ಆ ಮನುಷ್ಯನ ಮನೆ ಬಾಗಿಲನ್ನೂ ಅವನು ವಾಸಮಾಡತಕ್ಕ ರೀತಿಯನ್ನೂ ನೋಡಿ ಯಾರೋ ಉತ್ತಮ ಜಾತಿಯವನೇ ಆಗಿರಬಹುದೆಂದು ತಿಳಿದುಕೊಂಡೆವು. ಹೇಗಾದರೂ ಆಗಲಿ, ಹೊಟ್ಟೆ ತುಂಬಿತು. ಅವರ ಮನೇ ಜಗಲೀ ಮೇಲೆ ನಾನು ಮಲಗಿಕೊಂಡೆ. ಆತನೂ ನಮ್ಮ ಚಿಕ್ಕಪ್ಪನೂ ಏನೋ ಮಾತನಾಡುತ್ತಾ ನನ್ನ ಪ್ರಸ್ತಾಪವನ್ನು ಎತ್ತಿದರು. ಅಷ್ಟರಲ್ಲಿ ನನಗೆ ನಿದ್ದೆ ಬಂತು. ಆಮೇಲೆ ಏನು ಮಾತು ಜರಿಗಿತೋ ಕಾಣೆ. ಬೆಳಗಾಯಿತು. ಬೀದೀಬಾಗಿಲ ಜಗಲೀಮೇಲೆ ೮-೧೦. ಜನರು ಕೂತು ಮಾತನಾಡಲು ಆರಂಭಿಸಿದರು. ಆ ಮಾತು ನನಗೆ ಚೆನ್ನಾಗಿ ಗೊತ್ತಾಗಲಿಲ್ಲ ಅವರಲ್ಲಿ ಒಬ್ಬನು-ಏನು ಮೀನಮೇಷ ಯೋಚಿಸುತೀಯ, ಮಾದ, ನಿನಗೆ ಮಕ್ಕಳಿಲ್ಲ ಹುಡುಗ ಚೆನ್ನಾಗಿದಾನೆ. ಅವನು ಹುಟ್ಟಿದ ತಿಥಿ ವಾರ ನಕ್ಷತ್ರವನ್ನು ನೋಡಿದರೆ ಇವನಿಂದ ಅನೇಕ ಕೆಲಸಗಳು ಆಗಬೇಕಾಗುತ್ತೆ. ಹಣದ ಮುಖವನ್ನು ನೋಡಬೇಡ. ನಾವಾಗಿ ಹುಡುಕಿಕೊಂಡು ಹೋಗಬೇಕಾದ್ದು ತಾನಾಗಿ ದೊರೆತಿದೆ. ಹಣಕ್ಕೆ ಪಾಲುಮಾರಬೇಡ. ಒಂದು ದಿವಸದಲ್ಲಿ ಇದಕ್ಕೆ ನೂರರಷ್ಟು ಸಂಪಾದಿಸಬಲ್ಲ ಎಂದು ಹೇಳಿದನು. ಅಷ್ಟುಹೊತ್ತಿಗೆ ಆ ವೂರ ಗಂಡಸರೆಲ್ಲರೂ ಸೇರಿಬಿಟ್ಟರು. ಅವರುಗಳೂ ಕೂಡ-ಮಾದೈಯ್ಯ ಬದಲು ಮಾತನಾಡಬೇಡ, ಸುಮ್ಮನೇ ಹಣ ಕೊಟ್ಟು ಬಿಡು ಎಂದರು. ಆಗ ಮಾದೈಯ್ಯನು ಒಂದೇ ಮನಸ್ಸಿನಲ್ಲಿ ಇಪ್ಪತ್ತು ವರಹವನ್ನು ತಂದು ನಮ್ಮ ಚಿಕ್ಕಪ್ಪನಿಗೆ ಕೊಟ್ಟು ತಾನಾಗಿ ತನ್ನ ಸಂತೋಷದಿಂದ ಒಂದು ಪಂಚೆಯನ್ನೂ ಒಂದು ಕರೀ ಕಂಬಳಿಯನ್ನೂ ಮನೆಯೊಳಗಿನಿಂದ ತಂದು ಎಲೆಅಡಕೆ ಇರಿಸಿಕೊಟ್ಟನು. ನಮ್ಮ ಚಿಕ್ಕಪ್ಪ ಅದನ್ನು ತೆಗೆದುಕೊಂಡು ಊಟಮಾಡಿ - ನೀನು ಇವರ ಮನೆಯಲ್ಲಿರು, ನಾನು ಬರುತ್ತೇನೆಂದು ನನಗೆ ಹೇಳಿ ಅದೇ ಮುಖಕ್ಕೆ ಹೋದನು; ನನ್ನನ್ನು ಆ ವೂರವರೆಲ್ಲರೂ ಬಂದು ನೋಡಿಕೊಂಡು ಹೋದರು. ಮಾದೈಯ್ಯನಿಗೆ ಇನ್ನು

ಯಾವ ಹೆಂಣಾಗಲಿ ಗಂಡಾಗಲಿ ಮಕ್ಕಳಿರಲಿಲ್ಲ ಅವನು ಮನೆಯಲ್ಲಿ ಗಂಡಹೆಂಡಿರು ಇಬ್ಬರೇ ಇದ್ದರು. ನನ್ನನ್ನು ಅವರು ಬಹು ಪ್ರೀತಿಯಿಂದ ಕಂಡರು. ನಾನು ಅವರಿಗೆ ಮಗನಾದೆ. ಕುಲದವರಿಗೆ ಊಟ ಮೊದಲಾದ್ದೆಲ್ಲಾ ಆಯಿತು. ನನಗೆ ಅಮಾಸೆ ಎಂದು ಹೆಸರಿಟ್ಟರು.

ತರುವಾಯ ಆ ವೂರ ಜನರೆಲ್ಲಾ ನನ್ನನ್ನು ಪ್ರೀತಿಯಾಗಿ ಕಾಣುತಿದ್ದರು. ಏಟೆಲ್ಲಾ ನನ್ನ ಚಿಕ್ಕಪ್ಪನ ಹಿಂದೆಯೇ ಹೋಯಿತು. ಅಮ್ಮನ ಗುಡಿಯ ಹಿಂದಿನ ಗರಡೀ ಮನೆಗೆ ನನ್ನನ್ನು ಕರೆದುಕೊಂಡುಹೋಗಿ ಕೆಲವು ದಿವಸ ಸಾದಕ ಮಾಡಿಸಿದರು. ತರುವಾಯ ಬೈಲುಸಾದನೆ, ದೊಂಡೇವರಸೆ, ಕತ್ತೀವರಸೆ, ಪಟಾವರಸೆ, ಬಾಕಿನವರಸೆ, ಕುಸ್ತಿ, ಓಡುವುದು, ಇವುಗಳೆಲ್ಲವನ್ನೂ ಹೇಳಿಕೊಟ್ಟರು. ಎಲ್ಲವನ್ನೂ ನಾನು ಜಾಗ್ರತೆಯಾಗಿ ಕಲಿತುಕೊಂಡೆ. ಅದರಲ್ಲಿ ಕೆಲವು ಹೊಸ ವರಸೆಗಳನ್ನು ಮಾಡಿ ತೋರಿಸಿದೆ. ಆ ವೂರವರೆಲ್ಲರೂ ನನ್ನನ್ನು ನೋಡಿ ಆಶ್ಚರ್ಯಪಟ್ಟರು. ಎಲ್ಲರೂ ನನ್ನನ್ನು ಉಪಚರಿಸಿ ತಿಂಡೀ ಕೊಡಿಸುತ್ತಿದ್ದರು. ನಮ್ಮ ಮನೆಯಲ್ಲಿಯೂ ಸುಖವಾಗಿ ಊಟವಾಗುತಿತ್ತು. ನಾನು ಉದ್ದವಾಗಿ ಬೆಳೆದೆ. ದಿನ ದಿನಕ್ಕೆ ನನಗೆ ಉಮ್ಮಸ್ಸು ಬಹು ಬಲವಾಯಿತು. ಯಾವ ಕೆಲಸವೂ ಕಷ್ಟವಾಗಿ ಕಾಣುತ್ತಿರಲಿಲ್ಲ ನನಗೆ ಭಯವೇ ಇರಲಿಲ್ಲ, ಯಾವುದಕ್ಕೂ ಮುಂದಾಳಾಗಿ ನುಗ್ಗುತಿದ್ದೆ, ಇತರರು ಕೈಲಾಗದು ಎಂದ ಕೆಲಸವನ್ನು ನಾನು ಮಾಡುತಿದ್ದೆ. ನನಗೆ ಸುಮಾರು ೧೮ ವರುಷವಾಯಿತು. ಒಂದು ಒಳ್ಳೇ ದಿನವನ್ನು ನೋಡಿ ನನಗೆ ಜುಟ್ಟು ಇಲ್ಲದ ಹಾಗೆ ತಲೆಯನ್ನು ಕ್ಷೌರ ಮಾಡಿಸಿದರು. ಹೊಸಬಟ್ಟೆಯನ್ನು ಹೊದಿಸಿದರು, ಹುಬ್ಬಿನಹಾರವನ್ನು ಕತ್ತಿಗೆ ಹಾಕಿ ಊರೆಲ್ಲರೂ ಸೇರಿ ಅಮ್ಮನ ಗುಡಿಗೆ ಕರೆದುಕೊಂಡು ಹೋಗಿ ಮೂರು ಪ್ರದಕ್ಷಿಣೆ ನಮಸ್ಕಾರ ಮಾಡಿಸಿದರು. ಅಮ್ಮನಿಗೆ ಮಂಗಳಾರತಿ ಮಾಡಿ ನನಗೆ ಪ್ರಸಾದವನ್ನು ಕೊಟ್ಟರು. ಕುಂಕುಮವನ್ನು ಹಣೆಗಿಟ್ಟರು. ಅಮ್ಮನ ಪೂಜಾರಿಯಾದ ಅಪ್ಪಾಜಿ ಎಂಬುವನು ಬೆಳ್ಳಿಕಟ್ಟು ಹಾಕಿದ ಒಂದು ಕರೀ ಬೆತ್ತವನ್ನು ತಂದು ಅದರಿಂದ ಮೂರು ಸಾರಿ ತಲೆಯಿಂದ ಕೆಳಕ್ಕೆ ಸವರಿದನು. ಬಾಯಲ್ಲಿ ಏನೋ ಪಿಟಪಿಟನೆ ಹೇಳುತ್ತಿದ್ದನು. ಹಂಣುಕಾಯಿ ಪ್ರಸಾದವನ್ನು ಕೊಟ್ಟರು. ನನ್ನನ್ನು ಎಲ್ಲರೂ ಬಂದು ಮನೆಗೆ ಕರೆದುಕೊಂಡು ಹೋಗಿಬಿಟ್ಟರು. ಮಾದೈಯ್ಯನನ್ನು ಅಪ್ಪಾಯೆಂತಲೂ ಅವನ ಹೆಂಡತಿಯನ್ನು ಅವ್ವ ಎಂತಲೂ ಕರೆಯುತ್ತಿದ್ದೆ. ಅದೇ ದಿವಸ ನಮ್ಮಪ್ಪನೂ ಇನ್ನೂ ಊರಲ್ಲಿ ಹಿರಿಯರಾದವರೂ ಕೂತುಕೊಂಡರು. ಆಗ ನನ್ನನ್ನು ಕುರಿತು ನಮ್ಮಪ್ಪನು ಹೇಳಿದ್ದೇನೆಂದರೆ :

ಮಾದ - ಈ ವೂರಜನರೆಲ್ಲಾ ನಂನಮ್ಮಲ್ಲಿ ಬಹಳ ಒಗ್ಗಟ್ಟಾಗಿದ್ದೇವೆ. ನಾವು ಕತ್ತಲೇಕಾಲದಲ್ಲಿಯೂ ಮಳೆಗಾಲದಲ್ಲಿಯೂ ಊರನ್ನು ಬಿಟ್ಟು ಕಾಡು ದಾರಿಯಲ್ಲಿ ಹೋಗುತ್ತೇವೆ. ನಾವು ಹೋಗಿಬರುವ ದಾರಿ ಯಾರಿಗೂ ತಿಳಿಯದು. ನಮಗೆ ಮಾತ್ರ ಗೊತ್ತು. ಯಾರೂ ನಮ್ಮನ್ನು ಬಂದು ಹಿಡಿಯಬಾರದೆಂದು ಹೀಗೆ ಮಾಡುತ್ತೇವೆ. ದೇಶಾಂತರಗಳಿಗೆ ಹೋಗಿ ಐಶ್ವರ್ಯವಂತರ ಮನೆಗೆ ಕನ್ನವನ್ನು ಹಾಕುತ್ತೇವೆ. ಒಳಕ್ಕೆ ನುಗ್ಗಿ ಸಿಕ್ಕಿದ ಪದಾರ್ಥವನ್ನು ತರುತ್ತೇವೆ. ಈ ವಿಷಯದಲ್ಲಿ ಈ ವೂರವರೆಲ್ಲಾ ಸೇರಿ ಒಂದು ಸಂಕೇತ ಮಾಡಿಕೊಂಡು ಇದೇವೆ. ಯಾರಾದರೂ ನಮ್ಮ ಕಳ್ಳತನವನ್ನು ಕಂಡುಹಿಡಿದರೆ ನಮ್ಮಲ್ಲಿ ಯಾರೂ ಒಬ್ಬರ ಹೆಸರನ್ನು ಒಬ್ಬರು ಹೇಳಕೂಡದು. ನಾವು

ಮಾಡುವ ಕೆಲಸ ಸಾಗುತ್ತೆ ಇಲ್ಲ ಎನ್ನುವ ವಿಷಯದಲ್ಲಿ ಅಮ್ಮನ ಗುಡೀ ಅಪ್ಪಾಜಿಯು ಅಮ್ಮನ ಪ್ರಸಾದವನ್ನು ಕೊಟ್ಟು ಕಣಿ ವಗೈರೆ ನಮಗೆ ಹೇಳಿ ನಮಗೆ ಜಯವಾಗುವುದಕ್ಕೆ ತಕ್ಕ ಬುದ್ಧಿಯನ್ನು ನಮಗೆ ಹೇಳುತ್ತಾನಾದಕಾರಣ, ತಂದದರಲ್ಲಿ ಹತ್ತು ಪಾಲುಮಾಡಿ ಒಂದು ಪಾಲನ್ನು ಅವನಿಗೆ ಕೊಡುತೇವೆ; ಕನ್ನದೊಳಗೆ ನುಗ್ಗಿ ಒಳಗಿನಿಂದ ಒಡವೆ ಮೊದಲಾದ್ದನ್ನು ಈಚೆಗೆ ತೆಗೆದುಕೊಡತಕ್ಕವನಿಗೆ ಒಂದು ಪಾಲು ಕೊಡುತ್ತೇವೆ. ನಗರದ ಆಮೀಲ ಕಿಲ್ಲೇದಾರ ಮೊದಲಾದವರಿಗೆ ಒಂದು ಪಾಲು ಹೋಗುತ್ತೆ. ಉಳಿದ ಏಳು ಪಾಲನ್ನು ಉಳಿದವರೆಲ್ಲಾ ಸಮನಾಗಿ ಹಂಚಿಕೊಳ್ಳುತ್ತೇವೆ. ಇದರಲ್ಲಿ ಒಳಕ್ಕೆ ನುಗ್ಗ ತಕ್ಕವನು ಅಮಾವಾಸ್ಯೆ ಆದಿತ್ಯವಾರ ಚಿತ್ತಾನಕ್ಷತ್ರದಲ್ಲಿ ಹುಟ್ಟಿದವನಾಗಬೇಕು. ನೀನು ಇಂಥಾ ದಿವಸದಲ್ಲಿ ಹುಟ್ಟಿದವನಾಗಿದೀಯೆ. ನೀನು ಧೈಯ್ಯವಾಗಿ ಕೆಲಸ ಮಾಡಬಲ್ಲೆಯ?

ಅಮಾಸೆ - ಯಾವ ಕೆಲಸ ಮಾಡುವುದಕ್ಕೂ ನಾನು ಹೆದರುವುದಿಲ್ಲ ಯಾವ ಗುಟ್ಟನ್ನೂ ಹೊರಗೆ ಹಾಕುವುದಿಲ್ಲ, ಎಲ್ಲರೂ ನ್ಯಾಯವಾಗಿ ಮಾತ್ರ ನಡೆಯಬೇಕು. ಒಗ್ಗಟ್ಟು ಚೆನ್ನಾಗಿರಬೇಕು.

ಮಾದ - ನೀನು ಹೆದರದೆ, ಧೈಯ್ಯದಿಂದ ಕೆಲಸಮಾಡಿದರೆ ಸಾಕು. ನಾವೆಲ್ಲರೂ ಒಂದಾಗಿ ಕೆಲಸಾ ಮಾಡುತ್ತೇವೆ. ನಾಳೆ ಎಲ್ಲರೂ ಹೊರಡುತ್ತಾರೆ. ಅವರ ಸಂಗಡ ನೀನೂ ಹೊರಡಬೇಕು. ಆದ್ದರಿಂದಲೇ ಈ ದಿವಸ ಶಾಸ್ತ್ರಮಾಡಿ ಗುಡಿಗೆ ಕರೆದುಕೊಂಡು ಹೋಗಿದ್ದೆವು. ನೀನು ಮಾಡಬೇಕಾದ ಕೆಲಸಗಳನ್ನು ಹೇಳುತೇನೆ ಕೇಳು. ನೀನು ಕನ್ನದೊಳಗೆ ನುಗ್ಗಬೇಕಾದ ದಿವಸಕ್ಕೆ ಹಿಂದಿನ ರಾತ್ರೆ ಚೆನ್ನಾಗಿ ನಿದ್ರೆಮಾಡಿ ಬೆಳಗ್ಗೆ ಎದ್ದು ನಿನ್ನ ತಲೆಯನ್ನು ನುಣ್ಣಗೆ ಬೋಳಿಸಿಕೊಳ್ಳಬೇಕು. ಜುಟ್ಟು ಇರಕೂಡದು. ಅದು ಇದ್ದರೆ ಯಾರಾದರೂ ಹಿಡಿದುಕೊಳ್ಳಬಹುದು. ಆ ದಿನ ಹಗಲು ಅರೆಹೊಟ್ಟೆ ಊಟ ಮಾಡಬೇಕು. ರಾತ್ರೆ ಹಾಲನ್ನು ಕುಡಿಯಬೇಕು. ಅನ್ನ ತಿನ್ನಬಾರದು. ಹಾಗೆ ತಿಂದರೆ ತಪ್ಪಿಸಿಕೊಂಡು ಓಡಲು ದೇಹ ಸಸಾರವಾಗುವುದಿಲ್ಲ ಮೈಗೆಲ್ಲಾ ಎಂಣೆ ತೊಡದುಕೊಳ್ಳಬೇಕು. ಹಿಡಿದುಕೊಂಡರೆ ಜಾರಿಹೋಗುತ್ತೆ. ಉಡಿದಾರವೂ ಕೌಪೀನವೂ ಬಾಳೆಪಟ್ಟೆ ನಾರಿನದಾಗಬೇಕು. ಹಿಡಿದುಕೊಂಡರೆ ಕಿತ್ತು ಹೋಗುತ್ತೆ. ಮುಖಕ್ಕೆಲ್ಲಾ ಮಸಿ ಬಳಿದುಕೊಳ್ಳಬೇಕು. ಕಂಡರೆ ಗುರುತು ಸಿಕ್ಕುವುದಿಲ್ಲ, ಯಾರಾದರೂ ಹಿಡಿದುಕೊಂಡರೆ ಅಪಾಯ ಸ್ಥಳಕ್ಕೆ ಒದೆದು ಓಡಿಹೋಗಬೇಕು. ನಾರಿನ ಉಡಿದಾರಕ್ಕೆ ಸಂಣ ಬಾಕನ್ನು ಸಿಕ್ಕಿಸಿಕೊಂಡಿರಬೇಕು. ಯಾರಾದರೂ ಬಲವಾಗಿ ಹಿಡಿದುಕೊಂಡರೆ ಬಾಕಿನಿಂದ ಅವರ ಗೋಮಾಳೆಗೋ ಹೊಟ್ಟೆಗೋ ತಿವಿದು, ತಪ್ಪಿಸಿಕೊಂಡು ಓಡಿ ಹೋಗಬೇಕು. ಒಳಕ್ಕೆ ನುಗ್ಗಿ ಮನೇ ಸೋಸುವಾಗ್ಗೆ ಬಹು ಎಚ್ಚರವಾಗಿರಬೇಕು. ಗೋಡೇ ಅಂಚಿನಲ್ಲಿ ಸಂಣ ಪೆಟ್ಟಿಗೆಗಳನ್ನು ಇರಿಸುತ್ತಾರೆ. ಕನ್ನ ಹಿಡಿಯುತ್ತಾ ಇದ್ದರೆ ಮೊದಲು ಅದನ್ನು ತೆಗೆದು ಹೊರಕ್ಕೆ ಕೊಡಬೇಕು. ದೊಡ್ಡ ಪೆಟಾರಿಗಳ ಬೀಗವನ್ನು ಬೇರೆ ಕೈಗಳಿಂದ ತೆಗೆದು ಒಡವೆಗಳನ್ನು ಸಾಗಿಸಬೇಕು. ಹೆಂಗಸರ ಮೈಮೇಲಿನ ಒಡವೆಗಳನ್ನು ಅವರಿಗೆ ಎಚ್ಚರವಾಗದ ಹಾಗೆ ತೆಗೆಯಬೇಕು. ಕಂಠಾಭರಣವನ್ನು ಕತ್ತರಿಯಲ್ಲಿ ಕತ್ತರಿಸಿಕೊಳ್ಳಬೇಕು. ಕೈಕಾಲ ಒಡವೆಗಳನ್ನು ತಿರುಪು ತಿರುಗಿಸಿ ಅಥವಾ ಅಗಣಿ ತೆಗೆದು ಮೆಲ್ಲಗೆ ಕಸಿದುಕೊಳ್ಳಬೇಕು. ಅವರ ಮಾಂಗಲ್ಯವನ್ನು ಮಾತ್ರ ಮುಟ್ಟಬಾರದು. ಹೆಂಗಸರಿಗೆ ಆಶೆ ಪಡಬಾರದು. ಮನೆಯ ಯಜಮಾನ

ಯಜಮಾನಿಯರಿಗೆ ನಮಸ್ಕಾರ ಮಾಡಿ ಹೊರಡಬೇಕು. ಕನ್ನದೊಳಕ್ಕೆ ನುಗ್ಗಿದ ಕೂಡಲೆ ತಪ್ಪಿಸಿಕೊಂಡು ಹೊರಟುಹೋಗುವುದಕ್ಕೆ ಸರಾಗವಾಗಿರುವ ಹಾಗೆ ಒಳಗಿನಿಂದ ಬೀದೀ ಬಾಗಿಲವರೆಗೂ ಅಥವಾ ಹಿತ್ತಲ ಬಾಗಿಲವರೆಗೂ ಬಾಗಿಲ ಚಿಲಕಗಳನ್ನು ಮೊದಲೇ ತೆಗೆದಿರಬೇಕು. ಕಳ್ಳತನಕ್ಕೆ ಹೋದವರಲ್ಲಿ ಯಾರಿಗಾದರೂ ಏಟುಬಿದ್ದು ಅವರು ಕೆಳಗೆ ಬಿದ್ದರೆ, ಅವರಿಗೆ ಜೀವ ಇರಲಿ ಹೋಗಿರಲಿ ಅವರ ತಲೆಯನ್ನು ತೆಗೆದುಕೊಂಡು ಹೊರಟುಹೋಗಬೇಕು. ಹೆಚ್ಚು ಜನ ಹಿಡಿಯಲು ಬಂದರೆ ಸಿಕ್ಕಿದ ದೊಣ್ಣೆಯನ್ನು ತಿರುಗಿಸಿ ತಪ್ಪಿಸಿಕೊಂಡು ಹೊರಟುಹೋಗಬೇಕು. ನಿನ್ನ ಕೆಲಸ ಇಷ್ಟೇ. ಉಳಿದವರು ತಂತಮ್ಮ ಕಾವ್ಯಗಳನ್ನು ಮಾಡಿಕೊಳ್ಳುತ್ತಾರೆ. ಕನ್ನ ಹಾಕುವ ದಿವಸ ಹಗಲು ಸನ್ಯಾಸಿಯೋ ಜೋಗಿಯೋ ಜೋಯಿಸನೋ ಜಂಗಮನೋ ಆಗಿ ವೇಷ ಹಾಕಿಕೊಂಡು ನೀನು ರಾತ್ರೆ ಕನ್ನಾ ಹಾಕಬೇಕೆಂದಿರುವ ಮನೆಗೆ ಹೋಗಿ ಒಳ್ಳೆ ಮಾತನಾಡುತ್ತಾ ಪದ ಮುಂತಾದ್ದನ್ನು ಹೇಳುತಾ ಒಳಕ್ಕೆ ನುಗ್ಗಿ ಆ ಮನೆಯ ಸ್ಥಿತಿಯನ್ನು ನೋಡಿಕೊಂಡಿರಬೇಕು. ರಾತ್ರೆಕಾಲದಲ್ಲಿ ಹಿಂದುಮುಂದಾದ ಎಕ್ಕಡವನ್ನು ಹಾಕಿ ಕೊಂಡಿರಬೇಕು.

ಹೀಗೆ ನಮ್ಮಪ್ಪನು ಕನ್ನ ಕಳವು ಮಾಡುವುದಕ್ಕೆ ಬೇಕಾದ ಅನೇಕ ರಹಸ್ಯಗಳನ್ನು ಹೇಳಿಕೊಟ್ಟನು. ಎಲ್ಲವನ್ನೂ ಮನಸ್ಸಿಟ್ಟು ಕೇಳಿ ತಿಳಿದುಕೊಂಡೆ. ಅದು ಯಾವುದೂ ನನಗೆ ಅಸಾಧ್ಯವಾಗಿ ತೋರಲಿಲ್ಲ.

ಮಾರನೇ ದಿವಸ ಸಂಕೇತ ಮಾಡಿದ್ದ ಪ್ರಕಾರ ಕೊಯಮುತ್ತೂರಿಗೆ ಹೋದೆ. ನಮ್ಮ ಜೊತೆಗಾರರೆಲ್ಲರೂ ಬೇರೆಬೇರೆಯಾಗಿ ಬಂದರು. ಹಗಲ ಹೊತ್ತು ನಾವೆಲ್ಲರೂ ಬೇರೆಬೇರೆಯಾಗಿಯೇ ವಾಸಮಾಡಿಕೊಂಡಿದ್ದು, ರಾತ್ರೆಯಾದ ಕೂಡಲೆ ಒಂದು ಕಡೆ ಸೇರುತಿದ್ದೆವು. ಕಲೆಕ್ಟರು ಕಚೇರಿ ಹೆಡ್ ಮುನಿಷಿ ನವನೀತವಿಲಿಪ್ತಾಂಗೈಯ್ಯರು ಎಂಬಾತನು ಎರಡು ಕೈಯಿಂದಲೂ ದೋಚಿದೋಚಿ ದೊಡ್ಡಕ್ಕಲಾಗಿದಾನೆಂದು ತಿಳಿಯಿತು. ಹಗಲೆಲ್ಲಾ ನೋಡಿಕೊಂಡಿದ್ದು ಒಂದು ದಿನ ರಾತ್ರೆ ನಮ್ಮ ಕೆಲಸಾ ಮಾಡಿದೆವು. ಜಯ ಪರಮೇಶ್ವರಿ ಎಂದು ನಾನು ಒಳಕ್ಕೆ ನುಗ್ಗಿದೆ. ಚಿನ್ನದ ಒಡವೆಯೇ ೧೦-೧೫ ಸಾವಿರ ರೂಪಾಯಿನದು ದೊರೆಯಿತು. ಆ ರಾತ್ರಿಯೇ ಎಲ್ಲವನ್ನೂ ಸಾಗಿಸಿಕೊಂಡು ಕಾಡುದಾರಿಬಿದ್ದು ರಾತ್ರಿ ಹಗಲು ಪ್ರಯಾಣಮಾಡಿ ಊರಿಗೆ ಬಂದೆವು. ಆ ಮುನಷಿಗೂ ಇನ್ನೊಬ್ಬ ಲಂಚಕೋರನಿಗೂ ಹಿಂದಕ್ಕೆ ಜಗಳವಾಗಿದ್ದ ಕಾರಣ ಸರ್ಕಾರದವರು ಆ ಜನರನ್ನು ಹಿಡಿದು ತೊಂದರೆ ಮಾಡಿದರೆಂದು ನಮಗೆ ಆಮೇಲೆ ತಿಳಿಯಿತು.

ಮೊದಲು ಸಾರಿಯೇ ನಾನು ಇಷ್ಟು ಐಶ್ವರ್ಯವನ್ನು ತಂದದ್ದು ಊರಲ್ಲಿ ಎಲ್ಲರಿಗೂ ಬಹು ಸಂತೋಷವಾಯಿತು. ಹೀಗೆ ನಾವು ಶ್ರೀರಂಗ, ತಿರುಚನಾಪಳ್ಳಿ, ಕುಂಭಕೋಣ, ಮಧುರೆ, ಸೇಲ್ಯ, ದಿಂಡಗಲ್ಲು ಧಾರಾಪುರ, ತಿನ್ನವಳ್ಳಿ ಮೊದಲಾದ ಪ್ರಾಂತ್ಯಗಳಲ್ಲಿ ಅನೇಕ ಗ್ರಾಮಗಳಿಗೆ ಹೋಗಿ ಅಲ್ಲಿ ಹೀಗೆಯೇ ಪೂರಾ ಸಂಪಾದನೆ ಮಾಡಿದೆವು. ಅನೇಕ ಅನೇಕ ಊರುಗಳಲ್ಲಿ ನಾನು ಮನೇ ನುಗ್ಗಿದಾಗ ನನ್ನನ್ನು ಒಳಗೆ ಹಿಡಿದುಕೊಂಡಿದ್ದರು. ಆಗೆಲ್ಲಾ ಬಿಡಿಸಿಕೊಂಡು ಬಂದೆ, ಕೆಲವರನ್ನು ಕೈಬಾಕಿನಿಂದ ತಿವಿದು ಓಡಿಹೋದೆ. ಅವರಲ್ಲಿ ಅನೇಕರು ಸತ್ತು ಹೋದರೆಂತಲೂ ಕೇಳಿದೆ. ನಾನು ರೂಪಾಯಿಯನ್ನು ತೆಗೆದುಕೊಳ್ಳುತಿರಲಿಲ್ಲ ಚಿನ್ನ ಬೆಳ್ಳಿ ರತ್ನಗಳು

ಎಷ್ಟಿದ್ದರೂ ನಾನು ಸೋಸಿಬಿಟ್ಟು ಕಂನದಿಂದ ಈಚೆಗೆ ಕೊಡುತಿದ್ದೆ ಸಾಧ್ಯವಾದ ಮಟ್ಟಿಗೆ ತಂದ ನಗಗಳೆಲ್ಲವನ್ನೂ ಕರಗಿಸಿಬಿಡುತ್ತಿದ್ದೆವು. ತಾಲ್ಲೋಕಿನವರ ಹಂಚಿಗೆಯನ್ನು ಮಾತ್ರ ನಗವಾಗಿಯೇ ಕೊಟ್ಟು ಬಿಡುತಿದ್ದೆವು. ಚಾಮರಾಜನಗರದ ಆಮೀಲ ಕಿಲ್ಲೇದಾರ ಇವರ ಮನೆಯಲ್ಲಿ ಈಗಲೂ ನಾವು ಕೊಟ್ಟ ನಗಗಳಿವೆ. ನಾನು ಕಂನದೊಳಕ್ಕೆ ನುಗ್ಗಿರುವಾಗ ಯಾರೂ ಆ ಮನೆಯ ಸುತ್ತಲೂ ಬರದಹಾಗೆ ನಮ್ಮ ಕಡೆಯವರು ಕತ್ತಿ ಕಠಾರಿ ದೊಂಣೆ ಕವಣೇಕಲ್ಲು ಇವುಗಳನ್ನು ಹಿಡಿದು ನಿಂತಿರುತಿದ್ದರು. ನಾನು ಕಂನದೊಳಗಿನಿಂದ ಒಡವೆಗಳಂನು ತೆಗೆದು ಈಚೆಗೆ ಹಾಕುತ್ತಾ ಬಂದಹಾಗೆಲ್ಲಾ ಆಗ ಆಗಲೇ ನಮ್ಮ ಕಡೆಯವರು ಸಾಗಿಸಿಬಿಡುತಿದ್ದರು. ಆ ಮನೇಸುತ್ತಲೂ ೧೦೦ ಗಜ ಫಾಸಲೆಯಲ್ಲಿ ಯಾರು ಬಂದಾಗ್ಯೂ ಅವರನ್ನು ನಮ್ಮವರು ಹೊಡೆದುಹಾಕುತಿದ್ದರು. ನಮ್ಮ ಕಡೆಯವರು ಬಹು ವೇಗವಾಗಿ ಓಡುತ್ತಿದ್ದರು. ಪೆಟ್ಟಿಗೇಗಾಡಿ ಸಾರೋಟು ಗಾಡಿಯೆಂದು ಹೆಸರುಳ್ಳವರು ಅದರ ಹಾಗೆಯೇ ಓಡುತಿದ್ದರು. ಗೋಡೇ ಗುದ್ದಯ್ಯ, ನೆಲಗವಿಸಿದ್ದೇಶ್ವರ ಎಂಬುವರು ಕನ್ನಾಹಾಕುವುದರಲ್ಲಿ ಬಹು ಜಾಣರು. ಕನ್ನಾ ಹಾಕುವುದರಲ್ಲಿ ಒಬ್ಬೊಬ್ಬರ ಕೈವಾಡ ಒಂದೊಂದು ವಿಧ, ಹೊರಗೆ ಕೂತಕೊಂಡು ಒಳಗಡೆಯಿಂದ ಕನ್ನಾ ಹಾಕಿದ ಹಾಗೆ ಕನ್ನಾ ಕೊರೆಯುತ್ತಿದ್ದವನು ಒಬ್ಬ ಇದ್ದ. ಅವನು ಬಹು ಜಾಣ. ನಮಗೆ ಅನೇಕ ಭಾಷೆಗಳು ಬರುತ್ತೆ. ನಮ್ಮವರು ಅನೇಕ ವಿಧವಾದ ವೇಷವನ್ನು ಹಾಕಿಕೊಳ್ಳುತ್ತಾರೆ. ಇದೂ ಅಲ್ಲದೆ ಒಬ್ಬ ಕಾಡಹಂದಿ ಹಾಗೆ ವೇಷವನ್ನು ಹಾಕಿಕೊಂಡು ಗೊರಗೊರ ಎನ್ನುತ್ತಾ ಹೋಗುತ್ತಾನೆ. ಇವನಿಗೆ ವರಹಾ ಎಂದು ಹೆಸರು. ಒಬ್ಬ ಕರಡಿಯ ಹಾಗೆ ವೇಷ ಹಾಕಿಕೊಳ್ಳುತ್ತಾನೆ. ಇವನಿಗೆ ಜಾಂಬವನೆಂದು ಹೆಸರು. ಇವರು ರಾತ್ರೆ ಯಾರಾದರೂ ಹರಿಸಿಕೊಂಡು ಬಂದಾಗ ಹಂದಿಯ ಹಾಗೂ ಕರಡಿಯ ಹಾಗೂ ಜನರನ್ನು ಭಯಪಡಿಸಿ ಓಡಿಸುತ್ತಾರೆ. ಹೀಗೆ ಮಾಡಿಕೊಂಡು ಕಣವೇಕೆಳಗೆ ಅನೇಕ ವೂರುಗಳಲ್ಲಿ ಒಳ್ಳೆ ಐಶ್ವರ್ಯವಂತರ ಮನೆಯನ್ನೆಲ್ಲಾ ಚೆನ್ನಾಗಿ ಸವರಿ ಗುಡಿಸಿಬಿಟ್ಟೆವು.

ಒಂದುಸಾರಿ ಇನ್ನೊಂದು ಆಶ್ಚರ್ಯಕರವಾದ ಸಂಗತಿ ನಡೆಯಿತು. ಸತ್ಯ ಮಂಗಲದ ತಾಲ್ಲೂಕಿನಲ್ಲಿ ಒಂದು ಗ್ರಾಮವಿದೆ. ಅದರಲ್ಲಿ ಒಬ್ಬ ಪುಣವಂತನಾದ ಗೌಡ ಇದಾನೆಂದು ತಿಳಿಯಿತು. ಆ ಕಡೆ ಗೌಡರಿಗೆ ಗೌಂಡ ಎನ್ನುತ್ತಾರೆ. ಆ ವೂರಿಗೆ ಹೋದೆವು. ಹೊಂಚುಹಾಕುತ್ತಾ ಇದ್ದೆವು. ನಾನು ಆ ವೂರ ಬೀದಿಯಲ್ಲಿ ಬರುತಾ ಇದ್ದೆ. ಆ ದಿನ ರಾತ್ರೆ ಕನ್ನಾಹಾಕಬೇಕೆಂದು ನಾವು ಗೊತ್ತುಮಾಡಿಕೊಂಡಿದ್ದ ಮನೆಯೊಳಗಿನಿಂದ ಒಬ್ಬ ಹೆಂಗಸು ಬಂದಳು. ಅವಳು ಲಕ್ಷಣವಾಗಿದ್ದಳು. ಅವಳು ಕಂಕುಳಲ್ಲಿ ಒಂದು ಮಗುವನ್ನು ಎತ್ತಿಕೊಂಡು, ಕೈಯಲ್ಲಿ ಒಂದು ಮಗುವನ್ನು ಹಿಡಿದು ನಡಿಸಿಕೊಂಡು ಮನೆಯಿಂದ ಈಚೆಗೆ ಬಂದಳು. ಭಾರೀ ಒಡವೆಗಳನ್ನು ಇಟ್ಟಿದ್ದಳು. ಅದನ್ನು ನೋಡಿ ನಾವು ರಾತ್ರೆಗೆ ಮಾಡುವ ಕೆಲಸ ನಿಷ್ಪ್ರಯೋಜನವಾಗಲಾರದೆಂದು ಸಂತೋಷಪಟ್ಟುಕೊಂಡೆ. ಹಾಗೆಯೇ ಆ ಮನೆಮುಂದೆ ಹಾದು ನಾನು ಆ ಕಡೆಗೆ ಹೋಗುತ್ತಾ ಇರುವಾಗ ಆ ಹೆಂಗಸು ನನ್ನನ್ನು ದುರುಗುಟ್ಟಿಕೊಂಡು ನೋಡುತಾ ನಿಂತುಕೊಂಡಳು. ಹೊಸಮುಖವೆಂದು ಗುರುತು ನೋಡಿಕೊಳ್ಳುತ್ತಾಳೆ ಎಂಬುದಾಗಿ ನಾನು ಒಳಗೆ ಭಯಪಟ್ಟುಕೊಂಡು ಕಾಲನ್ನು ಜಾಗ್ರತೆ ಮಾಡಿದೆ. ಎಲಪ್ಪ ನೀನು ಯಾವ ವೂರೋ? ಎಂದಳು. ನಾನು ಮಾತನಾಡದೆ ಸುಮ್ಮನೇ ಹೋಗುತಿದ್ದೆ ಆಕೆ ಪುನಹ - ಎಲ ನೀನು ಜಯಪ್ಪನಲ್ಲವೇನೋ ಎಂದಳು. ಈ ಹೆಸರು ನನಗೆ ನಮ್ಮ ತಂದೆ ಇಟ್ಟದ್ದು ಈ ಹೆಸರನ್ನು ಹಿಡಿದು ಕೂಗುವ ಈ ಹೆಂಗಸು ಯಾರೋ ನೋಡಲೇಬೇಕು, ಅದ್ದೆಲ್ಲಾ

ಆಗಲಿ ಎಂದು ನಾನು ಹಿಂತಿರುಗಿ ನೋಡಿ ನಿಂತುಕೊಂಡೆ. ಆಕೆ ನನ್ನ ಸಮೀಪದಲ್ಲಿ ಬಂದು ನಿಂತು ನನ್ನನ್ನು ಚೆನ್ನಾಗಿ ದೃಷ್ಟಿಸಿನೋಡಿ, ಜಯ ಎಲ್ಲಿಂದ ಬಂದೆ ಕಂದ ಎಂದು ಕೇಳಿದಳು. ಅವಳ ಕಂಣಿನಲ್ಲಿ ಪಳಪಳನೆ ನೀರು ಸುರಿಯುವುದಕ್ಕೆ ಮೊದಲಾಯಿತು. ಆಗ ಅವಳು ನಮ್ಮ ಅಕ್ಕನೆಂದು ತಿಳಿದುಕೊಂಡೆ. ನನಗೂ ತುಂಬಾ ದುಃಖಬಂತು. ನಾವಿಬ್ಬರೂ ಅತ್ತೆವು. ತಮ್ಮ ಮನೆಗೆ ಕರೆದುಕೊಂಡು ಹೋದಳು. ನಾವು ಬಾಲ್ಯದಲ್ಲಿ ಪಟ್ಟ ಕಷ್ಟವೆಲ್ಲಾ ಜ್ಞಾಪಕಕ್ಕೆ ಬಂತು. ಪುನಃ ಅತ್ತವು. ಅವಳನ್ನು ಅವಳ ಗಂಡ ಕರೆದುಕೊಂಡು ಹೋದಾಗಿನಿಂದ ಅದುವರೆಗೆ ನಡೆದ ಸಮಾಚಾರವನ್ನೆಲ್ಲಾ ಹೇಳಿದೆ. ನಮ್ಮ ಚಿಕ್ಕಪ್ಪನೂ ಚಿಕ್ಕಮ್ಮನೂ ಮಾಡಿದ್ದನೆಲ್ಲಾ ತಿಳಿಸಿದೆ. ಆದರೆ ನಾನಿರುವ ವೂರನ್ನೂ ಅನುಸರಿಸಿರುವ ವೃತ್ತಿಯನ್ನೂ ನಾನು ಹೇಳಲಿಲ್ಲ ನಾನು ವ್ಯಾಪಾರ ಮಾಡುವುದಾಗಿಯೂ ಅದಕ್ಕಾಗಿ ನಾನು ಬಂದಿದ್ದೆನೆಂತಲೂ ಹೇಳಿದೆ. ತರುವಾಯ ನಮ್ಮಕ್ಕನು ತನಗೆ ಮೂರುಜನ ಗಂಡುಮಕ್ಕಳೂ ಮೂರುಜನ ಹೆಂಣುಮಕ್ಕಳೂ ಇದಾರೆಂತಲೂ ತಾನು ಸುಖವಾಗಿದೇನೆಂತಲೂ ತನ್ನ ಐಶ್ವರ್ಯವನ್ನೆಲ್ಲಾ ವಿವರಿಸಿ ಹೇಳಿದಳು. ನನಗೆ ಬಹಳ ಸಂತೋಷವಾಯಿತು. ಅಲ್ಲಿಯೇ ಇರು ಎಂದು ಬಲವಂತ ಮಾಡಿದಳು. ಆಗುವದಿಲ್ಲವೆಂದೆ. ನನಗೆ ಒಳಗೆ ಎಲೆ ಹಾಕಿ ಒಳಕ್ಕೆ ಕರೆದಳು, ನಾನು ಹೊರಗೇ ಊಟಕ್ಕೆ ಕೂತುಕೊಳ್ಳುತ್ತೇನೆ, ಒಳಕ್ಕೆ ಬರಲು ನನಗೆ ಯೋಗ್ಯತೆಯಿಲ್ಲವೆಂದು ಹೇಳಿದೆ. ಹೊರಗಡೆ ಬಡಿಸಿದರು ಊಟಾಮಾಡಿದೆ. ಎಲೆಅಡಿಕೆ ತೆಗೆದುಕೊಂಡೆ. ಮಕ್ಕಳೆಲ್ಲಾ ಬಂದು ನನಗೆ ನಮಸ್ಕಾರ ಮಾಡಿದರು. ಅಲ್ಲಿಯೇ ಇರು, ತನ್ನ ಎರಡನೇ ಮಗಳನ್ನು ಕೊಟ್ಟು ಮದುವೆಮಾಡುತ್ತೇನೆ ಎಂದು ನಮ್ಮ ಅಕ್ಕ ಬಲವಂತ ಮಾಡಿದಳು. ನಾನು ಇನ್ನೊಂದುವೇಳೆ ಬರುತ್ತೇನೆ, ನಮ್ಮ ಯಜಮಾನರಾದ ಸಾಹುಕಾರರು ಹೊರಟು ನಿಂತಿದಾರೆ ಎಂದೆ ನಮ್ಮಕ್ಕನು ಪುನಃ ಕಂಣಿನಲ್ಲಿ ನೀರತಂದುಕೊಂಡು ಹೋಗಿಬರುತೀಯ ಮಗ? ಎಂದಳು. ನನಗೂ ದುಃಖಬಂತು. ಹಿಂದಿನ ಕಥೆಯೆಲ್ಲಾ ಪುನಃ ಜ್ಞಾಪಕಕ್ಕೆ ಬಂತು. ಬಾಲ್ಯದಲ್ಲಿ ನಮ್ಮಕ್ಕನಿಗೆ ನನ್ನ ಮೇಲೆ ಇದ್ದ ಪ್ರೀತಿಯೂ ಅವಳು ನನ್ನ ಹೊಡೆಯಬೇಡವೆಂದು ನಮ್ಮ ಚಿಕ್ಕವ್ವನಿಗೆ ಅಡ್ಡಲಾಗಿ ಬರುತ್ತಿದ್ದರೂ ಎಲ್ಲವನ್ನೂ ಜ್ಞಾಪಕ ಮಾಡಿಕೊಂಡೆ. ಬಂದ ದುಃಖವನ್ನು ತಡೆದುಕೊಂಡು ನಮ್ಮಕ್ಕನಿಗೆ ನಮಸ್ಕಾರಮಾಡಿ ಹೊರಟುಹೋದೆ. ಆಗ ನನ್ನ ಮನಸ್ಸಿಗೆ ಬಹಳ ಕಳವಳವಾಯಿತು. ರಾತ್ರೆ ನಾನು ಏನಮಾಡಬೇಕು? ಕನ್ನಹಾಕಿ ಒಳಗೆ ನುಗ್ಗಿ ಲೂಟಿಮಾಡಲೆ, ಸಾಕ್ಷಾತ್ ಅಕ್ಕನಿಗೆ ದ್ರೋಹಿಯಾಗುತ್ತೇನೆ. ಒಲ್ಲೆನೆಂದೇನೇ ನಮ್ಮ ಜೊತೆಗಾರರು ನನ್ನ ಸುಮ್ಮನೇ ಬಿಡುವುದಿಲ್ಲ. ಈ ಕಳವಳ ನನಗೆ ಹೆಚ್ಚಾಯಿತು. ಕೊನೆಗೆ ಏನೋ ಸಿದ್ದಾಂತ ಮಾಡಿಕೊಂಡ. ಆ ದಿವಸ ಕರೀಬಟ್ಟೆಯನ್ನು ಸೊಂಟಕ್ಕೆ ಸುತ್ತಿಕೊಂಡು ಹೋದೆ. ಕತ್ತಲೆಯಾದ್ದರಿಂದ ಅದು ಯಾರಿಗೂ ಕಾಣಲಿಲ್ಲ. ಕನ್ನದ ಒಳಕ್ಕೆ ನುಗ್ಗಿದೆ. ಸ್ವಲ್ಪ ಹೊತ್ತು ಒಳಗೆ ಇದ್ದೆ ಬಂಗಾರದ ಬಂದಿಯನ್ನು ಚೂರುಚೂರಾಗಿ ಕತ್ತರಿಸಿದ ಚಿನ್ನದ ಮುರುಕುಗಳು ಸುಮಾರು ತೂಕದಲ್ಲಿ ಮೂರುಸೇರಿನಷ್ಟು ನನ್ನ ಕರೀಬಟ್ಟೆಯಿಂದ ತೆಗೆದು ನಮ್ಮಕ್ಕನ ತಲೆದಸಿಯಲ್ಲಿರಿಸಿ ಅವಳ ಕಾಲಿಗೆ ನಮಸ್ಕಾರಮಾಡಿ ಈಚೆಗೆ ಬಂದೆ. ನಮ್ಮವರು ಏನು ಎಂದು ಕೇಳಿದರು. ಸಾಮಾನೆಲ್ಲವನ್ನೂ ನೆಲಮಾಳಿಗೆಯಲ್ಲಿ ಹಾಕಿದಾರೆಂದು ತೋರುತ್ತೆ. ಮೇಲೆ ಏನೂ ಸಿಕ್ಕಲಿಲ್ಲ ಎಂದು ಸುಳ್ಳು ಹೇಳಿದೆ.

ಒಂದುಸಾರಿ ಇನ್ನೊಂದು ಹೆಚ್ಚುಸಂಗತಿ ನಡೆಯಿತು. ಒಂದು ಊರಿಗೆ ಹೋದರೆ ನಮ್ಮ ಜೊತೆಗಾರರೆಲ್ಲರೂ ಒಂದೇ ಕಡೆಯಲ್ಲಿಳಿಯುತಿರಲಿಲ್ಲ. ಒಬ್ಬೊಬ್ಬರು ಒಂದೊಂದು ಕಡೆ ಇಳಿಯುತ್ತಿದ್ದೆವು. ಆ ಊರ ಹೊರಗೆ ಒಂದು ಕೊಂಬಿನ ಕೂಗಿನ ದೂರದಲ್ಲಿ ಒಂದು ಗುಡಿ ಇತ್ತು. ಅದು ದೊಡ್ಡ ಗುಡಿ, ಕೈಸಾಲೆ ಮೊದಲಾದ್ದೆಲ್ಲಾ ಬಹಳ ರಮ್ಯವಾಗಿತ್ತು. ನಾನು ಅಲ್ಲಿ ಹೋಗಿ ಕೈಸಾಲೆಯಲ್ಲಿ ಇಳಿದುಕೊಂಡೆ. ಅಲ್ಲಿ ಸುತ್ತಲೂ ಕಾಡು ಜೀ ಎನ್ನುತಾ ಇತ್ತು. ಮರಗಳೆಲ್ಲಾ ಗಗನಕ್ಕೆ ಹೋಗಿತ್ತು. ಮಟ್ಟ ಮಧ್ಯಾಹ್ನದಲ್ಲಿ ಕೂಡ ಬಿಸಿಲು ಬೀಳುತಿರಲಿಲ್ಲ ಕತ್ತಲೆಯಾಗಿತ್ತು. ಅಲ್ಲಿ ಕಿರಬ ತೋಳ ಬಹು ಬಲವಾಗಿದ್ದವು. ಗುಡಿಗೆ ಹತ್ತರದಲ್ಲಿ ಒಂದು ಹಳ್ಳ ಹರಿಯುತಾ ಇತ್ತು. ಆ ಹಳ್ಳದ ತಡಿಯಲ್ಲಿ ಕಾಡತುಳಸಿ ಕಾಡಮಲ್ಲಿಗೆ ವನಸಂಪಿಗೆ ಪಗಡೆ ಮೊದಲಾದ ಹೂವುಗಳು ಬೇಕಾದಷ್ಟು ಬಿಟ್ಟಿತ್ತು. ಕುಯ್ಯುವವರೇ ಇರಲಿಲ್ಲ, ಆ ಹೂಗಳ ವಾಸನೆ ಗಮಗಮನೆ ಅಲ್ಲೆಲ್ಲಾ ಸುತ್ತಿಕೊಂಡಿತ್ತು. ಅದೆಲ್ಲವನ್ನೂ ನೋಡಿದರೆ ಮನೋಹರವಾಗಿತ್ತು. ನಾನು ಆ ನದಿಯಲ್ಲಿ ಸ್ನಾನಮಾಡಿ ಸಾಧ್ಯವಾದ ಮಟ್ಟಿಗೆ ಹುವ್ವನ್ನು ಕುಯಿದು ತಂದು ಗುಡಿಯಲ್ಲಿದ್ದ ದೇವರುಗಳ ತಲೆಯಮೇಲೆಲ್ಲಾ ಒಂದೊಂದು ಹಿಡಿ ಇರಿಸುತ್ತಾ ಬಂದೆ. ನಾನು ಆ ಗುಡಿಗೆ ಹೋದಾಗಿನಿಂದ ಯಾರೋ ಅಳುತಾ ಇದ್ದ ಹಾಗೆ ಸದ್ದು ಕೇಳುತಾ ಇತ್ತು. ನಾನು ಎಲ್ಲಲ್ಲಿ ಹುಡುಕಿನೋಡಿದರೂ ಯಾರೂ ಇರಲಿಲ್ಲ, ಗರ್ಭಗೃಹದ ಬಳಿಗೆ ಹೋದಾಗ ಆ ಸದ್ದು ಹೆಚ್ಚಾಗಿ ಕೇಳುತ್ತಿತ್ತು. ಆಗ ಗುಡಿಯೊಳಗೆ ಯಾರಿದಾರೋ ನೋಡಬೇಕೆಂದು ಹೋದೆ. ಬಾಗಿಲಿಗೆ ಬೀಗಾ ಹಾಕಿತ್ತು. ಆ ಬೀಗವನ್ನು ಮುರಿದೆ ಎಷ್ಟೋ ಬೀಗಾ ಮುರಿದವನಿಗೆ ಅದೊಂದು ದೊಡ್ಡದಾಗಿರಲಿಲ್ಲ ಬಾಗಿಲನ್ನು ತೆಗೆದು ಒಳಕ್ಕೆ ಹೋದೆ. ಒಳಗೆ ಕತ್ತಲೆಯಾಗಿತ್ತು. ಒಂದು ದೀಪ ನೊಣನೊಣನೆ ಉರಿಯುತಿತ್ತು. ಅದನ್ನು ಮೀಟಿ ನೋಡಿದೆ. ಅಲ್ಲಿ ಒಂದು ಅಂಕಣದಲ್ಲಿ ಹಸೆಮಣೆ ಹಾಕಿ ಮೇಲುಹಾಸುಗೆಯನ್ನು ಹಾಸಿತ್ತು. ತೆಂಗಿನಕಾಯಿ ಬಾಳೇಹಂಣು ಅರಿಶನ ಕುಂಕುಮ ಮಂತ್ರಾಕ್ಷತೆ ಹುವು ವಿಳಯದೆಲೆ ಅಡಕೆ ಒಂದುಸೇರು ಅಕ್ಕಿ ನಾಲ್ಕು ಬಾಳೆಲೆ, ಇವೇ ಮೊದಲಾಗಿ ಮಂಗಳದ್ರವ್ಯಗಳನ್ನಿರಿಸಿತ್ತು. ಯಾವುದೋ ಪ್ರಸ್ತಕ್ಕೆ ಸಿದ್ಧಮಾಡಿರುವಂತೆ ಕಂಡಿತು. ನಾನು ಒಳಕ್ಕೆ ಹೋದ ಕೂಡಲೇ ಸದ್ದಾಗುತಾ ಇದ್ದುದು ನಿಂತುಹೋಯಿತು. ನಾನು ಅಲ್ಲೆಲ್ಲಾ ಹುಡುಕಿದೆ. ಒಂದು ಮೂಲೆಯಲ್ಲಿ ಒಬ್ಬ ಲಕ್ಷಣವಾದ ಹೆಂಗಸು ಕೂತಿದ್ದಳು. ನೀನು ಯಾರಮ್ಮ ಎಂದೆ. ಆಕೆ ಮಾತನಾಡಲಿಲ್ಲ ಆಕೆಗೆ ಕೈಕಾಲು ನಡುಗುವುದಕ್ಕೆ ಮೊದಲಾಯಿತು. ಭೀತಿಯಿಂದ ಹೀಗಾಗುತಾ ಇದೆ ಎಂದು ತಿಳಿದು - ನೀನು ಯಾರಮ್ಮ ಮಾತನಾಡು, ನಿನಗೆ ಯಾವಕಷ್ಟ ಪ್ರಾಪ್ತವಾಗಿದ್ದರೂ ನಾನು ನಿವಾರಣೆ ಮಾಡುತ್ತೇನೆ, ಹೆದರಬೇಡ, ಎಂದೆ. ಇನ್ನೂ ಗಟ್ಟಿಯಾಗಿ ಅಳುತ ಅಳುತಲೇ - ನೀನು ಯಾರಪ್ಪ ಎಂದಳು. ನಾನು ಯಾರೋ ಪರದೇಶಿ, ಯಾರಾದರೇನು ಎಂದೆ. ನನ್ನ ಕಷ್ಟವನ್ನು ನಿವಾರಣೆಮಾಡುತ್ತೇನೆಂದು ಕೈಮುಟ್ಟಿ ಪ್ರಮಾಣಮಾಡು ಎಂದಳು. ನಾನು ಪ್ರಮಾಣಮಾಡಿ ಕೊಟ್ಟೆ ಆಗ ಆ ಹೆಂಗಸು - ನನ್ನನ್ನು ಈ ಸ್ಥಳಬಿಟ್ಟು ಯಾರೂ ಇಲ್ಲದ ಕಡೆಗೆ ಕರೆದುಕೊಂಡು ನಡೆ ಎಂದಳು. ಮಗ್ಗಲಲ್ಲಿದ್ದ ಕಾಡಿನೊಳಕ್ಕೆ ಕರೆದುಕೊಂಡು ಹೋದೆ. ಅಲ್ಲಿ ಒಂದು ಬಂಡೆ ಇತ್ತು. ಅದರ ಕೆಳಗೆ ಒಂದು ಪೊಟ್ಟರೆ ಇತ್ತು. ಅದರ ಕೆಳಗೆ ನುಸಿದು ಹೋದೆವು. ಅಲ್ಲಿ ಎತ್ತರವಾಗಿ ಹಜಾರದ ಹಾಗೆ ಸ್ಥಳವಿತ್ತು. ಮಗ್ಗಲಲ್ಲಿಯೇ ನೀರಿನ ಚಿಲುಮೆ ಇತ್ತು. ಆ ಬಿಲದ ದ್ವಾರದಲ್ಲಿ ಮಧ್ಯೆ ಪೊಟರೆಯಾಗಿತ್ತು.

ಅದರಿಂದ ಬೇಕಾದಷ್ಟು ಗಾಳಿ ಬೆಳಕು ಒಳಕ್ಕೆ ಬರುತಿತ್ತು. ಆ ಸ್ಥಳದಲ್ಲಿ ನಾವಿದ್ದೇವೆ ಎಂದು ಯಾರು ಎಷ್ಟು ಹುಡುಕಿದರೂ ಗೊತ್ತಾಗುವ ಹಾಗಿರಲಿಲ್ಲ ಅಲ್ಲಿ ಆಕೆ ನಾನು ಕೂತುಕೊಂಡೆವು. ಆಗ ಆ ಹೆಂಗಸು ಹೇಳಿದ್ದೇನೆಂದರೆ:

ಇಲ್ಲಿಗೆ ಮೂರುಗಾವುದ ದೂರದಲ್ಲಿ ನನ್ನ ಗಂಡನ ಮನೆ ಇದೆ. ನಾವು ಜಾತಿಯಲ್ಲಿ ಉಪ್ಪಲಿಗರು. ನನಗೆ ಗಂಡ ಇದಾನೆ. ಎರಡು ಮಕ್ಕಳಿವೆ. ನನ್ನ ಗಂಡ ಒಳ್ಳೇ ಪ್ರಾಯದವನು. ತಕ್ಕಮಟ್ಟಿಗೆ ನೆಮ್ಮದಿಯಾಗಿದಾನೆ. ಈ ವೂರಲ್ಲಿ ಹೆಚ್ಚಾಗಿ ಹಣಗಾರನಾದ ಒಬ್ಬ ಉಪ್ಪಲಿಗ ಇದಾನೆ. ಅವನಿಗೆ ೭೦ ವರುಷವಾಗಿದೆ. ಅವನಿಗೆ ಮೂರುಜನ ಹೆಂಡಿರಿದಾರೆ. ಮಕ್ಕಳಿಲ್ಲ, ನನ್ನನ್ನು ಮದುವೆಯಾದರೆ ಮಕ್ಕಳಾಗುವುದೆಂದು ಯೋಚಿಸಿ, ನನ್ನ ಮಕ್ಕಳನ್ನು ನನ್ನ ಗಂಡನಿಗೆ ಬಿಟ್ಟು ಅವನಿಗೆ ನನ್ನ ಮದುವೇತರವನ್ನೂ ಮೇಲೆ ೧೦೦ ವರಹವನ್ನೂ ಕೊಟ್ಟು ನನ್ನ ತಾಳಿಯನ್ನು ಅವನಿಗೆ ಕೊಡಿಸಿ ತರುವಾಯ ಈ ಮದುಕನಿಗೆ ನನ್ನನ್ನು ಪುನಃ ಮದುವೆಮಾಡಬೇಕೆಂದು ಕೆಲವರು ಗೊತ್ತು ಮಾಡಿಕೊಂಡರು. ಈ ಮುದುಕ ಜಾತಿಯ ಯಜಮಾನನಂತೆ. ಅವನ ಮಾತನ್ನು ತೆಗೆಯುವುದಕ್ಕೆ ಯಾರಿಂದಲೂ ಆಗುವುದಿಲ್ಲ, ನನ್ನ ಗಂಡನ್ನು ಅಳುತಾ ಬಂದು ನಿಂತುಕೊಂಡು ಈ ಮಾತನ್ನು ನನಗೆ ತಿಳಿಸಿದನು. ಆಗ ನಾನು - ಛೇ, ಎಂಥಾಮಾತು? ಇದ್ದರೆ ಒಬ್ಬ ಗಂಡ ಇರಬೇಕು, ಇಲ್ಲದಿದ್ದರೆ ಈ ಪ್ರಾಣ ಹೋಗಬೇಕು, ಈ ಹಾಳ ಉಪ್ಪಲಿಗರ ಜಾತಿಪದ್ಧತಿ. ಸುಡಬೇಕು; ಒಬ್ಬರ ಹೆಂಡತಿಯನ್ನು ಇನ್ನೊಬ್ಬನಿಗೆ ಕೊಡುವುದು ಜಾತಿಪದ್ಧತಿಯ? ಒಂದು ಕಾಲಕ್ಕೂ ನಡೆಯ ತಕ್ಕದ್ದಲ್ಲ. ಅವರ ಒಡವೆಯೂ ಬೇಡ, ನೀನೇ ನನಗೆ ಒಡವೆ, ನಿನ್ನನ್ನೂ ಮಕ್ಕಳನ್ನೂ ಬಿಟ್ಟು ನಾನು ಎಂದಿಗೂ ಹೋಗತಕ್ಕವಳಲ್ಲ ಎಂದೆ. ಈ ಮಾತನ್ನು ಹೊರಗಿದ್ದವರು ಕೇಳಿದರು. ನನಗೆ ಇಲ್ಲದ ಸಮಾಧಾನವನ್ನೆಲ್ಲಾ ಹೇಳಿದರು. ಹರಗೀಸ ನಾನು ಒಪ್ಪಲಿಲ್ಲ ಅವರೆಲ್ಲರೂ ಎದ್ದು ಹೊರಟುಹೋದರು ತರುವಾಯ ೮-೧೦ ದಿವಸವಾಯಿತು. ಹಗಲು ಊಟದ ಹೊತ್ತಿನಲ್ಲಿ ಹೊಲದಲ್ಲಿದ್ದ ನನ್ನ ಗಂಡನಿಗೆ ಹಿಟ್ಟನ್ನು ತೆಗೆದುಕೊಂಡು ಹೋಗುತಿದ್ದ ಜನರು ಯಾರೂ ಅಲ್ಲಿರಲಿಲ್ಲ. ಹಿಂದುಗಡೆಯಿಂದ ಯಾರೋ ಬಂದು ನನ್ನ ಕಂಣನ್ನು ಬಟ್ಟೆಯಿಂದ ಕಟ್ಟಿದರು. ಮತ್ತೆ ಯಾರೋ ಬಂದು ನನ್ನ ಬಾಯಿಗೆ ಬಟ್ಟೆಯನ್ನುಗಿಡಿದರು. ಹಿಟ್ಟಿನ ಗೂಡೆಯೂ ಉದಕದ ಅಂಡೆಯೂ ನೀರಿನ ತಂಬಿಗೆಯೂ ಎಲ್ಲಿ ಎಲ್ಲಿಯೋ ಬಿದ್ದು ಹೋಯಿತು. ಇಬ್ಬರು ಬಂದು ನನ್ನ ಕೈ ಕಾಲುಗಳನ್ನು ಕಟ್ಟಿ ಎತ್ತಿಕೊಂಡು ಹೋದರು. ಕೊನೆಗೆ ಇಲ್ಲಿಗೆ ಕರೆದುತಂದು ಕಂಣ ಬಿಚ್ಚಿದರು. ನೋಡಿದರೆ ಮದುವೇ ಸಾಮಾನೆಲ್ಲಾ ಸಿದ್ಧವಾಗಿದೆ. ನನಗೆ ಇಂಥಾ ವಿಪತ್ತು ಬಂತು, ಎಂದು ದುಃಖಪಟ್ಟಳು.

ಅದಕ್ಕೆ ನಾನು - ಅಮ್ಮ ನಿನ್ನ ಗಂಡಮಕ್ಕಳು ಇರುವಕಡೆಗೆ ನಿನ್ನನ್ನು ನಾನು ತಲಪಿಸುತೇನೆ, ಭಯಬೇಡ ಎಂದು ಹೇಳಿದೆ. ನೀನು ಅಷ್ಟು ಉಪಕಾರವನ್ನು ಮಾಡಿದರೆ ನೀನೇ ನನ್ನ ಭಾಗದ ಈಶ್ವರ, ಎಂದಳು. ನಾನು ರೊಟ್ಟಿ ತಿಂದೆ. ಅವಳಿಗೂ ಒಂದು ರೊಟ್ಟಿಯನ್ನು ಕೊಟ್ಟೆ ತರುವಾಯ ಕೂತು ವಿಶ್ರಮಿಸಿಕೊಂಡೆ. ಅಲ್ಲಿ ಇನ್ನೊಂದು ಪ್ರಾಣಿಯೂ ಇರಲಿಲ್ಲ ಆ ಹೆಂಗಸಿನ ರೂಪವನ್ನೂ ಪ್ರಾಯವನ್ನೂ ನೋಡಿ ನನಗೆ ಮನಸ್ಸು ಕಳವಳಗೊಂಡಿತು. ನಮ್ಮ ಗುಂಪಿನಲ್ಲಿ ಯಾರೇ ಆಗಲಿ ಪರಸ್ತ್ರೀಗೆ ಆಶೆ ಬಿದ್ದ ಕೂಡಲೆ ನಮ್ಮೂರೆಲ್ಲಾ ಹಾಳಾಗುತ್ತೆ ಎಂದು ನಮ್ಮಪ್ಪ (ಮಾದು) ಹೇಳಿದ್ದ ಮಾತು ಜ್ಞಾಪಕಕ್ಕೆ ಬಂತು. ಆಗ ಮನಸ್ಸನ್ನು ಅಡಗಮೆಟ್ಟಿದೆ. ಅವಳನ್ನು ನಮ್ಮ ಅಕ್ಕನಂತೆ

ತಿಳಿದುಕೊಂಡೆ. ಅವಳೂ ನಾನೂ ಕಾಡುದಾರಿಯಲ್ಲಿ ಹೊರಟೆವು. ಆ ದಾರಿಯಲ್ಲಿ ಹಕ್ಕಿಗಳು ಕೂಡ ಹಾರಾಡುತ್ತಿರಲಿಲ್ಲ. ಅವಳ ಗಂಡನ ಊರಿಗೆ ಗಟ್ಟದಮೋಳೆ ಎಂದು ಹೆಸರು. ಅದರ ಸಮೀಪಕ್ಕೆ ಹೋದೆವು. ಆ ವೂರು ಒಂದು ಹರಿದಾರಿ ಇದೆ ಎನ್ನುವಾಗ ಎಲ್ಲಿಂದಲೋ ೧೦-೧೫ ದುಂಡಾಳುಗಳು ಓಡಿವೋಡಿ ಬಂದರು. ಇವರನ್ನು ಆ ಹೆಂಗಸು ಮೊದಲು ಕಂಡು ಗಟ್ಟಿಯಾಗಿ 'ಸತ್ತೆ' ಎಂದು ಅರಿಚಿಕೊಂಡಳು. ಹಿಂತಿರುಗಿ ನೋಡಿದೆ. ಆಕೇ ಕೈಯನ್ನು ಹಿಡಿದುಕೊಂಡು ಆ ಜನರನ್ನು ಕುರಿತು - ನೀವು ಎಷ್ಟು ಜನವಾದರೂ ಇರಿ, ನಾನು ಹೆದರುವುದಿಲ್ಲ, ಈ ಹೆಂಗಸಿನ ತಂಟೆಗೆ ಯಾರಾದರೂ ಬಂದರೆ, ನಿಮ್ಮ ಹೆಂಡತಿಯರ ತಾಳಿ ಈ ಕ್ಷಣವೇ ಕಡೆದು ಹೋಯಿತೆಂದು ತಿಳಿಯಿರಿ ಎಂದೆ. ನನ್ನ ಬಾಯಿಗೆ ಅಂಜದೆ ಆ ಜನರು ಹೆಂಗಸಿನ ಮೇಲೆ ಬೀಳಲು ಬಂದರು. ಆಗ ನಾನು ಆಕೆಯನ್ನು ಕೆಳಗಿ ಕೂರಿಸಿ, ನನ್ನಲ್ಲಿದ್ದ ಗುಪ್ತ ಎಂಬ ಕತ್ತಿಯನ್ನು ಹಿರಿದು ಪಟಾ ತಿರುಗಿಸುತಾ ಆ ಹೆಂಗಸಿನ ಸುತ್ತಲೂ ಸುತ್ತಾಡುತಾ ಬಂದೆ. ನಿಂತ ಕಡೆಯಲ್ಲಿ ನಿಲ್ಲದೆ ಆಕೆಗೆ ಲೇಶವೂ ಕುಂದಕವಾಗದೆ ಎಲ್ಲಾ ವರಸೆಗಳೂ ನಾನು ತಿರುಗಿಸುತ್ತಾ ಬಂದ ಕಾರಣ ೮-೧೦ ಜನರು ಏಟು ತಗಲಿ ಬಿದ್ದು ಬಿಟ್ಟರು. ಕಾಲು ಹೋದವರು ಕೈಹೋದವರು ಹೊಟ್ಟೆ ಶೀಳಿದವುರ ಮೂಗು ಕುಯಿದವರು ತಲೆಚಿಪ್ಪು ಹಾರಿದವರು ಹೀಗೆ ವಿಧವಿಧವಾಗಿ ಪೆಟ್ಟಾಯಿತು. ಅವರೆಲ್ಲರೂ ಮೇಲಕ್ಕೆ ಏಳದಹಾಗೆ ಬಿದ್ದುಬಿಟ್ಟರು. ಮೂರು ನಾಲ್ಕು ಜನಕ್ಕೆ ಪ್ರಾಣವೇ ಹೋದಹಾಗೆ ಕಾಣಿಸಿತು. ಮೂರುನಾಲ್ಕು ಜನ ದೂರದಲ್ಲಿ ನಿಂತು ನೋಡಿ ಹೆದರಿಕೊಂಡು ಅರಿಚುತಾ ಓಡಿಹೋದರು. ಉಳಿದ ಒಬ್ಬಿಬ್ಬರು ಕಾದಿ ಹೊರಟು ಹೋದರು. ಕಾಡೆಲ್ಲಾ ರಕ್ತಮಯವಾದ ಹಾಗಾಯಿತು. ಆಗ ಆ ಹೆಂಗಸನ್ನು ಕರೆದುಕೊಂಡು ಅವರ ವೂರಿಗೆ ಹೋದೆ. ರಾತ್ರಿ ಊಟದ ಹೊತ್ತಾಗಿತ್ತು. ಅವರ ಮನೆಯಲ್ಲಿ ಕೂಗಿ ಬಾಗಿಲ ತೆಗೆಯಿಸಿದೆ. ಆಕೆಯೂ ನಾನೂ ಒಳಕ್ಕೆ ಹೋದೆವು. ಮನೆಯವರೆಲ್ಲಾ ಅಳುತಾ ಇದ್ದರು. ಅವಳ ಗಂಡ ಅನ್ನ ತಿಂದು ಮೂರು ದಿವಸವಾಗಿತ್ತು. ಮಕ್ಕಳಿಗೆ ಹಿಟ್ಟಹಾಕತಕ್ಕವರು ಯಾರೂ ಇಲ್ಲದೆ ಹಾಗೆಯೇ ಬಿದ್ದಿದ್ದವು. ಅವರನ್ನು ನೋಡಿ ಆ ಹೆಂಗಸು ಬಹು ದುಃಖಪಟ್ಟು ಮಕ್ಕಳನ್ನು ಆ ಕ್ಷಣದಲ್ಲಿಯೇ ಎತ್ತಿಕೊಂಡಳು. ಎಲ್ಲರೂ ಬಿಕ್ಕಳಿಸಿಕೊಂಡು ಅತ್ತ ತರುವಾಯ ಮೊದಲಿನಿಂದಲೂ ಆ ಅಬಲೆಗೆ ಬಂದ ವಿಪತ್ತನ್ನೂ ಅದು ಪರಿಹಾರವಾದ ಬಗೆಯನ್ನೂ ನಾನು ಆಕೆಸಹಾ ವಿವರಿಸಿದೆವು. ನನ್ನ ಪ್ರತಾಪವನ್ನು ಹೇಳುವಕಡೆ ನಾನು ಕೊಚ್ಚಿಕೊಳ್ಳದೆ ಸಂಕ್ಷೇಪ ಮಾಡಿದರೆ ಅದನ್ನು ಆಕೆ ಚೆನ್ನಾಗಿ ವಿವರಿಸುವಳು. ಹೀಗೆ ಎಲ್ಲವನ್ನೂ ಹೇಳಿದಮೇಲೆ ಸಮಸ್ತರೂ ಸಂತೋಷಪಟ್ಟರು. ನಮ್ಮ ಭಾಗದ ಪರಮೇಶ್ವರ ನಿನ್ನ ರೂಪದಲ್ಲಿ ಬಂದನೆಂದು ಮನೆಯವರೆಲ್ಲರೂ ನನ್ನನ್ನು ಬಹಳವಾಗಿ ಉಪಚರಿಸಿದರು. ನನ್ನನ್ನು ಮೂರುದಿವಸ ಇರಿಸಿಕೊಂಡಿದ್ದು ಔತನಮಾಡಿ ನನಗೆ ಉಡುಗರೆಯನ್ನು ಕೊಟ್ಟರು. ನಾನು ಬೇಡವೆಂದು ಹೇಳಿಬಿಟ್ಟೆ ನನ್ನ ಸಾಹಸಕ್ಕೆ ಆ ಊರವರೆಲ್ಲಾ ಆಶ್ಚರ್ಯಪಟ್ಟರು.

ತರುವಾಯ ಆ ವೂರನ್ನು ಬಿಟ್ಟು ಬೇರೆ ದಾರಿಯಿಂದ ಸಂಜವಾಡಿಗೆ ಬಂದು ತಲಪಿದೆ. ಅದುವರೆಗೆ ನಮ್ಮ ಗುಂಪಿನವರೆಲ್ಲಾ ನನ್ನನ್ನು ಹುಡುಕಿ ಕಾಣದೆ ಯಾರೋ ಕೊಂದು ಹಾಕಿರಬೇಕೆಂದು ಯೋಚಿಸಿಕೊಳ್ಳುತಾ ತಾವು ಊರಿಗೆ ಬಂದರು. ನಾನು ಬರಲಿಲ್ಲವೆಂದು ನಮ್ಮಪ್ಪನು ಬಹಳ ಪೇಚಾಡುತಾ ಹುಡುಕುವುದಕ್ಕೆ ಕೆಲವು ಜನರನ್ನು ಕಟ್ಟಿಕೊಂಡು ಹೊರಡಲು ಸಿದ್ಧನಾಗಿದ್ದನು. ಆ ಸಮಯಕ್ಕೆ ನಾನು ಹೋದೆ. ನಮ್ಮಪ್ಪನು ನನ್ನನ್ನು ಕಂಡು

ಸಂತೋಷಪಟ್ಟು - ನೀನು ಯಾಕೆ ಒಬ್ಬನೇ ಹಿಂದೆ ನಿಂತೆ? ಎಲ್ಲರೂ ಬಂದು ೧೦-೨೦ ದಿವಸವಾದರೂ ನೀನು ಬರದೇ ಇರಲು ಕಾರಣವೇನೆಂದು ಕೇಳಿದನು. ಉಪ್ಪಲಿಗಿತ್ತಿಯ ಕಥೆಯನ್ನೆಲ್ಲಾ ಹೇಳಿದೆ. ಆಗ ನಮ್ಮಪ್ಪನು - ನೀನು ಬಹು ಒಳ್ಳೇಕೆಲಸಮಾಡಿದೆ. ಗಂಡಸಾದವನಿಗೆ ಪತಿವ್ರತೆಯ ಮಾನವನ್ನು ಕಾಪಾಡುವುದಕ್ಕಿಂತಲೂ ಪರಾಕ್ರಮವಿಲ್ಲ; ಮಕ್ಕಳನ್ನೂ ಮುದುಕರನ್ನೂ ದೀನರಾದವರನ್ನೂ ದುರ್ಬಲರನ್ನೂ ಕಾಪಾಡುವುದಕ್ಕಿಂತಲೂ ಬೇರೆ ಧರ್ಮವಿಲ್ಲ ಎಂದು ಹೇಳುತ್ತಾ ಹಾಗೆಯೇ - ಇದುವರೆಗೂ ಹೀಗೆಯೇ ಈ ವೂರವರು ನಡಿಸುತಾಬಂದರು. ಪರಸೀಮೇಲೆ ಕಂಣ ಹಾಕದೆ ಇರುವುದು ನಾವು ಇದ್ದ ವೂರಿನ ಪದಾರ್ಥಕ್ಕೆ ನಾವು ಆಶ ಬೀಳದೆ ಇರುವುದು, ಇವೆರಡೂ ನಮಗೆ ಇದುವರೆಗೆ ಪರಮಧರ್ಮವಾಗಿ ನಡೆದುಬಂತು. ಇನ್ನು ಮೇಲೆ ಅದಕ್ಕೆ ಲೋಪ ಬರುವಂತೆ ಕಾಣುತ್ತೆ. ಇಂಥಾ ಕೆಟ್ಟತನದಿಂದ ಊರೇ ಹಾಳಾಗುತ್ತೆ. ಆ ತಾಯಿ, ಆ ಕೊಲ್ಲಾಪುರದ ಅಮ್ಮನೇ ಕಾಪಾಡಬೇಕು, ಎಂದು ಗೊಣಗಿಕೊಂಡನು.

ತರುವಾಯ - ೨-೩ ದಿವಸದಲ್ಲಿಯೇ ಇನ್ನೊಂದು ಮೋಹಿಂ ಹೊರಟೆವು. ದಾರಿಯಲ್ಲಿ ಒಬ್ಬರಿಗೊಬ್ಬರು ಮಾತನಾಡಿಕೊಂಡದ್ದು ಹೇಗೆಂದರೆ :

ಅಮಾಸೆ - ಪರಸ್ತ್ರೀಗೂ ನಾವು ಇರುವ ವೂರಿನಲ್ಲಿ ಪರರ ಸ್ವತ್ತಿಗೂ ಆಶೆ ಬೀಳಬಾರದು. ಈ ಧರ್ಮ ಈಗ ಕೆಟ್ಟಿತು ಎಂದು ನಮ್ಮಪ್ಪ ಹೇಳಿದ. ಕಾರಣವೇನೋ ನಾನರಿಯ.

ಕಳ್ಳವರದ - ನಿಮ್ಮಪ್ಪ ಎಷ್ಟೋಕಾಲ ಕಂಡ ಮುದುಕ; ಅವ ಹೇಳಿದ್ದು ನಿಜ. ಅಪ್ಪಾಜಿಯ ಬುದ್ಧಿ ಈಚೆಗೆ ಬಲುಕೆಟ್ಟು ಹೋಯಿತು. ಹಾರವ ಉಪಾದ್ರಿ ಬಂದು ಅವನ ಹತ್ತಿರ ಸೇರಿದಾಗಿನಿಂದ ಪೂಜಾರಿಯ ಬುದ್ದಿಯೇ ಕೆಟ್ಟುಹೋಯಿತು. ಅದಕ್ಕೆ ಮುಂಚೆ ಅವನು ಆಡಿದ್ದೇ ರಾಗವಾಗಿತ್ತು. ಅವ ಹೇಳಿದ್ದು ಯಾವುದು ತಪ್ಪುತಿತ್ತು?

ಅಮಾಸೆ - ಸಿದ್ದ ಅಪ್ಪಾಜಿ ಏನುಮಾಡಿದ? ಕೂತಕಡೆಬಿಟ್ಟು ಏಳುವುದಿಲ್ಲವಲ್ಲಾ? ಅಂತು ಅವನ ಮುಖ ಒಂದು ಬಗೆಯಾಗಿದೆಯಪ್ಪ ಮೊದಲಿನ ಹಾಗೆ ಕಳೆಯಾಗಿಲ್ಲ

ಸಿದ್ದ - ಅದು ಹೇಗೆ ಇದ್ದಾತು ಅಮಾಸೆ? ಮನಸಿನಂತೆ ಮನಸ ಮಾಡೋ ಕೆಲಸ ಎಂತೇದು, ಮನೇ ಕುಲಕ್ಷವಾಗೋ ಕೆಲಸವ?

ಕಳ್ಳವರದ - ಉಪಾದ್ರಿ ದೀಕ್ಷಿತರ ಮನೆಯಲ್ಲಿಯೇ ಹುಟ್ಟಿ ಬೆಳೆದ. ಅವರು ಇವನಿಗೆ ಬಲೇ ಉಪಕಾರಮಾಡಿದರು. ಓದಿಸುವಾಗ ಹೈಕಳನ್ನು ಹೊಡೆಯಬೇಡ ಎಂದರಂತೆ. ಅದಕೆ ಮುನಿಸಿಕೊಂಡು ಒಳಗೇ ಇಸಾ ಕಾರುತಾ ಇದ್ದ, ಮಾದೇವನ ಹೆಂಡತಿ ಕೆಟ್ಟವಳು ಹಾಗೆಹೀಗೆ, ಯಾರು ಬೇಕಾದರೂ ಅವಳನ್ನು ಕೆಡಿಸಬಹುದು ಎಂದು ಏನೇನೋ ಹೇಳಿ ಅಪ್ಪಾಜಿಗೆ ಮನಸ್ಸು ಕೆಡಿಸಿದನಂತೆ. ಅದರಮೇಲೆ ಉಪಾದ್ರಿಮಾತ ಕೇಳಿ ಅವಳ ಮೇಲೆ ಅಪ್ಪಾಜಿ ಬೀಳಾಕೆ ಹೋದನಂತೆ, ಅವಳೇನೋ ಇವನ ಎದೆಗೆ ಕಲ್ಲಿನಿಂದ ಹೊಡೆದು ಓಡಿದಳಂತಪ್ಪ ಅಂತೂ ಅಪ್ಪಾಜಿಯೇನೋ ಎದೆ ಬಹುನೋವು ಎನ್ನುತಾ ನರಳುತಾ ಇದಾನೆ. ಇಷ್ಟು ಮಾತ್ರ ನಾನು ಬಲ್ಲೆ,

ಅಮಾಸೆ - ಆ ಬೊಡ್ಡಿ ಬಲೆ ಸೆಡಕಿನವಳು, ಇವನ ಲಕ್ಷ್ಯಮಾಡುತವಳೆಯೆ? ಊರವರೊಡವೆಗೆ ಆಶೆ ಬೀಳೋದು ಎಂತ ಏನೇನೋ ನಮ್ಮಪ್ಪ ಅನ್ನುತಿದ್ದ ಅದೇನೋ ಗೊತ್ತಾಗಲಿಲ್ಲ.

ವರದ - ಹಾಗೆ ನಮ್ಮೂರಲ್ಲಿ ಇನ್ನೊಂದು ನಡೆಯಿತು. ಅದನ್ನ ಕಿಲ್ಲೇದಾರ ಸುಬೇದಾರ ಇವರೆಲ್ಲಾ ಸೇರಿ ಅಲ್ಲಲ್ಲೇ ತಿಪ್ಪೇಸಾರಿಸಿ ಬಿಟ್ಟರು. ಮಾದೇವನ ಹೆಂಡತಿಗೆ ಚಳಿಜರಬಂದು ಕಿರುಮನೆಯಲ್ಲಿ ಮನಿಕೊಂಡಿದ್ದಳಂತೆ. ಉಪಾದ್ರಿ ಒಳಗೆ ಎಲ್ಲಾ ಕಂಡುಕೊಂಡು ಅಪ್ಪಾಜಿಗೆ ಇಲ್ಲದ ಆಸೆ ತೋರಿಸಿ ಆ ಕಿರುಮನೆಗೆ ಕನ್ನ ಹೊಡಿಸಿದ. ಅಪ್ಪಾಜಿಯೇ ಒಳಕ್ಕೆ ನುಗ್ಗಿದ್ದ. ಅವಳು ಆ ರಾತ್ರೆ ಹೊರಗೆ ಮಲಗಿದ್ದಳಂತೆ. ಈ ಪೂಜಾರಿ ಕೆಟ್ಟ ಮುಖಹಾಕಿಕೊಂಡು ಆ ಕಿರುಮನೆಯಲ್ಲಿದ್ದ ಚಿಲ್ಲರೆ ಚೀಟಿಪಾಟಿಯನ್ನೂ ತೆಗೆದುಕೊಂಡು ಹೊರಟುಬಂದ. ಇದೆಲ್ಲಾ ಆಗಿ ೬-೭ ದಿವಸವಾಯಿತು. ನೆಲಗವಿಸಿದ್ದನೇ ಕನ್ನ ಹೊಡಿಯಾಕೆ ಹೋಗಿದ್ದವ, ಅವನೇ ಹಿಂಗಹಿಂಗೆ ಆಯಿತು ಎಂತ ಹೇಳಿದ.

ಅಮಾಸೆ - ನಮ್ಮಪ್ಪ ಎಷ್ಟೋ ನೋಡಿದವ, ಅಷ್ಟಕಾಣದೆ ಹೇಳಿದನ? ಇದೆಲ್ಲಾ ಕೇಳಿದಮೇಲೆ ನನಗೇನೋ ಕೈಕಾಲೇ ಬರಾಕಿಲ್ಲ ಈ ಸಾರಿ ನಾವು ಹೋದಾಗ ಏನಾಗುತ್ತೋ? ಹೀಗೆ ಮಾತನಾಡಿಕೊಂಡು ನಾವು ಹೋಗಿ ವಾಮನೂರಲ್ಲಿ ಒಬ್ಬ ದೇವಾಂಗದವನ ಮನೆಗೆ ಕನ್ನಾ ಹಾಕಿದೆವು. ಒಳಗೆ ಎಲ್ಲವನ್ನೂ ಸವರಿಸುತ್ತಾ ಇರುವಾಗ ಕರೀಬಟ್ಟೆ ಹೊದ್ದುಕೊಂಡು ಮಲಗಿದ್ದ ಒಬ್ಬನಮೇಲೆ ಕತ್ತಲೆಯಲ್ಲಿ ಕಾಣದೆ ಕಾಲಿಟ್ಟು ತುಳಿದೆ. ಅವನು ತನ್ನ ಮಗ್ಗಲಲ್ಲಿರಿಸಿಕೊಂಡಿದ್ದ ದೊಂಣೆಯನ್ನು ಎತ್ತಿ ಎರಡುಸಾರಿ ಬೀಸಿದ. ಮೊದಲನೇ ಏಟು ಬಲದರಟ್ಟೆಗೆ ಬಿತ್ತು. ಕೈಲಿದ್ದ ಪೆಟ್ಟಿಗೆ ಕೆಳಕ್ಕೆ ಬಿತ್ತು. ಸದ್ದಾಯಿತು. ಮನೆಯವರೆಲ್ಲಾ ಎದ್ದರು. ಕೈಲಿದ್ದ ಬಾಕು ಎಲ್ಲಿಯೋ ಹೋಯಿತು. ಅವನು ಎರಡನೇ ಬಾರಿ ಬೀಸಿದಾಗ ದೊಂಣೆಪೆಟ್ಟು ನನ್ನ ತೊಡೆಗೆ ಬಿತ್ತು. ನಾನು ಜ್ಞಾನತಪ್ಪಿ ಕೆಳಕ್ಕೆ ಬಿದ್ದೆ. ದೀಪಾ ಹತ್ತಿಸಿದ ಹಾಗೆ ಕಂಡಿತು. ನನ್ನ ಕೈಕಾಲುಗಳನ್ನು ನವಾರದಿಂದ ಬಿಗಿದಹಾಗೆ ತೋರಿತು. ಬೆಳಗಿನಜಾವದಲ್ಲಿ ಜ್ಞಾನ ಬಂತು. ಈಗ ನನ್ನ ಸಂಗಡ ಬಂದಿರುವ ನಮ್ಮ ಜೊತೆಗಾರರನ್ನು ಹಿಂಗಟುಕಟ್ಟಿ ತಂದು ಇರಿಸಿಕೊಂಡಿದ್ದರು. ಸರ್ಕಾರದವರು ಬಂದುನೋಡಿ ನಾವು ಮೈಸೂರು ಸೀಮೆಯವರೆಂದು ನಮ್ಮನ್ನು ಇಲ್ಲಿಗೆ ಕರೆದುತಂದರು.

ಅಮಾಸೆಯು ಈ ಪ್ರಕಾರ ತನ್ನ ಕಥೆಯನ್ನು ಹೇಳಿ ಮುಗಿಸಿದನು. ಇದನ್ನು ಕೇಳಿದ ಕಳ್ಳಬಂಟನು ಇದನ್ನು ಗುಟ್ಟಾಗಿ ಬಂದೀಖಾನೇ ದರೋಗನಿಗೆ ಮಾತ್ರ ಹೇಳಿದನು.

---

## ೧೬ನೆ ಅಧ್ಯಾಯ

ಅಮಾಸೆಯು ತನ್ನ ಪೂರ್ವವೃತ್ತಾಂತವನ್ನೆಲ್ಲಾ ಹೇಳಿ ಮುಗಿಸಿದ ಮೂರು ದಿವಸಗಳ ತರುವಾಯ ಮೈಸೂರಿಂದ ಅಧಿಕಾರಿಗಳು ಬಂದು ನಗರದ ಆಮೀಲರ ಮನೆಯನ್ನೂ ಕಿಲ್ಲೇದಾರರ ಮನೆಯನ್ನೂ ತಾಲ್ಲೋಕಿನ ಇತರ

ಅಧಿಕಾರಿಗಳ ಮನೆಯನ್ನೂ ಝುಡತಿಮಾಡಿದರೆಂತಲೂ ಅವರ ಮನೇ ನಗಗಳು ಅನೇಕವನ್ನು ತೆಗೆಯಿಸಿಕೊಂಡು ಹೋದ್ದಲ್ಲದೆ ಆಯಾ ಅಧಿಕಾರಿಗಳನ್ನು ಅಮಾನತ್ತುಮಾಡಿ ಮೈಸೂರಿಗೆ ಕರೆದುಕೊಂಡು ಹೋದರೆಂತಲೂ ಬಲವಾದ ವರ್ತಮಾನ ಹುಟ್ಟಿತು. ಕಾರಣವೇನೋ ಯಾರಿಗೂ ಗೊತ್ತಾಗಲಿಲ್ಲ. ಆಗ ಮಾರಮಣರಾಯನ ಹೆಂಡತಿಯು - ಅಯ್ಯೋ ಈ ಕೇಡು ಉಂಟಾ? ಯಜಮಾನರು ತಾಲ್ಲೋಕು ಧೋರಿ. ಅವರನ್ನು ಹಿಡಿದುಕೊಂಡು ಹೋಗಬಹುಂದಾ? ಕೇಳೋರೇ ದಿಕ್ಕಿಲ್ಲದ ಹಾಂಗದಲ್ಲಿ ಅವರ ಅಧಿಕಾರಕ್ಕದಾವುದು ದೊಡ್ಡದು. ಕೊಡುತಾರ ತಕೋತಾರ ಲಾಕ್ಏಕ ಮಾಡಥಾರ ಏಕ್ ಲಾಕ್ ಮಾಡಥಾರ, ಆಕ್ಷೇಪಣೆ ಏನದ? ಇಂಥಾ ಅಧಿಕಾರಿಗಳ ಮಾನ ಹೀಂಗ ಹೋಗಬಹುಂದಾ? ನಮ್ಮ ಮನಿ ಎಲ್ಲ ಗುಡಿಸಿದ ಹಾಂಗ ತೆಗೆದುಕೊಂಡು ಹೋದರಲ್ಲ, ಯಜಮಾನರು ಒಂದುಕಾಸು ಮುಟ್ಟುತ್ತಿರಲಿಲ್ಲ ದಿಕ್ಕಿಲ್ಲದ ಸೀಮ್ಯಾಗೆ ಬಂದು ಹೀಂಗಾಯಿತು. ಸ್ವಲ್ಪಕ್ಕೆಲ್ಲಾ ನಾವು ಹಾಂಗೆ ಹೋಗುತಿದ್ದೆವಾ? ಅಂಥಾ ಧೋರಿ ಈ ತಾಲ್ಲೂಕಿಗೆ ಎಂದಿಗೆ ಬಂದಾನು? ನಮ್ಮ ಮನೆಯವರೂ ಹಾಂಗೇ ಹೇಳಿದಾಂಗ ಕೇಳೋಣಿಲ್ಲ, ದಾವುದೂ ಮುಟ್ಟಬೇಡಿ ಅಂತ ಆಗಾಗ ಹೇಳಿದ್ದೇನು. ಆತಗದಾವುದು ಲಕ್ಷ್ಯ? ನಾನು ಆಮೀಲರ ಹೆಂಡತಿಯಲ್ಲವ, ಇವರು ಹ್ಯಾಂಗಾದರೂ ಹೋಗಲಿ, ನನಗ ಅವಮಾನವಲ್ಲವ? ಇಂಥಾ ಗ್ಯಂಡ ಇದ್ದೇನು? ಸುಮ್ಮಗ ಕಂಣ ಮುಚ್ಚಿಕೊಂಡು ಆ ಕಡಿ ಹಾಳಾದರ ಲಕ್ಷಣವಾಗಿ ಈ ಹಾಳ ತಲಿ ಬೋಳಿಸಿಕೊಂಡು ಅಂಗಾರ ಹಚ್ಚಿಕೊಂಡು ಸುಖವಾಗಿ ಇದ್ದೇನು. ಅಷ್ಟಕ್ಕ ಮಾರ್ಗ ಇಲ್ಲದ ಹೀಂಗೆ ಈತಗಾಗಿ ನಾನು ಹೊರಗ ಮುಖಇಡಲಿಕ್ಕಾಗದ ಹಾಂಗಾಯಿತು. ಏನಬಡಿಕ್ಕೊಳ್ಳಿ? ಎಂದು ನೆರೆಹೊರೆಯವರ ಸಂಗಡ ಆಡಿಕೊಂಡಳು.

ಅತ್ತ ಮೈಸೂರಿಂದ ಸವಾರಕುದುರೆಯವರೂ ಬಾರಿನವರೂ ಸಹಾ ಮದ್ದು ಗುಂಡು ಕತ್ತಿ ಭರ್ಜಿಗಳ ಸಮೇತ ಚಾಮರಾಜನಗರದ ಕಡೆಗೆ ಹೊರಟರು. ಇದಕ್ಕೂ ಕಾರಣ ಸಾಧಾರಣ ಜನರಿಗೆ ಗೊತ್ತಾಗಲಿಲ್ಲ ತೊಪ್ಪೂರು ಕಣಿವೆ ಗೆಜ್ಜಲಹಟ್ಟಿ ಕಣಿವೆ, ಈ ಮಾರ್ಗವಾಗಿ ಕಣಿವೇಕೆಳಕ್ಕೆ ಹೋಗುವ ಜನರನ್ನು ಕಳ್ಳರು ದರೋಡೆಮಾಡಿ ಸುಲಿಗೆ ಮಾಡಿ ಅನೇಕರನ್ನು ತಲೆ ಒಡೆಯುತ್ತಾ ಇದ್ದರು. ಇದರ ಬಂದೋಬಸ್ತಿಗಾಗಿ ಆ ದಾರಿಗಳಲ್ಲಿ ಬಾರು ಮಾಡಿದ ಬಂದೂಕನ್ನು ಹಿಡಿದು ಸಿಪಾಯಿಗಳೂ ಸವಾರರೂ ಗಸ್ತು ಮಾಡುವ ಏರ್ಪಾಡು ಇತ್ತು. ಈ ಕೆಲಸಕ್ಕಾಗಿ ಬಾರಿನವರೂ ಸವಾರರೂ ನಗರಕ್ಕೆ ಬಂದಿರಬಹುದೆಂದು ಜನರು ತಿಳಿದುಕೊಂಡರು. ಇತರ ವಿಧವಾದ ಪುಕಾರೆ ಲೇಶವೂ ಆಗಲಿಲ್ಲ ಕಣಿವೇಕೆಳಕ್ಕೆ ವಿಜಯ ಯಾತ್ರೆಗಾಗಿ ಮೋಹಿಂ ಹೋಗಿದ್ದ ಜನರು ಯಾರೂ ಸಂಜವಾಡಿಗೆ ಹಿಂತಿರುಗಿ ಬರಲಿಲ್ಲ, ಎಂದಿನಂತೆ ಎಲ್ಲರೂ ಬರುತ್ತಾರೆ ಎಲ್ಲವೂ ಸರಿಯಾಗಿ ನಡೆದುಕೊಂಡು ಹೋಗುತ್ತೆ ಎಂದು ಆ ಗ್ರಾಮದವರೆಲ್ಲಾ ತಿಳಿದುಕೊಂಡು ನಿರ್ಭೀತರಾಗಿದ್ದರು.

ಆಗ ನಡೆದ ಅದ್ಭುತವನ್ನು ಏನಹೇಳಲಿ? ಸದಾಶಿವದೀಕ್ಷಿತನು ಊರಿಗೆ ಬಂದ ಮೇಲೆಯೂ ಹಟ್ಟಿಯಲ್ಲಿ ಮಲಗಿದ್ದ ಸೀತಮ್ಮನ ಸ್ಥಿತಿ ಏಕರೀತಿಯಾಗಿತ್ತು. ಆ ಮಧ್ಯೆ ಕಿಟ್ಟಜೋಯಿಸನು ನಸ್ಯದ ಆಶೆಗೋಸ್ಕರ ಅಮ್ಮನಗುಡಿಯ ಗುಂಪಿಗೆ ಹೋಗಿ ಕೂತು ಕೊಂಡು ಹರಟೇ ಬಡಿಯುತ್ತಿರುವಾಗ, ಪೂಜಾರಿ ಅಪ್ಪಾಜಿಯು ಲೋಕಾಭಿರಾಮವಾಗಿ ಯಾವುದೋ ಮಾತನಾಡುತಾ - ಏನು ಕಿಟ್ಟಪ್ಪ ದೀಕ್ಷಿತರು ಮೈಸೂರಿಗೆ ಹೋಗಿ ಬಂದರು

ಯಾರಾದರೂ ಸಿಕ್ಕಿದರೆ? ನಿಮ್ಮ ಮಹಾದೇವನ ಹೆಂಡತಿಗೆ ಏನ ಮಾಡಿಸಿದರು? ಎಂದನು. ಅದಕ್ಕೆ ಕಿಟ್ಟಜೋಯಿಸನು - ನಮ್ಮ ಭಾವ ಮೈಸೂರಿಗೆ ಹೋಗಿಬಂದರು, ದೊಡ್ಡ ಮಂತ್ರವಾದಿ ೩-೪ ದಿವಸದಲ್ಲಿ ಬರುತ್ತಾನೆ, ಅಂದು ಎಂಥಾ ರೋಗವೇ ಆಗಲಿ ಭೀತಿಶಂಕೆಯೇ ಆಗಲಿ ದೇವರ ಕುಶಲವಾದರೂ ಸರಿಯೆ ಮನುಷ್ಯರ ಕಡೆಯದಾದರೂ ಸರಿಯೆ, ಒಂದು ದಿವಸದಲ್ಲಿ ಗುಣಮಾಡುತಾನೆ. ನೀನು ಏನೂ ಮಾಡಲಾರದೇ ಹೋದೆ; ಇನ್ನೇನು ಮಾಡುವುದು? ಯಾರನ್ನಾದರೂ ಕರೆದುತಂದು ಏನಾದರೂ ಮಾಡಿಸಲೇಬೇಕು ಎಂದು ಐಲೈಲಾಗಿ ನಸ್ಯದ ಸಿಂಬಳವನ್ನು ಮೇಲಿನ ತುಟಿಯಿಂದ ಬಾಯಿಗೆ ಹರಿಸಿಕೊಳ್ಳುತ್ತಾ ಅದನ್ನು ಆಗಾಗ್ಗೆ ತೆಗೆದು ಬಟ್ಟೆಗೆ ಒರಿಸಿಕೊಳ್ಳುತ್ತಾ ಮಾತನಾಡಿದನು. ಈ ಮಾತ ಕೇಳಿದಕೂಡಲೆ ಅಪ್ಪಾಜಿಯ ಮನಸ್ಸಿನಲ್ಲಿ ಬಹಳ ಕಳವಳವಾಯಿತು. ದೊಡ್ಡ ಸಂಸ್ಥಾನದಿಂದ ಬರತಕ್ಕ ಮಂತ್ರವಾದಿಯ ಹೆಸರುವಾಸಿಯು ಎಷ್ಟಾದರೂ ದೊಡ್ಡದಾಗಿಯೇ ಇರುತ್ತೆ? ಅವನು ಬಂದಮೇಲೆ ಏನಾದರೂ ಮಾಡಿಯೇಮಾಡುತ್ತಾನೆ ಎಂಬ ದಿಗಿಲು ತಟ್ಟಿತು. ಈ ಮಾತು ಜರುಗಿದ ದಿವಸ ಮಧ್ಯಾಹ್ನ ಸೀತಮ್ಮನ ಸ್ಥಿತಿ ವ್ಯತ್ಯಾಸವಾಯಿತು. ಗಳಿಗೆ ಗಳಿಗೆಗೆ ಮೇಲುಬುಸ ಹೆಚ್ಚಾಯಿತು. ಬಾಯಲ್ಲಿ ಲೈದಳೆ ಹೊರಟಿತು. ಗಟ್ಟಿಯಾಗಿ ಶ್ವಾಸ ತುಯ್ಯುವುದಕ್ಕೆ ಮೊದಲಾಯಿತು. ಮನೆಯಲ್ಲಿ ಎಲ್ಲರೂ ಭೀತಿಪಟ್ಟರು. ಆಗ ತಿಮ್ಮಮ್ಮನು-ಇಷ್ಟು ದಿವಸ ಸುಮ್ಮನೇ ಬಿದ್ದಿರಲಿಲ್ಲವೆ? ಈಗೇನಂತೆ ಇವಳಿಗೆ ಬಂದದ್ದು? ಸೊಸೆಯನ್ನು ಕಂಡರೆ ಮಾವನವರು ಅಷ್ಟೊಂದು ಪ್ಯಾರಂದಹತ್ತಿಸುತಾ ಇದಾರಲ್ಲ, ಹೀಗೂ ಮಾಡಿದರೆ ಹೇಗೆ ಇರುತ್ತೆ ನೋಡೋಣ ಎಂದು ಆಟ ಹತ್ತುತಾಳ, ಬೇಕು ಎಂತ ಕೆಂಪು ತೊಗಲಿನ ಸೊಸೆಯನ್ನು ಮಾಡಿಕೊಂಡಿದಾರೆ. ಏನು ನನ್ನ ಹಾಗೆ ಕರೀಮೂತಿಯೇ? ಎಂದಳು. ಆಗ ಪಾರ್ವತಮ್ಮನು-ತಿಮ್ಮು ಆ ಹುಡುಗಿ ಸಾಯುತಾ ಬಿದ್ದಿದಾಳೆ, ಗಳಿಗೆಯೋ ಕ್ಷಣವೊ ಎನ್ನುವ ಹಾಗೆ ಇದೆ, ಈಗಲೂ ಅವಳ ಮೇಲೆ ನಿನಗೇನು? ಎಂದಳು. ಅದಕ್ಕೆ ತಿಮ್ಮಮ್ಮನು ನಿಮ್ಮಷ್ಟಕ್ಕೆ ನೀವು ಬಿದ್ದಿರಿ. ನನ್ನ ಮಾತಿಗೆ ನೀವು ಬರಬೇಡಿ. ಇನ್ನೇನು ಎಲ್ಲಾ ಕೈಗೆ ಸಿಕ್ಕಿತು? ನಮ್ಮಪ್ಪನ ಮನೆ ಎಲ್ಲಾ ಬರಿದಾಯಿತು. ಈಗ ನನ್ನ ಮೇಲೆಯೇ ಎಲ್ಲರೂ ತಾನಬಾಜಿಗೆ ಹೊರಟರು. ಹೀಗೆ ಮನಸ್ಸು ಬಂದಹಾಗೆ ತಿರಸ್ಕಾರವಾಗಿ ಮಾತನಾಡಿದಳು. ಈ ಮಧ್ಯೆ ಸೀತಮ್ಮನಿಗೆ ಪ್ರಾಣ ಉಳಿಯುವುದಿಲ್ಲವೆಂದು ಗೊತ್ತು ಮಾಡಿ ಆ ದಿನ ಮೂರನೇ ಜಾವದಲ್ಲಿ ಹೊರನಡುವೆಗೆ ಹಿಡಿದರು. ಅದುವರೆಗೆ ಮನೆಯವರಿಗೆ ಗಾಬರಿ ಹೆಚ್ಚಾಗಿ ಯಾರಿಗೂ ಊಟವೇ ಇರಲಿಲ್ಲ, ಮುಂದೆ ಏನಾದೀತೋ ಜಾಗ್ರತೆಯಾಗಿ ಊಟಮಾಡಿ ಕೊಳ್ಳೋಣವೆಂದು ಒಬ್ಬೊಬ್ಬರಾಗಿ ಹೊರಟರು. ಸದಾಶಿವದೀಕ್ಷಿತನು ಸ್ನಾನ ಮಾಡುತಿದ್ದನು. ಆಗ ಪಾರ್ವತಮ್ಮನು ಮಗನಿಗೆ ನೀರನ್ನು ತುಂಬಿಕೊಡುತಾ ಅವನನ್ನು ಕುರಿತು - ಮಗು, ತಿಮ್ಮು ಹಂಗಣೆ ಸಾಕಾಗಿದೆಯಪ್ಪ ಈ ವೂರಿಗೆ ನಾವು ಬಂದದ್ದು ಹಂಗಿನ ಕೂಳ ತಿನ್ನುವ ಹಾಗಾಯಿತು. ಬಾಯಿ ಹಿಡಿಯದ ಮಾತನ್ನೆಲ್ಲಾ ಆಡುತಾಳೆ. ಇವಳ ಸಂಗಡ ಹೊಡ ಚಂಡಲ ಹತ್ತಿ ನನಗೆ ಬೇಜಾರಾಗಿದೆ. ಮೈಸೂರಲ್ಲಿ ನಾವು ತಿರಕೊಂಡು ತಿನ್ನುತಿದ್ದದೇನು? ಇಲ್ಲಿಗೆ ಬಂದಮೇಲೆ ಇವರ ಅಪ್ಪನಮನೇ ಐಶ್ವರ್ಯವನ್ನೆಲ್ಲಾ ನಾವು ಹೊತ್ತುಕೊಂಡು ಹೋದ್ದೇನು? ಹೇಗಾದರೂ ಆಗಲಿ; ಮತ್ತೊಬ್ಬರ ಮನೆಯಲ್ಲಿರುವುದು ನಮಗೆ ಮಾನವಲ್ಲ, ಈ ಊರಿಗೆ ನಾವು ಬಂದದ್ದು ನಮಗೆ ಆಗಿ ಬರಲಿಲ್ಲ ಹಳ್ಳಿಗಾಡವಾಸ ನಮಗೆ ಪಲಸಿಗೆ ಇಲ್ಲ, ಮೊದಲಿನಿಂದಲೂ ಹಾಗೆಯೇ. ಇನ್ನೇನು ರತ್ನದಂಥಾ ಹುಡುಗಿಯನ್ನು ತಂದು ಕಾಡುಪಾಲು

ಮಾಡಿ ಬಿಡುತ್ತೇವೆ. ಇನ್ನೆಲ್ಲಾ ಒಂದು ಗಳಿಗೆಯೋ ಎರಡು ಗಳಿಗೆಯೋ, ಅಷ್ಟರಲ್ಲಿಯೇ ಇದೆ. ಇಂಥಾ ಕಾಲದಲ್ಲಿಯೂ ಇವಳು ಹೀಗಾಡುವುದು ನೋಡಿದವರಿಗೆ ತಾನೆ ಚೆನ್ನಾಗಿರುತ್ತೆಯೆ? ಬಂದಿರುವುದು ಅಸವಲ್ಲದ ರೋಗ ಹಿಂದೆ ಕೇಳಲಿಲ್ಲ ಮುಂದೆ ಕೇಳುವುದಿಲ್ಲ, ಈಗಲೂ ಇವಳು ಹೀಗಾಡುತಾಬಂದರೆ, ಇವಳೇ ಏನೋ ಮಾಡಿಬಿಟ್ಟಳು ಎನ್ನುತ್ತಾರೋ ಇಲ್ಲವೊ?

ಈಶ್ವರ ಬಲ್ಲ ಯಾರ ಯಾರ ಮನಸ್ಸು ಹೇಗೆ ಹೇಗೆ ಇರುವುದೊ! ನಮ್ಮ ಮನಸ್ಸು ಕಳಂಕವಿಲ್ಲದ್ದಾಗಿದ್ದರೆ ಸರಿ. ಅದೇನಾರೂ ಆಗಲಿ, ಇನ್ನು ಮೇಲೆ ನಾನು ಈ ಊರಲ್ಲಿರುವುದಿಲ್ಲ, ನಮ್ಮೂರಿಗೆ ಹೋಗೋಣ. ಇಲ್ಲದಿದ್ದರೆ ನನ್ನೊಬ್ಬಳನ್ನಾದರೂ ಕಳುಹಿಸಿಬಿಡು. ಪಶುಪತಿ ಮನೆಯಲ್ಲಿರುತೇನೆ. ಬೆನ್ನಲ್ಲಿ ಬಿದ್ದ ತಮ್ಮ ಒಂದು ತುತ್ತು ಅನ್ನ ಒಪ್ಪತ್ತು ಹಾಕಲಾರನೆ? ಸಾಯುವ ಕಡೆಗಾಲಕ್ಕೆ ಹಂಗಿನಕೂಳು ಇಲ್ಲದೆ ಮೂರುದಿನವಾದರೂ ಇರೋಣ, ಮೈಸೂರಿಗೆ ನಡೆ, ಎಂದು ಕಂಣಿನಲ್ಲಿ ನೀರಹಾಕುತಾ ಎಂದಳು. ಆಗ ಸದಾಶಿವದೀಕ್ಷಿತನು ತಾಯಿಯನ್ನು ಕುರಿತು - ಅಮ್ಮ ನಾನು ಎಲ್ಲವನ್ನೂ ಬಲ್ಲೆ ಈಗ ಆಡಿ ಪ್ರಯೋಜನವಿಲ್ಲ. ನೀನು ಹೇಳಿದ್ದೆಲ್ಲಾ ನನಗೂ ಗೊತ್ತಾಗಿದೆ. ನೀನು ಬಾಯಲ್ಲಿ ಆಡುತೀಯೆ, ನಾನು ಒಳಗೇ ಕೊರೆದುಕೊಂಡು ಪೇಚಾಡುತೇನೆ. ಈ ಊರಬಿಟ್ಟು ಹೋಗಬೇಕೆಂದು ನನ್ನ ಮನಸ್ಸಿನಲ್ಲಿಯೂ ಇದೆ. ಅದಕ್ಕೆ ಸಮಯ ಬರುತ್ತೆ. ಅದುವರೆಗೆ ಬಂದದನ್ನೆಲ್ಲಾ ಅನುಭವಿಸಿ ತೀರಬೇಕು, ಎಂದು ತಾಯಿಗೆ ಸಮಾಧಾನ ಹೇಳಿದನು. ಎಲ್ಲರೂ ಜಾಗ್ರತೆಯಾಗಿ ಮಡಿ ಉಟ್ಟುಕೊಂಡು, ಎಲೇಮುಂದೆ ಕೂತ ಶಾಸ್ತ್ರ ಮಾಡಿದರು, ಕಂಣಿಗೆ ಒಂದುತುತ್ತು ಮೂಗಿಗೆ ಒಂದು ತುತ್ತು ಹಾಕಿಕೊಂಡು ಎದ್ದು ಕೈತೊಳೆದುಕೊಂಡು ಹೋಗಿ ನೋಡುವಾಗ್ಗೆ ಸೀತಮ್ಮನ ಸ್ಥಿತಿ ಅಸ್ತಾವಸ್ಥೆಯಾಗಿತ್ತು. ಮನೆಯವರೆಲ್ಲರೂ ಬಂದು ನೋಡಿದರು. ಆಗ ತಿಮ್ಮಮ್ಮನು - ಎಲೆ ಮಗು ಸಾಕಿ, ನೀನು ಅಲ್ಲಿಗೆ ಹೋಗಬೇಡಮ್ಮ ಹೆದರಿಕೊಂಡೀಯೆ, ಇಲ್ಲಿಗೆ ಬಾ ಎಂದು ಮಗಳನ್ನು ಕೂಗಿದಳು. ಪಾರ್ವತಮ್ಮನು ಸೀತನ ಬಾಯಿಗೆ ನೀರನ್ನು ಹಾಕಿದಳು. ಆ ನೀರು ಕಟವಾಯಲ್ಲಿ ಸುರಿದು ಹೋಯಿತು. ತಟ್ಟನೆ ಮೈ ಕೈಯೆಲ್ಲಾ ತಂಣಗಾಯಿತು. ಕೈಯಲ್ಲಿ ನಾಡಿಸಿಕ್ಕಲಿಲ್ಲ, ತುಯ್ಯುತ್ತಾ ಇದ್ದ ಶ್ವಾಸ ಒಂದು ಸಾರಿ ಗೊರ್ರೆಂದ ಹಾಗಾಯಿತು. ಹಾಗೆಯೇ ನಿಂತು ಹೋಯಿತು. ರುದ್ರ ನಾಡಿ ಹಿಡಿದು ನೋಡಿದರು. ಅದೂ ನಿಂತುಹೋಯಿತು. ಎಲ್ಲಾ ಮುಗಿದುಹೋಯಿತು. ಮನೆಯವರೆಲ್ಲರೂ ಗೊಳ್ ಎಂದು ಅಳುವುದಕ್ಕೆ ಮೊದಲು ಮಾಡಿದರು. ಸೀತಮ್ಮನ ಮಗುವಾದ ಕೃಷ್ಣಸ್ವಾಮಿಯು ದಿಗಿಲಿನಿಂದ ತಾನೂ ಆಳುವುದಕ್ಕೆ ಮೊದಲುಮಾಡಿತು. ತಾಯಿಯ ಹತ್ತಿರ ಕೂತುಕೊಂಡು, ಅಮ್ಮ ಅಮ್ಮ ಹ್ಚು ಹ್ಚು ಎನ್ನುತ್ತಾ ಅವಳ ತುಟಿ ಬಿಡಿಸುವುದು, ಎದೆಯಮೇಲೆ ಬಿದ್ದುಕೊಳ್ಳುವುದು ಸೆರಗ ತೆಗೆಯುವುದು, ಸೀರೇ ಎಳೆಯುವುದು, ಅಳುವುದು, ಹೀಗೆಲ್ಲಾ ಮಾಡುತಿತ್ತು. ಇದನ್ನು ಕಂಡು ಎಲ್ಲರಿಗೂ ದುಃಖ ಇನ್ನೂ ಹೆಚ್ಚಿತು. ಆ ಗೋಳಿನಲ್ಲಿ ಪಾರ್ವತಮ್ಮನಿಗೆ ಏನೂ ಬೇಕಾಗಲಿಲ್ಲ ವೆಂಕಮ್ಮನು ಕೇವಲ ಮುದುಕಿ, ಕೈಹಿಡಿದು ಇಬ್ಬರು ಎಬ್ಬಿಸಬೇಕು. ಆ ಸ್ಥಿತಿಯಲ್ಲಿದ್ದಳು. ತಿಮ್ಮಮ್ಮನು ಹೆಣದ ಸಮೀಪಕ್ಕೆ ಬರಲಿಲ್ಲ ಆ ಹಸುಳೆಯ ದುಃಖವನ್ನು ನೋಡಲಾರದೆ ಸದಾಶಿವದೀಕ್ಷಿತನು ಮಗುವನ್ನು ಎತ್ತಿಕೊಂಡನು. ನಾಲ್ಕಾರು ತಿಂಗಳು ಅನ್ನ ನೀರು ಇಲ್ಲದಿದ್ದಾಗ್ಯೂ ಸೀತಮ್ಮನಿಗೆ ಮುಖ ಕೆಟ್ಟಿರಲಿಲ್ಲ ಮೈ ಕುಂದಿರಲಿಲ್ಲ ನೋಡಿದವರೆಲ್ಲಾ - ಅಯ್ಯೋ ಗಾಬರಿ ಮಾಡಬೇಡಿ, ಮುಖ ಕೆಟ್ಟಿಲ್ಲ ಪ್ರಾಣವಿದೆ, ಮೂರ್ಛೆ ಹೋಗಿರಬಹುದು ಎನ್ನುತ್ತಾ ಬಂದರು. ಸಾತಿಯು -

ಅಮ್ಮ ಅತ್ತಿಗೆ ಸತ್ತಹಾಗೆ ಇಲ್ಲ ನಿದ್ರೆಮಾಡುತಾಳಮ್ಮ ಎಂದಳು. ಅಷ್ಟರಮಟ್ಟಿಗೆ ಮುಖ ಲಕ್ಷಣವಾಗಿತ್ತು. ಆ ವೂರ ಜನರೆಲ್ಲಾ ಹೆಂಗಸರು ಗಂಡಸರು ಆದಿಯಾಗಿ ಬಂದು ನೆರೆದರು. ಈ ಸೀತಮ್ಮ ಸತ್ತುಹೋದಳೆಂದು ಕೇಳಿ ಸಮೀಪ ಗ್ರಾಮದವರೆಲ್ಲಾ ಬಂದರು.

ಆಗ ಪುರೋಹಿತರು ವಾಹಕರು ಮೊದಲಾದವರೆಲ್ಲರನ್ನೂ ದೀಕ್ಷಿತನು ಕರಿಸಿದನು. ಅಪರಕರ್ಮಕ್ಕೆ ಬೇಕಾದ್ದೆಲ್ಲಾ ಸಿದ್ಧವಾಯಿತು. ರಾತ್ರೆಗೆ ತ್ರಿಪಾದಿ ನಕ್ಷತ್ರವಿರುತ್ತೆ. ಈಗಲೇ ಶವವನ್ನು ಸಾಗಿಸಿಬಿಡೋಣ. ಇವತ್ತು ಪೌರ್ಣಮಿ ರಾತ್ರಿ ಎಲ್ಲಾ ಬೆಳದಿಂಗಳಿದೆ, ವೈಶಾಖ ಮಾಸ, ಮಳೆ ಬರುತ್ತೆ ಎಂಬ ಭಯವೇನೂ ಇಲ್ಲ ಈಗಲೇ ಶವವನ್ನು ಸಾಗಿಸಿಬಿಡೋಣ ಎಂದನು. ಚಿತಿ ಮೊದಲಾದ್ದು ಸಿದ್ಧವಾಯಿತು. ಹಣವನ್ನು ತೆಗೆದುಕೊಂಡು ಹೋಗಿ ಚಟ್ಟದಮೇಲೆ ಇಟ್ಟರು. ಮುತ್ತೈದೆಯಾದ್ದರಿಂದ ಮುಖವನ್ನು ಬಿಟ್ಟು ಮೈಗೆಲ್ಲಾ ಹೊಸಬಟ್ಟೆಯನ್ನು ಹೊದ್ದಿಸಿದರು. ಅರಿಸಿನವನ್ನು ತೊಡೆದು ಕುಂಕುಮವನ್ನು ಇಟ್ಟು ಹೂವನ್ನು ಮುಡಿಸಿದರು. ವಾಹಕರು ಚಟ್ಟಕ್ಕೂ ಹೆಣಕ್ಕೂ ಹಗ್ಗವನ್ನು ಸುತ್ತುತ್ತಾ ಬಂದರು. ಆಗ ಪಾರ್ವತಮ್ಮನು ಆ ಶವದ ಹತ್ತಿರ ಬಂದು ಕೂತುಕೊಂಡು ದುಃಖಪಡುತಾ - ಅಯ್ಯೋ ಸೀತ, ನಿನ್ನನ್ನು ಹೇಗಮ್ಮ ಕಾಡಿಗೆ ಕಳುಹಿಸಲಿ, ಪಶುಪತಿಗೆ ಏನಹೇಳಲಿ, ನಿನ್ನ ತಂದೆ ತಾಯಿಗಳ ದುಃಖವನ್ನು ಹೇಗೆ ಸಮಾಧಾನಮಾಡಲಮ್ಮ? ಲೋಕದಲ್ಲಿ ಇಲ್ಲದ ರೋಗವೇ ನಿನಗೆ ಬಂತಲ್ಲ ಮನೆಯಲ್ಲಿ ನಾವಿಬ್ಬರು ಮುದುಕರು ಇದ್ದೆವು. ಹಾಳ ಜವರಾಯ ನಿನ್ನನ್ನು ಬಿಟ್ಟು ನಮ್ಮನ್ನು ಕೊಂಡು ಹೋಗಬಾರದಾಗಿತ್ತೆ? ಯಮನಿಗೆ ಕಂಣಿಲ್ಲವೆ, ತಾಯಿ? ಮಗುವನ್ನು ಹೇಗೆ ತಡೆಯಲಿ. ಅದರ ಗೋಳನ್ನು ಹೇಗೆ ಸಮಾಧಾನಮಾಡಲಿ, ಅಯ್ಯೋ ಈಶ್ವರ, ಇಂಥಾ ಹೊತ್ತ ಕೊಟ್ಟೆಯಾ? ಎಂದು ಹಲುಬಿ ಅಳುತಿದ್ದಳು. ಅದುವರೆಗೂ ಸುಮ್ಮನೇ ಸಾಧಾರಣವಾಗಿದ್ದ ತಿಮ್ಮಮ್ಮನು ಶವದಮೇಲೆ ಅಕ್ಕಿಯನ್ನು ಎಸೆಯುವುದಕ್ಕೆ ಬಂದಾಗ ಒಂದು ಸಾರಿ ಸ್ವಲ್ಪ ಎರಚಿದಳು, ಎಲ್ಲಿಯೂ ಇಲ್ಲದ ದುಃಖ ಬಂತು. ಅಯ್ಯೋ ಸೀತ ಹೋಗುತೀಯ; ಇನ್ನು ನಿನ್ನಂಥಾ ಸೊಸೆಯನ್ನು ಎಲ್ಲಿ ಕಾಣಲೇ? ಏಳುಜನ್ಮ ಎತ್ತಿದರೂ ಸಿಕ್ಕುವುದಿಲ್ಲವಲ್ಲೆ ನನ್ನಮ್ಮ ನಿದ್ರೆ ಮಾಡುವವಳ ಹಾಗೆ ಮಲಗಿದ್ದೀಯಲ್ಲೇ, ನಾನು ನಿನ್ನ ಅಂದು ಆಡಿದ್ದಕ್ಕೆ ಕೋಪಮಾಡಿಕೊಂಡು ಮಲಗಿಕೊಂಡೆಯ ತಾಯಿ? ನಾನು ಏನ ಅಂದರೂ ಒಂದು ಮಾತನ್ನಾದರೂ ಎದುರಾಗಿ ನಿಂತು ಆಡಿದವಳಲ್ಲವೇ ನೀನು; ಈಗ ಒಂದು ಮಾತನಾಡಮ್ಮ ಒಂದು ಮಾತನಾಡು. ನಾನು ಅನ್ನುತಾ ಇದ್ದದು ನನ್ನಿಂದ ತಪ್ಪಾಯಿತು ಕಣಮ್ಮ ಒಂದು ಮಾತನಾಡು. ನೀನು ನಗುತಾ ಮಾತನಾಡುತಿದ್ದರೆ ಎಷ್ಟೋ ಚೆನ್ನಾಗಿರುತ್ತಿತ್ತಲ್ಲೇ. ನಾನು ಒಳಗೇ ಸಂತೋಷಪಟ್ಟುಕೊಳ್ಳುತಿದ್ದೆನಲ್ಲೇ. ಸೀತಮ್ಮಾ ನಿನ್ನ ಹೆಸರು ಒಂದಲ್ಲ ನಿನ್ನ ಇರಿಕೆ ಒಂದಲ್ಲವಲ್ಲೇ. ನಿನ್ನ ಸಂಸಾರ ನೆಟ್ಟಗಿದೆ, ನಿನ್ನ ಸೊಸೆಗೆ ಸಮಾನವಿಲ್ಲ ಎಂದು ಎಲ್ಲರೂ ಹೊಗಳುತಿದ್ದರಲ್ಲೇ. ಮಗು ಹೊಡಕೊಳ್ಳುತ್ತೆಯಲ್ಲೇ, ಅದನ್ನು ಹೇಗೆ ಸಮಾಧಾನ ಮಾಡಲಿ. ಮಗುವನ್ನು ತಬ್ಬಲಿಮಾಡಿ ಹೋಗುತೀಯೆ? ತಾಯಿ, ನಿನಗೆ ಯಾರೇನು ಮಾಡಿ ಅವರ ಕೈಸೇದಿಸಿಕೊಂಡರೇ? ಅವರ ಮನೆ ಹಾಳಾಗ, ಅಯ್ಯೋ ದೇವರೇ! ನಿನಗೆ ವಾಸಿಯಾಗಲಿ ಎಂದು ಹದಿನೆಂಟು ದೇವರಿಗೆ ಹರಕೆ ಹೊತ್ತಿನಲ್ಲೇ. ಕೊಲ್ಲಾಪುರದ ಅಮ್ಮನ ಗುಡಿಗೆ ತಂಬಿಟ್ಟಿನ ದೀಪಾ ವಾರವಾರಕ್ಕೂ ಹೊತ್ತಿನಲ್ಲಮ್ಮ ನಮ್ಮ ಭಾಗಕ್ಕೆ ಯಾವ ದೇವರೂ ಇಲ್ಲದೇ ಹೋಯಿತೇ? ಅಯ್ಯೋ ಸೀತ, ಸೀತಮ್ಮ ಅಯ್ಯೋ ವಿಧಿಯೇ, ನಾವು ಏನು ಪಾಪಮಾಡಿದೆವು? ಹಾಳ ಜವರಾಯನೇ, ನನ್ನ

ಸೊಸೆ ಇಲ್ಲದಿದ್ದರೆ ನಿನ್ನ ಪಟ್ಟಣ ತುಂಬುತಿರಲಿಲ್ಲವೇನೋ, ಈ ಬೆಳದಿಂಗಳ ಮುಖವಿಲ್ಲದಿದ್ದರೆ ನಿನ್ನ ಪಟ್ಟಣ ತುಂಬುತಿರಲಿಲ್ಲವೇನೋ, ಈ ಬೆಳದಿಂಗಳ ಮುಖವಿಲ್ಲದಿದ್ದರೆ ನಿನ್ನ ಹಾಳಪಟ್ಟಣ ಬೆಳಕಾಗುತಿರಲಿಲ್ಲವೇನೋ, ಪಾಪೀ, ಯಾರೂ ಕಂಡಿರಲಿಲ್ಲ ಯಾರೂ ಕೇಳಿರಲಿಲ್ಲ ಅಂಥಾ ರೋಗ ಬಂತೆ ನಿನಗೆ? ಅಯ್ಯೋ ಮಗುವೇ, ಕೃಷ್ಣಸ್ವಾಮಿ, ನಿನ್ನ ಗೋಳನ್ನು ನಾನು ಕೇಳಿ ಹೇಗೆ ಸಹಿಸಲೋ ನಾನು ಹೇಗೆ ಹೊಟ್ಟೆ ಹಿಡಿಯಲೋ ಅಪ್ಪಯ್ಯಾ? ನಾನು ಒಂದು ದಿವಸವಾದರೂ ನಿನ್ನ ಸಂಗಡ ನೆಟ್ಟಗೆ ಮಾತನಾಡಲಿಲ್ಲವಲ್ಲೇ. ಇನ್ನು ಮೇಲೆ ನಾನು ಸರಿಯಾಗಿ ಮಾತನಾಡುತ್ತೇನೆ. ನಾನು ನಿನಗೆ ಕೈಮುಗಿಯುತೇನೆ. ಅಪರಾಧವೇನಿದ್ದರೂ ಕ್ಷಮಿಸಿಬಿಟ್ಟು ಏಳಮ್ಮ ಹಾ ಸೀತಾ, ಸೀತಾ! ಎಂದು ತಿಮ್ಮಮ್ಮನು ಬಗೆಬಗೆಯಾಗಿ ಹಾಡಿಹಾಡಿ ಹಲುಬಿ, ಹಲುಬಿ, ಹೆಣದಮೇಲೆ ಬಿದ್ದು ಉರುಳಾಡುತಾ, ಹಣೆ ಚಚ್ಚಿಕೊಂಡು, ಎದೆಎದೆ ಬಡಿದುಕೊಂಡು ಬಾಯಿಬಾಯಿ ಬಡಿದುಕೊಳ್ಳುತಾ ಶವವನ್ನು ಮೇಲಕ್ಕೆ ಎತ್ತಲೀಸದೆ ಪ್ರಳಾಪಿಸುತಿದ್ದಳು. ಇವಳ ದುಃಖವನ್ನು ನೋಡಿ ಅಲ್ಲಿ ನೆರೆದಿದ್ದ ಜನರೆಲ್ಲಾ ಗೊಳೋ ಎಂದು ಅತ್ತರು. ಶವವನ್ನು ಎತ್ತಿಕೊಂಡು ವಾಹಕರು ಹೊರಟರು. ದಾರಿಯಲ್ಲಿ ಆ ಹೆಣದ ಮೇಲೆ ಅರಿಶಿನ ಎರಚಿದರು, ಕುಂಕುಮ ಎರಚಿದರು. ಹೂ ಎರಚಿದರು, ಹೀಗೆಲ್ಲಾ ಆಯಿತು. ನಮ್ಮೂರ ಲಕ್ಷ್ಮಿ ಹೊರಟು ಹೋದಳು ಎಂದು ಗುಂಪೆಲ್ಲಾ ಒಟ್ಟಿಗೆ ಅತ್ತುಬಿಟ್ಟಿತು.

ಊರಿಗೆ ಸ್ಮಶಾನವು ಬಹಳ ದೂರವಾಗಿರಲಿಲ್ಲ ನದೀತೀರದಲ್ಲಿ ಎರಡು ಮೂರು ಕಲ್ಲು ಎಸೆಗೇ ದೂರದಲ್ಲಿತ್ತು. ಹೆಣವನ್ನು ತೆಗೆದುಕೊಂಡು ಹೋಗಿ ಅಲ್ಲಿಳುಕಿದರು. ಸದಾಶಿವದೀಕ್ಷಿತನೇ ಬೆಂಕಿಯನ್ನು ಹಿಡಿದುಕೊಂಡು ಹೋದನು. ಮುಂಚಿತವಾಗಿಯೇ ಚಿತಿ ಒಡ್ಡಿತ್ತು. ಕಾಡು ಸಮೀಪದಲ್ಲಿದ್ದ ಕಾರಣ ಬೇಕಾದಷ್ಟು ಸೌದೆಯನ್ನು ಒಡ್ಡಿದರು. ಮಗುವಾದ ಕೃಷ್ಣಸ್ವಾಮಿಯ ಹೆಸರಿನ ಮೇಲೆ ಸದಾಶಿವ ದೀಕ್ಷಿತನೇ ಮಂತ್ರಾಗ್ನಿಯನ್ನು ಹಾಕಿದನು. ಶವಕ್ಕೆ ಉಡಿಸಿದ್ದ ಬಟ್ಟೆಯನ್ನು ಶಾಸ್ತ್ರರೀತ್ಯಾ ತೆಗೆದುಹಾಕಲು ಪುರೋಹಿತನು ಮಂತ್ರ ಹೇಳಿದಾಗ ವಾಹಕರು ಹೆಣದ ಮೈಮೇಲಿದ್ದ ಸೀರೆಯನ್ನು ಬಿಚ್ಚುವುದಕ್ಕೆ ಹೋದರು. ಆಗ ದೀಕ್ಷಿತನು - ಕಂಣಿನಲ್ಲಿ ತುಂಬಾ ನೀರ ಸುರಿಸುತಾ ಬಿಕ್ಕಳಿಸಿ ಬಿಕ್ಕಳಿಸಿ ಅಳುತಾ - ನಮ್ಮ ಸೀತಮ್ಮ ಬಹುಮಾನಿಷ್ಟಳು. ಆ ಸೀರೆಯನ್ನು ಬಿಚ್ಚಬೇಡಿ, ಕರ್ಮಲೋಪವಾದರೆ ಪ್ರಾಯಶ್ಚಿತ್ತ ಮಾಡಿಬಿಡೋಣ, ಎಂದು ಹೇಳಿದನು. ಅದರಂತೆ ಸೀರೆಯನ್ನು ತೆಗೆಯದೆ ಹೆಣದಮೇಲೆ ಬಿಟ್ಟು ಬಿಟ್ಟರು. ಅಗ್ನಿಪ್ರವೇಶವಾಯಿತು. ಕಟ್ಟಿಗೆ ಸ್ವಲ್ಪ ಹಸಿಯಾಗಿತ್ತು. ಹತ್ತುವುದು ತಡವಾಯಿತು. ಎಲ್ಲರೂ ಸ್ವಲ್ಪ ಹೊತ್ತು ಇದ್ದು - ಇನ್ನೇನು ಹತ್ತಿಕೊಳ್ಳುತ್ತೆ ಎಂದುಕೊಂಡು ಹೊರಟು ಹೋದರು. ಆಗ ರಾತ್ರಿ ಹತ್ತು ಗಳಿಗೆಯಾಗಿತ್ತು.

ಕೊಯಮುತ್ತೂರು ಮೊದಲಾದ ಪ್ರಾಂತ್ಯಕ್ಕೆ ಹೋಗುವ ದಾರಿಯು ಈ ನದೀ ತೀರದಲ್ಲಿ ಸ್ಮಶಾನಕ್ಕೆ ಸಮೀಪವಾಗಿತ್ತು. ಕಣಿವೇ ಕೆಳಕ್ಕೆ ಹೋಗಿ ಅಲ್ಲಲ್ಲಿ ತಂಗಿ ಹಿಂದಿನ ಊರಿನಲ್ಲಿ ಸ್ವಲ್ಪ ಬಿಸಿಲ ತಂಪಿಸಿಕೊಂಡು ಹೊರಟ ಇಬ್ಬರು ಬ್ರಾಹ್ಮಣರು ಮಡಿಚೇಲದ ಗಂಟುಗಳನ್ನು ಹೆಗಲಿಗೆ ಸೇದಿಕೊಂಡು ಬೆಳದಿಂಗಳಲ್ಲಿ ಇಬ್ಬರೂ ಮಾತನಾಡಿಕೊಳ್ಳುತ್ತಾ ಬೀಸಿ ಕಾಲನ್ನು ಹಾಕುತಾ ಆ ದಾರಿಯಲ್ಲಿ ಬಂದರು. ಇವರಲ್ಲಿ ಒಬ್ಬನು ಆಂಧ್ರ

ದೇಶದವನು. ಇವನ ಹೆಸರು ಆನಂದ ಭಟಜಿ. ಇನ್ನೊಬ್ಬನು ಕರ್ಣಾಟಕ, ಶ್ರೀರಂಗ ಪಟ್ಟಣದ ವಾಸಸ್ಥ ಇವನ ಹೆಸರು ಗಿರಿಯಣ್ಣ ಇವರಿಬ್ಬರೂ ಬಹುಕಾಲದಿಂದಲೂ ಸ್ನೇಹಿತರಾಗಿದ್ದರು. ಇವರಿಬ್ಬರೂ ಅಲ್ಲಿ ಬರುತ್ತಿರುವಾಗ ದೂರಕ್ಕೆ ಬೆಂಕಿಯ ಬೆಳಕು ಕಂಡಿತು. ಇನ್ನೂ ಹತ್ತಿರಕ್ಕೆ ಬಂದರು. ಮಸಣದ ಬೆಂಕಿ ಕಂಡಿತು. ಆಗ ಭಟಜಿಯು ದೂರದಿಂದಲೂ ಆ ಬೆಂಕಿಯನ್ನೇ ದೃಷ್ಟಿಸಿ ನೋಡಿಕೊಂಡೇ ಬರುತಾ ಸ್ವಲ್ಪ ಹೊತ್ತು ಗಿರಿಯಣ್ಣನ ಸಂಗಡ ಯಾವ ಮಾತನ್ನೂ ಆಡದೆ ಅವನು ಕೇಳಿದ್ದಕ್ಕೆ ಯಾವ ಉತ್ತರನ್ನೂ ಕೊಡದೆ ಹೋಗುತಾ ತಟ್ಟನೆ -

ಭಟಜಿ - ಗಿರಿಯಣ್ಣ ಈ ಬೆಂಕಿ ನೋಡಿದೆಯ?

ಗಿರಿಯಂಣ - ನೋಡಿದೆ. ಕಾಡಿನಲ್ಲಿ ಇದ್ದಲ ಸುಡುವುದಕ್ಕೆ ಬೆಂಕಿ ಹಾಕಿದಾರೋ, ಇಲ್ಲ ಹೆಣಕ್ಕೆ ಬೆಂಕಿ ಹಾಕಿದಾರೋ, ಯಾವುದೋ ಎರಡರಲ್ಲಿ ಒಂದು.

ಭಟಜಿ - ಇದ್ದಲ ಸುಡುವ ಬೆಂಕಿಯಲ್ಲ ಹೆಣಾ ಸುಡುವ ಬೆಂಕಿ. ಯಾವುದೋ ಊರು ಹತ್ತಿರವಾಯಿತು. ಸಂಜವಾಡಿಯಾಗಿರಬೇಕು. ದೂರದಲ್ಲಿ ಬೆಳಕು ಕಾಣುತ್ತೆ.

ಗಿರಿ - ನೀನು ಹೇಳಿದ್ದೇ ಸರಿ. ಹೆಣವೆಂತಲೇ ತೋರುತ್ತೆ. ಇನ್ನೂ ಈಗತಾನೇ ಬೆಂಕೀಹಾಕಿ ಹೊರಟುಹೋಗಿದಾರೆ.

ಭಟಜಿ - ಇದು ಹೆಣ ಎನ್ನಬೇಡ, ಮನುಷ ದೇಹವೇನೋ ಹವುದು. ಅದು ಸತ್ತಿಲ್ಲ ಪ್ರಾಣವಿದೆ. ಆದರೂ ಬೆಂಕಿಹತ್ತಿಸಿ ಹೋಗಿದಾರೆ.

ಗಿರಿ - ಬೆಂಕಿ ಹತ್ತಿ ಉರಿ ಏಳುತಾ ಇದೆ. ಪ್ರಾಣವಿದೆಯೆಂದರೇನು?

ಭಜಿ - ಬೇಕಾದರೆ ಪರೀಕ್ಷೆಮಾಡು, ತೋರಿಸುತ್ತೇನೆ. ಆ ಶರೀರಕ್ಕೆ ಪ್ರಾಣವಿದೆ.

ಗಿರಿ - ಪ್ರಾಣವಿದೆ ಎಂತ ಹೇಗೆ ಹೇಳುತೀಯೆ?

ಭಟಜಿ - ನೀನು ಸ್ವಲ್ಪ ನಿಂತುಕೊಂಡು ಧ್ಯಾನಿಸಿ ಕೇಳು. ಆ ಶರೀರ ಕೂಗುತಾ ಇರುವ ಸದ್ದು ಕೇಳುತ್ತೆ.

ಗಿರಿ - ಸ್ವಲ್ಪ ಸದ್ದೇನೋ ಬಹಳ ಹೊತ್ತಿನಿಂದ ಸಂಣಗೆ ಕೇಳುತ್ತಿದೆ. ಆದರೆ ಅದು ಗಾಳಿಬೀಸುವ ಸದ್ದೆ? ಆ ಹೆಣದ ಸದ್ದೆ?

ಭಟಜಿ - ಹೆಣದಲ್ಲಿ ಸದ್ದೆಲ್ಲಿಯದು? ಕೂಗು ಆ ಶರೀರದಿಂದ ಹೊರಡುತ್ತೆ.

ಗಿರಿ - ಹೆಣ ಹತ್ತಿ ಉರಿಯುತಾ ಇದೆ. ಅದು ಅರಿಚುತ್ತೆ ಎಂದರೆ ನಂಬುವ ಮಾತಲ್ಲ

ಭಟಜಿ - ಖಂಡಿತವಾಗಿ ನಾನು ಪರೀಕ್ಷಿಸಿ ತೋರಿಸುತ್ತೇನೆ, ನೀನು ಧೈರ್ಯವಾಗಿ ನೋಡುತ್ತಾ ಒಂದು ಕಡೆ ಕೂತುಕೊಳ್ಳುತೀಯ? ಈ ಪ್ರಾಣಿಗೆ ಯಾರೋ ನೀಚ ಬಲವಾಗಿ ಕೈಕೊಟ್ಟಿದಾನೆ. ಒಳ್ಳೇದು ಇರಲಿ, ನೀನು ಮಾತ್ರ ಹೆದರಬೇಡ.

ಗಿರಿ - ಹಾಗೇ ಆಗಲಿ.

ಹೀಗೆ ಮಾತನಾಡುತಾ ಇಬ್ಬರೂ ಆ ಊರಿಗೆ ಸ್ವಲ್ಪ ದೂರವಾಗಿ ನಿಂತು ಕೊಂಡರು. ಭಟಜಿಯು ತನ್ನ ಮಡಿಚೀಲದ ಗಂಟನ್ನು ಗಿರಿಯಂಣನ ವಶಕ್ಕೆ ಕೊಟ್ಟು ಅವನನ್ನು ಒಂದು ಸ್ಥಳದಲ್ಲಿ ಕೂರಿಸಿ ತಾನು ಮಡಿಪಂಚೆಯನ್ನುಟ್ಟು ನದಿಯಲ್ಲಿ ಸ್ನಾನ ಮಾಡಿ ಹಣೆಗೆ ವಿಭೂತಿಯನ್ನೂ ಮಡಿಚೀಲದಲ್ಲಿದ್ದ ಕುಂಕುಮವನ್ನೂ ಇಟ್ಟುಕೊಂಡು, ಗಟ್ಟಿಯಾಗಿ ಕೂಗಿ ಏನೋ ಮಂತ್ರವನ್ನು ಹೇಳುತ್ತಾ ನಿಂತುಕೊಂಡಿದ್ದ ತರುವಾಯ ಕೂತುಕೊಂಡು ಬೆಂಕಿಯ ಕಡೆಗೆ ತಿರುಗಿದನು; ಮತ್ತು ಎರಡು ಕೊನೆಗೂ ಬೆಳ್ಳಿಕಟ್ಟ ಹಾಕಿದ್ದ ಒಳುದ್ದ ಕರೀಬೆತ್ತವನ್ನು ತೆಗೆದುಕೊಂಡು ನೀರು ಸೋರುತಿದ್ದ ತನ್ನ ಜುಟ್ಟಿನಿಂದ ನೆಲದಮೇಲೆ ಬಡಿಯುತಾ ಪುನಃ ಬೆತ್ತದಿಂದ ನೆಲವನ್ನು ಬಡಿಯುತ್ತಾ, ಅನೇಕ ದೇವರುಗಳ ಹೆಸರನ್ನೂ ದೇವತೆಗಳ ಹೆಸರನ್ನೂ ಹೇಳುತಾ ಪ್ರಾಂ, ಹ್ರೀಂ, ಹ್ರೂಂ, ಪಟುಸ್ವಾಃ ಎನ್ನುತಾ, - ಮುವ್ವತ್ತಮೂರು ಕೋಟಿ ದೇವತೆಗಳನ್ನು ಕಟ್ಟುವೆ; ಭೂತ, ಭೇತಾಳ, ಬ್ರಹ್ಮರಾಕ್ಷಸ, ಶಾಕಿನಿ, ಡಾಕಿನಿ, ಪ್ರೇತ ಪಿಶಾಚಗಳನ್ನು ಕಟ್ಟುವೆ, ದುಷ್ಟರ ಕೈಕಟ್ಟುವೆ, ನೀಚರ ಮನವನ್ನು ಕಟ್ಟುವೆ, ಓಂ ಪಟುಸ್ವಾಃ, ಓಂ ಪಟುಸ್ವಾಃ ಓಂ ಪಟುಸ್ವಾಃ, ಹೀಗೆಂದು ಗಟ್ಟಿಯಾಗಿ ಕೂಗಿ ತರುವಾಯ ನಾಲ್ಕು ಕಲ್ಲನ್ನೂ ಒಪ್ಪಿಡಿ ಮರಳನ್ನೂ ಹಿಡಿದು ಮಂತರಿಸಿ - ಈ ಕಲ್ಲನ್ನು ಹಿಡಿ, ಈ ಮರಳನ್ನು ಹಿಡಿ. ನೀನು ಧೈರ್ಯವಾಗಿ ಕೂತುಕೊ, ನಿನ್ನ ನಾಲ್ಕು ದಿಕ್ಕಿಗೂ ಈ ನಾಲ್ಕು ಕಲ್ಲನ್ನು ಎಸೆ, ಯಾವ ದಿಕ್ಕಿನಿಂದ ನಿನಗೆ ಭಯ ತೋರುತ್ತೋ ಆ ಕಡೆಗೆ ಒಂದೊಂದು ಚುಟಗಿ ಮರಳನ್ನು ಎಸೆಯುತಾ ಬಾ, ಎಂದು ಗಿರಿಯಂಣನಿಗೆ ಹೇಳಿದನು. ಕೂಡಲೇ ಆ ಮಹಾ ಮಂತ್ರವಾದಿಯು ಪುನಃ ಹೊಳೆಗೆ ಹೋಗಿ ಸ್ನಾನಮಾಡಿ ಗಟ್ಟಿಯಾಗಿ ಮಂತ್ರವನ್ನು ಹೇಳುತಾ ಕೈಯಲ್ಲಿ ನೀರನ್ನು ತೆಗೆದುಕೊಂಡು ಆ ಬೆಂಕಿಯ ಸುತ್ತಲೂ ಪ್ರದಕ್ಷಿಣೆ ಮಾಡಿ ನೀರನ್ನು ಸುತ್ತಕಟ್ಟಿ ತನ್ನ ಜುಟ್ಟಿನ ನೀರನ್ನು ಆ ಬೆಂಕಿಯಮೇಲೆ ಹಿಂಡುವುದು, ಪುನಃ ನೀರಿನಲ್ಲಿ ಮುಳುಗುವುದು, ಪುನಃ ಜುಟ್ಟಿನ ನೀರನ್ನು ಬೆಂಕಿಯಮೇಲೆ ಹಿಂಡುವುದು ಹೀಗೆ ಮೂರು ಸಾರಿ ಮಾಡಿ, ತನ್ನ ಬೆತ್ತದಿಂದ ನೆಲದಮೇಲೆ ಒಂದು ಚಕ್ರವನ್ನು ಬರೆದು ಅದರ ಮನೆಗಳಲ್ಲಿ ಏನೇನೋ ಬೀಜಾಕ್ಷರಗಳನ್ನು ಬರೆದು ಅದರ ಮುಂದೆ ತಾನು ತನ್ನ ಬೆತ್ತವನ್ನು ಅದರ ಮೇಲೆ ಬಡಿಯುತಾ ಮಂತರಿಸುವುದಕ್ಕೆ ಆರಂಭಿಸಿದನು.

ಅಯ್ಯೋ! ಆಗ ನಡೆದ ಅದ್ಭುತವನ್ನು ಏನೆಂದು ವಿವರಿಸಲಿ! ಈ ಲೋಕದಲ್ಲಿ ಏನೇನು ರಹಸ್ಯಗಳಿವೆಯೋ ಅವು ನಮಗೆ ಗೋಚರವಾಗುವುದಿಲ್ಲ, ಎಲ್ಲವೂ ಆ ಸರ್ವಜ್ಞನಾದ ಪರಮೇಶ್ವರನಿಗೇ ಗೊತ್ತು. ಆ ಬೆಂಕಿಯಿಂದ ಹೊರಡುತ್ತಿದ್ದ ಕೂಗು ಸ್ವಲ್ಪಹೊತ್ತಿಗೆ ಹೋ ಎಂದು ಗಟ್ಟಿಯಾಯಿತು. ಆಗ ಗಿರಿಯಂಣನು ಭಯದಿಂದ ಕೆಟ್ಟಧ್ವನಿಯಲ್ಲಿ ಅರಚಿಕೊಂಡನು. ಭಟಜಿಯು ತನ್ನ ಬೆತ್ತದಿಂದ ಅವನನ್ನು ಮೂರು ಸಾರಿ ನಿವಾಳಿಸಲು ಗಿರಿಯಂಣ ಸುಮ್ಮನೇ ಕೂತುಕೊಂಡನು. ಪುನಃ ಆನಂದ ಭಟಜಿಯು ಸ್ನಾನಮಾಡಿ ನೀರು ಜುಟ್ಟಿನಿಂದ ಸೋರುತಾ ಇರಲಿಕ್ಕಾಗಿ ಮೂರು

ಬೊಗಸೆ ಜಲವನ್ನು ಬೆಂಕಿಯಮೇಲೆ ಎರಚಿ ಏನೋ ಮಂತ್ರವನ್ನು ಹೇಳುತಾ ಮೊದಲಿದ್ದ ಸ್ಥಳದಲ್ಲಿ ವೀರಾಸನವನ್ನು ಹಾಕಿ ಕೂತುಕೊಂಡನು. ಚಿತಿಯ ಕಡೆಗೆ ಮುಖ ಮಾಡಿಕೊಂಡನು. ಆಗ ಆಡುತ್ತಾ ಇದ್ದ ಮೋಡದಿಂದ ಬೆಳದಿಂಗಳು ಮಂಕಾಯಿತು. ಚಿತಿ ಅಲ್ಲಾಡಿತು. ಅದರಮೇಲೆ ಕೈಕಾಲು ಆಡಿದ ಹಾಗೆ ಗೋಚರವಾಯಿತು. ಅಲ್ಲಿ ಒಂದು ಮನುಷ್ಯ ಶರೀರ ಏಳುವ ಹಾಗೆ ಕಂಡಿತು. ಗಿರಿಯಂಣ ಪುನಃ ಕೆಟ್ಟ ಸ್ವರದಲ್ಲಿ ಅರಚಿಕೊಂಡು ಗಡಗಡನೆ ನಡುಗುತ್ತಾ ನಿಂತುಕೊಂಡನು. ಆಗಿನ ಸ್ಥಿತಿಯಲ್ಲಿ ಎಂಥವರಿಗೂ ಭಯವಾಗತಕ್ಕದ್ದೇ. ಮಧ್ಯರಾತ್ರೆ; ಸ್ಮಶಾನ; ಮಹಾ ನಿಶಿ; ಮೇಲ್ ಮೋಡದ ಕತ್ತಲೆ; ಪಿಶಾಚಿಯನ್ನು ಎಬ್ಬಿಸಿ ಕುಣಿಸುವ ಮಂತ್ರವಾದಿ; ಸುತ್ತಲೂ ಬೂದೀರಾಸಿ; ಮೂಳೇರಾಸಿ; ನಾಯಿ ನರಿ ಕಿತ್ತು ತಿನ್ನುತಿರುವ ಹೆಣಗಳ ವಿಕಾರರೂಪು; ನಿರ್ಮಾನುಷ್ಯವಾದ ಪ್ರದೇಶ; ವಿಪರೀತವಾದ ಹೆಣದ ನಾತ; ಈ ಮಧ್ಯೆ ಚಿತಿಯಿಂದ ಹೆಣವು ಎದ್ದು ಬಂದು ಮಾತನಾಡುವುದು; ಏನು ಭಯಂಕರವಾದ ಸ್ಥಿತಿ! ಭೀತಿಯುಂಟಾಗುವುದಕ್ಕೆ ಇನ್ನೇನು ಬೇಕು? ಯಾವುದು ಕಡಮೆಯಾಗಿದೆ? ಸಾಲದ್ದಕ್ಕೆ ಹೆಣವು ಎದ್ದು ಬಂದು "ಅಪ್ಪಾ ಹೆಂಣುಜನ್ಮ ಬಟ್ಟೆ ಕೊಡಿ," ಎಂದು ಕೂಗಿತು. ಇದನ್ನು ಕೇಳಿ ಗಿರಿಯಂಣ್ಣನಿಗೆ ಪಂಚಪ್ರಾಣವೂ ಹೋಯಿತು. ಆಗ ಭಟಜಿಯು ತಟ್ಟನೆ ಎದ್ದನು; ಹೆಣದಕಡೆ ತನ್ನ ಧೋತ್ರವನ್ನು ಎಸೆದನು; ಒಂದುಕಡೆ ವಿಭೂತಿಯನ್ನು ಗಿರಿಯಣ್ಣನ ಮೇಲೆ ಚೆಲ್ಲಿ ಮಂತ್ರಿಸಿ, ಉಭ ಶುಭ ಎನ್ನದಹಾಗೆ ಅವನನ್ನು ಸುಮ್ಮನೇ ಕೂರಿಸಿದನು. ತರುವಾಯ ಭಟಜಿಯು ಗಟ್ಟಿಯಾಗಿ ಕೂಗುತಾ ಆರ್ಭಟಿಸುತಾ ಏನೋ ಮಂತ್ರವನ್ನು ಹೇಳುತ್ತಿದ್ದನು. ಕೈ ಸನ್ನೆ ಮಾಡಿದನು. ಆ ಸ್ತ್ರೀ ಜನ್ಮವು ಹೊಳೆಯಲಿ ಸ್ನಾನಮಾಡಿ ಎದುರಿಗೆ ಬಂದು ನಿಂತಿತು. ಈ ಮಹಾ ಮಾಂತ್ರಿಕನು ಅವಳಿಗೆ ಶಿರಸ್ಸಿನಿಂದ ಕಾಲಿನವರೆಗೂ ತನ್ನ ಕೈಬೆತ್ತದಿಂದ ನಿವಾಳಿಸಿದನು. ಅವಳನ್ನು ಕೂರಿಸಿದನು. ಅವಳ ಸುತ್ತಲೂ ಗೀಟ ಹಾಕಿ ಏನೋ ಅಕ್ಷರವನ್ನು ಬರೆದನು. ತನ್ನ ಭರಣಿಯಿಂದ ಒಂದು ಚುಟಗಿ ಕುಂಕುಮವನ್ನು ತೆಗೆದು ಅವಳ ಮೇಲೆ ಹಾಕಿ ಬೆತ್ತವನ್ನು ಹಿಡಿದು ಮತ್ತೆ ವಿಶೇಷವಾಗಿ ಮಂತರಿಸುವುದಕ್ಕೆ ಮೊದಲು ಮಾಡಿದನು. ಆಗ ಊರಕಡೆಯಲ್ಲಿ ದೊಡ್ಡದಾಗಿ ಕೂಗಾಯಿತು. “ಅಯ್ಯೋ ಅಯ್ಯೋ' ಎಂದು ಗಟ್ಟಿಯಾಗಿ ಕೂಗುತ್ತಾ ಒಂದು ವ್ಯಕ್ತಿಯು ಓಡಿ ಓಡಿ ಬರುತ್ತಾ ಅಲ್ಲಲ್ಲಿ ಎಡವಿ ಬೀಳುತಾ “ಅಮ್ಮಾ ಉರಿ, ತಾಯೇ ಉರಿ; ತಪ್ಪಾಯಿತು ತಪ್ಪಾಯಿತು' ಎಂದು ಕೂಗಿಕೊಂಡು ಹೆಜ್ಜೆಹೆಜ್ಜೆಗೂ ನಮಸ್ಕಾರ ಮಾಡುತ್ತಾ ಬರುತಿತ್ತು. ಆಗ ಮಾಂತ್ರಿಕನು ತನ್ನ ಮುಂದಿರುವ ಚಕ್ರದ ಮೇಲೆ ಪುನಃಪುನಃ ಗಟ್ಟಿಯಾಗಿ ಬೆತ್ತದಿಂದ ಹೊಡೆಯುತ್ತಾ ಬಂದನು. ಇವನು ಹೊಡೆಯುತಾ ಬಂದಹಾಗೆಲ್ಲಾ ಓಡಿಬರುತಿದ್ದವನ ಅರಚಲು ಗಟ್ಟಿಯಾಗುತ್ತಾ ಬಂತು. ಕೊನೆಕೊನೆಗೆ ಸಮೀಪಕ್ಕೆ ಬರುತಾ ಇರುವಾಗ ಅದು ಒಬ್ಬ ಗಂಡಸು ಎಂದು ಗೊತ್ತಾಯಿತು. ಅವನು ಬಂದು ಭಟಜಿಗೆ ನಮಸ್ಕಾರವನ್ನು ಮಾಡುತ್ತಾ ಕೈಕೈ ಮುಗಿಯುತಾ ಗೊಳೋ ಎಂದು ಅಳುತಾ ನಿಂತುಕೊಂಡನು. ಆಗ ಭಟಜಿಯು ಬಹು ಕ್ರೂರವಾದ ಧ್ವನಿಯಿಂದ “ಹೂಳಿರುವುದನ್ನು ತೆಗೆದುಕೊಂಡು ಬಾ" ಎಂದನು. ಕೂಡಲೇ ಆ ಮನುಷ್ಯನು ಓಡಿಹೋಗಿ ಸಹಗಮನದ ಜೋಡೀ ಬೃಂದಾವನದ ಬಳಿಯಲ್ಲಿ ಸೀತಮ್ಮನು ಪೂಜೆಗೋಸ್ಕರ ತುಳಿದುಕೊಂಡು ಬಂದು ಹೋಗಿ ಮಾಡುತಿದ್ದ ಕಡೆ ತಾನು ಹೂಳಿದ್ದ ಗೇಣುದ್ದದ ಮರದ ತುಂಡನ್ನು ಕಿತ್ತು ತಂದು ಭಟಜಿಯ ಮುಂದೆ ಇರಿಸಿದನು. ಅದು ಮರದಲ್ಲಿ ಮಾಡಿದ ಹೆಂಣುಬೊಂಬೆಯಾಗಿತ್ತು. ಆ ಬೊಂಬೆಯ ತಲೆ ಕೈಕಾಲು ಮೈ ಮೊದಲಾದ ಎಲ್ಲಾ

ಕಡೆಗೂ ಮೊಳೆ ಹೊಡೆದಿತ್ತು. ಭಟಜಿಯು ಆ ಬೊಂಬೆಗೆ ಮಂತ್ರಿಸಿ ಅದರ ಮೇಲೆ ನೀರನ್ನು ಪ್ರೋಕ್ಷಿಸಿ ಅದನ್ನು ಆ ಬೆಂಕಿಯಲ್ಲಿ ಹಾಕಿ ಸುಡು'' ಎಂದು ಗರ್ಜನೆ ಮಾಡಿದನು. ಅದರಂತೆ ಆ ಮನುಷ್ಯನು ಬೆಂಕಿಗೆ ಹಾಕಿದನು. ಅದು ಸುಟ್ಟುಹೋಯಿತು. "ಆ ಮನುಷ್ಯ ಯಾರು ನೋಡಮ್ಮ'' ಎಂದು ಭಟಜಿ ಹೇಳಿದನು. ಬೆಂಕಿಯ ಬೆಳಕಿನಲ್ಲಿ ಅವನನ್ನು ನೋಡಿ ಸೀತಮ್ಮನು - ಸ್ವಾಮಿ, ಇವ ನಮ್ಮೂರ ಅಮ್ಮನಗುಡಿ ಪೂಜಾರಿ, ಎಂದಳು. ಮಂತ್ರವಾದಿಯು ತನ್ನ ಬೆತ್ತದಿಂದ ಆ ಪೂಜಾರಿಯ ಎರಡುಕೆನ್ನೆಯನ್ನೂ ಮುಟ್ಟಿದನು. ಆ ಕೂಡಲೇ ಆ ನೀಚನ ಹೊಟ್ಟೆಯಲ್ಲಿ ಮಹಾ ಸಂಕಟವುಂಟಾಯಿತು; ಆ ಕ್ಷಣವೇ ಅವನು ರಕ್ತವನ್ನು ಕಾರಿಕೊಂಡನು. ಆ ರಕ್ತದ ಸಂಗಡಲೇ ಅವನ ಬಾಯಲ್ಲಿದ್ದ ಹಲ್ಲುಗಳೆಲ್ಲಾ ಒಂದೂ ಇಲ್ಲದಹಾಗೆ ಬಿದ್ದು ಹೋದುವು. ಪುನಃ ಭಟಜಿಯು ತನ್ನ ಬೆತ್ತದಿಂದ ಗಟ್ಟಿಯಾಗಿ ಅವನ ತಲೆಯ ಮೇಲೆ ಒಂದೇಟನ್ನು ಹೊಡೆದು ''ನಿನ್ನ ಹಲ್ಲನ್ನು ಉದುರಿಸಿದೇನೆ, ಇನ್ನು ಮೇಲೆ ನೀನು ಯಾರಿಗೂ ಇಂಥಾ ಕೇಡನ್ನು ಮಾಡಲಾರೆ. ನೀನು ಪರಮ ನೀಚ. ಈ ಮಹಾಪತಿವ್ರತೆಗೆ ನೀನು ಎರಡಬಗೆದದ್ದಕ್ಕೆ ಇನ್ನೂ ಕಷ್ಟವನ್ನು ನೀನು ಅನುಭವಿಸೀಯ, ತೊಲಗಾಚೆಗೆ' ಎಂದು ಗದರಿಸಿದನು. ಆ ದುರ್ಮಾರ್ಗನು ಬಾಯಲ್ಲಿ ರಕ್ತವನ್ನು ಸೋರಿಸಿಕೊಳ್ಳುತಾ - "ಹಾಳ ಉಪಾದ್ರಿಯ ಮಾತ ಕೇಳಿದ್ದಕ್ಕೆ ಇಷ್ಟಾಯಿತು ದೇವರೇ' ಎಂದು ಅರಚಿಕೊಳ್ಳುತ್ತಾ ತನ್ನ ಮನೆಗೆ ಹೊರಟು ಹೋದನು. ಹೀಗೆ ಬೆಂಕಿಯಲ್ಲಿ ಉರಿಯುತಾ ಇದ್ದ ಸೀತೆಯು ಬದುಕಿ ಈಚೆಗೆ ಬಂದಳು.

ಆ ರಾತ್ರೆ ೨೫ ಘಳಿಗೆಯಾಗಿತ್ತು. ಭಟಜಿಯು ಪುನಃ ಸ್ನಾನವನ್ನು ಮಾಡಿ ಬೇರೇ ಬಟ್ಟೆಯನ್ನುಟ್ಟು ಸೀತಮ್ಮನ ವೃತ್ತಾಂತವನ್ನೆಲ್ಲಾ ಆಕೇ ಬಾಯಿಂದ ಸಂಕ್ಷೇಪವಾಗಿ ತಿಳಿದುಕೊಂಡು ಅವಳನ್ನೂ ಗಿರಿಯಂಣನನ್ನೂ ಕರೆದುಕೊಂಡು ಊರೊಳಕ್ಕೆ ಪ್ರವೇಶ ಮಾಡಿ ಜೋಯಿಸರ ಮನೆ ಬಾಗಿಲಲ್ಲಿ ಕೂಗಿದನು; ಕದಾ ತೆಗೆಯಿರಿ ಎಂದನು. ಅವರ ಮನೆಯಲ್ಲಿ ಒಬ್ಬಿಬ್ಬರು ಕೂತಕಡೆಯಲ್ಲಿಯೇ ಸುರುಟಿಕೊಂಡಿದ್ದರು. ಸದಾಶಿವ ದೀಕ್ಷಿತ, ತಿಮ್ಮಮ್ಮ, ಮಹಾದೇವ, ಇವರು ಮಾತ್ರ ಸೀತಮ್ಮನ ವಿಚಾರವನ್ನೇ ಮಾತನಾಡುತ್ತಾ ಹಲುಬುತಾ ಕೂತಿದ್ದರು. ಒಂದು ಕಂಬದಲ್ಲಿ ದೀಪ ಉರಿಯುತಿತ್ತು. ಅಂಥಾ ಅವೇಳೆಯಲ್ಲಿ ಬಾಗಿಲಲ್ಲಿ ಕೂಗಿದವರು ಯಾರೆಂದು ಧ್ಯಾನಿಸಿದರು. ಮೈಸೂರಿನಿಂದ ಯಾರೋ ಬಂದಿರಬೇಕೆಂದು ಯೋಚಿಸಿ ಮಹಾದೇವನು ಎದ್ದು ಬಾಗಿಲ ತೆಗೆದನು. ಭಟಜಿ ಗಿರಿಯಂಣ ಸಹಿತ ಸೀತಮ್ಮನನ್ನೂ ಕರೆದುಕೊಂಡು ಒಳಕ್ಕೆ ನುಗ್ಗಿ ಹಜಾರದಲ್ಲಿ ಬಂದು ಕೂತುಕೊಂಡರು. ಬಿಳೀ ಪಂಚೆಯನ್ನುಟ್ಟುಕೊಂಡಿದ್ದ ಸೀತಮ್ಮನ ಗುರುತು ಯಾರಿಗೂ ಸಿಕ್ಕಲಿಲ್ಲ. ರಾತ್ರೆ ಅನ್ನ ನೀರಿಲ್ಲದೆ ನಿದ್ರೆಯಿಲ್ಲದೆ ದುಃಖದಲ್ಲಿ ಇಳಿಯ ಮುಳುಗಿದ್ದ ಆ ಮನೆಯ ಜನರಿಗೆ ಯಾರನ್ನು ನೋಡುವುದೂ ಬೇಕಾಗಿರಲಿಲ್ಲ ದೀಪವಿದ್ದರೂ ಅದು ಎಲ್ಲಿಯೋ ಒಂದುಕಡೆ ಸಂಣಗೆ ಉರಿಯುತಿತ್ತು. ಸೀತಮ್ಮನು ಒಂದು ಕತ್ತಲೆಯಾಗಿರುವ ಮೂಲೆಯಲ್ಲಿ ಹೋಗಿ ನಿಂತು ಕೊಂಡಳು. ಆಗ ಸದಾಶಿವದೀಕ್ಷಿತನು ಭ್ರಮೆಯಿಂದ, ಅವರಲ್ಲಿ ಒಬ್ಬನು ಪಶುಪತಿ ಸಾಂಬಶಾಸ್ತ್ರಿಯಾಗಿರಬಹುದೆಂದು ತಿಳಿದು,

ದೀಕ್ಷಿತ - ಯಾರು ಮಾವಯ್ಯನೆ?

ಭಟಜಿ - ಸ್ವಾಮಿ, ನಾವು ಕೊಯಿಮುತ್ತೂರು ಪ್ರಾಂತ್ಯದಿಂದ ಬಂದೆವು. ಹಗಲು ಬಿಸಿಲು. ಆದಕಾರಣ ರಾತ್ರಿಯೆಲ್ಲಾ ನಡೆದುಕೊಂಡು ಬಂದವು. ಬಹು ಆಯಾಸವಾಗಿದೆ. ಈ ಊರಲ್ಲಿ ಇನ್ನು ಎಲ್ಲಿಯೂ ಇಳಿಯುವುದಕ್ಕೆ ಸ್ಥಳ ದೊರೆಯಲಿಲ್ಲ, ಎಲ್ಲಿ ವಿಚಾರಿಸಿದರೂ ಜೋಯಿಸರ ಮನೆಗೆ ಹೋಗಿ ಎಂದು ಹೇಳುತ ಬಂದರು. ತಮ್ಮ ಖ್ಯಾತಿಯನ್ನು ಕೇಳಿ ಇಲ್ಲಿಗೆ ಬಂದೆವು. ನಾಳೆ ಸಾಯಂಕಾಲದವರೆಗೂ ಇಲ್ಲಿದ್ದು ಸುದಾರಿಸಿಕೊಂಡು ಮುಂದಕ್ಕೆ ಹೋಗುತ್ತೇವೆ.

ದೀಕ್ಷಿತ - ಸ್ವಾಮಿ, ತಾವು ಇನ್ನು ಯಾರಮನೆಗಾದರೂ ಹೋಗಿ ಇಳಿದುಕೊಳ್ಳಿ. ಕತ್ತಲೆಯಲ್ಲಿ ಕಾಣಿಸಲಿಲ್ಲ ಮೈಸೂರಿಂದ ಬಂದ ನಮ್ಮ ಬಂಧುಗಳಿರಬಹುದೆಂದು ತಿಳಿದುಕೊಂಡಿದ್ದೆವು. ನೀವು ಮೈಸೂರಿನವರಲ್ಲವೆಂದು ತಿಳಿದಿದ್ದರೆ ಬಾಗಿಲ ತೆಗೆಯುತಿರಲಿಲ್ಲ, ನಮಗೆಲ್ಲಾ ಆಶೌಚ. ಬೇರೆ ದಯಮಾಡಿಸಿ.

ಭಟಜಿ - ತಮಗೆ ಎಂಥಾ ಆಶೌಚ?

ದೀಕ್ಷಿತ - ನಮಗೆ ಮೃತಾಶೌಚ.

ಭಟಜಿ - ಕಾರಣವೇನು?

ದೀಕ್ಷಿತ - ನಮ್ಮ ಸೊಸೆ ಸತ್ತುಹೋದಳು. ಸ್ಮಶಾನಕ್ಕೆ ಕೊಂಡು ಹೋಗಿ ದಹನಮಾಡಿ ಬಂದು ಜಾವ ಹೊತ್ತಾಯಿತು.

ಭಟಜಿ - ಏನುಸ್ವಾಮಿ ಹೀಗೆ ಹೇಳುತೀರಿ? ನಿಮ್ಮ ಸೊಸೆ ಸತ್ತ ಹಾಗೆ ಕಾಣುವುದಿಲ್ಲವಲ್ಲ?

ದೀಕ್ಷಿತ - ಸುಟ್ಟುಬಂದು ಕುಳಿತಿರುವವ ನಾನು. ನಿಮಗೆ ಹೇಗೆ ತಿಳಿಯಬೇಕು?

ಭಟಜಿ - ತಾವು ಏನೋ ಹೀಗೆ ಹೇಳುತ್ತೀರಿ, ತಮ್ಮ ಸೊಸೆ ಸತ್ತಂತೆ ತೋರುವುದಿಲ್ಲ, ನಾನು ಸ್ವಲ್ಪಮಟ್ಟಿಗೆ ಜ್ಯೋತಿಷವನ್ನು ಬಲ್ಲೆ,

ದೀಕ್ಷಿತ - ಪ್ರತ್ಯಕ್ಷವಾಗಿ ನಡೆದುದಕ್ಕೆ ಇನ್ನು ನಿಮ್ಮ ಜ್ಯೋತಿಷವೇತಕ್ಕೆ? ಮನೆಯವರಿಗೆಲ್ಲಾ ದುಃಖ ಪ್ರಾಪ್ತವಾಗಿರುವಾಗ ತಮ್ಮ ವಿತಂಡವಾದ ನನಗೆ ಬೇಡ. ಈ ಸೂತಕದ ಮನೆಯಲ್ಲಿರುವುದು ಸಮನಲ್ಲ, ಬೇರೇ ಯಾರ ಮನೆಗಾದರೂ ದಯಮಾಡಿ. ಅಥವಾ ಗುಡಿಯ ಕೈಸಾಲೆ ಚೆನ್ನಾಗಿದೆ. ಅಲ್ಲಿ ಹೋಗಿ ಮಲಗಿಕೊಳ್ಳಿ.

ಭಟಜಿ - ತಮಗೆ ದುಃಖದ ವೇಳೆಯಲ್ಲಿ ನಾವು ತಮ್ಮನ್ನು ತೊಂದರೆ ಮಾಡುವುದು ಸರಿಯಲ್ಲ ಏನೋ ಅರಿಯದೆ ಬಂದುಬಿಟ್ಟೆವು. ಬೆಳಗಾದ ಮೇಲೆ ಹೊರಟುಹೋಗುತ್ತೇವೆ. ಅಷ್ಟಕ್ಕಾದರೂ ಅಪ್ಪಣೆ ಕೊಡಿಸಿ, ಈ ಆವೇಳೆಯಲ್ಲಿ ನಾನು ಎಲ್ಲಿಗೆ ಹೋಗಲಿ. ನಮ್ಮ ಸಂಗಡ ನಮ್ಮ ತಂಗಿ ಬಂದಿದಾಳೆ. ಆಕೆಗೋಸ್ಕರ ಇಲ್ಲಿಗೆ ಬಂದೆವು.

ಸದಾ - ಹಾಗಾದರೆ ಬೀದಿ ನಡುವೆಯಲ್ಲಿ ಜಗಲಿ ಇದೆ. ಅಲ್ಲಿ ಮಲಗಿಕೊಳ್ಳಿ.

ಅದೇ ಪ್ರಕಾರ ನಡುವೇ ಜಗಲಿಯಮೇಲೆ ಭಟಜಿ ಗಿರಿಯಣ್ಣ ಕೂತುಕೊಂಡರು. ಸೀತಮ್ಮ ಒಂದು ಮೂಲೆಯಲ್ಲಿ ಕೂತುಕೊಂಡಳು. ಬೆಳಕು ಹರಿಯುತಬಂತು. ಭಟಜಿಯು ಒಳಕ್ಕೆ ಹೋಗಿ - ದೀಕ್ಷಿತರವರೆ, ಬೆಳಗಾಯಿತು, ನಾವು ಹೊರಡಬೇಕು. ನನ್ನ ತಂಗಿಯ ಸೀರೆ ದಾರಿಯಲ್ಲಿ ಬರುವಾಗ್ಗೆ ಬೆಂಕಿಬಿದ್ದು ಸುಟ್ಟುಹೋಯಿತು. ನಮ್ಮ ಪಂಚೆಯನ್ನು ಕಟ್ಟಿಕೊಂಡಿದಾಳೆ. ಹೊರಗೆ ಹೊರಡುವುದಕ್ಕೆ ನಾಚಿಕೊಳ್ಳುತ್ತಾಳೆ. ತಮ್ಮ ಸೊಸೆಯ ಒಂದು ಹಳೇ ಸೀರೆ ಅಪ್ಪಣೆಯಾದರೆ ಉಪಕಾರವನ್ನು ಮರೆಯಲಾರೆ. ತಾವು ಬಹು ಸತ್ಯವಂತರೆಂದು ಕೇಳಿ ಇಲ್ಲಿಗೆ ಬಂದೆವು, ತಾವಾಗಿ ಮಾನಾ ಕಾಪಾಡಿದ ಹಾಗಾಗುತ್ತೆ. ಹಾಗೂ ಸರಿ ಹೀಗೂ ಸರಿ, ದಾನಕ್ಕೆ ಸಕಾಲವಾಗಿದೆ. ನಾವೂ ಆರ್ತರಾಗಿದೇವೆ, ಎಂದು ವಿನಯವಾಗಿ ಹೇಳಿದನು. ಆಗ ದೀಕ್ಷಿತನು ಪಾರ್ವತಮ್ಮನನ್ನು ಕುರಿತು - ಅಮ್ಮ ಆ ಹುಡುಗಿ ಉಟ್ಟುಕೊಳ್ಳುತಿದ್ದ ಒಂದು ಹಳೇ ಸೀರೆಯನ್ನೂ ಅದರ ಜೊತೆಗೆ ಅವಳ ಕುಪ್ಪಸವನ್ನೂ ಕೊಟ್ಟುಬಿಡು, ಎಂದನು. ಅದೇ ಪ್ರಕಾರ ಆ ಮುದುಕಿಯು ತಂದು ಭಟಜಿಯ ಮುಂದಿರಿಸಿದಳು. ಆಗ ತಿಮ್ಮಮ್ಮನು - ಅವಳಿದ್ದು ಈ ಸೀರೆಯನ್ನುಟ್ಟುಕೊಳ್ಳುತಿದ್ದರೆ, ಇರಬೇಕು, ಇಲ್ಲದಿದ್ದರೆ ಇದು ಯಾತಕ್ಕೆ? ಅದನ್ನು ನೋಡಿದಾಗಲೆಲ್ಲಾ ದುಃಖಪಡಬೇಕಾಗುತ್ತೆ. ಈ ಸೀರೆಯನ್ನುಟ್ಟುಕೊಂಡು ಅವಳು ಬರುತಾ ಇದ್ದರೆ ಸಾಕ್ಷಾತ್ ಆದಿಲಕ್ಷ್ಮಿಯೇ ಬರುತಾಳೋ ಎನ್ನುವ ಹಾಗೆ ಇರುತಿದ್ದಳು. ಅಯ್ಯೋ ಅಯ್ಯೋ! ಅಂಥಾ ರೂಪೋ ಆ ಗುಣವೋ! ಇನ್ನೆಂದಿಗೆ ಕಂಡೇವು! ತೆಗೆದುಕೊಳ್ಳಿಯಪ್ಪ ಯಾರಾದರೂ ಪುಣ್ಯಾತ್ಮರು ಉಟ್ಟುಕೊಳ್ಳಿ, ಸಾರ್ಥಕವಾಗಲಿ ಎಂದಳು. ಅದಕ್ಕೆ ಭಟಜಿಯು - ತಾಯಿ ತಮಗೇನು ಕಡಮೆ? ಯಾತಕ್ಕೆ ದುಃಖ ಪಡುತೀರಿ. ಅಂಥಾ ಸೊಸೆಯೇ ಬರುತಾಳೆ ಎಂದು ಹೇಳುತಾ ಬಟ್ಟೆಯನ್ನು ತೆಗೆದು ಕೊಂಡು ಸ್ವಲ್ಪ ಕುಂಕುಮವನ್ನು ಅದರ ಸಂಗಡ ಇಸುಕೊಂಡು, ನಡುವೆಗೆ ಹೋಗಿ ಸೀತಮ್ಮನಿಗೆ ಕೊಟ್ಟನು. ಅವಳು ಆ ಸೀರೆಯನ್ನುಟ್ಟು ಕುಪ್ಪಸವನ್ನು ತೊಟ್ಟು ಕುಂಕುಮವನ್ನು ಹಣೆಗೆ ಇಟ್ಟುಕೊಂಡಳು. ಇವಳು ನಡುವೆಯಲ್ಲಿಯೇ ಇದ್ದಳು. ಸ್ವಲ್ಪ ಹೊತ್ತಿನಲ್ಲಿಯೇ ಭಟಜಿಯೂ ಗಿರಿಯಂಣನೂ ಒಳಕ್ಕೆ ಬಂದು ಕೂತುಕೊಂಡರು. ಸದಾಶಿವದೀಕ್ಷಿತನು - ಮತ್ತೇನು ಸ್ವಾಮಿ? ಎಂದನು. ಭಟಜಿಯು ತಮ್ಮ ಸಂಗಡ ನಾನು ವಿಶೇಷವಾಗಿ ವಾದ ಮಾಡುವುದಿಲ್ಲ. ತಮ್ಮ ಸೊಸೆ ಸತ್ತು ಹೋದಳೆಂದು ತಾವು ಹೇಳಿದಿರಿ. ಹಾಗಾದರೆ ತಾವು ಹಾಗೆಯೇ ನಂಬಿಕೊಂಡಿರಿ. ನನ್ನದೊಂದು ಮನುವೆ, ಇದೆ, ಅದನ್ನು ಲಾಲಿಸಿ, ತಮ್ಮ ಮನೇ ಜನರನ್ನೆಲ್ಲಾ ಈಗ ಇಲ್ಲಿಗೆ ಕರೆಯಿಸಿ, ನಾನು ಒಂದು ಸಂಗತಿಯನ್ನು ಹೇಳುತ್ತೇನೆ ಎಂದನು. ಅದಕ್ಕೆ ದೀಕ್ಷಿತನು ತನ್ನ ಮನಸ್ಸಿನಲ್ಲಿ - ಪದೇ ಪದೇ ಈ ಬ್ರಾಹ್ಮಣ ಹೀಗೆ ಹೇಳುತಾನಲ್ಲ? ಯಾತಕ್ಕಾಗಿ ಹೀಗೆ ಹೇಳುತ್ತಾನೆ? ಯಾವ ರೋಗವೂ ಇಲ್ಲದೆ ನಮ್ಮ ಹುಡುಗಿ ಸತ್ತದ್ದೇನೋ ತಿಳಿದೇ ಇದೆ. ಇದು ಭೀತಿ ಶಂಕೆಯೇ ಶಾಬರ ಪ್ರಯೋಗವೇ ಎಂಬ ವಿಚಾರ ಕುರಿತು ಮಂತ್ರವಾದಿಗಳನ್ನು ಕೂಡ ವಿಚಾರಿಸಿ ಗೊತ್ತುಮಾಡಿತ್ತಷ್ಟೆ ಈ ಬ್ರಾಹ್ಮಣ ಏನೋ ಹೀಗೆ ಕುಣಿಚಿ ಕುಣಿಚಿ ಹೇಳುತ್ತಾನೆ. ಹೀಗೆ ಆಗಂತುಕರಾಗಿ ಬರುವ ಜನರಲ್ಲಿ ಏನಾದರೂ ಮಹತ್ತುಗಳಿರುವುದುಂಟು. ಈತ ಏನು ಹೇಳುತಾನೋ ಪರೀಕ್ಷಿಸೋಣವೆಂದು ಯೋಚಿಸಿಕೊಂಡು ಮನೆಯವರೆಲ್ಲರನ್ನೂ ಹಜಾರಕ್ಕೆ ಬರುವಂತೆ ಹೇಳಿದನು. ಎಲ್ಲರೂ ಬಂದು ನಿಂತುಕೊಂಡರು.

ಆಗಿನ ಆಶ್ಚರ್ಯವನ್ನು ಏನಹೇಳಲಿ? ಯಾಕೆ ಎಲ್ಲರನ್ನೂ ಕರೆಯಿಸಿದಾರೆ ಎಂದು ಎಲ್ಲರಿಗೂ ಅನುಮಾನವಾಯಿತು. ಎಲ್ಲರ ದೃಷ್ಟಿಯೂ ಆ ಬ್ರಾಹ್ಮಣನಮೇಲೆ ಬಿತ್ತು. ಭಟಜಿಯು ಅಲ್ಲಿದ್ದ ಜನರು ಯಾರೂ ಹೆದರಿಕೊಳ್ಳದ ಹಾಗೆ ಬಾಯಲ್ಲಿ ಏನೋ ಮಂತ್ರವನ್ನು ಜಪಿಸಿ, "ಸೀತಮ್ಮ ಬಾ" ಎಂದು ಗಟ್ಟಿಯಾಗಿ ಕೂಗಿದನು. ಸೀತಮ್ಮ ತಟ್ಟನೆ ನಡುವೆಯಿಂದ ಒಳಕ್ಕೆ ಬಂದು ಎಲ್ಲರಿಗೂ ನಮಸ್ಕಾರಮಾಡಿ ತಲೆಬಾಗಿ ನಿಂತುಕೊಂಡಳು. ಸಮಸ್ತರಿಗೂ ಆಶ್ಚರ್ಯವಾಯಿತು. ಅಲ್ಲಿದ್ದವರಿಗೆಲ್ಲಾ ಕಂಣು ದೊಡ್ಡದಾಯಿತು. ದೃಷ್ಟಿ ಸೀತನ ಮೇಲೆ ನೆಟ್ಟಿತು. ಬಾಯಿ ತಾನಾಗಿ ತೆರೆದುಹೋಯಿತು. ಭಯ ಆಶ್ಚರ್ಯ ಸಂತೋಷ ಮೂರೂ ಮುಖದಲ್ಲಿ ನಾನು ತಾನೆಂದು ಮುಂದುವರಿಯುತಿದ್ದವು. ಆಗ ಪಾರ್ವತಮ್ಮನು ಸೀತ?" ಎಂದಳು. ಸೀತನು "ಆ" ಎಂದು ಉತ್ತರ ಕೊಟ್ಟಳು. ಆಗ ಮನೇ ಹೆಂಗಸರೆಲ್ಲಾ ಬಂದು "ಅಯ್ಯೋ ನನ್ನ ತಾಯಿ, ನೀನು ಎಲ್ಲಿ ಹೋಗಿದ್ದೆ? ನಿನಗೇನಾಗಿತ್ತು?" ಎಂದು ಒಬ್ಬರು ತಬ್ಬಿಕೊಂಡರು, ಒಬ್ಬರು ತಲೆ ತಡವರಿಸಿದರು, ಇನ್ನೊಬ್ಬರು ಕೈ ಹಿಡಿದುಕೊಂಡರು, ದೀಕ್ಷಿತನು-ಸೀತಾದೇವಿ ಅಗ್ನಿಕುಂಡದಿಂದ ಬಂದಹಾಗೆ ಬಂದೆಯಾ ಅಮ್ಮಾ? ನಮ್ಮ ಭಾಗ್ಯಲಕ್ಷ್ಮೀ ಬಾ ಎಂದನು. ಕೂಡಲೆ ಅದುವರೆಗೆ ಆಶ್ಚರ್ಯ ಸಾಗರದಲ್ಲಿ ಮುಳುಗಿದ್ದ ತಿಮ್ಮಮ್ಮನು ಸೀತಮ್ಮನ ಹತ್ತಿರ ನಿಂತು ಅವಳನ್ನು ಅರ್ಧ ಆಲಿಂಗನ ಮಾಡಿಕೊಳ್ಳುತ್ತಾ ಅವಳ ತಲೆಯನ್ನು ತಡವರಿಸುತಾ - ಅಮ್ಮಾ ನೀನು ನಮ್ಮೆಲ್ಲರನ್ನೂ ಬಿಟ್ಟು ಎಲ್ಲಿ ಹೋಗಿದ್ದೆ ತಾಯಿ? ಹೇಗೆ ಬದುಕಿ ಬಂದೆ? ಇದೇನಾಶ್ಚರ್ಯ! ನಿನಗೆ ಏನಾಯಿತಮ್ಮ? ಯಾವ ದುರ್ಮಾರ್ಗರು ಏನ ಮಾಡಿದ್ದರೆ? ನಿನ್ನ ಭಾಗದ ರಾಮ ಲಕ್ಷ್ಮಣರ ಹಾಗೆ ಬಂದು ಈ ಪುಣ್ಯಾತ್ಮರು ಕಾಪಾಡಿದರೆ ಅಮ್ಮ? ಪುನಃ ತಾಯಿಹೊಟ್ಟೆಯಲ್ಲಿ ಹುಟ್ಟಿದೆಯ, ಗಂಡನಿಗೆ ಹೆಂಡತಿಯಾದೆಯ, ಮಗುವಿಗೆ ತಾಯಾದೆಯ? ಎಂದು ಹಲವು ಬಗೆಯಲ್ಲಿ ಹಂಬಲಿಸಿದಳು. ಎಲ್ಲರಿಗೂ ಆನಂದಬಾಷ್ಪ ಸುರಿಯಿತು. ದೀಕ್ಷಿತನು ಎದ್ದು ಬ್ರಾಹ್ಮಣರಿಬ್ಬರಿಗೂ ನಮಸ್ಕಾರಮಾಡಿ - ಸ್ವಾಮಿ ಎಂದೆಂದಿಗೂ ಇಲ್ಲದ ಈ ಆಶ್ಚರ್ಯಕ್ಕೆ ಕಾರಣವೇನು, ಅಪ್ಪಣೆಯಾಗಲಿ, ಎಂದು ಎರಡು ಕೈಗಳನ್ನೂ ಮುಗಿದು ಕೇಳಿಕೊಂಡನು. ಅದಕ್ಕೆ ಭಟಜಿಯು - ಸೀತಮ್ಮನೇ ಹಿಂದಿನ ವೃತ್ತಾಂತವನ್ನು ಹೇಳಲಿ, ಎಂದನು. ಆಗ ಸೀತಮ್ಮನು ಪರಮನೀಚನಾದ ಅಮ್ಮನಗುಡೀ ಸಿದ್ಧ ಮಾಡಿದ ಅಕೃತ್ಯವನ್ನು ತಾನು ತಿಳಿದ ಮಟ್ಟಿಗೆ ವಿವರಿಸಿ ತಾನು ಮೊದಲು ಹಿತ್ತಿಲಬಾಗಿಲಿನಿಂದ ಬರುತ್ತಾ ಇರುವಾಗ್ಗೆ ಜ್ಞಾನತಪ್ಪಿ ಬಿದ್ದು ಹೋಗುವತನಕ ನಡೆದ ವೃತ್ತಾಂತವನ್ನೆಲ್ಲಾ ಸ್ಪಷ್ಟವಾಗಿ ವಿವರಿಸಿದಳು. ಆ ತರುವಾಯ ಗಿರಿಯಂಣನು ಸ್ಮಶಾನದಲ್ಲಿ ನಡೆದ ಸಂಗತಿಗಳನ್ನೂ ಸಿದ್ದ ಮಾಟದ ಬೊಂಬೆ ಕಿತ್ತು ತಂದು ಬೆಂಕಿಯಲ್ಲಿ ಸುಟ್ಟದ್ದನ್ನೂ ಅವನ ಹಲ್ಲುಗಳೆಲ್ಲಾ ಉದುರಿ ಹೋದ್ದನ್ನೂ ಅವನು ರಕ್ತ ಕಾರಿಕೊಂಡು ಅಳುತಾ ಊರಿಗೆ ಓಡಿ ಹೋದ್ದನ್ನೂ ತಾವುಗಳು ಊರಿಗೆ ಬಂದದ್ದನ್ನೂ ಸವಿಸ್ತಾರವಾಗಿ ಹೇಳಿದನು. ಆಗ ಮನೆಯವರೆಲ್ಲರೂ ಆ ಮಹಾತ್ಮನಾದ ಭಟಜಿಗೆ ಏಕಕಾಲದಲ್ಲಿ ಸಾಷ್ಟಾಂಗವಾಗಿ ನಮಸ್ಕಾರ ಮಾಡಿ - ಸ್ವಾಮಿ ನಮ್ಮ ಭಾಗದ ಪರಮೇಶ್ವರನು ತಮ್ಮ ರೂಪಿನಲ್ಲಿ ದಯ ಮಾಡಿದಾನೆ, ಎಂದು ಹತ್ತು ಬಾಯಲ್ಲಿ ಹೊಗಳಿದರು.

ಕೂಡಲೆ ಅಪರಕರ್ಮಾದಿಗಳ ಆಚರಣೆಯಿಂದ ಅಶುಚಿಯಾಗಿದ್ದ ಮನೆಗೆ ಸುಂಣದ ನೀರನ್ನು ಎರಚಿ, ಪುಣ್ಯಾವರ್ಚನೆಯನ್ನು ಮಾಡಿ, ವಸಿಷ್ಠ ವಾಮದೇವರಿಗೆ ಸಮಾನವಾಗಿ ಬಂದಿದ್ದ ಆ ಇಬ್ಬರು ಬ್ರಾಹ್ಮಣರಿಗೂ

ವಿಶೇಷವಾಗಿ ಉಪಚರಿಸಿ, ದೀಕ್ಷಿತನು ಈ ಸಂಗತಿಯೆಲ್ಲವನ್ನೂ ಕುರಿತು ಸವಿಸ್ತಾರವಾಗಿ ಪಶುಪತಿ ಸಾಂಬಶಾಸ್ತ್ರಿಗೆ ಕಾಗದವನ್ನು ಬರೆದು ಕಳುಹಿಸಿದನು. ಸತ್ತುಹೋದ ಸೀತಮ್ಮ ಬದುಕಿಬಂದಳು ಎಂಬ ವರ್ತಮಾನವು ಹೇಗೋ ಬೆಳಕು ಹರಿಯುವುದರೊಳಗಾಗಿ ಕಿವಿಯಿಂದ ಕಿವಿಗೆ ಬಿದ್ದು ಒಂದು ನಿಮಿಷದಲ್ಲಿ ಪರಿಮಳದ್ರವ್ಯದ ವಾಸನೆಯಹಾಗೆ ಊರಿಂದ ಊರಿಗೆ ಹರಡಿಕೊಳ್ಳುತ್ತಾ ಬಂತು. ಸೀತಮ್ಮನನ್ನು ಹೊತ್ತುಕೊಂಡು ಹೋದಾಗ ಎಷ್ಟು ಇತ್ತೋ ಅದಕ್ಕಿಂತ ಒಂದಕ್ಕೆ ಹತ್ತರಷ್ಟು ಜನ ಬಂದುಬಿಟ್ಟಿತು. ಎಲ್ಲರೂ ಸೀತಮ್ಮನನ್ನು ನೋಡಿ ಆಶ್ಚರ್ಯಪಟ್ಟುಕೊಂಡು ಸ್ಥಳವನ್ನು ಬಿಟ್ಟು ಹೋಗಲಾರದೆ ಅವಳನ್ನು ಎಷ್ಟು ನೋಡರೂ ದಣಿಯದೆ ಅವಳ ವಿಚಾರವನ್ನು ಎಷ್ಟು ಕೇಳಿದರೂ ತೃಪ್ತಿಯಾಗದೆ ಆಶ್ಚರ್ಯದಲ್ಲಿ ಮುಳುಗಿದ್ದರು. ಜನ ಒಬ್ಬರ ಮೇಲೆ ಒಬ್ಬರು ಬರುತ್ತಲೇ ಇದ್ದರು. ಸದಾಶಿವದೀಕ್ಷಿತನು ಗಿರಿಯಂಣ ಭಟಜಿ ಇವರನ್ನು ವಿಶೇಷವಾಗಿ ಉಪಚರಿಸಿ ಹೆಚ್ಚಾದ ಮರ್ಯ್ಯಾದೆಯಿಂದ ಕಾಣುತಾ ಬಲವಂತವಾಗಿ ಅವರನ್ನು ತಮ್ಮ ಮನೆಯಲ್ಲಿಯೇ ಉಳಿಸಿಕೊಂಡನು.

ಅತ್ತ ಮೈಸೂರಿಗೆ ಈ ವರ್ತಮಾನವು ಸದಾಶಿವದೀಕ್ಷಿತನ ಕಾಗದ ತಲಪುವದಕ್ಕೆ ಮುಂಚೆಯೇ ಮುಟ್ಟಿತ್ತು. ಆ ಕೂಡಲೇ ಪಶುಪತಿ ಸಾಂಬಶಾಸ್ತ್ರಿಗೆ ಕಾಗದದ ಮೂಲಕ ನೇಟಾದ ವರ್ತಮಾನವೇ ತಲಪಿತು. ಆ ಶಾಸ್ತ್ರಿಯೂ ಅವರ ಮನೇ ಜನರೂ ಈ ಕಾಗದವನ್ನು ಓದಿದ ಕ್ಷಣದಲ್ಲಿ ಬೆಚ್ಚಿ ಬೆರಗಾಗಿ ಹೋದರು. ಶಾಸ್ತ್ರಿಯು ಆ ಗಳಿಗೆಯಲ್ಲಿಯೇ ಅರಮನೆಗೆ ಹೋಗಿ ಸಮಯವನ್ನು ದೊರಕಿಸಿಕೊಂಡು ಅಂಬಾ ವಿಳಾಸದಲ್ಲಿ ಸದಾಶಿವದೀಕ್ಷಿತನ ಕಾಗದವನ್ನು ಕೃಷ್ಣರಾಜ ಪ್ರಭುಗಳ ಸನ್ನಿಧಿಯಲ್ಲಿ ಓದಿ ಅರಿಕೆ ಮಾಡಿದನು. ಆಗ ಮಹಾರಾಜನೂ ಅಲ್ಲಿದ್ದ ಸಭೆಯೂ ಅತ್ಯಾಶ್ಚರ್ಯಪಟ್ಟು ಪುನಃ ಪುನಃ ಕಾಗದವನ್ನು ಓದಿಸಿ ಕೇಳಿ-ಇದೇನಾಶ್ಚರ್ಯ? ಎಲ್ಲಿಯೂ ನಡೆಯದೇ ಇದ್ದ ಸಂಗತಿ ನಮ್ಮ ರಾಜ್ಯದಲ್ಲಿ ಜರುಗಿದೆ. ಸತ್ತ ಹೆಣಕ್ಕೆ ಜೀವಕಳೆಯನ್ನು ತುಂಬಿ ಪ್ರಾಣದಾನವನ್ನು ಮಾಡಿದ ಆ ಮಹಾತ್ಮನ ದರ್ಶನವನ್ನು ನಾವು ಮಾಡಲೇ ಬೇಕು. ಆತನನ್ನು ಇಲ್ಲಿಗೆ ಕರೆದುಕೊಂಡು ಬನ್ನಿ ಎಂದು ಅಪ್ಪಣೆಯಾಯಿತು. ಸಾಂಬಶಾಸ್ತ್ರಿಯೂ ಅವರ ಮನೇ ಜನರೆಲ್ಲರೂ ಸೇರಿ ಹೊರಟು ಅತಿ ಜಾಗ್ರತೆಯಾಗಿ ಸಂಜವಾಡಿಯನ್ನು ಸೇರಿದರು. ಸೀತಮ್ಮನನ್ನು ಕಂಡಕೂಡಲೆ ಇವರುಗಳ ಆನಂದಕ್ಕೆ ಅಂತ್ಯವೇ ಇಲ್ಲದೇ ಹೋಯಿತು. ಎಲ್ಲರೂ ಈ ಮಾತನ್ನೇ ಪುನಃ ಪುನಃ ಕುಣಚಿ ಕುಣಚಿ ಕೇಳುತ್ತಾ ಬಂದರು.

ಅತ್ತಲಾ ದಂಡಿನ ಜನರು ಚಾಮರಾಜನಗರದಲ್ಲಿ ಬಂದು ಇಳಿದಿದ್ದರಷ್ಟೆ ಇವರು ಸೀತಮ್ಮನನ್ನು ತೆಗೆದುಕೊಂಡುಹೋಗಿ ಉರಿಯಮೇಲೆ ಇಟ್ಟ ರಾತ್ರೆಯೇ ದಾರೀಬಿಟ್ಟು ದಾರಿಯಲ್ಲಿ ಯಾರಿಗೂ ಗೊತ್ತಾಗದ ಹಾಗೆ ಹೊರಟು ಸಂಜವಾಡೀ ಬಳಿಗೆ ಬಂದು ಊರಸುತ್ತಲೂ ಮುತ್ತಿಗೆ ಹಾಕಿಕೊಂಡರು. ಅಮ್ಮನಗುಡೀ ಸಿದ್ದಪ್ಪಾಜಿಯವರ ಮನೆಯ ಮತ್ತು ಗುಡಿಯ ಸುತ್ತಲೂ ಹೆಚ್ಚು ಬಿಗಿಯುಳ್ಳ ಪಹರೆ ಬಂದು ಮುತ್ತಿಕೊಂಡಿತು. ಈ ಊರ ಜನಗಳ ಸ್ಥಿತಿಯು ಅಮಾಸೆ ಹೇಳಿದ ಚರಿತ್ರೆಯಲ್ಲಿ ವಿಶದವಾಯಿತು. ಅಲ್ಲಿ ಕಳ್ಳರ ಹುತ್ತವೇ ಸೇರಿಕೊಂಡಿತ್ತು. ಈ ಜನರು ಯಾತಕ್ಕೂ ಹೇಸತಕ್ಕವರಲ್ಲ ಸಮಯ ಬಂದರೆ ಎಷ್ಟು ಜನರನ್ನಾದರೂ ಕೊಂದು ತಪ್ಪಿಸಿಕೊಂಡು ಓಡಿಹೋಗುವ ಸಾಮರ್ಥ್ಯವೂ ಅಭ್ಯಾಸವೂ ಇವರಿಗೆ ಇತ್ತು. ಮತ್ತು ಪೂಜಾರಿ ಸಿದ್ದಪ್ಪಾಜಿಯ ಕಡೆಯವರು ಕೇವಲ

ಸಾಹಸಿಗಳೆಂದೂ, ಇವನು ಈಚೆಗೆ ವಿಶೇಷವಾಗಿ ಖ್ಯಾತಿಗೆ ಬಂದ ಗುಡಿಯ ಪೂಜಾರಿಯಾದ್ದರಿಂದ ದೇವರ ಭಕ್ತರೂ ಒಗ್ಗಟ್ಟಾಗಿ ಮೇಲೆ ಬರಬಹುದೆಂದೂ ಸಹ ಭಯವಿತ್ತು. ಆದಕಾರಣ ಹೆಚ್ಚಾದ ಸೇನೆಯು ಅಲ್ಲಿ ಸೇರಿ ಮುತ್ತಿಗೆ ಹಾಕಿದರು. ಬೆಳಗಿನ ಜಾವದಲ್ಲಿ ಸೀತಮ್ಮ ಊರೊಳಕ್ಕೆ ಬಂದಳು. ಬೆಳಗಾದ ಮೇಲೆ, ದಂಡಿನವರು ಬಂದು ಈ ಮುತ್ತಿಗೆ ಹಾಕಿದರು. ಆ ಊರಲ್ಲಿ ಎಲ್ಲಾ ಮನೆಯೊಳಕ್ಕೂ ಏಕಕಾಲದಲ್ಲಿ ನುಗ್ಗಿ ಅಲ್ಲಿದ್ದ ಹೆಂಗಸರು ಗಂಡಸರು ಎಲ್ಲರನ್ನೂ ಹಿಂಗಟ್ಟು ಮುರಿಕಟ್ಟಿ ಕೂರಿಸಿ ಎಲ್ಲಾ ಮನೆಯವರನ್ನೂ ಝಡತಿ ಮಾಡಿದರು; ಮನೆಗಳ ಹಾರನ್ನು ಎತ್ತಿದರು, ಗೋಡೆಗಳನ್ನು ಕೆಡವಿದರು, ನೆಲವನ್ನು ಅಗೆದರು. ಅನೇಕ ಒಡವೆಗಳೂ, ವರಹಗಳೂ, ರತ್ನಪಡಿ ನಗಗಳೂ ಅಲ್ಲಲ್ಲಿ ಸಿಕ್ಕಿದವು. ಸಿದ್ದಪ್ಪಾಜಿಯ ಮನೆಯಲ್ಲಿಯೂ ಗುಡಿಯಲ್ಲಿಯೂ ಲೆಕ್ಕವಿಲ್ಲದಷ್ಟು ಒಡವೆಯೂ ಹಣವೂ ಸಿಕ್ಕಿತು, ಬಾಯಲ್ಲಿ ಒಂದು ಹಲ್ಲೂ ಇಲ್ಲದೆ ರಕ್ತ ಸೋರುತಾ ಮುಖವೆಲ್ಲಾ ಬಾತುಕೊಂಡು ಮೈ ಎಲ್ಲಾ ತರೆದುಹೋಗಿ ಮೇಲಕ್ಕೆ ಏಳಲಾರದೆ ಸಂಕಟಪಡುತಾ ಬಿದಿದ್ದ ಸಿದ್ದಪ್ಪಾಜಿಯವರಿಗೂ ನಿಗಳಬಂಧನವಾಯಿತು. ಉಪಾದ್ರಿ ನಾರಪ್ಪಯ್ಯನವರಿಗೆ ಕೈಕೋಳವಾಯಿತು. ಇದೂ ಒಂದು ಆಶ್ಚರ್ಯವಾಯಿತು. ಸರಕಾರದವರು ಇವರೆಲ್ಲರನ್ನೂ ಮಧ್ಯೆ ಬಿಟ್ಟುಕೊಂಡು ಅಲ್ಲಿ ದೊರೆತ ನಗನಾಣ್ಯಗಳೆಲ್ಲವನ್ನೂ ಚೀಲಗಳಲ್ಲಿ ಹಾಕಿ ಮೊಹರುಮಾಡಿ ಗಾಡಿಗಳಮೇಲೆ ಹೇರಿಸಿಕೊಂಡು ಎಲ್ಲಕ್ಕೂ ಬಾರಿನವರೂ ಕುದುರೆ ಸವಾರರೂ ಸುತ್ತಿಕೊಂಡು ಮೈಸೂರಿಗೆ ಹೋದರು. ಈ ಹಾಳ ಕಳ್ಳರ ಗುಂಪಿಗೆ ಸೇರಿ ಸರ್ಕಾರದವರ ಕೈಗೆ ಸಿಕ್ಕದೆ ಹೋದ ಜನರು ಕೆಲವರು ತಪ್ಪಿಸಿಕೊಂಡು ಕಾಡುಪಾಲಾಗಿ ಓಡಿಹೋದರು. ಒಂದೆರಡು ದಿವಸದೊಳಗಾಗಿ ಊರೆಲ್ಲಾ ಹಾಳಾಯಿತು. ಈ ವದಂತಿ ಎಲ್ಲೆಲ್ಲಿಯೂ ಸುತ್ತಲೂ ಹತ್ತು ಗಾವುದದವರೆಗೂ ಹರಡಿಕೊಂಡಿತು. ತಮ್ಮನ್ನೂ ಎಲ್ಲಿ ಹಿಡಿದುಕೊಂಡು ಹೋಗುತಾರೋ ಎಂದು ಯಾವ ಊರವರೂ ಸಂಜವಾಡಿಯ ಕಡೆ ತಿರುಗಿಕೂಡಾ ನೋಡುವುದನ್ನು ಬಿಟ್ಟುಬಿಟ್ಟರು. ಅಮ್ಮನ ಗುಡಿಗೆ ದೀಪ ಹತ್ತಿಸುವವರು ಕೂಡ ಇಲ್ಲದೇ ಹೋದರು. ಕೊಲ್ಲಾಪುರದ ಮಹಾಲಕ್ಷ್ಮಿಯು ಆ ಊರನ್ನು ಬಿಟ್ಟು ಬೇರೆಕಡೆಗೆ ಬಿಜಯಂಗೈದಳು. ಆ ಕಡೆ ನಗರದ ಅಮಲ್ದಾರರೂ ಕಿಲ್ಲೇದಾರರೂ ಹೆಡ್‌ಮುನ್ಷಿಯವರೂ ಇತರ ಕರಣೀಕರೂ ಗುಮಾಸ್ತೆಯವರೂ ಪಟೇಲರೂ ಶಾನುಭೋಗರೂ ದೇವರ ಪೂಜಾರಿಗಳೂ ಉಪಾಧ್ಯಾಯರೂ ಉಳಿದ ಸಾಮಾಜಿಕರೂ ಮೋಹಿಂ ವಿಜಯಯಾತ್ರೆಗೆ ಸೇರಿದ ಚೋರಭಟರೂ ಇವರೆಲ್ಲರೂ ಮೈಸೂರಿಗೆ ಹೋದರು. ಎಲ್ಲರಿಗೂ ನಸರು ಬಂದಿಯಲ್ಲಿಟ್ಟು ವಿಚಾರಣೆ ಮಾಡುವಾಗ್ಯೆ ದಂಡಿನವರು ಸಂಜವಾಡಿಯಿಂದ ತೆಗೆಯಿಸಿಕೊಂಡು ಬಂದಿದ್ದ ನಗಗಳನ್ನು ದೇಶಾಂತರಗಳಿಂದ ಬಂದಿದ್ದ ಜನರು ನಮ್ಮದು ತಮ್ಮದು ಎಂದು ಗುರುತಿಸಿದರು. ವಿಚಾರಣೆ ಅನೇಕ ತಿಂಗಳು ಜರುಗಿತು. ಈ ಕಳ್ಳರ ಗುಂಪಿನಲ್ಲಿ ಸಿದ್ದಪ್ಪಾಜಿ ಮೊದಲಾದ ಜನರನ್ನು ನೀರಿನಮೇಲೆ ಕಳುಹಿಸಿದರು. ಉಳಿದವರಿಗೆ ಹತ್ತು ಹದಿನೈದು, ಇಪ್ಪತ್ತು ವರುಷಗಳವರೆಗೆ ಬಂದೀಖಾನೆ ಪ್ರಾಪ್ತಿಯಾಯಿತು. ಉಪಾದ್ರಿ ನಾರಪ್ಪಯ್ಯನವರಿಗೂ ಐದು ವರುಷ ಜ್ಞಾನ ಮಂಟಪವಾಸ ಪ್ರಾಪ್ತಿಯಾಯಿತು. ಇದಕ್ಕೆಲ್ಲಾ ಒಳಗಾಗಿದ್ದ ಸರ್ಕಾರದ ಉದ್ಯೋಗಸ್ಥರು ಕೆಲವರಿಗೆ ಬಂದೀಖಾನೆಯಾಯಿತು. ಉಳಿದ ಕೆಲವು ಜನರನ್ನೆಲ್ಲಾ ಬಿಟ್ಟುಬಿಟ್ಟರು.

ಇತ್ತ ಸಂಜವಾಡಿಯಲ್ಲಿ ಸದಾಶಿವದೀಕ್ಷಿತ ಪಶುಪತಿ ಸಾಂಬಶಾಸ್ತ್ರಿ ಮೊದಲಾದವರು ಭಟಜಿ ಗಿರಿಯಂಣ ಇವರಿಬ್ಬರಿಗೂ ಹೆಚ್ಚಾದ ಉಪಕಾರವನ್ನು ಮಾಡಿ ನಾಲ್ಕೈದು ದಿವಸ ತಮ್ಮ ಮನೆಯಲ್ಲಿಯೇ ಇರಿಸಿಕೊಂಡಿದ್ದರು.

ತರುವಾಯ ಒಂದು ದಿನ ಅವರಿಗೆ ಔತಣಮಾಡಿ ಬೇಕಾದ ಉಡುಗರೆಯನ್ನೂ ಐವತ್ತು ಬಹದರೀ ವರಹಾವನ್ನೂ ಒಂದು ತಟ್ಟೆಯಲ್ಲಿರಿಸಿ ಭಟಜಿಗೂ, ಸಾಧಾರಣ ಉಡುಗರೆಯನ್ನು ಗಿರಿಯಂಣನಿಗೂ, ತಂದು ಇರಿಸಿದರು. ಸೀತಮ್ಮನೂ ಮಹಾದೇವನೂ ಆ ಬ್ರಾಹ್ಮಣರಿಬ್ಬರಿಗೂ ನಮಸ್ಕಾರ ಮಾಡಿದರು. ಆಗ ಭಟಜಿಯು - ಸ್ವಾಮಿ ತಾವು ಸತ್ಪುರುಷರು, ನನ್ನಲ್ಲಿದ್ದ ಅಲ್ಪ ಶಕ್ತಿಯನ್ನು ತಾನು ತೋರಿಸಿದ ಮಾತ್ರಕ್ಕೆ ತಾವು ಹೀಗೆ ನನಗೆ ಪ್ರತ್ಯುಪಕಾರರೂಪವಾಗಿ ಇದನ್ನು ತಂದು ಇರಿಸಿ ಸ್ವೀಕರಿಸಬೇಕೆಂದು ಕೇಳುವುದು ತಮ್ಮ ಸತ್ಯಭಾವವನ್ನು ಪ್ರಕಾಶ ಮಾಡುತ್ತೆ. ಆದರೆ ನಾನು ಯಾವುದನ್ನೂ ಅಂಗೀಕರಿಸ ತಕ್ಕವನಲ್ಲ, ಹಾಗೆ ಅಂಗೀಕರಿಸಿದ ಕ್ಷಣದಲ್ಲಿ ನನ್ನ ಮಂತ್ರಶಕ್ತಿ ಎಲ್ಲಾ ಹೋಗುತ್ತೆ. ಅದು ನನಗೆ ಒಂದು ಶಿಕ್ಷೆ ಎಂದು ಭಾವಿಸುತ್ತೇನೆ. ದಯಮಾಡಿ ಕ್ಷಮಿಸಬೇಕು. ನಾನು ಏನನ್ನೂ ಮುಟ್ಟತಕ್ಕವನಲ್ಲ, ಇದು ನಮ್ಮ ಗುರುಗಳ ಅಪ್ಪಣೆಯಾಗಿದೆ. ಆಪತ್ಕಾಲಗಳಲ್ಲಿ ನನ್ನ ಶಕ್ತಿಯನ್ನು ಪ್ರಯೋಗಿಸಿ ಜನರಿಗೆ ನಾನು ಮಾಡುವ ಉಪಕಾರವನ್ನು ತಾವಾಗಿ ನಿಲ್ಲಿಸಿ ಆರ್ತರಾದವರ ಕಷ್ಟವನ್ನು ತಾವಾಗಿ ಹೆಚ್ಚುಮಾಡಿದಂತಾಗುತ್ತೆ. ಈ ಪಾಪಕ್ಕೆ ತಾವು ಗುರಿಯಾಗುತ್ತೀರಿ, ಎಂದು ಖಂಡಿತವಾಗಿ ಹೇಳಿದನು. ಆಗ ಪಶುಪತಿ ಸಾಂಬಶಾಸ್ತ್ರಿಯೂ ಸದಾಶಿವದೀಕ್ಷಿತನೂ ಆತನನ್ನು ಕುರಿತು-ಸ್ವಾಮಿ ತಾವು ಯಾರೋ ಮಹರ್ಷಿಗಳೇ ಸರಿ. ಈ ಕಲಿಯುಗದಲ್ಲಿ ಲೋಕೋಪಕಾರಾರ್ಥವಾಗಿ ದಯ ಮಾಡಿಸಿದೀರಿ, ತಮ್ಮ ದರ್ಶನವಾದ್ದು ನಮ್ಮ ಪೂರ್ವಾರ್ಜಿತ ಪುಣ್ಯಫಲವೇ ಹೊರತು ಬೇರೆ ಇಲ್ಲ. ತಾವು ಅಪ್ಪಣೆ ಕೊಡಿಸಿದ ಮಾತಿಗೆ ಏನು ಅರಿಕೆ ಮಾಡುವುದಕ್ಕೂ ನಮಗೆ ಶಕ್ತಿ ಸಾಲದು. ಆದರೂ ತಾವು ಎರಡು ಮಾತನ್ನು ನಡಸಿ ಕೊಡಬೇಕು. ಈ ಉಡುಗೊರೆ ಮೊದಲಾದ್ದನ್ನು ನಾವು ಹಿಂದಕ್ಕೆ ತೆಗೆದುಕೊಂಡು ಹೋಗುವುದಿಲ್ಲ, ಬ್ರಾಹ್ಮಣರ ವಿನಿಯೋಗಕ್ಕಾಗಿ ಎಂದು ಉದ್ದೇಶಮಾಡಿ ತಂದ ಕಾರಣ ಅದು ಬ್ರಾಹ್ಮಣರಿಗೆ ದತ್ತವಾದಂತಾಯಿತು. ಇದಕ್ಕೆ ವಿನಿಯೋಗ ಹೇಗೆ ಆಗಬೇಕು? ತಮ್ಮ ಅನುಜ್ಞೆಯಾದ ಹಾಗೆ ಅದನ್ನು ವಿನಿಯೋಗಿಸಬೇಕಾಗಿದೆ. ತಾವುಗಳು ವಸಿಷ್ಠ ವಾಮದೇವರಂತೆ ದಯಮಾಡಿಸಿ ನಿಜವಾಗಿಯೂ ಪ್ರಾಣದಾನವನ್ನು ಮಾಡಿ ನಮ್ಮನ್ನು ಉದ್ಧಾರಮಾಡಿದಿರಿ, ಈ ಭಾಗದಲ್ಲಿ ನಮ್ಮ ವಂಶವಿರುವವರೆಗೂ ತಮ್ಮ ಪ್ರತಿಮೆಯನ್ನಿಟ್ಟು ಪೂಜೆಮಾಡತಕ್ಕದ್ದಾಗಿದೆ. ಈ ದೇಹವನ್ನೇ ತಮಗೆ ತೆಯಿದು ಕೊಟ್ಟರೂ ಸಾಲದು. ಇಂಥವರಲ್ಲಿ ನಾವು ಹೆಚ್ಚಾಗಿ ಅರಿಕೇ ಮಾಡಲಾರೆವು, ಎಂದರು. ಆಗ ಭಟಜಿಯು ಗಿರಿಯಂಣ, ಅವರು ಮಾಡಿದ ಮರ್ಯ್ಯಾದೆಯನ್ನು ನೀನು ಸ್ವೀಕರಿಸು, ಅವರ ಮನೆಗೆ ಬಂದು ಅವರಿಗೆ ಅಸಮಾಧಾನವನ್ನು ಯಾಕೆ ಉಂಟುಮಾಡಬೇಕು? ಎಂದನು. ಅದಕ್ಕೆ ಗಿರಿಯಂಣನು ಭಟಜಿಯ ಮಾತಿನಂತೆ ಒಂದು ಧೋತ್ರವನ್ನು ತೆಗೆದುಕೊಂಡನು. ಪುನಃ ಪಶುಪತಿ ಸಾಂಬಶಾಸ್ತ್ರಿಯು-ನಾವು ಅರಿಕೆ ಮಾಡಿಕೊಂಡಿದ್ದ ಒಂದು ಅಂಶವೇನೋ ಪೂರ್ತಿಯಾಗಿ ಚಿತ್ತಕ್ಕೆ ಬಾರದೇ ಹೋಯಿತು. ತಾವೇನೋ ಮಹಾತ್ಮರು. ವಿಶೇಷವಾಗಿ ನಿಸ್ಪೃಹರು. ತಾವು ಮಾಡಿದ ಪ್ರಾಣದಾನಕ್ಕೆ ನಮ್ಮ ಕೃತಜ್ಞತೆಯನ್ನು ತೋರಿಸಲು ಆಸ್ಪದವನ್ನು ಕೊಡದಿದ್ದರೆ ನಮ್ಮನ್ನು ಕೃತಘ್ನರಾಗಿಯೇ ಭಾವಿಸಬೇಕಾಯಿತು. ಅದು ಅಂತಿರಲಿ. ಇನ್ನೊಂದು ವಿಷಯವೇನೆಂದರೆ, ತಮ್ಮ ಪ್ರಭಾವವು ಕೃಷ್ಣರಾಜ ಪ್ರಭುಗಳ ಆಸ್ಥಾನದಲ್ಲಿ ವಿಶೇಷವಾಗಿ ಪ್ರಸ್ತಾಪಿಸಲ್ಪಟ್ಟಿತು. ತಮ್ಮಂಥಾ ಮಹಾತ್ಮರ ದರ್ಶನವನ್ನು ಮಾಡಬೇಕು ಎಂದು ದೊರೆಯು ಅಪೇಕ್ಷಿಸಿ ತಮ್ಮನ್ನು ಕರೆದುಕೊಂಡು ಹೋಗುವುದಕ್ಕಾಗಿ ನನ್ನನ್ನು ಕಳುಹಿಸಿದಾರೆ.

ಖಂಡಿತವಾಗಿಯೂ ತಾವು ಮೈಸೂರಿಗೆ ದಯಮಾಡಿಸಬೇಕು. ಪ್ರಭುಗಳ ಭೇಟಿಯನ್ನು ಮಾಡಿಕೊಂಡು ತರುವಾಯ ತಾವು ಎಲ್ಲಿಗೆ ಬೇಕಾದರೂ ತೆರಳಬಹುದು, ಎಂದನು. ಭಟಜಿಯು - ಇದು ಆಗಲಾರದು, ರಾಜಾಸ್ಥಾನದಲ್ಲಿ ನನಗೇನೂ ಕೆಲಸವಿಲ್ಲ ಅಲ್ಲಿಗೆ ಬಂದಮೇಲೆ ಅವರು ಹೇಳಿದಂತೆ ಕೇಳಬೇಕಾಗುವುದು. ಇಂಥಾ ಸಂದರ್ಭದಲ್ಲಿ ಏನಾದರೂ ಮರ್ಯಾದೆ ನಡೆಯುವುದು. ಅದನ್ನು ಅಂಗೀಕರಿಸದಿದ್ದರೆ ಆ ಮಹಾ ಪದವಿಗೆ ಅವಮಾನ ಮಾಡಿದ ಹಾಗಾಗುತ್ತೆ. ಅಂಗೀಕಾರ ಮಾಡಿದರೆ ನಮ್ಮ ಗುರುಗಳ ಆಜ್ಞೆಯನ್ನು ಮೀರಿದಂತಾಗುತ್ತೆ. ಮೇಲಾಗಿ ಅಂಥಾ ಮಹಾ ಸ್ಥಳಕ್ಕೆ ಹೋಗುವ ಮಟ್ಟಿನ ಯೋಗ್ಯತೆ ನಮಗೆ ಇದೆಯಲ್ಲಾ ಎಂಬ ದುರಹಂಕಾರವು ನಮಗೆ ಒಂದು ನಿಮಿಷ ಮಾತ್ರವಾದರೂ ಹುಟ್ಟುವುದು. ಅಂಥಾ ಅಹಂಕಾರ ಹುಟ್ಟಿದ ಗಳಿಗೆಯಲ್ಲಿಯೇ ನಮ್ಮ ಶಕ್ತಿ ಕುಂದಿ ಹೋಗುವುದು. ಆದ್ದರಿಂದ ನಾನು ಮೈಸೂರಿಗೆ ಬರುವುದಿಲ್ಲ ಎಂದನು. ಪುನಃ ಪಶುಪತಿ ಸಾಂಬಶಾಸ್ತ್ರಿಯು - ತಮ್ಮ ಮನೋನಿಶ್ಚಯಕ್ಕೆ ಯಾವ ರೀತಿಯಲ್ಲಿಯೂ ಕುಂದಕಬಾರದಂತೆ ನೋಡಿಕೊಳ್ಳುವ ಭಾರ ನನಗಿರಲಿ. ಖಂಡಿತವಾಗಿ ತಾವು ಮೈಸೂರಿಗೆ ದಯಮಾಡಲೇಬೇಕೆಂದು ಹೇಳಿದನು. ಇದೆಲ್ಲವನ್ನೂ ಕೇಳಿ ಆ ದಿವಸ ರಾತ್ರೆ ಗಿರಿಯಂಣನೂ ಭಟಜಿಯು ಅವರ ಮನೆಯ ನಡುವೇ ಜಗಲಿಯ ಮೇಲೆ ಮಲಗಿಕೊಂಡರು. ಬೆಳಗಾದ ಮೇಲೆ ನೋಡುವಾಗ ಬೀದಿಯ ಬಾಗಿಲು ಅರೆಕದ ತೆಗೆದಿತ್ತು. ಆ ಬ್ರಾಹ್ಮಣರಿಬ್ಬರೂ ಅಲ್ಲಿರಲಿಲ್ಲ, ಎಷ್ಟು ಹುಡುಕಿಸಿದಾಗ್ಯೂ ಸಿಕ್ಕಲ್ಲ ಇಂಥಾ ಮಹಾತ್ಮರು ಹೊರಟು ಹೋದರಲ್ಲಾ ಎಂದು ಎಲ್ಲರೂ ಪೇಚಾಡಿಕೊಂಡರು.

ಸಂಜವಾಡಿಯೆಲ್ಲಾ ಮೂರು ದಿವಸದಲ್ಲಿ ಹಾಳ ಊರಿನಂತೆ ಆಯಿತು. ಬಿದ್ದುಹೋದ ಗೋಡೆಗಳು, ಮುರಿದುಹೋದ ಹಾರುಗಳು, ಅಗೆದು ಗುಂಡಾಂತರ ಮಾಡಿದ ನೆಲ, ತೆರೆದ ಬಾಗಿಲು, ಒಡೆದ ಮಡಕೇ ಸಾಲು, ಯಾವ ದಿಕ್ಕಿನಲ್ಲಿ ನೋಡಿದರೂ ಹಾಳುಹಾಳು ಸುರಿಯುತಾ ಇತ್ತು. ಆ ಊರ ಜನರೆಲ್ಲಾ ದಿಕ್ಕಾ ಪಾಲಾದರು. ಒಂದೆರಡು ಮನೆಯಲ್ಲಿ ಮಾತ್ರ ಕೈಲಾಗದ ಮುದುಕರು ಹತ್ತಿಕೊಂಡಿದ್ದರು. ಆ ಊರಲ್ಲಿದ್ದ ಬ್ರಾಹ್ಮಣರೆಲ್ಲಾ ಬೇರೆ ಊರಿಗೆ ಹೊರಟುಹೋಗಿ ಅಲ್ಲಿ ಸೇರಿಕೊಂಡರು. ಇಂಥಾ ಊರಲ್ಲಿ ಇನ್ನು ನಾವು ಇರುವುದು ಸರಿಯಲ್ಲವೆಂದು ಸದಾಶಿವದೀಕ್ಷಿತನೂ ಪಶುಪತಿ ಸಾಂಬಶಾಸ್ತ್ರಿಯೂ ನಿಷ್ಕರ್ಷೆ ಮಾಡಿಕೊಂಡು ಮಾರನೇ ದಿವಸವೇ ಸಾಮಾನುಗಳನ್ನು ಸಾಗಿಸಿಕೊಂಡು ಮನೆಯವರೆಲ್ಲರನ್ನೂ ಕರೆದುಕೊಂಡು ಮೈಸೂರಿಗೆ ಹೊರಟುಹೋದರು. ಹದಿನೈದು ದಿವಸಗಳೊಳಗಾಗಿ ಒಂದು ಪ್ರಾಣಿಯೂ ಇಲ್ಲದಹಾಗೆ ಊರೆಲ್ಲಾ ನಾಶವಾಯಿತು. ಪಶುಪತಿ ಸಾಂಬಶಾಸ್ತ್ರಿಯೂ ಸದಾಶಿವದೀಕ್ಷಿತನೂ ಕೃಷ್ಣರಾಜ ಒಡೆಯವರ ಭೇಟಿ ಮಾಡಿಕೊಂಡರು; ನಡೆದ ಸಂಗತಿಯನ್ನೆಲ್ಲಾ ವಿಸ್ತಾರವಾಗಿ ಅರಿಕೆ ಮಾಡಿದರು. ಅದಕ್ಕೆ ಪ್ರಭುಗಳು ಅಂಥಾ ಮಹಾತ್ಮರ ದರ್ಶನ ಇಲ್ಲದೆ ಹೋಯಿತಲ್ಲಾ ಎಂದು ಬಹಳವಾಗಿ ಪೇಚಾಡಿದರು. ಈ ಸಂಗತಿಯನ್ನು ಕೇಳಿ ರಾಜಸಭೆಯೆಲ್ಲಾ ಬೆರಗಾಯಿತು. ಸದಾಶಿವದೀಕ್ಷಿತನು ಸಂಸಾರ ಸಮೇತನಾಗಿ ಮೈಸೂರಲ್ಲಿಯೇ ನಿಂತನು. ಸೀತಮ್ಮನೂ ಮಹಾದೇವನೂ ಅನೇಕ ಕಾಲ ಸಂಸಾರ ಮಾಡಿಕೊಂಡು ಸುಖವಾಗಿದ್ದರು.

ಅತ್ತ ಸಂಜವಾಡಿಯ ಕಳ್ಳರ ಹುತ್ತವೇ ಒಡೆದುಹೋಯಿತು. ಆ ಗುಂಪಿಗೇ ಶಿಕ್ಷೆಯಾಯಿತಷ್ಟೆ ಅದೇ ಕಾಲದಲ್ಲಿ ಅಮಾಸೆಯ ದೆಸೆಯಿಂದ ಇದೆಲ್ಲಾ ಹೊರಕ್ಕೆ ಬಂದ ಕಾರಣ ಅವನ ಅಪರಾಧವನ್ನು ಮನ್ನಿಸಿ ಅವನಿಗೆ ಶಿಕ್ಷೆ ಮಾಡದೆ ಸರ್ಕಾರದವರು ಬಿಟ್ಟುಬಿಟ್ಟರು. ಸಂಜವಾಡಿ ಮಹಾಜನರೆಲ್ಲಾ ಕಾರಾಗೃಹಕ್ಕೆ ಹೊರಡುತಾ ಇರುವಾಗ ಅಮಾಸೆಯು ಕಚೇರಿಯಿಂದ ಬಿಡುಗಡೆಯಾಗಿ ಈಚೆಗೆ ಬರುತಾ ಅವರನ್ನು ಕಂಡು "ಮಾಡಿದ್ದ ಉಣೋ ಮಹಾರಾಯ, ಮಾಡಿದ್ದ ಉಣೋ ಮಹಾರಾಯ" ಎಂದು ಕೂಗಿದನು, ಎಂಬಲ್ಲಿಗೆ ಮಂಗಳಮಹಾ.

**-: ಸ ೦ ಪೂ ರ್ಣ :-**

---

## ಕೃತಜ್ಞತೆ

ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಪಾಠ್ಯ ಸಮಿತಿಯ ಅಧಿಕಾರಿಗಳು ಈ ಗ್ರಂಥವನ್ನು ೧೯೬೮-೬೯ನೆಯ ಇಸವಿಯ ಬಿ.ಎ., ಬಿ.ಎಸ್.ಸಿ., ತರಗತಿಗಳಿಗೆ ವ್ಯಾಸಂಗ ವಿಷಯವಾಗಿ ಗೊತ್ತುಮಾಡಿರುವುದರಿಂದ ಈ ಪುನರ್ಮುದ್ರಣಕ್ಕೆ ಅವಕಾಶವಾಗಿದೆ. ಅವರಿಗೆ ನಮ್ಮ ಕೃತಜ್ಞತೆಯ ವಂದನೆಗಳು.

ಪ್ರಕಾಶಕರು.